# ಕುರ್‌ಆನಿನ ಬದುಕು

ಸುಮಯ್ಯ ರಮದಾನ್, ಈಜಿಪ್ಟ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಪವಿತ್ರ ಕುರ್‌ಆನ್ ಮಾನವರ ಮಾರ್ಗದರ್ಶನಕ್ಕಾಗಿ ಪ್ರಪಂಚದ ಸೃಷ್ಟಿಕರ್ತನ ಕಡೆಯಿಂದ ಅವತೀರ್ಣಗೊಂಡ ಗ್ರಂಥವಾಗಿದೆ. ಅದರ ಕರೆಯು ಸ್ತ್ರೀ-ಪುರುಷರಿಬ್ಬರಿಗೂ ಅನ್ವಯವಾಗುತ್ತದೆ. ಇಂದು ಜಾಗತಿಕ ಮಟ್ಟದಲ್ಲಿಯೇ ಜನರ ಗಮನ ಪವಿತ್ರ ಕುರ್‌ಆನ್‌ನತ್ತ ಹರಿಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಲ್ಲಿ ಕುರ್‌ಆನ್‌ನೆಡೆಗೆ ಎಂದು ಅಭಿಯಾನವೇ ನಡೆಯುತ್ತಿದೆ. ಜಗತ್ತಿನ ಹೆಚ್ಚಿನೆಲ್ಲ ಭಾಷೆಗಳಲ್ಲಿ ಕುರ್‌ಆನ್ ಅನುವಾದಗಳು, ವ್ಯಾಖ್ಯಾನಗಳು ವ್ಯಾಪಕವಾಗಿ ಪ್ರಚಾರದಲ್ಲಿದೆ. ಕುರ್‌ಆನ್ ಕಲಿಕೆಯ ತರಗತಿಗಳು, ಪ್ರವಚನ ಕಾರ್ಯಕ್ರಮಗಳೂ ಗ್ರಾಮದಿಂದ ಹಿಡಿದು ನಗರ ಮಟ್ಟಗಳ ವರೆಗೂ ಅಲ್ಲಲ್ಲಿ ನಡೆಯುತ್ತಾ ಇದೆ. ವಿಶೇಷವಾಗಿ ಸ್ತ್ರೀಯರಲ್ಲಿ ಇದು ಹೆಚ್ಚು ಜನಪ್ರಿಯವಾಗುತ್ತಿದೆ.

ಸುಮಯ್ಯ ರಮಝಾನ್ ಎಂಬ ಈಜಿಪ್ಟ್‌ನ ಓರ್ವ ವಿದ್ವಾಂಸೆ ಕುರ್‌ಆನ್ ತರಗತಿಗಳನ್ನು ನಡೆಸಿ ಮಹಿಳೆಯರಲ್ಲಿ ಕುರ್‌ಆನ್‌ನ ಕುರಿತು ಜಾಗೃತಿ ಮೂಡಿಸಿದ್ದು, ಅವರು ಕುರ್‌ಆನ್‌ನ ಆದೇಶಗಳಂತೆ ತಮ್ಮ ಜೀವನವನ್ನು ರೂಪಿಸುವಂತೆ ಮಾಡಿ ಯಶಸ್ಸು ಸಾಧಿಸಿದ್ದಾರೆ. ಅವರು ಕೇವಲ ಪ್ರವಚನ ಮತ್ತು ಬೋಧನೆಗೆ ಸೀಮಿತ ಗೊಳಿಸದೆ, ಪ್ರತಿ ತರಗತಿಯಲ್ಲಿ ಕುರ್‌ಆನ್‌ನ ಒಂದು ಸೂಕ್ತವನ್ನು ಆಯ್ಕೆ ಮಾಡಿ ಅದನ್ನು ಚೆನ್ನಾಗಿ ಅಭ್ಯಸಿಸಿ ಅದರಂತೆ ಮಹಿಳೆಯರನ್ನು ಮುನ್ನಡೆಸುವಲ್ಲಿ ಯಶಸ್ಸು ಸಾಧಿಸಿದ್ದಾರೆ. ಅಷ್ಟೇ ಅಲ್ಲ, ಅನೇಕ ಮಹಿಳೆಯರು ಮುಂದಿನ ತರಗತಿಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಈ ಕುರಿತು ಸುಮಯ್ಯ ರಮಝಾನ್ ಒಂದು ಲೇಖನ ಪರಂಪರೆಯನ್ನು ಕುವೈಟಿನ 'ಅಲ್ ಮುಜ್ತಮಅ್' ಪತ್ರಿಕೆಯಲ್ಲಿ ಬರೆದಿದ್ದು, ಅದರ ಅನುವಾದವೇ 'ಕುರ್‌ಆನಿನ ಬದುಕು' ಎಂಬ ಈ ಕೃತಿ.

ಈ ಕೃತಿಯಲ್ಲಿ ತಮ್ಮ ವೈಯಕ್ತಿಕ ಅನುಭವಗಳನ್ನು ಮುಂದಿಡುತ್ತ ಪವಿತ್ರ ಕುರ್‌ಆನ್‌ನ ಆದೇಶಗಳನ್ನು ಅನುಸರಿಸುವುದರಿಂದ ಗಳಿಸಿದ ಲಾಭ ಬಹಳ ಸ್ಪಷ್ಟ ರೂಪದಲ್ಲಿ ಈ ಪುಸ್ತಕದಲ್ಲಿ ಕಂಡು ಬರುತ್ತಿದೆ. ಇದರ ಮೂಲಕ ನಮ್ಮ ಮೂಲಭೂತ ನಂಬಿಕೆಗಳು ಸುಧಾರಣೆಗೊಳ್ಳುತ್ತದೆ ಹಾಗೂ ಮುಸ್ಲಿಮ್ ಸಮಾಜದ ಸ್ತ್ರೀಯರು ಒಂದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕೂಡ ಕಂಡು ಬರುತ್ತದೆ. ನಮ್ಮ ಸ್ತ್ರೀಯರು ಖಂಡಿತ ಇದರ ಮುಖಾಂತರ ಮಾರ್ಗದರ್ಶನ ಪಡೆಯಬಹುದು.

ಈ ಕೃತಿಯು ವಿಶೇಷವಾಗಿ ಸ್ತ್ರೀಯರಿಗಾಗಿ ಪ್ರಕಟಗೊಂಡರೂ ಪುರುಷರು ಓದಬಾರದು ಎಂದೇನಿಲ್ಲ. ಸಾಮಾನ್ಯವಾಗಿ ಸ್ತ್ರೀಯರಿಗಾಗಿ ಪ್ರಕಟಿಸಲಾದ ಪುಸ್ತಕ ಎಂದು ಪುರುಷರಿಗೆ ತಿಳಿದಾಗ ಪುರುಷರು ಅದನ್ನು ಓದಲು ಆಸಕ್ತಿ ವಹಿಸುತ್ತಾರೆ ಪುರುಷರು ಈ ಪುಸ್ತಕದಿಂದ ಲಾಭ ಪಡೆಯುತ್ತ, ಪವಿತ್ರ ಕುರ್‌ಆನಿನ ಆಜ್ಞಾದೇಶಗಳನ್ನು ಪಾಲಿಸುವರು ಎಂಬ ಭರವಸೆ ಇದೆ. ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಇದರ ಅಧ್ಯಯನದೊಂದಿಗೆ, ಇದನ್ನು ಅಭ್ಯಸಿಸಿ, ಇದರ ಸಂದೇಶವನ್ನು ತಮ್ಮ ಮನೆ ಹಾಗೂ ಕುಟುಂಬಗಳಿಗೆ ತಲುಪಿಸುವ ಸುಸಂದರ್ಭ ಕೂಡಾ ಆಗಿದೆ.

ಈ ಕೃತಿಯಲ್ಲಿ ಕುರ್‌ಆನ್‌ನ ಪ್ರಕಾರ ಬದುಕುವುದರ ಪ್ರಯೋಜನಗಳು ಕನ್ನಡಿಯಂತೆ ಅನಾವರಣಗೊಳ್ಳುತ್ತದೆ. ಅದರಿಂದ ಮೂಲಭೂತ ವಿಶ್ವಾಸಗಳು ಬಲಗೊಳ್ಳುವುದರಲ್ಲಿ ಸಂದೇಹವಿಲ್ಲ. ಪವಿತ್ರ ಕುರ್‌ಆನ್‌ನ ಸೂಕ್ತಗಳ ಅಧ್ಯಯನ ನಡೆಸಿ ಅದರಂತೆ ತಮ್ಮ ಜೀವನವನ್ನು ರೂಪಿಸಬಯಸುವವರಿಗೆ ಇದು ಅತ್ಯುತ್ತಮ ಕೈಪಿಡಿಯಾಗಿದೆ. ವಿಶೇಷವಾಗಿ ರಮಝಾನ್‌ನ ಪಾವನ ತಿಂಗಳಲ್ಲಿ ಸಾಮೂಹಿಕ ಅಧ್ಯಯನ ನಡೆಸುವ ಸ್ತ್ರೀ–ಪುರುಷರೆಲ್ಲರಿಗೂ ಇದರ ಅಧ್ಯಯನ ಪ್ರಯೋಜನಕಾರಿ ಯಾಗಬಲ್ಲುದು. ಈ ನಿಟ್ಟಿನಲ್ಲಿ ಸರ್ವರಿಗೂ ಪ್ರಯೋಜನಪ್ರದವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


- ಪವಿತ್ರ ಕುರ್‌ಆನ್‌ನ ಮೂಲಕ ಕ್ರಾಂತಿ ಮತ್ತು ಅದರ ಬೇಡಿಕೆಗಳು 09
- ಪವಿತ್ರ ಕುರ್‌ಆನ್‌ನಿಂದ ಪ್ರಯೋಜನ ಪಡೆಯುವ ವಿಧಾನ 27
- ಸ್ತ್ರೀಯರ ವೈಯಕ್ತಿಕ ಅನುಭವಗಳು 31
- ಮನೆಯಲ್ಲಿ ಗುಲ್ಲು-ಗದ್ದಲ 34
- ಫಜ್ರ್ ನಮಾಝ್‌ಗಾಗಿ ಏಳುವುದು 37
- ತಲಾಕ್‌ನ ಬೆದರಿಕೆ 44
- ಜಗಳ ಮತ್ತು ಕೋಪ 54
- ದ್ವೇಷ ಮತ್ತು ತಿರಸ್ಕಾರ 61
- ಜಪಮಾಲೆ (ತಸ್ಬೀಹ್) 68
- ಮಾತಾಪಿತರೊಂದಿಗೆ ಸದ್ವರ್ತನೆ 76
- ವಾರೀಸು ಹಕ್ಕು 84
- ಮನೋರೋಗಕ್ಕೆ ತುತ್ತಾಗಿರುವ ಯುವ ಪೀಳಿಗೆ 94
- ಗೋರಿಗಳಲ್ಲಿ ಪ್ರಾರ್ಥಿಸುವುದು 101
- ಅಲ್ಲಾಹನು ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತಾನೆ 108
- ಜಿನ್ನ್ ಬಿಡಿಸುವುದು 112
- ಅಗೋಚರ ವಸ್ತುಗಳ ಜ್ಞಾನ ಅಲ್ಲಾಹನ ಹೊರತು ಬೇರಾರಿಗೂ ಇಲ್ಲ 120
- ಮಕ್ಕಳಿಗಾಗಿ ಪ್ರಾರ್ಥಿಸುವುದು 127

مَنْ قَرَأَ الْقُرْآنَ وَعَمِلَ بِمَا فِيْهِ أُلْبِسَ وَالِدَاهُ تَاجًا يَوْمَ الْقِيَامَةِ

"ಪವಿತ್ರ ಕುರ್‌ಆನನ್ನು ಓದಿದವನು ಹಾಗೂ ಅದರಲ್ಲಿರುವ ವಿಷಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿದವನ ಮಾತಾಪಿತರಿಗೆ ಪುನರುತ್ಥಾನ ದಿನದಂದು ಒಂದು ಕಿರೀಟವನ್ನು ತೊಡಿಸಲಾಗುವುದು." (ಅಹ್ಮದ್, ಅಬೂದಾವೂದ್)

ಪವಿತ್ರ ಕುರ್‌ಆನ್ ಪಠಣದ ಮುಖ್ಯ ಉದ್ದೇಶ ಕೇವಲ ಪುಣ್ಯಗಳಿಸುವುದು ಎಂದಾದರೆ, ಪುಣ್ಯಗಳಿಸಲು ಇರುವಂತಹ ಅನೇಕ ತಸ್ಬೀಹ್ ಮತ್ತು ಪ್ರಾರ್ಥನೆಗಳಿವೆ, ಅವುಗಳನ್ನು ಓದಿ ನಾವು ಅತ್ಯಧಿಕ ಪುಣ್ಯಗಳನ್ನು ಗಳಿಸಬಹುದು. ಉದಾಹರಣೆಗೆ ಪ್ರವಾದಿಯವರು(ಸ) ಹೀಗೆ ಹೇಳಿರುವರು: ಓರ್ವ ವ್ಯಕ್ತಿ ಪೇಟೆಗೆ ಹೋಗುವಾಗ,

لاَ اِلَهَ اِلَّا اللهُ وَحْدَهُ لاَ شَرِيْكَ لَهُ, لَهُ الْمُلْكُ وَلَهُ الْحَمْدُ يُحْيِ وَيُمِيْتُ وَهُوَ
حَيٌّ لَّا يَمُوْتُ بِيَدِهِ الْخَيْرُ وَهُوَعَلَى كُلِّ شَيْءٍ قَدِيْرٌ

ಎಂಬ ಈ ದುಆವನ್ನು ಓದಿದವನಿಗೆ ಹತ್ತು ಲಕ್ಷ ಪುಣ್ಯಗಳು ಲಭಿಸುವುದು ಮತ್ತು ಹತ್ತು ಲಕ್ಷ ಪಾಪಗಳು ಅಳಿಸಲ್ಪಡುವುದು ಮತ್ತು ಆತನಿಗಾಗಿ ಸ್ವರ್ಗದಲ್ಲಿ ಒಂದು ಮನೆಯನ್ನು ನಿರ್ಮಿಸಲಾಗುವುದು. ಪವಿತ್ರ ಕುರ್‌ಆನ್ ಪಾರಾಯಣದಿಂದ ಲಭಿಸುವ ಪುಣ್ಯ ಅಥವಾ ಅದರ ಮಹತ್ವವನ್ನು ಕಡಿಮೆಗೊಳಿಸಲು ಈ ಹದೀಸನ್ನು ಇಲ್ಲಿ ಉಲ್ಲೇಖಿಸಲಾಗಿಲ್ಲ. ಪವಿತ್ರ ಕುರ್‌ಆನಿನ ನೈಜ ಸೌಂದರ್ಯ ಮತ್ತು ಅನುಗ್ರಹ ಅದರ ಅರ್ಥದಲ್ಲಿದೆ. "ಪವಿತ್ರ ಕುರ್‌ಆನಿನ ಒಂದು ಪದವನ್ನು ಓದಿದರೆ 10 ಪುಣ್ಯ ಲಭಿಸುತ್ತದೆ" ಎಂದು ಪ್ರವಾದಿವರ್ಯರು(ಸ) ಹೇಳಿದುದರ ತಾತ್ಪರ್ಯ ಜನರು ಪವಿತ್ರ ಕುರ್‌ಆನಿನೊಂದಿಗೆ ತಮ್ಮ ಸಂಬಂಧ ಬೆಳಸಲಿಕ್ಕಾಗಿದೆ. ಇದರ ಅರ್ಥ ಪವಿತ್ರ ಕುರ್‌ಆನಿನ ಅರ್ಥವನ್ನು ಗ್ರಹಿಸದೆ, ಒಂದು ಮೂಲೆಯಲ್ಲಿ ಕೂತು ಅದರ ಕೆಲವು ಪದಗಳನ್ನು ಹೇಳಬೇಕೆಂದಲ್ಲ. ಓರ್ವ ವಿದ್ಯಾರ್ಥಿಯ ತಂದೆ 'ಮಗನೇ ಕಲಿ' ಎಂದು ಹೇಳಿದಾಗ ಅದರ ಅರ್ಥ ಅವನು ಪುಸ್ತಕವನ್ನು ಕೈಯಲ್ಲಿ ಹಿಡಿದು ಓದುತ್ತಾ ಹೋಗುವುದಲ್ಲ, ಬದಲಾಗಿ ಅದರ ಅರ್ಥವನ್ನು ಗ್ರಹಿಸಿ ಓದುವುದಾಗಿದೆ.

ಪವಿತ್ರ ಕುರ್‌ಆನ್ ಅವತೀರ್ಣಗೊಂಡ ಮುಖ್ಯ ಹಾಗೂ ಅತಿ ಶ್ರೇಷ್ಠ ಉದ್ದೇಶದಿಂದ ಅದನ್ನು ಸದಾ ಓದುತ್ತಿರಬೇಕು. ಅದರ ಪಾರಾಯಣದ ಮಹಾನತೆ ಮತ್ತು ಅದೊಂದು ಪುಣ್ಯದಾಯಕ ಕಾರ್ಯ ಎಂದು ಆಜ್ಞಾಪಿಸಿದರ ಮುಖ್ಯ ಉದ್ದೇಶ, ಜನರು ಪವಿತ್ರ ಕುರ್‌ಆನಿನೊಂದಿಗೆ ತಮ್ಮ ನಂಟನ್ನು ಬೆಳೆಸಿಕೊಳ್ಳಲಿ ಎಂದಾಗಿದೆ. ಇದರ ಮೂಲಕ ಜನರಿಗೆ ಸನ್ಮಾರ್ಗ ದೊರೆಯುವುದು, ಅವರು ಸಚ್ಚಾರಿತ್ರ್ಯವಂತರಾಗುವುದರೊಂದಿಗೆ, ಮನಸ್ಸುಗಳಲ್ಲಿರುವ ರೋಗಕ್ಕೆ ಪರಿಹಾರ ದೊರಕುವುದು.

# ಪವಿತ್ರ ಕುರ್‌ಆನಿನ ಮೂಲಕ ಕ್ರಾಂತಿ ಮತ್ತು ಅದರ ಬೇಡಿಕೆಗಳು

ಪ್ರವಾದಿ ಮುಹಮ್ಮದ್(ಸ)ರು ಹೀಗೆ ಹೇಳಿದರು:

مَنْ قَرَأَ حَرْفًا مِنْ كِتَابِ اللّٰهِ فَلَهُ بِهِ حَسَنَةٌ وَالْحَسَنَةَ بِعَشْرِ اَمْثَالِهَا ، لاَ اَقُوْلُ الٓم حَرْفٌ وَلٰكِنْ اَلِفٌ حَرْفٌ وَلاَمٌ حَرْفٌ وَمِيْمٌ حَرْفٌ

'ಅಲ್ಲಾಹನ ಗ್ರಂಥದ ಒಂದಕ್ಷರವನ್ನು ಪಠಿಸಿದವರಿಗೆ, ಒಂದು ಪುಣ್ಯ ಲಭಿಸುವುದು ಮತ್ತು ಒಂದು ಪುಣ್ಯ ಹತ್ತು ಪುಣ್ಯಗಳ ಸಮಾನವಾಗಿದೆ ಅಲಿಫ್ ಲಾಮ್ ಮೀಮ್ ಒಂದು ಅಕ್ಷರ ಎಂದು ನಾನು ಹೇಳುವುದಿಲ್ಲ, ಬದಲಾಗಿ ಅಲಿಫ್, ಲಾಮ್, ಮೀಮ್ ಇದರಲ್ಲಿ ಪ್ರತಿಯೊಂದು ಪದ ಬೇರೆ ಬೇರೆ ಆಗಿದೆ.'

[ವರದಿ: ಅಬ್ದುಲ್ಲಾ ಬಿನ್ ಮಸ್‌ಊದ್(ರ) – ತಿರ್ಮಿದಿ. ಈ ಹದೀಸ್ ಹಸನ್ ಆಗಿದೆ.]

ಪವಿತ್ರ ಕುರ್‌ಆನನ್ನು ಅರ್ಥೈಸದೆ ಓದಿದರೂ ಅದರ ಪಾರಾಯಣದಿಂದ ಪುಣ್ಯ ಲಭಿಸುತ್ತದೆ ಎಂಬ ತಪ್ಪು ತಾತ್ಪರ್ಯ ಈ ಹದೀಸ್‌ನಿಂದ ಕಲ್ಪಿಸಲಾಗಿದೆ. ಪವಿತ್ರ ಕುರ್‌ಆನಿನ ಸೂಕ್ತಗಳು ಒಂದನ್ನೊಂದು ಸ್ಪಷ್ಟೀಕರಿಸುವಂತೆ, ಕೆಲವು ಹದೀಸ್ ಕೂಡ ಕುರ್‌ಆನಿನ ಸೂಕ್ತಗಳನ್ನು ಹಾಗೂ ಇತರ ಹದೀಸ್‌ಗಳನ್ನು ವಿವರಿಸುತ್ತದೆ.

اَفَلاَ يَتَدَبَّرُوْنَ الْقُرْآنَ اَمْ عَلٰى قُلُوْبٍ اَقْفَالُهَا

'ಅವರು ಕುರ್‌ಆನ್‌ನ ಬಗ್ಗೆ ಚಿಂತನೆ ನಡೆಸಲಿಲ್ಲವೇ? ಅಥವಾ ಅವರ ಹೃದಯಗಳಿಗೆ ಬೀಗ ಮುದ್ರೆ ಬಿದ್ದಿದೆಯೇ?" (ಪವಿತ್ರ ಕುರ್‌ಆನ್: 47: 24)

ಹದೀಸ್‌ಗಳಲ್ಲಿ ಕೂಡ ಪವಿತ್ರ ಕುರ್‌ಆನಿನ ಸೂಕ್ತಗಳ ಪಠಣ ಹಾಗೂ ಅದರ ಆಜ್ಞೆಯನ್ನು ಅನುಸರಿಸುವುದನ್ನು ಒಟ್ಟೊಟ್ಟಿಗೆ ತಿಳಿಸಲಾಗಿದೆ.

ಪ್ರವಾದಿ ಮುಹಮ್ಮದ್(ಸ)ರವರು ಹೀಗೆ ಹೇಳಿರುವರು:

ಪವಿತ್ರ ಕುರ್‌ಆನಿನ ಆದೇಶಗಳನ್ನು ಅರ್ಥೈಸದೆ, ಪುಣ್ಯಕ್ಕಾಗಿ ಓದುವುದೆಂದರೆ ಸ್ವಲ್ಪ ದರಲ್ಲಿ ತೃಪ್ತಿ ಪಡೆಯುವುದು ಎಂದರ್ಥ. ಪ್ರವಾದಿತ್ವದ ಮಹಾನ್ ಉದ್ದೇಶವನ್ನು ಅರಿತವರು, ಅದರ ಆಜ್ಞೆಯನ್ನು ತಮ್ಮ ಜೀವನದಲ್ಲಿ ಅಳವಡಿಸುತ್ತಾರೆ.

ದೇವಭಯವುಳ್ಳ ಓರ್ವ ಮಹಿಳೆ, ತನ್ನ ದೈನಂದಿನ ಅವಶ್ಯಕತೆಗಳನ್ನು ಈಡೇರಿಸಲು ಓರ್ವ ಬಡ ಹುಡುಗಿಯನ್ನು ತನ್ನ ಮನೆಯಲ್ಲಿಟ್ಟುಕೊಂಡಳು. ಆಕೆಗೆ ಅಗತ್ಯ ಇರುವ ಎಲ್ಲ ವ್ಯವಸ್ಥೆ ಹಾಗೂ ಸೌಲಭ್ಯಗಳನ್ನು ಒದಗಿಸಿದಳು. ಮನೆಯಲ್ಲಿ ಕೆಲಸ ದಾಕೆಯ ವ್ಯವಸ್ಥೆಯೂ ಇತ್ತು. ಹುಡುಗಿಗೆ ಶಿಕ್ಷಣದೊಂದಿಗೆ ಮೂಲಭೂತ ಅಗತ್ಯಗಳು ದೊರೆಯುತ್ತಿತ್ತು. ಆಕೆ ಶಿಕ್ಷಿತಳಾಗಿ ದೊಡ್ಡವಳಾದ ನಂತರ, ಮನೆಯಲ್ಲಿದ್ದ ಸೇವಕಿಯನ್ನು ಕೆಲಸದಿಂದ ತೆಗೆದು ಈಕೆಯನ್ನು ಆ ಸ್ಥಾನದಲ್ಲಿಡಲಾಯಿತು. ಒಮ್ಮೆ ಮನೆಯೊಡತಿ ಒಂದು ಪಟ್ಟಿಯನ್ನು ಈ ಸೇವಕಿಯ ಕೈಗೆಕೊಟ್ಟಳು. ಅದರಲ್ಲಿ ಮಕ್ಕಳಿಗೆ ಸ್ನಾನ ಮಾಡಿಸುವುದು, ಬಟ್ಟೆ ಒಗೆಯುವುದು, ಇಸ್ತ್ರಿ ಹಾಕುವುದು, ಮನೆಯ ಸ್ವಚ್ಛತೆ, ಅಡಿಗೆ ಇತ್ಯಾದಿ–ಇತ್ಯಾದಿಗಳನ್ನು ಬರೆಯಲಾಗಿತ್ತು. ಶ್ರೀಮಂತ ಮಹಿಳೆ ಸೇವಕಿಯ ಕೈಯಲ್ಲಿ ಪಟ್ಟಿ ಕೊಟ್ಟು ಸಂತೃಪ್ತಳಾದಳು. ಮಧ್ಯಾಹ್ನದ ಹೊತ್ತು ಮನೆಯೊಡತಿ ಮನೆಗೆ ಬಂದಾಗ ಸೇವಕಿ ಕೆಲಸ ಮಾಡದಿರುವುದನ್ನು ನೋಡಿದಳು, ಆಕೆ ಪ್ರಶ್ನಿಸಿದಾಗ 'ನೀವು ಕೊಟ್ಟ ಪಟ್ಟಿಯನ್ನು ನಾನು ಹಲವು ಸಲ ಓದಿದೆ ಮತ್ತು ಬಾಯಿಪಾಠ ಮಾಡಿಕೊಂಡೆ ಹಾಗೂ ಚುಂಬಿಸಿದೆ' ಎಂದು ಉತ್ತರಿಸಿದಳು. ಈ ಉತ್ತರದಿಂದ ಮನೆಯೊಡತಿಯ ಪ್ರತಿಕ್ರಿಯೆ ಏನಿರಬಹುದು? ಸಂಬಳ, ವಸ್ತ್ರ, ಆಹಾರ, ವಾಸಿಸಲು ಮನೆ ಇತ್ಯಾದಿಗಳೆಲ್ಲವನ್ನೂ ಕೊಟ್ಟು ಸಾಕಿದ ಆ ಸೇವಕಿಯ ಮೇಲೆ ಕೋಪಗೊಂಡು ಮನೆಯಿಂದ ಅಟ್ಟದೆ ಇರುವಳೇ? ಮುಸ್ಲಿಮರ ಸಂಬಂಧ ಕೂಡ ಕುರ್‌ಆನಿನೊಂದಿಗೆ ಇದೇ ರೀತಿಯಲ್ಲವೇ?

ಪವಿತ್ರ ಕುರ್‌ಆನಿನ ಸೂಕ್ತಗಳನ್ನು ಓದಿದರೆ ಸಾಕೆಂದು ನಾವು ಭಾವಿಸುತ್ತೇವೆ ಮತ್ತು ಅದರಂತೆ ನಮ್ಮ ಜೀವನವನ್ನು ರೂಪಿಸಲು ಶ್ರಮಿಸುವುದಿಲ್ಲ. ನಿಮ್ಮ ವರ್ತನೆ ಹೀಗಾಗಿದ್ದರೆ ನಾವು ಅಲ್ಲಾಹನಿಂದ ಬಹುಮಾನ ಪಡೆಯಲು ಅರ್ಹರಾಗಿದ್ದೇವೆಯೇ?

ಪವಿತ್ರ ಕುರ್‌ಆನ್, ಅದರ ಸೂಕ್ತಗಳನ್ನು ಅರ್ಥೈಸಿ ತಮ್ಮ ಜೀವನವನ್ನು ಅದರಂತೆ ರೂಪಿಸುವ ಉಪದೇಶವನ್ನು ಕೊಡುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ:

كِتَٰبٌ أَنزَلْنَٰهُ إِلَيْكَ مُبَٰرَكٌ لِّيَدَّبَّرُوٓا۟ ءَايَٰتِهِۦ وَلِيَتَذَكَّرَ أُو۟لُوا۟ ٱلْأَلْبَٰبِ

"(ಪೈಗಂಬರರೇ) ಇದೊಂದು ಅತಿ ಸಮೃದ್ಧವಾದ ಗ್ರಂಥವಾಗಿದ್ದು ಇವರು ಇದರ ಸೂಕ್ತಗಳ ಕುರಿತು ಚಿಂತನೆ ನಡೆಸಲೆಂದು ಮತ್ತು ಬುದ್ಧಿಜೀವಿಗಳು ಇದರಿಂದ

ಉಪದೇಶ ಪಡೆಯುವಂತಾಗಲೆಂದು ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿದ್ದೇವೆ."

(ಪವಿತ್ರ ಕುರ್‌ಆನ್: 38: 29)

ಒಮ್ಮೆ ಪ್ರವಾದಿ ಮುಹಮ್ಮದ್(ಸ)ರು ಹಝ್ರತ್ ಅಬ್ದುಲ್ಲ ಬಿನ್ ಅಮ್ರ್ ಬಿನ್ ಆಸ್‌ರೊಂದಿಗೆ ಈ ರೀತಿ ಹೇಳಿದರು, "ಪವಿತ್ರ ಕುರ್‌ಆನನ್ನು ಮೂರು ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಓದಿ ಮುಗಿಸಬೇಡ" ಹೀಗೆ ಹೇಳಿದ್ದರ ಕಾರಣವನ್ನು ಪ್ರವಾದಿವರ್ಯರು(ಸ) ಈ ರೀತಿ ವಿವರಿಸಿದರು. لاَ يَفْقَهُهُ مَنْ يَقْرَأْهُ فِي أَقَلَّ مِنْ ثَلاَثٍ "ಮೂರು ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಪವಿತ್ರ ಕುರ್‌ಆನನ್ನು ಓದಿದವನು ಅದನ್ನು ಅರ್ಥೈಸಲಾರ." (ಅಲ್ ಜಾಮಿಯತುಸ್ಸಗೀರ್)

ಜನರು ಒಂದು ಕೃತಿಯನ್ನು ಓದಿದರೆ ಅಥವಾ ಕೇಳಿದರೆ ಅದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಆದರೆ ಪವಿತ್ರ ಕುರ್‌ಆನಿನ ಸರದಿ ಬಂದಾಗ ಜನರು ಅರ್ಥೈಸುವ ಪ್ರಯತ್ನ ಮಾಡುವುದಿಲ್ಲ. ಶೇಖುಲ್ ಇಸ್ಲಾಮ್ ಇಬ್ನು ತೈಮಿಯ(ರ) ಹೇಳುತ್ತಾರೆ, "ನಾವು ಯಾವುದೇ ಕೃತಿಯ ಕೇವಲ ಪದವನ್ನು ಓದದೆ, ಅದನ್ನು ಅರ್ಥೈಸಿ ಓದುವುದೇ ಅದರ ನೈಜ ಉದ್ದೇಶ. ಆದುದರಿಂದ ಪವಿತ್ರ ಕುರ್‌ಆನನ್ನು ಅರ್ಥೈಸಿ ಓದುವುದು ಅದರ ಹಕ್ಕಾಗಿದೆ." (ತಫ್ಸೀರ್ ಇಬ್ನು ತೈಮಿಯ, ಪುಟ–75)

ಶೇಖ್ ಹಸನಲ್ ಹುದೈಬಿ(ರ) ಹೇಳುತ್ತಾರೆ, "ಪವಿತ್ರ ಕುರ್‌ಆನಿನ ಪಾರಾಯಣದ ಸಮಯದ ಪ್ರಮಾಣಕ್ಕಿಂತ, ಅದನ್ನು ಅರ್ಥ ಸಹಿತ ಓದುವುದರ ಪ್ರಮಾಣದ ಮಹತ್ವ ಹೆಚ್ಚಾಗಿದೆ" ಪ್ರವಾದಿ ಮುಹಮ್ಮದ್(ಸ)ರ ಮೇಲೆ ಕುರ್‌ಆನ್ ಗ್ರಂಥ ಅವತೀರ್ಣಗೊಂಡಾಗ ಕೇವಲ ಸಮೃದ್ಧಿಯೊಂದಿಗೆ ಅವತೀರ್ಣಗೊಳ್ಳಲಿಲ್ಲ. ಬದಲಾಗಿ ಅದರ ಸಮೃದ್ಧತೆಯು ಅದರ ಆಜ್ಞೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿದಾಗ ಮತ್ತು ಅದನ್ನು ನಮ್ಮ ಜೀವನ ಪದ್ಧತಿಯೆಂದು ಪರಿಗಣಿಸಿದಾಗ ಮಾತ್ರ ಆಗುತ್ತದೆ. ಪವಿತ್ರ ಕುರ್‌ಆನ್ ಪ್ರಕಾರ ನಡೆಯುವವರಿಗೆ ಸ್ಪಷ್ಟ ದಾರಿಯನ್ನು ತೋರಿಸುತ್ತದೆ. ಆದುದರಿಂದ ಅದನ್ನು ಓದುವಾಗ ಅದರ ಉದ್ದೇಶವನ್ನು ಅರಿಯುತ್ತ ಅದರ ಸೂಕ್ತಗಳ ಮೇಲೆ ಚಿಂತನೆ ನಡೆಸುತ್ತ ಅದನ್ನು ಅರ್ಥೈಸಿ ಅದರಂತೆ ನಡೆಯಬೇಕಾದುದು ಕಡ್ಡಾಯ. (ಮಕಲಾತುಲ್ ಇಸ್ಲಾಮೀಯ್ಯಾಕ್: ಮುಹಮ್ಮದ್ ಮೂಸಾ ಶರೀಫ್ ಪುಟ–426)

ಪವಿತ್ರ ಕುರ್‌ಆನ್‌ನಲ್ಲಿ ಈ ರೀತಿ ಹೇಳಲಾಗಿದೆ,

أَفَلَا يَتَدَبَّرُونَ الْقُرْآنَ ۚ وَلَوْ كَانَ مِنْ عِنْدِ غَيْرِ اللَّهِ لَوَجَدُوا فِيهِ اخْتِلَافًا كَثِيرًا

"ಇವರೇನು ಕುರ್‌ಆನಿನ ಬಗ್ಗೆ ಚಿಂತನೆ ನಡೆಸುವುದಿಲ್ಲವೇ? ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ಇದರಲ್ಲಿ ಅನೇಕ

ವಿರೋಧಾಭಾಸಗಳು ಕಂಡು ಬರುತ್ತಿದ್ದವು." (ಪವಿತ್ರ ಕುರ್‌ಆನ್: 4: 82)

ಇದನ್ನು ಅಲ್ಲಾಮಾ ಕುರ್ತುಬಿ ಈ ರೀತಿ ವ್ಯಾಖ್ಯಾನಿಸುತ್ತಾರೆ. "ಕುರ್‌ಆನಿನ ಈ ಸೂಕ್ತದ ಮೇಲೆ ಗಾಢವಾದ ಚಿಂತನೆ ನಡೆಸಬೇಕಾದುದು ಅತ್ಯಗತ್ಯ."
(ಅಲ್ ಜಾಮಿವು ಅಹ್ಕಾಮುಲ್ ಕುರ್‌ಆನ್ ಕುರ್ತುಬಿ, 5ನೇ ಭಾಗ, ಪುಟ–187)

ಪವಿತ್ರ ಕುರ್‌ಆನಿನಲ್ಲಿ ಗಾಢವಾದ ಚಿಂತನೆ ನಡೆಸುವುದು ಓದುಗರ ಮತ್ತು ಕೇಳುಗರ ಮೇಲೆ ಕಡ್ಡಾಯವಾಗಿದ್ದರೂ ಇದರ ಉದ್ದೇಶ ಅದಲ್ಲ. ಪವಿತ್ರ ಕುರ್‌ಆನಿನ ಬಗ್ಗೆ ಚಿಂತನೆ ನಡೆಸಿದಾಗ ಲಭ್ಯವಾಗುವ ಪವಾಡ ಸದೃಶ ಕರ್ಮಕ್ಕೆ ಇದು ದಾರಿಯಾಗಿದೆ.

## ಕುರ್‌ಆನ್ ಒಂದು ಶ್ರೇಷ್ಠ ಪವಾಡ

ಪವಿತ್ರ ಕುರ್‌ಆನ್ ಅಲ್ಲಾಹನ ವತಿಯಿಂದ ಅವತೀರ್ಣಗೊಂಡ ಒಂದು ಶ್ರೇಷ್ಠ ಗ್ರಂಥವೆಂದು ಮುಸ್ಲಿಮ್ ಸಮುದಾಯಕ್ಕೆ ತಿಳಿದಿದೆ. ಆದರೆ, ಈ ಪವಾಡ ಗ್ರಂಥ ಹಿಂದಿನೆಲ್ಲ ಪವಾಡ ಗ್ರಂಥಗಳನ್ನು ಹಿಂದಕ್ಕೆ ತಳ್ಳಿರುವ ಉದ್ದೇಶ ಎಲ್ಲರಿಗೆ ತಿಳಿದಿಲ್ಲದಿರುವುದು ಒಂದು ನಗ್ನ ಸತ್ಯ. ಪವಿತ್ರ ಕುರ್‌ಆನಿನ ಮಹಿಮೆ, ಅದರ ಶೈಲಿ ಹಾಗೂ ವಾಕ್ಚಾತುರ್ಯದಲ್ಲಿ ಅದು ಅಡಕವಾಗಿದೆ. ಈ ಮಹಿಮೆ ಒಂದು ಪಂಥಾಹ್ವಾನ ಎಂದು ಹೆಚ್ಚಿನ ವಿದ್ವಾಂಸರ ಅನಿಸಿಕೆ. ಈ ಪವಿತ್ರ ಗ್ರಂಥ ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಜನರ ಮನಸ್ಸುಗಳನ್ನು ಬದಲಿಸುವ ಕ್ರಾಂತಿಕಾರಿ ಸಾಮರ್ಥ್ಯ ಇದರ ಅತಿ ಶ್ರೇಷ್ಠ ಮಹಿಮೆ. ದಿವ್ಯಜ್ಞಾನ ಇರುವ ಭಕ್ತರು ತಮ್ಮ ಎಲ್ಲಾ ಕಾರ್ಯ ಕಲಾಪಗಳಲ್ಲಿ ಈ ಪವಿತ್ರ ಗ್ರಂಥವನ್ನು ಅನುಸರಿಸುತ್ತಾರೆ.

## ನೈಜ ಪರಿವರ್ತನೆ

ಮೊತ್ತಮೊದಲನೆಯದಾಗಿ ಪವಿತ್ರ ಕುರ್‌ಆನ್ ಜನರ ಹೃದಯವನ್ನು ಪರಿವರ್ತಿಸುತ್ತದೆ. ಅದರ ಪ್ರಕಾಶ ಜನರ ಹೃದಯದೊಳಗೆ ಹೊಕ್ಕು ಹೃದಯಗಳಲ್ಲಿ ಉಂಟಾಗುವ ಸ್ವೇಚ್ಛೆ, ಅಲಕ್ಷ್ಯ, ಪಾಪಗಳಂತಹ ಕತ್ತಲೆಯನ್ನು ದಮನಿಸಿ ಪ್ರಕಾಶವನ್ನು ಬೆಳಗಿಸುತ್ತದೆ. ಈ ಪ್ರಕಾಶ ಕ್ರಮೇಣ ಹೃದಯದಲ್ಲಿರುವ ಕಲ್ಮಶ ಹಾಗೂ ಕೆಡುಕುಗಳನ್ನು ತೊಳೆದು ಹಾಕಿ ತನ್ನ ಪ್ರಕಾಶವನ್ನು ತುಂಬುತ್ತದೆ. ಅಲ್ಲದೇ ಜೀವನದ ನೈಜ ಪ್ರಜ್ಞೆಯನ್ನು ಬೆಳಗಿಸುತ್ತದೆ. ಈ ರೀತಿ ಪವಿತ್ರ ಕುರ್‌ಆನನ್ನು ಅರ್ಥೈಸಿದಾಗ ಓದುಗನಿಗೆ ಹೊಸ ಜೀವನದ ಪರಿಚಯವಾಗುತ್ತದೆ. ಅಲ್ಲಾಹನು ಹೇಳುತ್ತಾನೆ:

أَوَمَنْ كَانَ مَيْتًا فَأَحْيَيْنَٰهُ وَجَعَلْنَا لَهُ نُورًا يَمْشِي بِهِ فِي النَّاسِ كَمَن مَّثَلُهُ
فِي الظُّلُمَٰتِ لَيْسَ بِخَارِجٍ مِّنْهَا

"ಹಿಂದೆ ಸತ್ತಿದ್ದು, ಆನಂತರ ನಾವು ಜೀವದಾನ ಮಾಡಿ ಜನರ ಮಧ್ಯೆ ಜೀವನದ ಮಾರ್ಗದಲ್ಲಿ ಮುಂದುವರಿಯಲು ಬೇಕಾದ ಬೆಳಕನ್ನು ದಯಪಾಲಿಸಿದ ಓರ್ವ ವ್ಯಕ್ತಿಯು, ಅಂಧಕಾರದಲ್ಲಿ ಬಿದ್ದುಕೊಂಡಿರುವ ಮತ್ತು ಯಾವ ರೀತಿಯಲ್ಲಿಯೂ ಅವುಗಳಿಂದ ಎದ್ದು ಬಾರದ ವ್ಯಕ್ತಿಯಂತೆ ಆಗಬಲ್ಲನೆ?" **(ಪವಿತ್ರ ಕುರ್‌ಆನ್: 6: 122)**

ಕುರ್‌ಆನ್ ಒಂದು ಆತ್ಮವಾಗಿದೆ. ಅದು ಮನುಷ್ಯನ ಹೃದಯದೊಳಗೆ ಹೋಗಿ ಮನುಷ್ಯನನ್ನು ಜೀವಂತಗೊಳಿಸುತ್ತದೆ. ಅಲ್ಲಾಹನು ಹೇಳುತ್ತಾನೆ,

وَكَذٰلِكَ اَوْحَيْنَآ اِلَيْكَ رُوْحًا مِّنْ اَمْرِنَا ؕ مَا كُنْتَ تَدْرِىْ مَا الْكِتٰبُ وَلَا الْاِيْمَانُ
وَلٰكِنْ جَعَلْنٰهُ نُوْرًا نَّهْدِىْ بِهٖ مَنْ نَّشَآءُ مِنْ عِبَادِنَا

"ಮತ್ತು ಇದೇ ರೀತಿಯಲ್ಲಿ (ಸಂದೇಶವಾಹಕರೇ) ನಾವು ನಮ್ಮ ಅಪ್ಪಣೆಯಿಂದ ಒಂದು 'ರೂಹ'ನ್ನು ನಿಮ್ಮ ಕಡೆಗೆ ವಹ್ಯ್ ಮಾಡಿರುತ್ತೇವೆ. ಗ್ರಂಥವೆಂದರೆ ಏನೆಂದೂ ಈಮಾನ್ ಎಂದರೆ ಏನೆಂದೂ ನಿಮಗೆ ಗೊತ್ತಿರಲಿಲ್ಲ. ಅದರೆ ಆ ರೂಹನ್ನು ನಾವು ಒಂದು ಪ್ರಕಾಶವಾಗಿ ಮಾಡಿದೆವು ಆ ಮೂಲಕ ನಾವು ನಮ್ಮ ದಾಸರ ಪೈಕಿ ನಾವಿಚ್ಛಿಸುವವರಿಗೆ ದಾರಿ ತೋರಿಸುತ್ತೇವೆ." **(ಪವಿತ್ರ ಕುರ್‌ಆನ್: 42: 52)**

'ರೂಹ್'(ಆತ್ಮ) ಹೃದಯವನ್ನು ಸೇರಿಕೊಂಡಾಗ, ಹೃದಯ ಸತ್ಯವಿಶ್ವಾಸದಿಂದ ಪ್ರಕಾಶಿಸುತ್ತದೆ. ಲೌಕಿಕ ಮೋಹ ಹಾಗೂ ಆಕಾಂಕ್ಷೆಗಳು ಹೃದಯದಿಂದ ಹೊರ ಹೋಗುತ್ತದೆ ಮತ್ತು ಇದರ ನೇರ ಪರಿಣಾಮ ಮನುಷ್ಯನ ಜೀವನದ ಮೇಲೆ ಬೀರುತ್ತದೆ.

ಒಮ್ಮೆ ಓರ್ವ ಸಹಾಬಿ ಪ್ರವಾದಿ ಮುಹಮ್ಮದ್(ಸ)ರೊಡನೆ ಈ ರೀತಿ ಪ್ರಶ್ನಿಸಿದರು, اَفَمَنْ شَرَحَ اللّٰهُ صَدْرَهٗ لِلْاِسْلَامِ فَهُوَ عَلٰى نُوْرٍ مِّنْ رَّبِّهٖ "ಅಲ್ಲಾಹನು ಯಾರ ಹೃದಯವನ್ನು ಇಸ್ಲಾಮಿಗಾಗಿ ತೆರೆದುಬಿಟ್ಟನೋ ಹಾಗೂ ಯಾರು ತನ್ನ ಪ್ರಭುವಿನ ಕಡೆಯಿಂದ ಒಂದು ಪ್ರಕಾಶದಲ್ಲಿ ನಡೆಯುತ್ತಿರುವನೋ... **(ಪವಿತ್ರ ಕುರ್‌ಆನ್: 39: 22)** ಎಂಬೀ ವಚನದಲ್ಲಿ 'ಶರಹ' ಪದದ ಅರ್ಥವೇನು?" ಪ್ರವಾದಿಯವರು(ಸ) ಹೀಗೆ ಉತ್ತರಿಸಿದರು:

اِذَا دَخَلَ النُّور الْقَلْب انْشَرَح وَانْفَتح - قُلْنَا يَا رَسُولُ الله وَمَا عَلَامَة ذٰلِك قَالَ:
الا نَابَة اِلٰى دَار الْخُلُودِ، وَالتَّجَافِى عَنْ دَارِ الْغُرُوْرِ، وَلاسْتِعْدَاد لِلْمَوْتِ قَبْلَ نُزُلِهٖ

"ಪ್ರಕಾಶ ಹೃದಯದೊಳಗೆ ಹೊಕ್ಕಾಗ ಹೃದಯವು ಅರಳುತ್ತದೆ ಮತ್ತು ಶೋಭಿಸುತ್ತದೆ." ಆಗ ಅವರು ಪುನಃ ಪ್ರಶ್ನಿಸಿದರು, "ಓ ಪ್ರವಾದಿಗಳೇ, ಇದರ ಚಿಹ್ನೆ ಏನು?" ಪ್ರವಾದಿವರ್ಯರು(ಸ) ಹೇಳಿದರು, "ಶಾಶ್ವತವಾಗಿ ಉಳಿಯುವ ಮನೆಯ

ಕಡೆ ಗಮನ ಹರಿಸುವುದು, ಲೋಕವನ್ನು ಕಡೆಗಣಿಸುವುದು ಮತ್ತು ಮರಣ ಸಂಭವಿಸುವ ಮೊದಲು ಅದಕ್ಕಾಗಿ ನಿನ್ನನ್ನು ಸನ್ನದ್ಧಗೊಳಿಸು." (ಅಲ್ ಹಾಕಿಮ್, ಬೈಹಕಿ)

## ಪವಿತ್ರ ಕುರ್‌ಆನಿನ ಶಕ್ತಿಯ ವೈಶಿಷ್ಟ್ಯಗಳು

ಅಲ್ಲಾಹನು ಹೇಳುತ್ತಾನೆ:

وَلَوْ أَنَّ قُرْآنًا سُيِّرَتْ بِهِ الْجِبَالُ أَوْ قُطِّعَتْ بِهِ الْأَرْضُ أَوْ كُلِّمَ بِهِ الْمَوْتَىٰ ۗ
بَل لِّلَّهِ الْأَمْرُ جَمِيعًا

"ಪರ್ವತಗಳನ್ನು ಚಲಿಸುವಂತೆ ಅಥವಾ ಭೂಮಿಯನ್ನು ಸೀಳಿಬಿಡುವಂತೆ ಅಥವಾ ಮೃತರು ಸಮಾಧಿಯಿಂದ ಎದ್ದು ಮಾತಾಡುವಂತೆ ಮಾಡಿಬಿಡತಕ್ಕಂತಹ ಒಂದು ಕುರ್‌ಆನ್ ಅವತೀರ್ಣಗೊಳಿಸಲ್ಪಡುತ್ತಿದ್ದರೂ ಅವರು ನಂಬುತ್ತಿರಲಿಲ್ಲ. (ಇಂತಹ ದೃಷ್ಟಾಂತಗಳನ್ನು ತೋರಿಸಿ ಬಿಡುವುದೇನೂ ಕಷ್ಟಸಾಧ್ಯವಲ್ಲ) ನಿಜವಾಗಿ ಸಕಲ ಕಾರ್ಯಗಳ ಪರಮಾಧಿಕಾರ ಅಲ್ಲಾಹನ ಕೈಯಲ್ಲೇ ಇದೆ." (ಪವಿತ್ರ ಕುರ್‌ಆನ್: 13: 31)

ಪವಿತ್ರ ಕುರ್‌ಆನಿನ ಮೂಲಕ ಆಗುವ ಪರಿಣಾಮವನ್ನು ಊಹಿಸಲು ನಮಗೆ ಖಂಡಿತ ಸಾಧ್ಯವಿಲ್ಲ. ಅಲ್ಲಾಹನು ಇದರ ಉದಾಹರಣೆಯನ್ನು ಈ ರೀತಿ ಕೊಡುತ್ತಾನೆ:

لَوْ أَنزَلْنَا هَٰذَا الْقُرْآنَ عَلَىٰ جَبَلٍ لَّرَأَيْتَهُ خَاشِعًا مُّتَصَدِّعًا مِّنْ خَشْيَةِ اللَّهِ ۚ
وَتِلْكَ الْأَمْثَالُ نَضْرِبُهَا لِلنَّاسِ لَعَلَّهُمْ يَتَفَكَّرُونَ

"ನಾವು ಈ ಕುರ್‌ಆನನ್ನು ಒಂದು ಪರ್ವತದ ಮೇಲೆ ಇಳಿಸಿಬಿಡುತ್ತಿದ್ದರೆ ಅದು ಅಲ್ಲಾಹನ ಭಯದಿಂದ ಮುದುಡಿ ನುಚ್ಚುನೂರಾಗುವುದನ್ನು ನೀವು ಕಾಣುತ್ತಿದ್ದಿರಿ ಜನರು, (ತಮ್ಮ ಅವಸ್ಥೆಯ ಕುರಿತು) ಚಿಂತಿಸಲೆಂದು ನಾವು ಅವರ ಮುಂದೆ ಈ ಉಪಮೆಗಳನ್ನು ವಿವರಿಸುತ್ತೇವೆ." (ಪವಿತ್ರ ಕುರ್‌ಆನ್: 59: 21)

ಅಲ್ಲಾಮಾ ಕುರ್ತುಬಿ ಇದನ್ನು ಈ ರೀತಿ ವ್ಯಾಖ್ಯಾನಿಸುತ್ತಾರೆ: ಒಂದು ವೇಳೆ ಈ ಪರ್ವತಗಳಿಗೆ ಬುದ್ಧಿ ಇರುತ್ತಿದ್ದರೆ ಮತ್ತು ಈ ಕುರ್‌ಆನಿನ ಮೂಲಕ ಅವರನ್ನು ಉದ್ದೇಶಿಸಿ ಅಭಿಸಂಬೋಧಿಸಲಾಗುತ್ತಿದ್ದರೆ ಕುರ್‌ಆನಿನ ಬೋಧನೆಗಳ ಮುಂದೆ ಪರ್ವತಗಳು ಬಾಗುತ್ತಿದ್ದುವು ಮತ್ತು ಅಲ್ಲಾಹನ ಭಯದಿಂದ ನುಚ್ಚು ನೂರಾಗುವುದನ್ನು ನೀವು ಕಾಣುತ್ತಿದ್ದೀರಿ. (ಅಲ್ ಜಾಮಿವುಲ್ ಅಹ್‌ಕಾಮುಲ್ ಕುರ್‌ಆನ್ ಸಂಪುಟ 18, ಪುಟ 30)

ಪವಿತ್ರ ಕುರ್‌ಆನ್ ತನ್ನೆಲ್ಲ ವೈಶಿಷ್ಟ್ಯತೆಗಳೊಂದಿಗೆ ಪ್ರತಿಯೊಬ್ಬರ ಮೇಲೆ ಪರಿಣಾಮ ಬೀರುತ್ತದೆ ಎಂದು ಈ ಉದಾಹರಣೆಯಿಂದ ತಿಳಿಯಬಹುದು.

ಅದುದರಿಂದ ಪವಿತ್ರ ಕುರ್‌ಆನನ್ನು ಅರಿಯುವುದು ಕಷ್ಟಸಾಧ್ಯ ಎಂದು ಹೇಳುವವರ ತರ್ಕ ತಪ್ಪೆಂದು ಇದರಿಂದ ತಿಳಿಯಬಹುದು.

## ಪವಿತ್ರ ಕುರ್‌ಆನಿನ ಮೂಲಕ ಆದ ಬದಲಾವಣೆಯ ಒಂದು ಮಾದರಿ

ಪವಿತ್ರ ಕುರ್‌ಆನನ್ನು ಸನ್ಮಾರ್ಗದ ಹಾದಿ ಹಾಗೂ ರೋಗ ಪರಿಹಾರದ ಮಾರ್ಗವೆಂದು ಪರಿಗಣಿಸುತ್ತ ಓದಲು ಪ್ರಾರಂಭಿಸುವವರೊಂದಿಗೆ ಕುರ್‌ಆನ್ ಅದನ್ನೇ ತೋರಿಸಿ ಕೊಡುತ್ತದೆ. ಕುರ್‌ಆನ್‌ನಿಂದ ಪ್ರಗತಿ ಹೊಂದ ಬಯಸುವವನಿಗೆ ಆತನ ಜೀವನದಲ್ಲಿ ಕ್ರಾಂತಿಯನ್ನುಂಟು ಮಾಡುತ್ತದೆ. ಅದಕ್ಕೆ ಉದಾಹರಣೆಯಾಗಿ ಸಹಾಬಿಗಳ ಜೀವನ ನಮ್ಮ ಮುಂದೆ ಇದೆ. ಅವರು ಸತ್ಯವಿಶ್ವಾಸವನ್ನು ಸ್ವೀಕರಿಸುವ ಮೊದಲು ಅಜ್ಞಾನಿಗಳಾಗಿದ್ದರು. ಆದರೆ ಕುರ್‌ಆನ್ ಅವರ ಹೃದಯಗಳನ್ನು ಸ್ಪರ್ಶಿಸಿದ ತಕ್ಷಣ, ಮಾನವಕುಲವೇ ಅಭಿಮಾನ ಪಡುವಂತಹ ಮನುಷ್ಯರಾಗಿ ಮಾರ್ಪಟ್ಟರು.

ಮಾನವ ಜೀವನದಲ್ಲಿ ಕ್ರಾಂತಿಯನ್ನುಂಟು ಮಾಡುವ ಶಕ್ತಿ ಸಾಮರ್ಥ್ಯ ಮತ್ತು ಯೋಗ್ಯತೆ ಈ ಮಹಾನ್ ಗ್ರಂಥಕ್ಕೆ ಇದೆ ಎಂಬ ಮಾತನ್ನು ಯಾರು ಕೂಡಾ ನಿರಾಕರಿಸುವಂತಿಲ್ಲ. ಅರಬಸ್ತಾನದ ಮರುಭೂಮಿಯಲ್ಲಿ ವಾಸಿಸುತ್ತಿದ್ದ, ಚಪ್ಪಲಿ ಎಂದರೆ ಏನೆಂದು ಅರಿಯದ, ವಸ್ತ್ರಧಾರಣೆಯ ಶಿಸ್ತು ಅರಿಯದ, ಶಿಕ್ಷಣ ಹಾಗೂ ಬುದ್ಧಿವಂತಿಕೆ ಇಲ್ಲದ, ಆ ಕಾಲದ ಸೂಪರ್ ಪವರ್ ಕೂಡ ಆಗಿರದ ಒಂದು ಬಡ ಜನಾಂಗದ ಜೀವನವನ್ನೇ ಅದು ಬದಲಿಸಿತು. ಪವಿತ್ರ ಕುರ್‌ಆನ್ ಅಧೋಗತಿಯಲ್ಲಿ ಬಿದ್ದ ಜನಾಂಗವನ್ನು ಉತ್ತುಂಗತೆಗೆ ಏರಿಸಿತು. ಆ ಜನಾಂಗದ ಹೃದಯವನ್ನು ಅಲ್ಲಾಹನೊಂದಿಗೆ ಜೋಡಿಸಿತು. ಜೀವನದ ಉದ್ದೇಶ ಕೇವಲ ಅಲ್ಲಾಹನ ಸಂಪ್ರೀತಿಯೆಂದು ತೋರಿಸಿ ಕೊಡಲು ಅವತೀರ್ಣಗೊಂಡಿತು. ಕೆಲವೇ ವರ್ಷಗಳಲ್ಲಿ ಈ ಪವಿತ್ರ ಗ್ರಂಥ ಬದಲಾವಣೆಯನ್ನುಂಟು ಮಾಡಿತು. ಈ ಬದಲಾವಣೆ ಒಂದು ಸಂಕ್ಷಿಪ್ತ ಸಮಯದಲ್ಲಿ ಆಯಿತು ಎಂಬ ಸತ್ಯವನ್ನು ಲೋಕಕ್ಕೆ ತೋರಿಸಿ ಕೊಟ್ಟಿತು. ಇದು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಒಂದು ಜನಾಂಗ ಬದಲಾವಣೆ ಬಯಸಿದಾಗ ಮಾತ್ರ ಬದಲಾವಣೆ ಸಾಧ್ಯ ಎಂಬ ಪವಿತ್ರ ಕುರ್‌ಆನಿನ ಉತ್ತರ ಸತ್ಯವೆಂದು ಪವಿತ್ರ ಗ್ರಂಥ ಸಾಬೀತು ಪಡಿಸಿತು.

إِنَّ ٱللَّهَ لَا يُغَيِّرُ مَا بِقَوْمٍ حَتَّىٰ يُغَيِّرُوا۟ مَا بِأَنفُسِهِمْ

"ವಾಸ್ತವದಲ್ಲಿ ಒಂದು ಜನಾಂಗವು ಸ್ವತಃ ತಾನೇ ತನ್ನ ಸ್ಥಿತಿಯನ್ನು ಬದಲಾಯಿಸಿ ಕೊಳ್ಳುವವರೆಗೂ, ಅಲ್ಲಾಹನು ಅವರ ಸ್ಥಿತಿಯನ್ನು ಬದಲಾಯಿಸುವುದಿಲ್ಲ."

(ಪವಿತ್ರ ಕುರ್‌ಆನ್: 13: 11)

ಇದರ ಕೆಲವು ವರ್ಷಗಳಲ್ಲಿ ಮರುಭೂಮಿಯ ಮಧ್ಯದಿಂದ ಹೊಸ ಶಕ್ತಿ ಒಂದು ಉದ್ಭವಿಸಿತು. ಆ ಶಕ್ತಿ ರೋಮ್, ಪ್ಯಾರಿಸ್‌ಗಳಂತಹ ಮಹಾನ್ ಹಾಗೂ ರಾತನ ಸಾಮ್ರಾಜ್ಯ ಗಳನ್ನು ಮುಟ್ಟುಗೋಲು ಹಾಕಿ, ಮಾನ ಅಪಮಾನದ ಾನದಂಡವನ್ನು ಬದಲಿಸಿತು.

## ವಾದಿ ಮುಹಮ್ಮದ್(ಸ) ಹಾಗೂ ಕುರ್‌ಆನಿನ ಅನುಸರಣೆ

ಪವಿತ್ರ ಕುರ್‌ಆನ್ ಸಹಾಬಿಗಳ ಜೀವನವನ್ನು ಬದಲಿಸಿತು. ಅವರಿಗೆ ಪವಿತ್ರ ್‌ಆನ್ ಅವತೀರ್ಣಗೊಂಡ ಉದ್ದೇಶ ಹಾಗೂ ಮಹತ್ವ ತಿಳಿದಿತ್ತು. ಈ ನಿಟ್ಟಿನಲ್ಲಿ ವಾದಿವರ್ಯರ(ಸ) ಜೀವನ ಅವರಿಗೆ ಮಾದರಿಯಾಗಿತ್ತು. ಪ್ರವಾದಿವರ್ಯರ(ಸ) ವನದ ಅಕ್ಷವೇ ಪವಿತ್ರ ಕುರ್‌ಆನ್ ಆಗಿತ್ತು. ಅವರ(ಸ) ಜೀವನ ಕುರ್‌ಆನಿನೊಂದಿಗೆ ಲೀನಗೊಂಡಿತ್ತು. ಅವತೀರ್ಣಗೊಂಡ ಪ್ರತಿಯೊಂದು ಸೂರಃವನ್ನು ಅವರು ಮಗ್ರವಾಗಿ ಓದುತ್ತಿದ್ದರು. ಒಮ್ಮೆ ತಹಜ್ಜುದ್ ನಮಾಝಿನಲ್ಲಿ ಪ್ರವಾದಿಯವರು(ಸ) ಂದು ಸೂಕ್ತವನ್ನು ಪದೇ ಪದೇ ಪಠಿಸುತ್ತಿದ್ದರು.

إِن تُعَذِّبْهُمْ فَإِنَّهُمْ عِبَادُكَ ۖ وَإِن تَغْفِرْ لَهُمْ فَإِنَّكَ أَنتَ الْعَزِيزُ الْحَكِيمُ

"ನೀನು ಅವರಿಗೆ ಶಿಕ್ಷಿಸಿದರೆ ಖಂಡಿತವಾಗಿಯೂ ಅವರು ನಿನ್ನ ದಾಸರೇ ತ್ತು ಅವರನ್ನು ಕ್ಷಮಿಸಿಬಿಟ್ಟರೆ ನಿಶ್ಚಯವಾಗಿಯೂ ನೀನು ಅಜೇಯನೂ ಯುಕ್ತಿ ರ್ಣನೂ ಆಗಿರುತ್ತಿ." **(ಪವಿತ್ರ ಕುರ್‌ಆನ್: 5: 118)**

ಪವಿತ್ರ ಕುರ್‌ಆನಿನ ಅಧ್ಯಾಯಗಳು ಪ್ರವಾದಿವರ್ಯರ(ಸ) ಮೇಲೆ ಬಹಳ ರಿಣಾಮ ಬೀರುತ್ತಿತ್ತು. "ನನಗೆ ಹೂದ್ ಮತ್ತಿತರ ಅಧ್ಯಾಯಗಳು ಸಮಯಕ್ಕಿಂತ ಾದಲೇ ಮುದುಕನನ್ನಾಗಿಸಿತು" ಎಂದು ಪ್ರವಾದಿವರ್ಯರು(ಸ) ಹೇಳುತ್ತಿದ್ದರು. ವಿತ್ರ ಕುರ್‌ಆನ್ ಯಾವ ರೀತಿ ಪರಿಣಾಮ ಬೀರುತ್ತಿತ್ತು ಎಂದು ಅವರ(ಸ) ಮಾತಿನಿಂದ ತಿಳಿದು ಬರುತ್ತದೆ. **(ಅಲ್ ಜಾಮಿಯ ತುಸ್ಸಗೀರ್)**

ಪವಿತ್ರ ಕುರ್‌ಆನನ್ನು ಅನುಸರಿಸುವಲ್ಲಿ ಪ್ರವಾದಿ ಮುಹಮ್ಮದರು(ಸ) ಜೀವನ ಾದರಿಯಾಗಿದೆ. ಅವರು(ಸ) ಪವಿತ್ರ ಕುರ್‌ಆನಿನ ಪಡಿಯಚ್ಚು ಆಗಿದ್ದರೆಂದು ಯಿಶಾ ಸಿದ್ದೀಕಾ(ರ)ರವರ ಈ ಮಾತಿನಿಂದ ತಿಳಿಯಬಹುದು: كَانَ خُلُقُهُ الْقُرْآن ಪ್ರವಾದಿವರ್ಯರ(ಸ) ಚಾರಿತ್ರ್ಯ ಕುರ್‌ಆನ್ ಆಗಿತ್ತು"

ಮುಸ್ಲಿಮರು ಪವಿತ್ರ ಕುರ್‌ಆನಿನ ಅಧ್ಯಯನದೊಂದಿಗೆ, ಪ್ರವಾದಿಚರ್ಯೆಯ ಧ್ಯಯ ನವನ್ನೂ ಕಡ್ಡಾಯಗೊಳಿಸಬೇಕು. ಪ್ರವಾದಿವರ್ಯರ(ಸ) ಸ್ವಭಾವ, ನಡೆ-ಡಿಯೆಲ್ಲವೂ ಕುರ್‌ಆನ್ ಅಗಿತ್ತು. ಪವಿತ್ರ ಕುರ್‌ಆನ್ ಪ್ರವಾದಿವರ್ಯರ(ಸ) ಮೇಲೆ

ಅವತೀರ್ಣಗೊಳ್ಳುತ್ತಿದ್ದ ಕಾರಣ, ಮೊಟ್ಟ ಮೊದಲು ಅವರು(ಸ) ಅದನ್ನು ಅನುಸರಿ ಅದರ ಆದೇಶಗಳನ್ನು ತನ್ನ ಮೇಲೆ ಕಡ್ಡಾಯಗೊಳಿಸುತ್ತಿದ್ದರು. ಅದನ್ನು ಹೊರೆಯೆನಿಸ ಅಲ್ಲಾಹನ ಸಂಪ್ರೀತಿಗಾಗಿ ಅನುಸರಿಸುತ್ತಿದ್ದರು, ತನ್ನ ಮನದಾಳದಿಂದ ಪವಿ ಕುರ್‌ಆನನ್ನು ಪ್ರೀತಿಸುತ್ತಿದ್ದರು ಹಾಗೂ ಅದರ ಅನುಸರಣೆ ಅವರ(ಸ) ಕೇಂ ಬಿಂದುವಾಗಿತ್ತು. ಬಹಳ ಉತ್ಸುಕತೆಯಿಂದ ಅನುಸರಿಸುತ್ತಾ ತಮ್ಮ ಆತ್ಮಾವಲೋಕ ನಡೆಸುತ್ತಿದ್ದರು. ಅದರ ಅನುಸರಣೆ ಮಾಡಲು ಅವರ ಹೃದಯ ಮಿಡಿಯುತ್ತಿತ ಪವಿತ್ರ ಕುರ್‌ಆನಿನ ಆದೇಶಗಳನ್ನು ಹೇಗೆ ಪಾಲಿಸುತ್ತಿದ್ದರೆಂಬುದನ್ನು ಈ ಕೆಲ ಉದಾಹರಣೆಗಳಿಂದ ತಿಳಿಯಬಹುದು.

ಪ್ರವಾದಿ ಮುಹಮ್ಮದ್(ಸ) ಜನರಿಂದ, ಸಮಾಜದಿಂದ ದೂರ ಹೋಗಿ ಹಿ ಗುಹೆಯಲ್ಲಿ ಏಕಾಂತತೆಯಲ್ಲಿ ಧ್ಯಾನಮಗ್ನರಾಗಿ ಕುಳಿತುಕೊಳ್ಳುತ್ತಿದ್ದರು. ಪವಿ ಕುರ್‌ಆನ್ ಅವತೀರ್ಣಗೊಳ್ಳಲು ಪ್ರಾರಂಭವಾದ ನಂತರ, ತನ್ನ ಆಪ್ತ ಸಂಬಂಧಿಕರಿ ಮತ್ತು ಸಕಲ ಮಾನವರಿಗೆ ಈ ಬಗ್ಗೆ ಸುವಾರ್ತೆ ಮತ್ತು ಎಚ್ಚರಿಕೆಯನ ನೀಡತೊಡಗಿದರು. ಏಕಾಂತವಾಸವನ್ನು ಬಿಟ್ಟು, ತನ್ನನ್ನು ಸಂದೇಶ ಪ್ರಚಾ ಕಾರ್ಯದಲ್ಲಿ ತೊಡಗಿಸಿ ಕೊಂಡರು. ಮಕ್ಕಾ ಪಟ್ಟಣದ ಶ್ರೀಮಂತ ಬಲಾಢ್ಯ ಹಾಗೂ ಗೋತ್ರಗಳ ವಿತಂಡವಾದವನ್ನು ಪರಿಗಣಿಸದೆ, ತಮ್ಮ ಸಂಪೂರ್ಣ ಜೀವನವನ್ನು ಸಂದೇಶ ಪ್ರಚಾರಕ್ಕಾಗಿ ಮೀಸಲಿಟ್ಟರು. ಇದರಿಂದ ಅವರಿಗೆ ಬೇಸ ಉಂಟಾಗಲಿಲ್ಲ ಮತ್ತು ಆಯಾಸವೂ ಆಗಲಿಲ್ಲ. ಬದಲಾಗಿ ತನ್ನ ಜೀವನದ ಕೊನೆಯ ಉಸಿರಿನ ತನಕ ಸಂದೇಶ ಪ್ರಚಾರದಲ್ಲಿ ಸ್ಥಿರವಾಗಿ ನಿಂತರು.

ಪವಿತ್ರ ಕುರ್‌ಆನ್, ಪ್ರವಾದಿ ಮುಹಮ್ಮದ್(ಸ)ರಿಗೆ ಸಹನೆ ಹಾಗೂ ಸ್ಥಿರತೆಯನ ಕಾಪಾಡುವ ಆಜ್ಞೆಯನ್ನು ಕೊಟ್ಟಾಗ, ಪ್ರವಾದಿವರ್ಯರು(ಸ) ಮಕ್ಕಾ ಪಟ್ಟಣ ಸತ್ಯನಿಷೇಧಿಗಳ ಪ್ರತಿರೋಧ, ತಾಯಿಫ್‌ನ ಅಜ್ಞಾನಿಗಳ ಹಿಂಸೆ ಮತ್ತು ಮದೀನಾ ಯಹೂದಿ ಹಾಗೂ ಕಪಟ ವಿಶ್ವಾಸಿಗಳ ಕುತಂತ್ರಗಳ ಮುಂದೆ ತಾಳ್ಮೆ ಮತ ಸ್ಥಿರತೆಯ ಪರ್ವತವಾಗಿ ನಿಂತರು.

ಮದೀನಾ ಜೀವನದ ಅನಿವಾರ್ಯ ಸಂದರ್ಭದಲ್ಲಿ ಯುದ್ಧದ ಆಜ್ಞೆಗಳ ಬಂದಾಗ, ಪ್ರವಾದಿವರ್ಯರ(ಸ) ಜೀವನವು ಯುದ್ಧರಂಗದಲ್ಲೇ ಸಾಗಿತು. ಯುದ್ಧಗಳ ಮತ್ತು ಸಂಧಾನಗಳು, ಯುದ್ಧದ ಅಭಿಯಾನಗಳು, ಸೈನಿಕರ ಸುಧಾರಣೆ, ವಿಕ್ರಮಗಳೆಲ್ಲವ ಪವಿತ್ರ ಕುರ್‌ಆನಿನ ಅರ್ಪಣೆಯ ಆಜ್ಞಾಪಾಲನೆಯಲ್ಲದೆ ಮತ್ತೇನೂ ಅಲ್ಲ.

ಕಷ್ಟದಲ್ಲಿರುವವರಿಗೆ ಸಹಕರಿಸಬೇಕು ಎಂದು ಪವಿತ್ರ ಕುರ್‌ಆನ್ ಆಜ್ಞಾಪಿಸಿದಾ ತಾನು(ಸ) ದಾರಿದ್ರ್ಯದಲ್ಲಿ ಸಿಲುಕುವೆನು ಎಂಬ ಬಗ್ಗೆ ಚಿಂತಿಸದೆ, ಜನರಿಂದ ಸಾ

ತೆದಾದರೂ ಅಗತ್ಯವುಳ್ಳವರಿಗೆ ಸಹಕರಿಸಿದರು. ಬಿರುಗಾಳಿಗಿಂತ ವೇಗವಾಗಿತ್ತು ವರ ದಾನ ಧರ್ಮ ಎಂದು ಇತಿಹಾಸದಿಂದ ತಿಳಿದು ಬರುತ್ತದೆ.

ಪವಿತ್ರ ಕುರ್‌ಆನ್ ಪ್ರವಾದಿವರ್ಯರಿಗೆ(ಸ) ವಾಗ್ದಾನಗಳನ್ನು ಪಾಲಿಸುವಂತೆ ಜ್ಞಾಪಿಸಿ ದಾಗ, ವೈರಿಗಳು ಕೂಡ ಪ್ರವಾದಿವರ್ಯರ(ಸ) ವಾಗ್ದಾನದ ಮೇಲೆ ರವಸೆ ಇಡುತ್ತಿದ್ದರು.

ಪವಿತ್ರ ಕುರ್‌ಆನ್ ಕ್ಷಮಿಸಲು ಹಾಗೂ ಮನ್ನಿಸುವಂತೆ ಆಜ್ಞಾಪಿಸಿದಾಗ, ವಾದಿವರ್ಯರು(ಸ) ತಮ್ಮ ಬದ್ಧ ವೈರಿಗಳನ್ನು ಕೂಡ ಕ್ಷಮಿಸಿ ಮನ್ನಿಸಿದರು. ಮ್ಮ ಸ್ವಂತಕ್ಕಾಗಿ ಎಂದೂ ಸೇಡು ತೀರಿಸಲಿಲ್ಲ.

ಕರುಣೆ ತೋರುವಂತೆ ಪವಿತ್ರ ಕುರ್‌ಆನ್ ಆಜ್ಞಾಪಿಸಿದಾಗ, ಪ್ರವಾದಿಯವರು(ಸ) ುದು ತಾಯಿ ತನ್ನ ಕರುಳ ಕುಡಿಯ ಮೇಲೆ ಕರುಣೆವಹಿಸುವುದಕ್ಕಿಂತ ಮಿಗಿಲಾಗಿ ುಣಾಮಯಿ ಆದರು.

ಪವಿತ್ರ ಕುರ್‌ಆನ್ ನ್ಯಾಯವನ್ನು ಪಾಲಿಸುವಂತೆ ಆದೇಶಿಸಿದಾಗ ವಾದಿವರ್ಯರ(ಸ) ಸಂಗಾತಿಗಳು ಮಾತ್ರವಲ್ಲ, ಅವರ ವೈರಿಗಳು ಕೂಡಾ ಅವರ ್ಯಯಕ್ಕೆ ನಿಬ್ಬೆರಗಾದರು.

ಭವಿಷ್ಯದಲ್ಲಿ ಉಂಟಾಗಬಹುದಾದಂತಹ ವೃತ್ತಾಂತಗಳ ಬಗ್ಗೆ ದಿವ್ಯವಾಣಿ ವತೀರ್ಣವಾದಾಗ, ಪ್ರವಾದಿವರ್ಯರು(ಸ) ಯಾವುದೇ ಸಂದೇಹವಿಲ್ಲದೆ ುಬುತ್ತಿದ್ದರು.

ಪವಿತ್ರ ಕುರ್‌ಆನ್ ಪ್ರವಾದಿಗಳ ಬಗ್ಗೆ ತಿಳಿಸುತ್ತ, ಈ ರೀತಿ ಆದೇಶಿಸಿತು:

أُولَٰئِكَ الَّذِينَ هَدَى اللَّهُ فَبِهُدَاهُمُ اقْتَدِهْ

"ಓ ಪೈಗಂಬರರೇ ಆವರೇ ಅಲ್ಲಾಹನ ವತಿಯಿಂದ ಸನ್ಮಾರ್ಗ ಹೊಂದಿದವ ುಗಿದ್ದರು ನೀವು ಅವರ ಮಾರ್ಗದಲ್ಲೇ ನಡೆಯಿರಿ." (ಪವಿತ್ರ ಕುರ್‌ಆನ್: 6: 90)

ಅಲ್ಲಾಹನು ಗತ ಪ್ರವಾದಿಗಳ ಗುಣ ವಿಶೇಷತೆಗಳನ್ನು ಪ್ರಶಂಸಿದಾಗ ಅಲ್ಲಾಹನ ದೇಶವೆಂದು ಪರಿಗಣಿಸುತ್ತಾ, ಪ್ರವಾದಿವರ್ಯರು(ಸ) ಗತ ಪ್ರವಾದಿಗಳಾದ ವಾದಿ ನೂಹ್(ಅ)ರಿಗೆ ಸಂದೇಶ ಪ್ರಚಾರದ ಕೆಲಸದಲ್ಲಿದ್ದ ದೃಢತೆ, ಪ್ರವಾದಿ ಬ್ರಾಹೀಮ್(ಅ)ರಿಗೆ ಅಲ್ಲಾಹನೊಂದಿಗಿದ್ದ ವ್ಯಾಮೋಹ ಹಾಗೂ ಸ್ಥಿರತೆ, ಅಲ್ಲಾಹನ ುೇಲೆ ಪ್ರವಾದಿ ಮೂಸಾ(ಅ)ರಿಗಿದ್ದ ನಿಷ್ಠೆ, ಪ್ರವಾದಿ ಈಸಾ(ಅ)ರ ಭಕ್ತಿ ಹಾಗೂ ೃದುತ್ವ, ತನ್ನ ಪ್ರಭುವಿನ ಅನುಸರಣೆಯಲ್ಲಿ ತಲ್ಲೀನರಾಗಿರುತ್ತಿದ್ದ ಪ್ರವಾದಿ

ಇಸ್ಮಾಈಲ್(ಅ)ರ ವಿಶೇಷತೆ, ಪ್ರವಾದಿ ದಾವೂದ್(ಅ)ರ ಅಲ್ಲಾಹನ ಅನುಸರ ಹಾಗೂ ದೇವಸ್ತುತಿಯ ರೀತಿ, ಪ್ರವಾದಿ ಸುಲೈಮಾನ್(ಅ)ರ ಬುದ್ಧಿವಂತಿಕೆ ಹಾಗು ಕೃತಜ್ಞತಾ ಭಾವ ಮತ್ತು ಪ್ರವಾದಿ ಅಯ್ಯೂಬ್(ಅ)ರ ತಾಳ್ಮೆಯಂತಹ ವಿಶೇ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಂಡರು.

ಎಲ್ಲ ಪ್ರವಾದಿಗಳಿಗೆ ಏಕದೇವತ್ವದಲ್ಲಿ ಸ್ಥಿರವಾಗಿರುವಂತೆ ಆಜ್ಞಾಪಿಸಲಾಗಿ ಮತ್ತು ಏಕ ದೇವತ್ವದ ಸಂದೇಶವನ್ನು ಹರಡುವಂತೆ ಆದೇಶಿಸಲಾಗಿತ್ತು. ಆದ ಪ್ರವಾದಿವರ್ಯರು(ಸ) ಲೋಕಕ್ಕೆ ಏಕದೇವತ್ವದ ಸಂದೇಶವನ್ನು ಸಾರಿದಂತೆ, ತ ಜನಾಂಗಕ್ಕೆ ಏಕದೇವತ್ವದ ಮಹತ್ವ ಹಾಗೂ ಅದರ ಮುನ್ನೆಚ್ಚರಿಕೆಯನ್ನು ಕೊಟ್ಟ ಯಾವ ಪ್ರವಾದಿಯೂ ಕೊಡಲಿಲ್ಲ. ದೇವಸಹಭಾಗಿತ್ವದ ಬಹಿರಂಗ ಹಾಗೂ ಆಂತರಿ ವಿಷಯಗಳ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತ ದೇವಸಹಭಾಗಿತ್ವದ ಬಾಗಿಲನ್ನು ಮುಚ್ಚಿಬಿಟ್ಟರ ಪವಿತ್ರ ಕುರ್‌ಆನ್ ಹೇಳುತ್ತದೆ:

بَلِ اللّٰهَ فَاعْبُدْ وَكُنْ مِّنَ الشّٰكِرِيْنَ

"ಆದುದರಿಂದ (ಸಂದೇಶವಾಹಕರೇ) ನೀವು ಕೇವಲ ಅಲ್ಲಾಹನ ಆರಾಧನೆಯನ ಮಾಡಿರಿ ಮತ್ತು ಕೃತಜ್ಞ ದಾಸರಲ್ಲಾಗಿರಿ." **(ಪವಿತ್ರ ಕುರ್‌ಆನ್: 39: 66)**

ಆರಾಧನೆ ಹಾಗೂ ಉಪಕಾರ ಸ್ಮರಣೆಯಲ್ಲಿ ಪ್ರವಾದಿ ಮುಹಮ್ಮದ್(ಸ) ಇಡೀ ರಾತ್ರಿಯನ್ನು ಕಳೆಯುತ್ತಿದ್ದರು. ಕೆಲವೊಮ್ಮೆ ನಿದ್ದೆ ಮಾಡಿದರೂ ರಾತ್ರಿ ಹೊ ನಿದ್ದೆಯಿಂದ ಎಚ್ಚೆತ್ತಾಗ ಉಪಕಾರ ಸ್ಮರಣೆಯಲ್ಲಿ ಕಾಲಕಳೆಯುವುದು ಮಾತ್ರವಲ್ಲ ದಿನದ ಪ್ರತಿಯೊಂದು ಕ್ಷಣ ಉಪಕಾರ ಸ್ಮರಣೆಯಲ್ಲಿ ಕಳೆಯುತ್ತಿದ್ದರು. ಆಹಾ ಸೇವನೆಯ ನಂತರ, ಹಾಲು ಕುಡಿದ ನಂತರ, ನೀರು ಕುಡಿದ ನಂತರ, ವ ಧಾರಣೆಯ ಸಮಯ, ಕನ್ನಡಿ ನೋಡುವಾಗ, ಮೊದಲ ಚಂದ್ರ ಕಂಡಾ ಅಂಗಸ್ನಾನ (ವುಝೂ) ಮಾಡುವಾಗ ಮತ್ತು ನಂತರ, ಮಲ ಮೂ ವಿಸರ್ಜನೆಯ ಮೊದಲು ಮತ್ತು ನಂತರ, ರೋಗಿ ಸಂದರ್ಶನದ ಸಮಯ, ಹಣ ತಿನ್ನುವ ಸಮಯ-ಇಂತಹ ಎಲ್ಲ ಸಮಯಗಳಲ್ಲಿ ಸೃಷ್ಟಿಕರ್ತನ ಉಪಕಾರ ಸ್ಮರ ತನ್ನ ಮೇಲೆ ಕಡ್ಡಾಯ ಮಾಡಿಕೊಂಡಿದ್ದರು. ರಾತ್ರಿ ಮಲಗುವಾಗ ಹಲ ಪ್ರಾರ್ಥನೆಗಳೊಂದಿಗೆ ಉಪಕಾರ ಸ್ಮರಣೆ ಮಾಡಿ ಮಲಗುತ್ತಿದ್ದರು. ಪವಿತ್ರ ಕುರ್‌ಆ ಹೀಗೆ ಆಜ್ಞಾಪಿಸುತ್ತದೆ:

كُلُوْا وَاشْرَبُوْا وَلَا تُسْرِفُوْا

"ಉಣ್ಣಿರಿ, ಕುಡಿಯಿರಿ ಮತ್ತು ಮಿತಿಮೀರಬೇಡಿರಿ." **(ಪವಿತ್ರ ಕುರ್‌ಆನ್: 7: 3**

ಪ್ರವಾದಿವರ್ಯರು(ಸ) ದುಂದು ವೆಚ್ಚ ಮಾಡುವುದರಿಂದ ತಡೆದಿರುವರು. ಹೊಟ್ಟೆ ಹಸಿದಾಗ ಮಾತ್ರ ಆಹಾರ ಸೇವಿಸುವುದು ಮತ್ತು ಹಸಿವೆ ಇನ್ನೂ ಬಾಕಿ ುಳಿದಿರುವಾಗ ಆಹಾರ ಸೇವನೆ ನಿಲ್ಲಿಸುವವರು ನಾವಾಗಿದ್ದೇವೆ" ಎಂದು ಪ್ರವಾದಿ ರ್ಯರು(ಸ) ಹೇಳಿರುವರು. ಅವರು(ಸ) ತಮ್ಮ ಸಂಗಾತಿಗಳೊಂದಿಗೆ "ನೀರನ್ನು ಿತವಾಗಿ ಬಳಸಿ, ನೀರಿನ ದುಂದುವೆಚ್ಚ ಮಾಡಬೇಡಿರಿ, ಒಂದು ವೇಳೆ ನೀವು ದಿಯಲ್ಲಿದ್ದರೂ ಸರಿ" ಎಂದು ಹೇಳುತ್ತಿದ್ದರು. ನೀರು ಒಂದು ಅನುಗ್ರಹವಾಗಿದೆ ಂಬ ಬಗ್ಗೆ ಪವಿತ್ರ ಕುರ್‌ಆನ್ ಈ ರೀತಿ ತಿಳಿಸುತ್ತದೆ.

لَوْ نَشَآءُ جَعَلْنٰهُ اُجَاجًا فَلَوْلَا تَشْكُرُوْنَ

"ನಾವಿಚ್ಚಿಸಿದರೆ ಅದನ್ನು ಕಡು ಉಪ್ಪನ್ನಾಗಿ ಮಾಡಿ ಬಿಡಬಲ್ಲೆವು. ಹೀಗಿರುತ್ತ ೇವೇಕೆ ಕೃತಜ್ಞರಾಗಿರುವುದಿಲ್ಲ?" **(ಪವಿತ್ರ ಕುರ್‌ಆನ್: 56: 70)**

ನೀರು ಕುಡಿದ ನಂತರ ಪ್ರವಾದಿವರ್ಯರು(ಸ) ಈ ರೀತಿ ಪ್ರಾರ್ಥಿಸುತ್ತಿದ್ದರು:

اَلْحَمْدُ لِلّٰهِ الَّذِى جَعَلَهُ عَذبًا فُرَاتًا بِرَحْمَتِهِ وَلَوْ يَشَاءُ لَجَعَلَهُ اُجَاجًا بِذُنُوبِنَا

"ತನ್ನ ಅನುಗ್ರಹದಿಂದ ನೀರನ್ನು ಸಿಹಿ ಹಾಗೂ ಆಹ್ಲಾದಕರವನ್ನಾಗಿ ಮಾಡಿದ ಲ್ಲಾಹನಿಗೆ ಕೃತಜ್ಞತೆಗಳು. ಆತನು ಬಯಸಿದರೆ ನಮ್ಮ (ಮನುಷ್ಯರ) ಪಾಪಗಳ ಾರಣ ನೀರನ್ನು ತೀವ್ರ ಉಪ್ಪು ನೀರನ್ನಾಗಿ ಹಾಗೂ ಕಹಿಯಾಗಿ ಮಾಡಬಹುದಿತ್ತು."

ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ,

فَسَبِّحْ بِحَمْدِ رَبِّكَ وَكُنْ مِّنَ السّٰجِدِيْنَ

"ನಿಮ್ಮ ಪ್ರಭುವಿನ ಕೀರ್ತನೆಯೊಂದಿಗೆ ಅವನನ್ನು ಸ್ತುತಿಸಿರಿ. ಅವನ ನ್ನಿಧಿಯಲ್ಲಿ ಸಾಷ್ಟಾಂಗವೆರಗಿರಿ." **(ಪವಿತ್ರ ಕುರ್‌ಆನ್: 15: 98)**

وَسَبِّحْ بِحَمْدِ رَبِّكَ قَبْلَ طُلُوْعِ الشَّمْسِ وَقَبْلَ غُرُوْبِهَا ۚ وَمِنْ اٰنَآئِ الَّيْلِ فَسَبِّحْ
وَاَطْرَافَ النَّهَارِ لَعَلَّكَ تَرْضٰى

"ಆದುದರಿಂದ ಓ ಪೈಗಂಬರರೇ, ಅವರ ಮಾತುಗಳ ಬಗ್ಗೆ ತಾಳ್ಮೆ ವಹಿಸಿರಿ ುತ್ತು ಸೂರ್ಯೋದಯಕ್ಕೆ ಹಾಗೂ ಸೂರ್ಯಾಸ್ತಮಾನಕ್ಕೆಮುಂಚೆ ನಿಮ್ಮ ಪ್ರಭುವಿನ ್ತುತಿಸ್ತೋತ್ರದೊಂದಿಗೆ ಅವನ ಪಾವಿತ್ರ್ಯವನ್ನು ಕೊಂಡಾಡಿರಿ ಮತ್ತು ರಾತ್ರಿ ವೇಳೆ ಳಲ್ಲಿಯೂ ಹಗಲಿನ ಕಿನಾರೆಗಳಲ್ಲಿಯೂ ಅವನ ಪಾವಿತ್ರ್ಯವನ್ನು ಸ್ತುತಿಸಿರಿ. ುದರಿಂದ ನೀವು ಸಂತೃಪ್ತರಾಗಲೂಬಹುದು." **(ಪವಿತ್ರ ಕುರ್‌ಆನ್: 20: 130)**

ಕುರ್‌ಆನ್‌ನ ಈ ಆದೇಶದ ನಂತರ ಪ್ರವಾದಿವರ್ಯರು(ಸ) ಪ್ರತಿಯೊಂ
ಕ್ಷಣ ಅಲ್ಲಾಹನ ಸ್ತುತಿಯಲ್ಲಿ ತಲ್ಲೀನರಾಗಿರುತ್ತಿದ್ದರು. ಸೂರ್ಯೋದಯದ ಮೊದಲ
ಉದಯದ ನಂತರ, ಅದಾನ್‌ನೊಂದಿಗೆ, ಅದಾನ್‌ನ ನಂತರ, ನಮಾಝಿ
ಮೊದಲು, ನಮಾಝಿನಲ್ಲಿ, ನಮಾಝಿನ ನಂತರ, ಹಗಲು ರಾತ್ರಿ, ರಾತ್ರಿ ಬಹ
ಹೊತ್ತು ಅಲ್ಲಾಹನ ಗುಣನಾಮವನ್ನು ಜಪಿಸುತ್ತ, ಸ್ತುತಿಸುತ್ತ, ಕ್ಷಮೆ ಯಾಚಿಸು
ಪ್ರಾರ್ಥನೆಯಲ್ಲಿ ಕಳೆಯುತ್ತಿದ್ದರು.

ಅಲ್ಲಾಹನು ಪ್ರವಾದಿವರ್ಯರನ್ನು ಅಭಿಸಂಬೋಧಿಸುತ್ತ ಈ ರೀತಿ ಹೇಳಿರುವನ

يَاأَيُّهَا الْمُزَّمِّلُ ① قُمِ اللَّيْلَ إِلَّا قَلِيلًا ② نِّصْفَهُ أَوِ انقُصْ مِنْهُ قَلِيلًا ③
أَوْ زِدْ عَلَيْهِ وَرَتِّلِ الْقُرْآنَ تَرْتِيلًا ④

"ಹೊದ್ದು ಮಲಗುವವರೇ, ಸ್ವಲ್ಪ ಹೊತ್ತು ಹೊರತು ಪಡಿಸಿ ರಾತ್ರಿ ವೇ
ನಮಾಝಿಗಾಗಿ ನಿಲ್ಲಿರಿ. ರಾತ್ರಿಯ ಅರ್ಧಭಾಗ ಅಥವಾ ಅದಕ್ಕಿಂತ ಸ್ವಲ್ಪ ಕಡಿ
ಮಾಡಿಕೊಳ್ಳಿರಿ ಅಥವಾ ಅದಕ್ಕಿಂತ ತುಸು ಹೆಚ್ಚಿಸಿಕೊಳ್ಳಿರಿ ಮತ್ತು ಕುರ್‌ಆನನ್ನು ಸ
ಯಾಗಿ, ತಡೆ ತಡೆದು ಪಠಿಸಿರಿ." **(ಪವಿತ್ರ ಕುರ್‌ಆನ್: 73: 1–4)**

ಪ್ರವಾದಿ ಮುಹಮ್ಮದ್(ಸ) ರಾತ್ರಿ ಎಚ್ಚರಿಕೆಯಿಂದ ಇದ್ದು ನಮಾಝು
ನಿರ್ವಹಿಸುತ್ತ ಕಾಲು ಬಾತು ಹೋಗುವ ತನಕ ಅಲ್ಲಾಹನೊಡನೆ ಮಾತನಾಡುತ್ತಿದ್ದ
ಯಾರಾದರೂ ವಿಶ್ರಾಂತಿ ಪಡೆಯುವಂತೆ ಸಲಹೆ ಕೊಟ್ಟರೆ, لا أَكُونَ شَكُورًا
"ನಾನು ಕೃತಜ್ಞ ದಾಸನಾಗುವುದು ಬೇಡವೆ?" ಎಂದು ಹೇಳುತ್ತಿದ್ದರು.

ಪ್ರವಾದಿ ಮುಹಮ್ಮದ್‌ರ(ಸ) ಸಂಪೂರ್ಣ ಜೀವನ ಪವಿತ್ರ ಕುರ್‌ಆನಿ
ಅನುಸರಣೆಯಾಗಿತ್ತು ಎಂದು ಕೆಲವು ಉದಾಹರಣೆಯಿಂದ ತಿಳಿದು ಬಂತು. ನ
ಆತ್ಮೀಯ ಪ್ರವಾದಿಯವರ(ಸ) ಜೀವನ ನಮಗೊಂದು ಮಾದರಿಯಾಗಿದೆ. ಪ್ರವಾ
ಯವರ(ಸ) ಪ್ರತಿದಿನವೂ ಅನುಸರಣೆ, ಸಂದೇಶ ಪ್ರಚಾರ, ಜಿಹಾದ್, ನ್ಯಾ
ಪಾಲನೆ, ಪ್ರವಚನ, ಅಲ್ಲಾಹನ ಸ್ತುತಿ, ಆರಾಧನೆ ಹಾಗೂ ಮಾರ್ಗದರ್ಶ
ಇತ್ಯಾದಿಗಳಿಂದ ಕೂಡಿತ್ತು. ರಾತ್ರಿ ಸಮಯ ತಹಜ್ಜುದ್ ಪ್ರಾರ್ಥನೆ, ದೇವಸ್ತುತಿ ಮ
ತನ್ನ ಪರಿಪಾಲಕ ಪ್ರಭುವಿನೊಂದಿಗೆ ಮಾತನಾಡುತ್ತ ಕಳೆಯುತ್ತಿದ್ದರು. ಈ ರೀ
ಪ್ರವಾದಿವರ್ಯರು(ಸ) ತಮ್ಮ ಸಂಪೂರ್ಣ ಜೀವನದ ಪ್ರತಿಯೊಂದು ಕ್ಷಣಗಳನ
ತಿಂಗಳು ಹಾಗೂ ವರ್ಷಗಳನ್ನು ಇದೇ ರೀತಿ ಕಳೆದು ಜೀವಿಸಿದರು. ಪ್ರವಾ
ವರ್ಯರ(ಸ) ಜೀವನದ ಕಾರ್ಯವಿಧಾನದಲ್ಲಿ ಯಾವುದೇ ರೀತಿಯ ಬದಲಾವ
ಉಂಟಾಗಲಿಲ್ಲ. ಇವರಾಗಿದ್ದರು ನಮ್ಮ ಪ್ರವಾದಿ(ಸ), ನಮ್ಮ ಮಾರ್ಗದರ್ಶಕ, ನ

ಾಯಕ. ಇವರ ಮೇಲೆ ಪವಿತ್ರ ಕುರ್‌ಆನ್ ಅವತೀರ್ಣಗೊಂಡಿತು. ಅವರು...

ಅತ್ಯುತ್ತಮ ರೀತಿಯಲ್ಲಿ ಪವಿತ್ರ ಕುರ್‌ಆನನ್ನು ಅರಿತರು.

ಅತ್ಯುತ್ತಮ ರೀತಿಯಲ್ಲಿ ಪವಿತ್ರ ಕುರ್‌ಆನನ್ನು ಗ್ರಹಿಸಿದರು.

ಅತ್ಯುತ್ತಮ ರೀತಿಯಲ್ಲಿ ಕುರ್‌ಆನನ್ನು ವ್ಯಕ್ತ ಪಡಿಸಿದರು.

ಅತ್ಯುತ್ತಮ ರೀತಿಯಲ್ಲಿ ಕುರ್‌ಆನಿನ ಶಿಕ್ಷಣವನ್ನು ಜನರಿಗೆ ತಲುಪಿಸಿದರು.

ಕುರ್‌ಆನ್ ಬೋಧಿಸಿತ್ತಿರುವ ಶಿಕ್ಷಣವನ್ನು ಅತ್ಯುತ್ತಮ ರೀತಿಯಲ್ಲಿ ಅನುಸರಿಸಿದರು.

ಆದುದರಿಂದ ಪವಿತ್ರ ಕುರ್‌ಆನ್ ಪ್ರವಾದಿವರ್ಯರನ್ನು(ಸ) ಮಾನವೀಯತೆಯ ತ್ಯುತ್ತಮ ಹರಿಕಾರರು ಎಂದು ಸಾರುತ್ತಾ ಕುರ್‌ಆನ್ ಹೇಳುತ್ತದೆ:

إِنَّ اللَّهَ وَمَلَائِكَتَهُ يُصَلُّونَ عَلَى النَّبِيِّ ۚ يَا أَيُّهَا الَّذِينَ آمَنُوا صَلُّوا عَلَيْهِ وَسَلِّمُوا تَسْلِيمًا

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ಮಲಕ್‌ಗಳು (ದೇವಚರರು) ್ರವಾದಿ ವರ್ಯರಿಗೆ 'ಸಲಾತ್' (ಸ್ವಸ್ತಿವಚನ) ಹೇಳುತ್ತಾರೆ, ಸತ್ಯವಿಶ್ವಾಸಿಗಳೇ ನೀವೂ ೂಡ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿನಂದನೆ) ಸಲ್ಲಿಸುತ್ತಲಿರಿ"

(ಪವಿತ್ರ ಕುರ್‌ಆನ್: 33: 56)

## ್ರವಾದಿ(ಸ) ಸಂಗಾತಿಗಳಿಗೆ ಕುರ್‌ಆನಿನೊಂದಿಗೆ ಇದ್ದ ಸಂಬಂಧ

ಪವಿತ್ರ ಕುರ್‌ಆನ್ ಪ್ರವಾದಿಯವರ(ಸ) ಸಂಗಾತಿಗಳ ಜೀವನವನ್ನು ಬದಲಿಸಿ ಟ್ಟಿತು. ಪವಿತ್ರ ಕುರ್‌ಆನಿನ ಬೋಧನೆಗಳಿಂದ ಸಹಾಬಿಗಳು ಎಷ್ಟು ಪ್ರಭಾವಿತ ೊಂಡಿದ್ದರು ಎಂದು ಈ ಘಟನೆಯಿಂದ ತಿಳಿಯಬಹುದು. 'ಝಾತುರ್ರಿಕಾಅ್' (غزوة ذات الرّقاع) ಎಂಬ ಯುದ್ಧದಲ್ಲಿ ಉಬಾದ್ ಬಿನ್ ಬಶರ್(ರ) ಮತ್ತು ಮ್ಮಾರ್ ಬಿನ್ ಯಾಸಿರ್(ರ)ರು, ವೈರಿಗಳು ರಾತ್ರಿ ಹೊತ್ತು ಆಕ್ರಮಣ ಮಾಡದಂತೆ, ಬ್ಬರಿಗೂ ಒಬ್ಬರ ನಂತರ ಒಬ್ಬರಂತೆ ಪಹರೆ ನಿಲ್ಲಲು ಆದೇಶಿಸಲಾಗಿತ್ತು.

ಯಾವುದೇ ರೀತಿಯ ಅಪಾಯ ಇಲ್ಲದ್ದನ್ನು ಕಂಡು ಉಬಾದ್(ರ) ನಮಾಝ್ ರ್ವಹಿಸಲಾರಂಭಿಸಿದರು. ಈ ಸಮಯಕ್ಕೆ ಕಾದು ನಿಂತಿದ್ದ ಮುಶ್ರಿಕನೊಬ್ಬನು ಬಾಣ ಿಟ್ಟನು. ಹ. ಉಬಾದ್(ರ) ನಮಾಝ್‌ನ ನಡುವೆ ಬಾಣ ಕಿತ್ತು ಬಿಸಾಡಿದರು ುತ್ತು ನಮಾಝನ್ನು ಮುಂದುವರಿಸಿದರು. ಎಲ್ಲಿಯ ವರೆಗೆಂದರೆ ನಮಾಝನ್ನು ಪೂರ್ತಿಗೊಳಿಸಿದರು. ಪುನಃ ನಮಾಝ್ ಆರಂಭಿಸಿದರು. ಆತ ಪುನಃ ಒಂದು ಾಣವನ್ನು ಬಿಟ್ಟನು. ಹ. ಉಬಾದ್(ರ) ನಮಾಝಿನಲ್ಲಿ ಕುರ್‌ಆನ್ ಪಠಿಸುತ್ತಿದ್ದರು. ಅವರು ಬಾಣವನ್ನು ಕಿತ್ತು ತೆಗೆದು ನಮಾಝಿನಲ್ಲಿ ತಲ್ಲೀನರಾದರು ಮತ್ತು

ನಮಾಝನ್ನು ಪೂರ್ಣಗೊಳಿಸಿದರು, ಪುನಃ ನಮಾಝನ್ನು ಆರಂಭಿಸಿದರು. ಆ ಮೂರನೆಯ ಸಲವೂ ಅದೇ ರೀತಿ ಬಾಣ ಬಿಟ್ಟನು. ಹ. ಉಬಾದ್(ರ) ಅದ ರೀತಿ ಬಾಣ ಕಿತ್ತೆಸೆದು ನಮಾಝ್ ಮುಂದುವರಿಸಿ ಮುಗಿದ ನಂತರ ಅಮ್ಮಾರ್‌ರನ್ನು(ರ) ಎಬ್ಬಿಸಿದರು. ಹ. ಅಮ್ಮಾರ್(ರ) 'ಮೊದಲ ಬಾಣ ತಾಗಿದಾಗ ಎಬ್ಬಿಸಬೇಕಿತ್ತಲ್ಲ!' ಎಂದು ಕೇಳಿದರು. ನಾನು ನಮಾಝಿನಲ್ಲಿ ಒಂದು ಅಧ್ಯಾಯವನ ಓದಲು ಆರಂಭಿಸಿಯಾಗಿತ್ತು. ಆದುದರಿಂದ ಅದನ್ನು ಮುಗಿಸದೆ ನಮಾಝ ಮುಗಿಸಲು ಇಷ್ಟವಾಗಲಿಲ್ಲ. ಆದರೂ ವೈರಿ ಪದೇ ಪದೇ ಬಾಣ ಬಿಡುತ್ತಿರುವುದರಿಂ ನಿಮ್ಮನ್ನು ಎಬ್ಬಿಸುವುದು ಅನಿವಾರ್ಯವಾಯಿತು. ಅದಕ್ಕಾಗಿ ನಮಾಝನ್ನು ಮುಗಿಸಿ ಅಲ್ಲಾಹನ ಪ್ರವಾದಿವರ್ಯರು(ಸ) ಕಾವಲು ಕಾಯಲು ಆದೇಶಿಸಿದಂತಹ ಈ ಸ್ಥ ದಲ್ಲಿ ವೈರಿಗಳ ಅಪಾಯ ಇರದೆ ಇರುತ್ತಿದ್ದರೆ, ನಾನು ಆ ಅಧ್ಯಾಯ ಓದುತ್ತ ಇರುತ್ತಿದ್ದೆ ಅಥವಾ ಓದಿ ಮುಗಿಸುತ್ತಿದ್ದೆ ಅಥವಾ ಅದರಲ್ಲೇ ನನ್ನ ಪ್ರಾ ಹೋಗುತ್ತಿತ್ತು' ಎಂದು ಉತ್ತರಿಸಿದರು. (ಸೀರತ್ತುನ್ನಬಿ ಇಬ್ನು ಹಿಶಾಮ್)

ಪವಿತ್ರ ಕುರ್‌ಆನಿನ ನೈಜ ಗೌರವಾದರಗಳು ಅದರ ಭಾವಾರ್ಥದಲ್ಲಿ ಅಡ ವಾಗಿದೆ. ಅದು ಓದುಗರಲ್ಲಿ ಮೂಲಭೂತ ಬದಲಾವಣೆಯನ್ನು ತರಬಯಸುತ್ತ ಅವರ ಚಿಂತನೆ ಯನ್ನು ಸರಿಪಡಿಸುತ್ತದೆ ಹಾಗೂ ಅವರ ಹೃದಯಗಳಲ್ಲಿ ಹೊ ಚೇತನವನ್ನು ತುಂಬುತ್ತದೆ. ಕುರ್‌ಆನ್ ಅವರ ಚಿತ್ತವನ್ನು ಯಾವ ರೀತಿ ತರಬೇ ಗೊಳಿಸುತ್ತಿತ್ತೆಂದರೆ, ಅಲ್ಲಾಹನ ನಾಮಗಳನ್ನು ಸರಿಯಾಗಿ ಗ್ರಹಿಸಿ, ನಿಷ್ಠೆ, ದೂರದೃ ಗಳೊಂದಿಗೆ ಆರಾಧನೆಗೈಯುವ ಮೂಲಕ, ಅಲ್ಲಾಹನ ಆಜ್ಞಾನುಸರಣೆ ಹಾ ಅಲ್ಲಾಹನ ಕಾನೂನನ್ನು ಪಾಲಿಸುವವರಾಗುತ್ತಿದ್ದರು. ಪವಿತ್ರ ಕುರ್‌ಆನ್‌ನ್ನು ಗಾಢವಾ ಅಧ್ಯಯನ ಮಾಡುತ್ತ ಅದನ್ನು ಅನುಸರಿಸಿದಾಗ ಮಾತ್ರ ಕುರ್‌ಆನಿನ ಮುಖಾಂತ ಆಗ ಬೇಕಾಗಿರುವ ಬದಲಾವಣೆ ಸಾಧ್ಯ. ಕುರ್‌ಆನನ್ನು ಕೇವಲ ನಾಲಿಗೆಯಿಂ ಪಠಿಸುತ್ತ ಇದ್ದರೆ ಇಂತಹ ಬದಲಾವಣೆ ಆಗಲು ಸಾಧ್ಯವಿಲ್ಲ ಮತ್ತು ಅದರಿಂ ದೊರಕಬೇಕಾಗಿರುವ ನೈಜ ಲಾಭ ಕೂಡ ದೊರಕಲು ಸಾಧ್ಯವಿಲ್ಲ. ಕುರ್‌ಆ ಓದುಗರು ಅದನ್ನು ಸಾವಿರ ಸಲ ಓದಿ ಮುಗಿಸಲಿ ಅಥವಾ ವೇಗವಾಗಿ ಹಾಗ ಬಹಳ ಸುಂದರವಾಗಿ ಓದಿದರೂ ಬದಲಾವಣೆಯಾಗಲು ಸಾಧ್ಯವಿಲ್ಲ.

ಸಹಾಬಿಗಳು ಕುರ್‌ಆನನ್ನು ವೇಗವಾಗಿ ಪಠಿಸುವುದನ್ನು ಇಷ್ಟಪಡುತ್ತಿರಲಿ ಕುರ್‌ಆನನ್ನು ಒಂದು ರಾತ್ರಿಯಲ್ಲಿ 2–3 ಸಲ ಓದಿ ಮುಗಿಸುವವರು ಕೂಡ ಇದ್ದ ಎಂದು ಹ. ಆಯಿಶಾ(ರ)ರಿಗೆ ತಿಳಿಸಿದಾಗ, ಅವರು ಹೇಳಿದರು, 'ಅವರು ಓದಿದರ ಓದಲಿಲ್ಲ.' ಪ್ರವಾದಿವರ್ಯರು(ಸ) ಇಡೀ ರಾತ್ರಿ ನಮಾಝಿನಲ್ಲಿ ನಿಲ್ಲುತ್ತಿದ್ದರು ಮ

ಅಲ್ ಬಕರ, ಆಲಿ ಇಮ್ರಾನ್ ಮತ್ತು ಅನ್ನಿಸಾ ಅಧ್ಯಾಯವನ್ನು ಪಠಿಸುತ್ತಿದ್ದರು. ಸುವಾರ್ತೆಯ ಸೂಕ್ತಗಳನ್ನು ಓದುವಾಗ, ಅದಕ್ಕಾಗಿ ಬೇಡುತ್ತಿದ್ದರು ಮತ್ತು ಹೆದರಿಸುವ ಸೂಕ್ತಗಳನ್ನು ಓದುವಾಗ ಅಲ್ಲಾಹನ ಅಭಯ ಯಾಚಿಸುತ್ತಿದ್ದರು.

(ಈ ಹದೀಸನ್ನು ಇಬ್ನ್ ಅಲ್ ಮುಬಾರಕ್‌ರವರು ಹದೀಸುಝ್ಝುಹ್ದ್‌ನಲ್ಲಿ ವಿವರಿಸುತ್ತಾರೆ ಹದೀಸ್ ನಂಬ್ರ: 1196, ಪುಟ: 421)

'ನಾನು ಪವಿತ್ರ ಕುರ್‌ಆನನ್ನು ಬಹಳ ವೇಗವಾಗಿ ಪಠಿಸುತ್ತೇನೆ 3 ದಿವಸದಲ್ಲಿ ಓದಿ ಮುಗಿಸುತ್ತೇನೆ' ಎಂದು ಹ. ಅಬೂ ಜಮ್ರಃರವರು ಇಬ್ನ್ ಅಬ್ಬಾಸ್‌ರೊಂದಿಗೆ ಹೇಳಿದಾಗ, 'ಒಂದು ರಾತ್ರಿಯಲ್ಲಿ ಸೂರಃ ಬಕರಃವನ್ನು ಸುಂದರವಾಗಿ ಗಾಢವಾದ ಚಿಂತನೆಯೊಂದಿಗೆ ಓದುವುದನ್ನು ನಾನು ಇಷ್ಟಪಡುತ್ತೇನೆ' ಎಂದು ಹ. ಅಬ್ದುಲ್ಲಾ ಬಿನ್ ಅಬ್ಬಾಸ್ ಹೇಳಿದರು ಎಂದು ಜಮ್ರಃ ವರದಿ ಮಾಡುತ್ತಾರೆ.

(ಫಝೂಇಲುಲ್ ಕುರ್‌ಆನ್ ಲಿ ಅಬೀ ಉಬೈದ್ ಪುಟ-157)

## ಕುರ್‌ಆನಿನೊಂದಿಗೆ ನಮ್ಮ ಧೋರಣೆ

ಅಂದು ಸಹಾಬಿಗಳೊಂದಿಗೆ ಇದ್ದ ಪವಿತ್ರ ಕುರ್‌ಆನ್ ಈಗ ನಮ್ಮಲ್ಲೂ ಇದೆ. ಈ ಕುರ್‌ಆನ್ ಸಹಾಬಿಗಳನ್ನು ಬೇರೆಯೇ ಮನುಷ್ಯರನ್ನಾಗಿ ಮಾರ್ಪಡಿಸಿತು. ಕುರ್‌ಆನ್ ಈವತ್ತು ಮನುಷ್ಯರಲ್ಲಿ ಅಂತಹದೇ ಬದಲಾವಣೆ ತರುವಲ್ಲಿ, ಅದರಲ್ಲಿರುವ ಸಾಮರ್ಥ್ಯ ಮುಗಿಯಿತೇ? ಇದು ಅಸಾಧ್ಯವೆಂದಾದರೆ, ಮತ್ತೇನಿರಬಹುದು ಇದರ ನೈಜ ಕಾರಣ? ಕುರ್‌ಆನ್ ಅನಂತಾನಂತ ಪವಾಡಗಳಿರುವ ಗ್ರಂಥವಾಗಿದೆ. ನಿಶ್ಚಯವಾಗಿಯೂ ದೋಷ ಹಾಗೂ ಕೊರತೆ ನಮ್ಮಲ್ಲಿದೆ. ಪ್ರತಿಯೊಂದು ಮನೆಯಲ್ಲಿ ಕುರ್‌ಆನ್ ಇದೆ. ಮುಸ್ಲಿಮ್ ರಾಷ್ಟ್ರಗಳಲ್ಲಿ ಹಗಲಿರುಳು ರೇಡಿಯೋ ಮತ್ತು ದೂರದರ್ಶನಗಳ ಮುಖಾಂತರ ವಿವಿಧ ಚ್ಯಾನೆಲ್‌ಗಳಲ್ಲಿ ಬಿತ್ತರಿಸಲಾಗುತ್ತಿದೆ. ಲಕ್ಷಗಟ್ಟಲೆ ಜನರು ಮುಸ್ಲಿಮ್ ಸಮುದಾಯದಲ್ಲಿ ಕುರ್‌ಆನನ್ನು ಕಂಠಪಾಠ ಮಾಡಿದವರಿದ್ದಾರೆ. ಈಗಿರುವಷ್ಟು ಜನ ಪ್ರವಾದಿವರ್ಯರ(ಸ) ಕಾಲದಲ್ಲಾಗಲಿ, ಸತ್ಯಸಂಧ ಖಲೀಫರ ಕಾಲದಲ್ಲಾಗಲಿ ಇರಲಿಲ್ಲ. ಆದರೂ ಪವಿತ್ರ ಕುರ್‌ಆನಿನ ಮುಖಾಂತರ ಆಗಬೇಕಾಗಿರುವ ಬದಲಾವಣೆ ಯಾಕೆ ಆಗುತ್ತಿಲ್ಲ? ಏನಿರಬಹುದು ಇದರ ಕಾರಣ?

ಇದರ ಕಾರಣ ಬಹಳ ನಿಖರವಾಗಿದೆ. ಪವಿತ್ರ ಕುರ್‌ಆನಿನಿಂದ ಉಂಟಾಗುವ ಪವಾಡಗಳ ಪರಿಣಾಮ ಮತ್ತು ಅದರಿಂದ ಉಂಟಾಗುವ ಬದಲಾವಣೆಗಳಿಗೆ ಅಗತ್ಯವಾಗಿರುವ ಶರ್ತಗಳಿಗೆ ನಾವು ಬದ್ಧರಾಗಿಲ್ಲ. ನಮ್ಮ ಧ್ಯಾನ ಕೇವಲ ಪವಿತ್ರ ಕುರ್‌ಆನಿನ ಪದಗಳ ಮೇಲೆ ಕೇಂದ್ರಿಕೃತವಾಗಿದೆ. ಅದರ ಪದಗಳನ್ನು ಬಾಯಿಯಿಂದ ಉಚ್ಚರಿಸುವುದಕ್ಕೆ ಮತ್ತು ಅದರ ವಸ್ತುಸ್ಥಿತಿಯನ್ನು ಕಲಿಯುವುದಕ್ಕೆ ನಾವು ಕುರ್‌ಆನಿನ

ಶಿಕ್ಷಣವೆಂದು ಭಾವಿಸುತ್ತೇವೆ, ಕುರ್‌ಆನಿನ ಪದಗಳನ್ನು ಅದರ ನೈಜ ರೀತಿಯಲ್ಲಿ ಉಚ್ಚರಿಸುವುದನ್ನು ಮತ್ತು ಅದರ ಅಕ್ಷರಗಳನ್ನು ಸರಿಯಾದ ರೀತಿಯಲ್ಲಿ ಪಠಿಸುವುದನ್ನು ನಾವು ಕಲಿತಿದ್ದೇವೆ. ಆದರೆ ನಮ್ಮ ಗಮನ ಕುರ್‌ಆನಿನ ಬೋಧನೆ ಹಾಗೂ ಅನುಸರಣೆಯ ಕಡೆಗೆ ಹೋಗುವುದಿಲ್ಲ ಮತ್ತು ನಮಗೆ ಅದರ ಆಸಕ್ತಿಯೂ ಇಲ್ಲ.

ಪವಿತ್ರ ಕುರ್‌ಆನಿನೊಂದಿಗಿರುವ ಈ ಬಾಹ್ಯ ಸಂಬಂಧದ ಕಾರಣ ಅದರ ನೈಜ ಪ್ರತಿಫಲ ನಮಗೆ ದೊರಕುತ್ತಿಲ್ಲ. ಈ ಗ್ರಂಥದೊಂದಿಗಿರುವ ನಮ್ಮ ಈ ವಿಚಿತ್ರ ಧೋರಣೆಯ ಪರಿಣಾಮ ಬಹಳ ವಿನಾಶಕಾರಿಯಾಗಿದೆ. ನಮ್ಮಲ್ಲಿರುವ ಉದಾಸೀನಭಾವ ಹಾಗೂ ಅದನ್ನು ಅನುಸರಿಸದ ಕಾರಣ, ಮನುಷ್ಯನಲ್ಲಿ ಉಂಟಾಗಬೇಕಾದ ಬದಲಾವಣೆಗಳು ಕಂಡುಬರುತ್ತಿಲ್ಲ. ನಮ್ಮ ನಡೆ-ನುಡಿಯಲ್ಲಿ ವ್ಯತ್ಯಾಸವಿದೆ, ನಮ್ಮ ಅಭಿರುಚಿ ಬದಲಾಗಿದೆ. ಲೌಕಿಕ ಪ್ರೇಮ ಹಾಗೂ ಸಂಬಂಧ ಹೆಚ್ಚುತ್ತಿದೆ. ಪ್ರವಾದಿವರ್ಯರು(ಸ) ಅವತ್ತು ನುಡಿದ ಭವಿಷ್ಯವಾಣಿಯಲ್ಲಿ ನಾವು ಈವತ್ತು ಬದುಕುತ್ತಿದ್ದೇವೆ. "ಊಟದ ತಟ್ಟೆಯ ಮೇಲೆ ಮುಗಿ ಬೀಳಲು ಕರೆಯುವಂತೆ, ಜನಾಂಗಗಳು ನಿಮ್ಮ ಮೇಲೆ ಮುಗಿ ಬೀಳುವ ಆ ದಿನ ಹತ್ತಿರ ಇದೆ." ಇದನ್ನು ಕೇಳಿದ ಒಬ್ಬ ವ್ಯಕ್ತಿ "ಆಗ ನಮ್ಮ ಸಂಖ್ಯೆ ಬಹಳ ಕಡಿಮೆ ಇರುವುದೇ?" ಎಂದು ಪ್ರಶ್ನಿಸಿದರು. "ಇಲ್ಲ, ನೀವು ಅಧಿಕ ಸಂಖ್ಯೆಯಲ್ಲಿರುವಿರಿ. ಆದರೆ ನಿಮ್ಮ ಅವಸ್ಥೆಯು ನೆರೆನೀರಿನ ಮೇಲಿರುವ ನೊರೆಯಂತೆ ಇರುವುದು. ಅಲ್ಲಾಹನು ನಿಮ್ಮ ವೈರಿಗಳ ಮನಸ್ಸಿನಿಂದ ನಿಮ್ಮ ಭಯವನ್ನು ತಗೆದು ಬಿಡುವನು ಮತ್ತು ನಿಮ್ಮ ಮನಸ್ಸುಗಳಲ್ಲಿ ವಹನ್ ಹಾಕುವನು." ಆ ವ್ಯಕ್ತಿ, "ಓ ಪ್ರವಾದಿವರ್ಯರೇ(ಸ) 'ವಹನ್' ಎಂದರೇನು?" ಎಂದು ಪ್ರಶ್ನಿಸಿದರು. "ಲೌಕಿಕ ವ್ಯಾಮೋಹ ಮತ್ತು ಮರಣದಿಂದ ದ್ವೇಷ" ಎಂದು ಪ್ರವಾದಿ(ಸ) ಉತ್ತರಿಸಿದರು. (ಅಲ್ ಸಿಲ್ಸಿಲತುಲ್ ಸಹೀಹ್)

ಮುಸ್ಲಿಮ್ ಸಮುದಾಯ ತಮ್ಮಲ್ಲಿ ನೈಜ ರೀತಿಯ ಬದಲಾವಣೆ ಬಯಸುವುದಾದರೆ ಬನ್ನಿ. ಕುರ್‌ಆನಿನ ಕಡೆ ಗಮನ ಹರಿಸುವ, ಕುರ್‌ಆನಿನ ಕಡೆ ಮರಳಲು ಇದು ಅತ್ಯುತ್ತಮ ಸಮಯ. ಇದಕ್ಕಿಂತ ಉತ್ತಮ ಸಮಯ ಬೇರೊಂದಿಲ್ಲ. ನಮ್ಮ ಕಣ್ಣುಗಳನ್ನು ತೆರೆಯಲು ಇರಾಕ್ ಮತ್ತು ಅಫ್ಘಾನಿಸ್ತಾನ ರಾಷ್ಟ್ರಗಳ ಪ್ರಸಕ್ತ ಸ್ಥಿತಿಗತಿಗಳು ಸಾಕು. ಪ್ರವಾದಿವರ್ಯರ(ಸ) ಭವಿಷ್ಯವಾಣಿಯಂತೆಯೇ ಅಮೇರಿಕ ಇರಾಕ್ ರಾಷ್ಟ್ರದ ಮೇಲೆ ದಾಳಿ ಮಾಡಲು ತನ್ನ ಮಿತ್ರ ರಾಷ್ಟ್ರಗಳನ್ನು ಕರೆಯಲಿಲ್ಲವೆ?

❖ ❖ ❖ ❖

# ಪವಿತ್ರ ಕುರ್‌ಆನಿನ ಮೂಲಕ ಪ್ರಯೋಜನ ಪಡೆಯುವ ವಿಧಾನ

ಪವಿತ್ರ ಕುರ್‌ಆನಿನ ಅಧ್ಯಯನದ ವೇಳೆ ಕುರ್‌ಆನ್ ನಮ್ಮೊಂದಿಗೆ ಸಂಭಾಷಿಸುತ್ತಿರುವಂತೆಯೇ ಅಧ್ಯಯನ ಮಾಡಬೇಕು. ಮನುಷ್ಯನ ಇಹ–ಪರಗಳ ವಿಜಯ ಇದರಲ್ಲಿ ಅಡಕವಾಗಿದೆ. ಮನುಷ್ಯ ಎಂತಹ ಕೆಟ್ಟ ಅವಸ್ಥೆಯಲ್ಲಿದ್ದರೂ ಕುರ್‌ಆನ್ ಆತನಲ್ಲಿ ಬದಲಾವಣೆಯನ್ನು ತರುತ್ತದೆ. ಪವಿತ್ರ ಕುರ್‌ಆನನ್ನು ವಿವೇಚನೆಯೊಂದಿಗೆ ಅಭ್ಯಸಿಸಿದರೆ ಆತ ಅದರಿಂದ ಪ್ರಯೋಜನ ಪಡೆಯುವನು. ಈ ಪ್ರಜ್ಞೆ ಖಂಡಿತವಾಗಿಯೂ ಆತನಲ್ಲಿ ಬದಲಾವಣೆ ತರುವುದು.

ಶತಮಾನಗಳಿಂದ ಮುಸ್ಲಿಮರು ಕುರ್‌ಆನನ್ನು ಅದರ ನೈಜ ಸೌಂದರ್ಯದೊಂದಿಗೆ ಅಧ್ಯಯನ ಮಾಡದ ಕಾರಣ ಅದರಿಂದ ಸಿಗಬೇಕಾಗಿದ್ದ ಪ್ರಯೋಜನ ಸಿಗುತ್ತಿಲ್ಲ, ಶತಮಾನಗಳಿಂದ ತಪ್ಪು ರೀತಿಯ ಅಧ್ಯಯನದ ಕಾರಣ ಪ್ರಯೋಜನದ ಬದಲು ಒಂದು ರೀತಿಯ ಅಡ್ಡಿಯನ್ನುಂಟು ಮಾಡುತ್ತಿದೆ.

ಒಂದು ವೇಳೆ ನಾವು ನಿಜವಾಗಿಯೂ ಕುರ್‌ಆನಿನಿಂದ ಪ್ರಯೋಜನ ಪಡೆಯ ಬಯಸುವುದಾದರೆ ಈ ಆದೇಶಗಳನ್ನು ಪಾಲಿಸಬೇಕು.

## 1. ಪವಿತ್ರ ಕುರ್‌ಆನಿನಲ್ಲಿ ಆಸಕ್ತಿ

ನಮಗೆ ಪವಿತ್ರ ಕುರ್‌ಆನಿನೊಂದಿಗೆ ಸುದೃಢವಾದ ನಂಟು ಇರಬೇಕು. ನಮ್ಮೆಲ್ಲ ನಿಬಿಡತೆಯ ಮಧ್ಯೆಯೂ ಪ್ರತಿದಿನ ಕುರ್‌ಆನ್ ಅಧ್ಯಯನಕ್ಕಾಗಿ ಸಮಯ ಮೀಸಲಿಡಲೇ ಬೇಕು. ಕುರ್‌ಆನ್ ನಮ್ಮ ಮೊಟ್ಟ ಮೊದಲ ಕೇಂದ್ರ ಬಿಂದುವಾಗಿರಬೇಕು. ನಮ್ಮೆಲ್ಲ ಕಾರ್ಯಕಲಾಪಗಳ ಕೇಂದ್ರ ಬಿಂದು ಕುರ್‌ಆನ್ ಆಗಿರಬೇಕು. ಕುರ್‌ಆನ್ ಅಧ್ಯಯನದಿಂದ ಮನುಷ್ಯನ ಜೀವನವೇ ಬದಲಾಗುತ್ತದೆ ಆದರೆ ಶೀಘ್ರ ಬದಲಾವಣೆಯಾಗುವುದಿಲ್ಲ ಎಂಬ ಮಾತು ನೆನಪಿರಲಿ. ಮನದಾಳದಿಂದ ದಿನಂಪ್ರತಿ ಅಧ್ಯಯನ ಮಾಡಿದಾಗ ಹಂತಹಂತವಾಗಿ ಜೀವನ ಬದಲಾಗುತ್ತ ಅದರ ನೈಜ ಪರಿಣಾಮ ದೊರಕಲು

ಸಾಧ್ಯ. ನಾವು ಎಷ್ಟು ಸಮಯ ಕುರ್‌ಆನಿನೊಂದಿಗೆ ಕಳೆಯುತ್ತೇವೆಯೋ ನಮಗೆ ಅದರಿಂದ ಅಷ್ಟೇ ಲಾಭ ದೊರಕುತ್ತದೆ. ಪ್ರತಿ ದಿನ ಪದೇ ಪದೇ ಕುರ್‌ಆನ್ ಅಧ್ಯಯನವನ್ನು ಅದರ ಭಾವಾನುವಾದ ಸಹಿತ ಮಾಡುವವರು ಭಾಗ್ಯಶಾಲಿಗಳು ಹಾಗೂ ಯಶಸ್ಸನ್ನು ಕಾಣುವರು.

## 2. ಯೋಗ್ಯ ಸ್ಥಳ

ಪವಿತ್ರ ಕುರ್‌ಆನಿನಿಂದ ನೈಜ ಬದಲಾವಣೆ ಪಡೆಯಬೇಕಾದರೆ ಅದರ ಅಧ್ಯಯನಕ್ಕೆ ಉತ್ತಮ ಸ್ಥಳವನ್ನು ಆರಿಸಬೇಕು. ಮನೆಯಲ್ಲಿ ಆತ್ಮೀಯ ಅತಿಥಿಯನ್ನು ಸ್ವಾಗತಿಸಿದಂತೆ ಕುರ್‌ಆನ್ ಅಧ್ಯಯನವನ್ನು ಪ್ರಾರಂಭಿಸಿ ಸದ್ದುಗದ್ದಲವಿಲ್ಲದ ಶಾಂತಿ ಯುತ ಸ್ಥಳದಲ್ಲಿ ಕುರ್‌ಆನನ್ನು ಭೇಟಿಯಾಗಿ ಏಕಾಂತದಲ್ಲಿ ಓದಿದಾಗ ನಮ್ಮ ಭಾವನೆ ಗಳು ಹೊರ ಚಿಮ್ಮುತ್ತವೆ. ಏಕಾಂತದಲ್ಲಿ ಅಳಲು, ಕಣ್ಣೀರು ಸುರಿಸಲು, ಬೇಡಲು ಮತ್ತು ಅಲ್ಲಾಹನ ಸ್ತುತಿಗಾನ ಮಾಡಲು ಹುಮ್ಮಸ್ಸು ಉಂಟಾಗುತ್ತದೆ. ಓದುಗನಿಗೆ ಪ್ರತಿಯೊಂದು ಸೂಕ್ತದಲ್ಲಿ ತನ್ನ ಆಂತರಿಕ ಮನಸ್ಥಿತಿಯನ್ನು ಅವಲೋಕಿಸಲು ಸಂದರ್ಭ ದೊರಕುತ್ತದೆ.

## 3. ಸೂಕ್ತ ಸಮಯ

ಯೋಗ್ಯ ಸ್ಥಳದೊಂದಿಗೆ ಸೂಕ್ತ ಸಮಯವು ಅತ್ಯಗತ್ಯ. ಅಂಗಸ್ನಾನ(ವುಝೂ)ದೊಂದಿಗೆ ಕುರ್‌ಆನ್ ಅಧ್ಯಯನವನ್ನು ಪ್ರಾರಂಭಿಸಬೇಕು. ಆರೋಗ್ಯಕರವಾದ ದೇಹ, ಅಹ್ಲಾದಕರವಾದ ದೈಹಿಕ ಹಾಗೂ ಮಾನಸಿಕ ಸ್ಥಿತಿಯೊಂದಿಗೆ ಕುರ್‌ಆನ್ ಅಧ್ಯಯನ ನಡೆಸುವುದು ಉತ್ತಮ. ದೇಹ ಬಳಲಿ ಬೆಂಡಾದಾಗ, ನಿದ್ದೆಯ ಮಂಪರಿನಲ್ಲಿ, ಜ್ವರ ಅಥವಾ ದೇಹದಲ್ಲಿ ನೋವಿದ್ದಾಗ ಕುರ್‌ಆನ್ ಅಧ್ಯಯನ ಸರಿಯಲ್ಲ.

## 4. ನಿಧಾನವಾಗಿ ಪಠಿಸಿ

ಪವಿತ್ರ ಕುರ್‌ಆನನ್ನು ನಿಧಾನವಾಗಿ ತಡೆತಡೆದು ಪಠಿಸಿರಿ. ಪದಗಳನ್ನು ಹಾಗೂ ಶಬ್ದಗಳನ್ನು ಸರಿಯಾದ ರೀತಿಯಲ್ಲಿ ಬಾಯಿ ತೆರೆದು ಉಚ್ಚರಿಸಿರಿ. ವೇಗವಾಗಿ ಓದು ವಾಗ ಶಬ್ದ ಹಾಗೂ ಪದಗಳ ಉಚ್ಚಾರ ಸರಿಯಾಗಿರುವುದಿಲ್ಲ. ಇದು ಪವಿತ್ರ ಕುರ್‌ಆನಿನ ಅಧ್ಯಯನದ ಶಿಷ್ಟಾಚಾರಕ್ಕೆ ವಿರುದ್ಧ ಮತ್ತು ಒಂದು ಅಪ್ರಯೋಜಕ ಕ್ರಿಯೆಯಾಗಿದೆ.

وَرَتِّلِ الْقُرْاٰنَ تَرْتِيْلًا

"ಕುರ್‌ಆನನ್ನು ಸರಿಯಾಗಿ ತಡೆತಡೆದು ಪಠಿಸಿರಿ" (ಪವಿತ್ರ ಕುರ್‌ಆನ್: 73: 4)

ಪವಿತ್ರ ಕುರ್‌ಆನನ್ನು ಈ ರೀತಿ ಓದಬೇಕು ಎಂದು ಕುರ್‌ಆನ್ ತಿಳಿಸುತ್ತದೆ.

ಕುರ್‌ಆನನ್ನು ಓದಿ ಮುಗಿಸುವುದು ಅಥವಾ ಅದರ ಅಧ್ಯಾಯವನ್ನು ಓದಿ ಮುಗಿಸುವುದು ನಮ್ಮ ಉದ್ದೇಶವಾಗಿರಬಾರದು. ಕುರ್‌ಆನನ್ನು ಓದಿ ಮುಗಿಸಲು ನಾವು ವೇಗವಾಗಿ ಓದುತ್ತೇವೆ. ವಿಶೇಷವಾಗಿ ರಮಝಾನಿನಲ್ಲಿ ಕುರ್‌ಆನನ್ನು ಹಲವು ಸಲ ಓದಿ ಮುಗಿಸಬೇಕು ಎಂಬ ಭರದಲ್ಲಿ, ನಾವು ಬಹಳ ವೇಗವಾಗಿ ಓದುತ್ತೇವೆ. ಇಂದಿನ ವರಗೆ ನಾವು ಬಹಳ ಸಲ ಓದಿ ಮುಗಿಸಿರಬಹುದು. ರಮಝಾನಿನಲ್ಲಿ ಪ್ರತಿಯೋರ್ವ ಮುಸ್ಲಿಮನು ಹಲವು ಸಲ ಓದಿ ಮುಗಿಸಿರಬಹುದು, ಅದರೆ ಇದರಿಂದ ಪಡೆದ ಪ್ರಯೋಜನವೇನು? ಇದರಿಂದ ನಮ್ಮೊಳಗೆ ಬದಲಾವಣೆ ಉಂಟಾಗಿದೆಯೇ? ನಮ್ಮ ಸಹೋದರ–ಸಹೋದರಿಯರೊಂದಿಗೆ, ಗೆಳೆಯ–ಗೆಳತಿಯರೊಂದಿಗೆ ಕುರ್‌ಆನನ್ನು ಓದಿಮುಗಿಸುವ ಸ್ಪರ್ಧೆಗಿಂತ ಮಿಗಿಲಾಗಿ, ನಾವು ಕುರ್‌ಆನ್‌ನಿಂದ ಯಾವ ರೀತಿಯ ಹಾಗೂ ಎಷ್ಟು ಪ್ರಯೋಜನವನ್ನು ಪಡೆದಿದ್ದೇವೆ? ನಮ್ಮ ವಿಶ್ವಾಸದ ಮಟ್ಟ ಏರಿದೆಯೇ? ಮತ್ತು ಯಾವ ವಿಷಯಗಳನ್ನು ನಾವು ನೆನಪಿನಲ್ಲಿಟ್ಟು ಕೊಂಡಿದ್ದೇವೆ? ಎಂಬ ಅವಲೋಕನ ಮಾಡಬೇಕು.

## 5. ಏಕಾಗ್ರತೆಯೊಂದಿಗೆ ಅಧ್ಯಯನ ಮಾಡಿ

ಸಾಮಾನ್ಯ ಪುಸ್ತಕಗಳ ಅಧ್ಯಯನ ನಡೆಸಿದಂತೆಯೇ ನಾವು ಪವಿತ್ರ ಕುರ್‌ಆನಿನ ಅಧ್ಯಯನವನ್ನು ನಡೆಸಬೇಕು. ಪುಸ್ತಕ, ಪತ್ರಿಕೆ, ನಿಯತಕಾಲಿಕೆಗಳನ್ನು ಓದುವಾಗ ಗಮನವಿಟ್ಟು ಅರ್ಥೈಸಿ ಓದುತ್ತೇವೆ. ಅರ್ಥ ಆಗದೆ ಇದ್ದಾಗ ಪುನರಾವರ್ತಿಸುತ್ತವೆ. ಪವಿತ್ರ ಕುರ್‌ಆನನ್ನು ಕೂಡ ಇದೇ ರೀತಿ ಓದಬೇಕು. ಮಾನಸಿಕವಾಗಿ ಉಪಸ್ಥಿತರಿರಬೇಕು. ಒಂದು ವೇಳೆ ಯಾವುದೇ ಕಾರಣಕ್ಕಾಗಿ ಮನಸ್ಸು ವಿಚಲಿತಗೊಳ್ಳುತ್ತಿದೆ ಎಂದಾದರೆ ಅಥವಾ ಏಕಾಗ್ರತೆಯಿಂದ ಓದಲು ಸಾಧ್ಯವಾಗುತ್ತಿಲ್ಲವೆಂದಾದರೆ, ಸೂಕ್ತಗಳನ್ನು ಪುನರಾವರ್ತಿಸಿರಿ. ಪ್ರಾರಂಭದಲ್ಲಿ ಈ ರೀತಿ ಓದಿದಾಗ ಬಹಳ ಸಮಯ ಬೇಕಾಗಬಹುದು. ನಾವು ಅದರ ಪದ ಹಾಗೂ ಅರ್ಥವನ್ನು ಬೇರೆ ಬೇರೆಯಾಗಿ ಓದುವ ಅಭ್ಯಾಸವಿಟ್ಟಿರುವುದರಿಂದ ಹೀಗಾಗಬಹುದು. ಅದರೆ ಪದೇ ಪದೇ ಅಭ್ಯಸಿಸುವುದರಿಂದ ಹಳೆಯ ಅಭ್ಯಾಸ ಬಿಟ್ಟು ಹೋಗುವುದು.

## 6. ಶಿರಬಾಗಿಸುವಿಕೆ

ಪವಿತ್ರ ಕುರ್‌ಆನಿನ ಅಭಿಸಂಬೋಧಿತರು ಮನುಷ್ಯರಾಗಿದ್ದಾರೆ. ಪ್ರತಿಯೋರ್ವ ಮನುಷ್ಯನೊಂದಿಗೆ ಅದು ಸಂಭಾಷಿಸುತ್ತದೆ. ಅದರಲ್ಲಿ ಪ್ರಶ್ನೋತ್ತರಗಳಿವೆ, ವಾಗ್ದಾನ ಮತ್ತು ಎಚ್ಚರಿಕೆಯೂ ಇದೆ. ಆದುದರಿಂದ ಕುರ್‌ಆನ್ ಅಧ್ಯಯನದ ಸಮಯ ಅದರ ಪ್ರಶ್ನೆಗಳಿಗೆ ಉತ್ತರಿಸುತ್ತ, ಅದರ ಆಜ್ಞೆಗಳಿಗೆ ಶಿರಬಾಗುತ್ತ, ಸುಬ್ಹಾನಲ್ಲಾಹ್, ಅಲ್ಹಮ್ದುಲಿಲ್ಲಾಹ್, ಅಲ್ಲಾಹು ಅಕ್ಬರ್ ಹಾಗೂ ಅಸ್ತಗ್‌ಫಿರುಲ್ಲಾಹ್‌ಗಳಂತಹ ಅಲ್ಲಾಹನ

ನಾಮಗಳನ್ನು ಅಗತ್ಯಾನುಸಾರ ಉಪಯೋಗಿಸಬೇಕು. ಸಾಷ್ಟಾಂಗವೆರಗುವಂತಹ ಸೂಕ್ತಗಳು ಬಂದಾಗ ಸಾಷ್ಟಾಂಗವೆರಗಬೇಕು. ಪ್ರಾರ್ಥನೆಯ ನಂತರ ಆಮೀನ್ ಹೇಳಿ. ನರಕದ ವಿವರಣೆ ಬಂದಾಗ ಬೆಂಕಿಯಿಂದ ರಕ್ಷಣೆಗಾಗಿ ಪ್ರಾರ್ಥಿಸಿರಿ. ಸ್ವರ್ಗದ ಸುವಾರ್ತೆಗಳ ಸಮಯ ಅಲ್ಲಾಹನೊಂದಿಗೆ ಸ್ವರ್ಗಕ್ಕಾಗಿ ಬೇಡಿ. ಪ್ರವಾದಿವರ್ಯರು(ಸ) ಹಾಗೂ ಅವರ ಸಹಾಬಿಗಳು ಈ ವಿಧಾನವನ್ನು ಅನುಸರಿಸುತ್ತಿದ್ದರು. ಈ ವಿಧಾನ 'ವನ್ನು ಅನುಸರಿಸಿದಾಗ ಚಂಚಲತೆ ಹಾಗೂ ವ್ಯಾಕುಲತೆಯಿಂದ ರಕ್ಷಣೆ ಸಿಗುವುದು.

## 7. ಗುರಿ: ತಾತ್ಪರ್ಯ

ಕೆಲವು ಉತ್ಸಾಹಿ ಮುಸ್ಲಿಮರು ಕುರ್‌ಆನನ್ನು ಗಾಢವಾದ ಚಿಂತನೆಯೊಂದಿಗೆ ಓದಲು ಪ್ರಾರಂಭಿಸುತ್ತಾರೆ. ಪ್ರತಿಯೊಂದು ಪದವನ್ನು ಗಮನವಿಟ್ಟು ಓದುತ್ತಾರೆ. ಆದರೆ ಅವರ ಈ ಹೊಸ ಅಭಿರುಚಿ ಕೆಲವೇ ದಿನದಲ್ಲಿ ಮಾಯವಾಗಿ, ಹಳೆಯ ರೀತಿಯನ್ನು ಅನುಸರಿಸಲಾರಂಭಿಸುತ್ತಾರೆ. ಏಕಾಗ್ರತೆ, ಲವಲವಿಕೆ, ಚಿಂತನೆ ಎಲ್ಲವೂ ಮಾಯವಾಗುತ್ತದೆ. ಈ ಉತ್ಸಾಹವನ್ನು ಶಾಶ್ವತವಾಗಿಡುವ ವಿಧಾನವನ್ನು ಕಂಡು ಹಿಡಿಯಬೇಕು. ಅರಬಿ ಪದಗಳ ನೇರವಾದ ಅರ್ಥ ತಿಳಿಯದ ಕಾರಣ, ಸೂಕ್ತಗಳ ಸಂಕ್ಷಿಪ್ತ ಅರ್ಥ, ಅದರ ಸಾರಾಂಶವನ್ನು ಅರಿಯಲು ಪ್ರಯತ್ನಿಸುತ್ತಾ, ಸೂಕ್ತಗಳನ್ನು ಪುನರಾವರ್ತಿಸುತ್ತಾ ಓದಬೇಕು. ಇಂಗ್ಲೀಷ್ ಪುಸ್ತಕಗಳನ್ನು ಓದುವಾಗ, ಅರ್ಥವಾಗದ ವಾಕ್ಯಗಳನ್ನು ಪುನರಾವರ್ತಿಸುತ್ತ, ಸಾರಾಂಶವನ್ನು ತಿಳಿಯಲು ಪ್ರಯತ್ನಿಸುವಂತೆ ಪ್ರಯತ್ನ ಮಾಡಬೇಕು. "ಪವಿತ್ರ ಕುರ್‌ಆನಿನ ಯಾವುದೇ ಭಾಗ ಒಂದಕ್ಕೊಂದು ವಿರುದ್ಧವಾಗಿಲ್ಲ, ಬದಲಾಗಿ ಅದು ಒಂದಕ್ಕೊಂದು ಪೂರಕವಾಗಿದೆ. ಕುರ್‌ಆನಿನಿಂದ ನೀವು ತಿಳಿದದ್ದನ್ನು ಅನುಸರಿಸಿ, ತಿಳಿಯದ್ದನ್ನು ತಿಳಿದಿರುವವರಿಂದ ಕೇಳಿ ತಿಳಿದು ಕೊಳ್ಳಿ" ಎಂದು ಪ್ರವಾದಿ ಮುಹಮ್ಮದ್(ಸ)ರು ತಿಳಿಸಿರುವರು..

ಇದರರ್ಥ ನೀವು ಪದಗಳ ಅರ್ಥವನ್ನು ಅರಿಯಬಾರದು ಅಥವಾ ವ್ಯಾಖ್ಯಾನ ವನ್ನು ಅಧ್ಯಯನ ಮಾಡಬಾರದೆಂದಲ್ಲ. ಇದರರ್ಥ ನೀವು ಅಧ್ಯಯನ ಹಾಗೂ ವ್ಯಾಖ್ಯಾನಕ್ಕಾಗಿ ಬೇರೆ ಬೇರೆ ಸಮಯವನ್ನು ನಿಗದಿ ಪಡಿಸಬೇಕು. ಅಧ್ಯಯನದಿಂದ "ಆತ್ಮವನ್ನು ಜೀವಂತವಾಗಿರಿಸುವುದು" ನಮ್ಮ ಉದ್ದೇಶ. ಅದಕ್ಕಾಗಿ ಕುರ್‌ಆನನ್ನು ವ್ಯಾಖ್ಯಾನ ಸಹಿತ ಓದಲು ಕಲಿಯಬೇಕು.

## 8. ಸೂಕ್ತಗಳನ್ನು ಪುನರಾವರ್ತಿಸುವುದು

ಪವಿತ್ರ ಕುರ್‌ಆನ್‌ನಿಂದ ಪ್ರಯೋಜನ ಪಡೆಯಲು ತೋರಿಸಿದ ಮಾರ್ಗಗಳು ಮನುಷ್ಯನ ಬುದ್ಧಿಗೆ ಸಂಬಂಧಿಸಿದೆ. ಇನ್ನು ಆತ್ಮಕ್ಕೆ ಸಂಬಂಧಿಸಿದ ವಿಧಾನಗಳನ್ನು

ತೋರಿಸಲಾಗುವುದು. ಆತ್ಮವು ವಿಶ್ವಾಸದ ಅರಮನೆಯಾಗಿದೆ. ಹೃದಯ ಮನುಷ್ಯನ ಆಂತರಿಕ ಭಾವನೆಗಳ ಕೇಂದ್ರಬಿಂದು. ವಿಶ್ವಾಸವು ಹೃದಯದಲ್ಲಿ ಬೇರೂರಿದಷ್ಟು ಕರ್ಮಗಳು ಉತ್ತಮವಾಗುವುವು. ಇದರ ತಾತ್ಪರ್ಯವೇನೆಂದರೆ ವಿಶ್ವಾಸವು ಭಾವನೆಗಳೊಂದಿಗೆ ಕೂಡಿದೆ. ಮನುಷ್ಯ ಅಲ್ಲಾಹನ ಗ್ರಂಥವನ್ನು ಪಠಿಸುತ್ತ ನಮಾಝ್ ನೆರವೇರಿಸುವುದು, ಶಿರಬಾಗುವುದು, ಭಾವುಕನಾಗುವುದು, ಪ್ರಾರ್ಥಿಸುವುದು– ಈ ಎಲ್ಲ ಕಾರ್ಯದಿಂದ ಆತನ ವಿಶ್ವಾಸ ವೃದ್ಧಿಯಾಗುತ್ತದೆ. ಈ ಕಾರ್ಯಗಳು ಹೃದಯಕ್ಕೆ ಸಂಬಂಧ ಪಟ್ಟಿರುವುದರಿಂದ ಹೀಗಾಗಲು ಸಾಧ್ಯ ಎಂದು ಅಲ್ಲಾಹನು ಹೇಳುತ್ತಾನೆ.

وَإِذَا تُلِيَتْ عَلَيْهِمْ آيَاتُهُ زَادَتْهُمْ إِيمَانًا

"ಅವರ ಮುಂದೆ ಅಲ್ಲಾಹನ ಆಯತ್(ವಚನ)ಗಳು ಓದಲ್ಪಟ್ಟಾಗ ಅವರ ಸತ್ಯವಿಶ್ವಾಸವು ವೃದ್ಧಿಯಾಗುತ್ತದೆ." **(ಪವಿತ್ರ ಕುರ್‌ಆನ್: 8: 2)**

ಸತ್ಯ ವಿಶ್ವಾಸವನ್ನು ವೃದ್ಧಿಸಲಿರುವ ಮೂಲ ಸಾಧನ ಪವಿತ್ರ ಗ್ರಂಥ ಕುರ್‌ಆನ್. ಪ್ರಾರಂಭದಲ್ಲಿ ಅದರ ಪರಿಣಾಮ ಕಡಿಮೆ ಇದ್ದರೂ, ಕ್ರಮೇಣ ಅದರ ಆದೇಶದಂತೆ ನಮ್ಮ ಜೀವನವನ್ನು ರೂಪಿಸಿದಾಗ ನಮ್ಮ ವಿಶ್ವಾಸ ವೃದ್ಧಿಸುತ್ತ ಹೋಗುವುದು.

ಕೆಲವು ಸಹಾಬಿ(ರ) ಪುರುಷರು ಹಾಗೂ ಮಹಿಳೆಯರು ಕೆಲವೊಮ್ಮೆ ಕುರ್‌ಆನಿನ ಕೆಲವೊಂದು ಸೂಕ್ತಗಳನ್ನು ಆರಿಸಿ ಪದೇ ಪದೇ ಪಠಿಸುತ್ತಿದ್ದರು.

ಹ. ಉಬಾದ ಬಿನ್ ಹಂಝಾ(ರ) ಹೇಳುತ್ತಾರೆ: ನಾನು ಹ.ಅಸ್ಮಾ(ರ)ರನ್ನು ಭೇಟಿಯಾಗಲು ಹೋದಾಗ ಅವರು فَمَنَّ اللَّهُ عَلَيْنَا وَوَقَانَا عَذَابَ السَّمُومِ "ಕೊನೆಗೆ ಅಲ್ಲಾಹನು ನಮ್ಮ ಮೇಲೆ ಅನುಗ್ರಹ ತೋರಿದನು ಮತ್ತು ಸುಟ್ಟು ಹಾಕುವಂತಹ ಗಾಳಿಯ ಯಾತನೆಯಿಂದ ನಮ್ಮನ್ನು ರಕ್ಷಿಸಿಬಿಟ್ಟನು" **(ಪವಿತ್ರ ಕುರ್‌ಆನ್: 52: 27)** ಎಂಬ ವಚನವನ್ನು ಪಠಿಸುತ್ತಿದ್ದರು. ನಾನು ಅವರೊಂದಿಗಿದ್ದಷ್ಟು ದಿನ, ಅವರು ಈ ವಚನವನ್ನು ಪುನರಾವರ್ತಿಸುತ್ತಿದ್ದರು, ನಾನು ಶೌಚಾಲಯಕ್ಕೆ ಹೋಗಿ ಬಂದಾಗಲೂ ಅವರು ಇದನ್ನು ಪುನರಾವರ್ತಿಸಿ ಪ್ರಾರ್ಥಿಸುತ್ತಲಿದ್ದರು.

**(ಕಿಯಾಮುಲ್ಲೈಲ್ ಅಲ್ ಮುಹಮ್ಮದ್ ಬಿನ್ ಆಸ್ –ಪುಟ–149)**

❖ ❖ ❖ ❖

# ಸ್ತ್ರೀಯರ ವೈಯಕ್ತಿಕ ಅನುಭವಗಳು

ಇತ್ತೀಚೆಗೆ ಅರಬಸ್ಥಾನದಲ್ಲಿ ಸುಮಯ್ಯ ರಮಝಾನ್ ಎಂಬೋರ್ವ ಸಹೋದರಿ, ವಿದ್ಯಾವಂತ ಸ್ತ್ರೀಯರಿಗಾಗಿ ಪವಿತ್ರ ಕುರ್‌ಆನಿನ ಆದೇಶಗಳನ್ನು ಅನುಸರಿಸಲು ಕಲಿಸುವ ತರಗತಿಯನ್ನು ಆರಂಭಿಸಿದರು. ಸಹೋದರಿ ಸುಮಯ್ಯ Science ಮತ್ತು Political Science ಪದವೀಧರೆ. ತಮ್ಮ ಶಿಕ್ಷಣವನ್ನು ಅಲ್ಲಿಗೇ ನಿಲ್ಲಿಸದೆ, ಹಲವು ವರ್ಷ ಇಸ್ಲಾಮೀ ಶರೀಅತನ್ನು ಕಲಿತಿದ್ದಾರೆ. ತದನಂತರ ಇಸ್ಲಾಮೀ ಶಿಕ್ಷಣದಂತೆ ತಮ್ಮ ಜೀವನವನ್ನು ಮಾರ್ಪಡಿಸುತ್ತ ತನ್ನ ಸ್ನೇಹಿತೆಯರೊಂದಿಗೆ ಕೂಡಿ ನೆರೆಕರೆಯವರಿಗೆ ಧಾರ್ಮಿಕ ಶಿಕ್ಷಣವನ್ನು ಒದಗಿಸುತ್ತ ಪರಿಚಯಿಸತೊಡಗಿದರು. ಅವರು ಆರಂಭಿಸಿದ ಅಧ್ಯಯನ ತರಗತಿಗಳು ಕೆಲವೇ ಸಮಯದಲ್ಲಿ ಬಹಳಷ್ಟು ಮೆಚ್ಚುಗೆ ಪಡೆಯುವುದರೊಂದಿಗೆ ಪರಿಣಾಮಕಾರಿಯಾಗಿ ಮಾರ್ಪಟ್ಟಿತು.

ಒಮ್ಮೆ ಸಹೋದರಿ ಸುಮಯ್ಯ ರಮಝಾನ್, ಶುಕ್ರವಾರದ ನಮಾಝಿಗಾಗಿ ಮಸೀದಿಗೆ ಹೋದವರು ಅಲ್ಲಿ ಸೇರಿದ ಮಹಿಳೆಯರನ್ನು ಭೇಟಿ ಮಾಡಿ ಪ್ರತೀ ಶುಕ್ರವಾರ ಸಾಯಂಕಾಲ ಸ್ತ್ರೀಯರ ಸಭೆ ಮಾಡುವುದೆಂದು ತೀರ್ಮಾನಿಸಿದರು. ಪ್ರತೀ ಸಪ್ತಾಹ ಸ್ತ್ರೀಯರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಸ್ತ್ರೀಯರು ತಮ್ಮ ಸಂಬಂಧಿಕರು ಹಾಗೂ ಸ್ನೇಹಿತೆಯರನ್ನು, ನೆರೆಕೆರೆಯವರನ್ನು ಕರೆತರಲು ಪ್ರಾರಂಭಿಸಿದರು. ಹಲವಾರು ತಮ್ಮ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಸುಮಯ್ಯ ರಮಝಾನ್‌ರೊಂದಿಗೆ ಚರ್ಚಿಸತೊಡಗಿದರು. ಆಕೆ ರಹಸ್ಯವನ್ನು ಕಾಪಾಡುತ್ತ ಅವರ ಸಮಸ್ಯೆಗಳ ಪರಿಹಾರದ ದಾರಿಯನ್ನು ತೋರಿಸುತ್ತಿದ್ದರು. ನಮ್ಮ ಸಮಸ್ಯೆಗಳನ್ನು ಪವಿತ್ರ ಕುರ್‌ಆನ್ ಮತ್ತು ಹದೀಸ್‌ನ ಮುಖಾಂತರ ನಿಶ್ಚಯವಾಗಿಯೂ ಪರಿಹರಿಸಬಹುದು ಎಂದು ತಿಳಿಸಿದರು.

ಒಮ್ಮೆ ಆಕೆ ಪ್ರವಚನದ ನಂತರ "ನಾವು ಇವತ್ತಿನಿಂದ ಹೊಸ ಕಾರ್ಯಕ್ರಮವನ್ನು ಆರಂಭಿಸಲಿದ್ದೇವೆ" ಎಂದು ಘೋಷಿಸಿದರು. "ಇಂದಿನಿಂದ ನಾವು ನಮ್ಮೆಲ್ಲಾ ಸಮಸ್ಯೆಗಳ ಪರಿಹಾರವನ್ನು ಕುರ್‌ಆನಿನ ಮೂಲಕ ಬಗೆಹರಿಸುವೆವು ಮತ್ತು ಕುರ್‌ಆನಿನ

ದೇಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸುವೆವು. ಪ್ರತೀವಾರ ಒಂದು
ರ್‌ಆನ್ ವಚನವನ್ನು ಆಯ್ದು, ಅದನ್ನು ಪ್ರತಿದಿನ ಪುನರಾವರ್ತಿಸಿ ಕಂಠಪಾಠ
ಾಡುವೆವು ಮತ್ತು ಇದನ್ನು ಜೀವನದಲ್ಲಿ ಅನುಸರಿಸುವೆವು. ಅದರ ಆಜ್ಞೆ ಮತ್ತು
ತ್ಪರ್ಯವನ್ನು ಅರಿತು, ಅದನ್ನು ಪಾಲಿಸುವೆವು ಮತ್ತು ಈ ರೀತಿ ಈ ಸೂಕ್ತ
ಮ್ಮ ಜೀವನದ ಒಂದು ಅಂಗವಾಗುವುದು. ಒಂದು ವಾರದಲ್ಲಿ ನಮ್ಮ ಧ್ಯೇಯ
ೂರ್ಣಗೊಳ್ಳದೆ ಇದ್ದರೆ ಹೆಚ್ಚಿನ ಸಮಯವನ್ನು ತೆಗೆಯುವೆವು ಅದರ ನಂತರ
ನ್ನೊಂದು ವಚನವನ್ನು ಆರಿಸುತ್ತೇವೆ. ಈ ವಿಧಾನದಿಂದ ಆಗುವ ಪರಿಣಾಮವನ್ನು
ಮನಿಸೋಣ" ಎಂದು ಹೇಳಿದರು.

ಇದರಿಂದ ಬಹಳ ಉತ್ತಮ ಫಲಿತಾಂಶ ದೊರೆಯಿತು. ಹಲವು ಸಮಸ್ಯೆಗಳು
ರಿಹಾರಗೊಂಡವು. ಕೌಟುಂಬಿಕ ಜಗಳಗಳು ಕಡಿಮೆಯಾದವು, ಒಡೆದ ಮನೆಗಳು
ಂದಾದವು, ಕೋಪದಲ್ಲಿದ್ದವರು ತಮ್ಮ ಕೋಪವನ್ನು ತೊರೆದರು. ಪತ್ನಿಯರ
ದಲಾದ ಧೋರಣೆಯನ್ನು ನೋಡಿದ ಪತಿಯಂದಿರಿಗೆ ಬಹಳ ಸಂತೋಷವಾಯಿತು
ುತ್ತು ಇದೊಂದು ಅತ್ಯುತ್ತಮ ಕ್ರಾಂತಿಯೆಂದು ಹೇಳಿದರು. ತರಗತಿಯಲ್ಲಿ ಮಹಿಳೆ
ುರ ಸಂಖ್ಯೆ ಹೆಚ್ಚ ತೊಡಗಿತು. ಸ್ಥಳದ ಕೊರತೆಯಿಂದಾಗಿ ಮಹಿಳೆಯರಿಗೆ ಸ್ಥಳ
ಭಾವವಾಗತೊಡಗಿತು. ಅದುದರಿಂದ ಮಸೀದಿಯಲ್ಲಿ, ಪುರುಷರು ನಮಾಝ್
ರವೇರಿಸುವ ಸ್ಥಳಕ್ಕೆ ವರ್ಗಾಯಿಸಲಾಯಿತು. ಇಲ್ಲಿಯೂ ಸ್ತ್ರೀಯರ ಸಂಖ್ಯೆ
ಚ್ಚಾಗುತ್ತಾ ಹೋದರಿಂದ ಸ್ಥಳದ ಕೊರತೆ ಉಂಟಾಗತೊಡಗಿತು. ಈ ತರಗತಿ
ೇವಲ ಸ್ತ್ರೀಯರಿಗಾಗಿ ನೆರವೇರಿಸಲಾಗುತ್ತಿತ್ತು. ಆದರೆ ಸ್ತ್ರೀಯರ ಬದಲಾದ
ೋರಣೆಯನ್ನು ನೋಡಿ, ಪುರುಷರು ಕೂಡ ಕೇಳುವ ಉದ್ದೇಶದಿಂದ ಮಸೀದಿಗೆ
ರ ತೊಡಗಿದರು. ಇದನ್ನು ಕಂಡು ಮಸೀದಿಯ ಆಡಳಿತಗಾರರು ಮಸೀದಿಯನ್ನು
ಸ್ತರಿಸುವ ನಿರ್ಧಾರ ಮಾಡಿದರು.

ಇದು ಶುಭಕಾರ್ಯವೊಂದರ ಶುಭಾರಂಭದ ಪರಿಣಾಮ. ಇದರ ನಂತರ
ನಾಯಿತು? ಸೂಕ್ತಗಳನ್ನು ಯಾವ ರೀತಿ ಅನುಸರಿಸಲಾಯಿತು? ಇದರ
ಲವೊಂದು ಉದಾಹರಣೆಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.

❖ ❖ ❖ ❖

# ಮನೆಯಲ್ಲಿ ಗುಲ್ಲು-ಗದ್ದಲ

ಸಾಪ್ತಾಹಿಕ ಸಭೆಗಳಲ್ಲಿ ಮಹಿಳೆಯರು ಹಿಂದಿನ ಸಭೆಗಳಲ್ಲಿ ನಡೆದ ತರಗತಿಗಳಿಂದ ಉಂಟಾದ ಪರಿಣಾಮದ ಬಗ್ಗೆ ತಮ್ಮ ದೃಷ್ಟಿಕೋನ ಹಾಗೂ ಪ್ರಭಾವಿತರಾದ ಬಗ್ಗೆ ತಿಳಿಸಲಾರಂಭಿಸಿದರು. ಅದರೊಂದಿಗೆ ಪುನರ್ ವಿಮರ್ಶೆ ಮಾಡಲಾಯಿತು. ಓರ್ವ ಮಹಿಳೆ ಎದ್ದು ನಿಂತು...

"ಅಲ್ಲಾಹನ ದಯೆಯಿಂದ ನನ್ನಲ್ಲಿದ್ದ ಎಲ್ಲ ರೀತಿಯ ದೋಷ ಮತ್ತು ದೌರ್ಬಲ್ಯಗಳು ದೂರವಾದವು, ಅಲ್ಲಾಹನ ಕೃಪೆಯಿಂದ ನಾನು ಮತ್ತು ನನ್ನ ಪತಿ ಮಕ್ಕಳು ಮನೆಯ ವಾತಾವರಣವನ್ನು ಸಂತೋಷದಾಯಕವನ್ನಾಗಿ ಮಾಡಿದ್ದೇವೆ ಆದರೂ ನನ್ನಲ್ಲಿ ಒಂದು ದೌರ್ಬಲ್ಯ ಇತ್ತು. ಅದನ್ನು ದೂರೀಕರಿಸುವುದು ಬಹಳ ಕಷ್ಟವಾಗಿತ್ತು. ಅದರೂ ಬಹಳ ಪ್ರಯತ್ನದಿಂದ ನಾನು ಆ ದೌರ್ಬಲ್ಯದಿಂದ ಪಾರಾಗಿದ್ದೇನೆ. ನನ್ನ ಉಚ್ಚಸ್ವರ ನನ್ನ ದೌರ್ಬಲ್ಯವಾಗಿತ್ತು. ಈ ದೌರ್ಬಲ್ಯ ಹಲವು ಸ್ತ್ರೀಯರಲ್ಲಿದೆ. ಅವರು ಕೂಡ ಇದರಿಂದ ಪರಿಹಾರ ಬಯಸುತ್ತಿದ್ದಾರೆ" ಎಂದು ಹೇಳಿದರು.

"ಹಾಗಾದರೆ ಇವತ್ತು ನಾವು ನಮ್ಮ ಸಭೆಯಲ್ಲಿ ಈ ಸೂಕ್ತದ ಕಡೆ ಗಮನ ಹರಿಸೋಣ" ಎಂದು ನಾನು ಹೇಳಿದೆ.

وَاغْضُضْ مِنْ صَوْتِكَ ۚ إِنَّ أَنْكَرَ الْأَصْوَاتِ لَصَوْتُ الْحَمِيرِ

ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು, ಎಲ್ಲ ಸ್ವರಕಿಂತ ಕೆಟ್ಟ ಸ್ವರ ಕತ್ತೆಯದ್ದಾಗಿರುತ್ತದೆ.'

**(ಪವಿತ್ರ ಕುರ್‌ಆನ್: 31: 19)**

ಈ ಸೂಕ್ತದ ಬೆಳಕಿನಲ್ಲಿ ನಮ್ಮ ಜೀವನವನ್ನು ಸಾಗಿಸುವ ಪ್ರಯತ್ನ ಮಾಡು ವುದೆಂದು ನಿರ್ಧರಿಸಿದೆವು. ಅಲ್ಲಾಹನು ನಮ್ಮನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತ ಈ ವಚನವು ನಮ್ಮ ಮನ ಮಸ್ತಿಷ್ಕದಲ್ಲಿ ಬೇರೂರುವ ತನಕ ಪುನರಾವರ್ತಿಸಿದೆವು. ಇದರಿಂದಾದ ಬದಲಾವಣೆಯನ್ನು ಈ ಕೆಲವೊಂದು ಘಟನೆಗಳಿಂದ ತಿಳಿಯಬಹುದು.

ತನ್ನ ಈ ಕೆಟ್ಟ ಅಭ್ಯಾಸದಿಂದ ಹೊರಬರಲು ನನ್ನಲ್ಲಿ ಪ್ರಶ್ನೆ ಕೇಳುತ್ತ ಬಂದ ಂಹಿಳೆ ತನ್ನ ಅನುಭವವನ್ನು ಪ್ರಾರಂಭಿಸಿದರು. ಈ ಸೂಕ್ತವನ್ನು ಅಭ್ಯಸಿಸಲು ್ರರಂಭಿಸಿದ ಕೆಲವು ದಿನಗಳ ನಂತರ ಆಕೆಯ ನೆರೆಕೆರೆಯೊಬ್ಬರು ಫೋನಾಯಿಸಿ ಕೇಗಿದ್ದೀರಿ, ಎಲ್ಲ ಸೌಖ್ಯ ತಾನೆ? ಹಲವು ದಿನಗಳಿಂದ ನಿಮ್ಮ ಸ್ವರ ಕೇಳಲಿಲ್ಲ, ದಕ್ಕಾಗಿ ಫೋನಾಯಿಸಿದೆ" ಎಂದು ಹೇಳಿದರು. "ಹೌದು! ಸೌಖ್ಯದಿಂದ ಇದ್ದೇನೆ. ಮಯಾವಕಾಶವನ್ನು ಮಾಡಿಕೊಂಡು ನೀವು ಮನೆಗೆ ಬನ್ನಿ. ಕುರ್‌ಆನ್ ತರಬೇತಿಗೆ ನ್ನೆರಡು ದಿನಗಳಿವೆ. ಅಷ್ಟರ ವರೆಗೆ ಕಾಯಲು ನನ್ನಿಂದ ಆಗುತ್ತಿಲ್ಲ. ಒಂದು ಂಹತ್ವದ ಮಾತು ಹೇಳಲಿಕ್ಕಿದೆ ಬನ್ನಿ" ಎಂದು ಕರೆದಾಗ ಆಕೆ ಓಡೋಡಿ ಬಂದರು.

ಸಹೋದರಿ ಸುಮಯ್ಯರ ಮಾರ್ಗದರ್ಶನದಂತೆ ನಾನು ಈ ಸೂಕ್ತವನ್ನು ಪದೇ ದೇ ಪುನರಾವರ್ತಿಸುತ್ತಿದ್ದೆ. ಒಂದು ದಿನ ಕಳೆಯಿತು. ಮಕ್ಕಳು ಶಾಲೆಗೆ ಹೊರಡುವ ಮಯ ನನ್ನ ಅವಸ್ಥೆ ನಿಮಗೆ ಚೆನ್ನಾಗಿ ತಿಳಿದಿದೆ. ಇದು ನನ್ನ ಪರೀಕ್ಷಾ ಸಮಯ ಂಗಿತ್ತು. ಮಕ್ಕಳು ಎಂದಿನಂತೆ ನನ್ನ ಚಪ್ಪಲಿ, ನನ್ನ ಬೆಲ್ಟ್, ನನ್ನ ಚೀಲ ಎಂದು ಳಲಾರಂಭಿಸಿದರು. ನನಗೆ ಕೋಪ ತಡೆಯಲಾಗಲಿಲ್ಲ. ಎಂದಿನಂತೆ ಕಿರುಚಲಾರಂಭಿ ದೆ. ಅಷ್ಟರಲ್ಲಿ ನನಗೆ ಈ ಸೂಕ್ತ ನೆನಪಾಯಿತು, وَاغْضُضْ مِنْ صَوْتِكَ إِنَّ أَنكَرَ الْأَصْوَاتِ لَصَوْتُ الْحَمِيرِ (ಪವಿತ್ರ ಕುರ್‌ಆನ್: 31: 19) ನನಗೆ ನನ್ನ ಮುಖ ಕೆಂಪೇರುತ್ತಿರು ಂತೆ, ಮುಖ ಕತ್ತೆಯ ಮುಖದಂತೆ, ಕಿವಿ ದೊಡ್ಡದಾಗುತ್ತಿರುವಂತೆ ಭಾಸವಾಯಿತು! ತ್ತೆಯಂತೆ ಕಿರುಚಾಡುವುದರಿಂದ ನನ್ನನ್ನು ತಡೆಯಲಾಗಿದೆ ಎಂಬ ಮಾತು ನೆನಪಾ ಯಿತು. ಅಲ್ಲಾಹನು ನಮ್ಮನ್ನು ತಡೆದಿರುವಾಗ ಮತ್ತು ತನ್ನ ಆದೇಶವನ್ನು ನೀಡುವಾಗ ಾವು ಅದನ್ನು ಪಾಲಿಸಬೇಕು. ಯಹೂದಿಯರ ಮುಖಗಳಂತೆ ನಮ್ಮ ರೂಪವನ್ನು ಂದಿ ಹಾಗೂ ಮಂಗಗಳಂತೆ ಮಾಡದಿರಲಿ. ನಮ್ಮ ಮುಖಗಳು ಹಾಗೆ ಆಗದಿರಲಿ.

ಕಿರುಚಿ ಮಾತನಾಡುವ ನನ್ನ ಅಭ್ಯಾಸದ ಬಗ್ಗೆ ನನಗೇ ನಾಚಿಕೆ ಉಂಟಾಯಿತು. ಈ ರೀತಿ ಕಿರುಚುವುದರಿಂದ ನಾನು ಮನುಷ್ಯ ಸಮೂಹದಿಂದ ಹೊರ ಬಂದು ್ರಾಣಿ ಸಮೂಹಕ್ಕೆ ಸೇರಿದ್ದೆ ಎಂಬ ಯೋಚನೆ ಬಂದ ತಕ್ಷಣ ನಾನು ಧ್ವನಿಯನ್ನು ಗ್ಗಿಸಿ ಮಾತನಾಡಲಾರಂಬಿಸಿದೆ. "ನಿನ್ನ ಶೂ ಇಲ್ಲಿದೆ ನೋಡು, ನಿನ್ನ ಪೆನ್ನು, ನ್ನ ಅಗತ್ಯದ ವಸ್ತುಗಳನ್ನು ಬ್ಯಾಗಿನಲ್ಲಿ ಇಡಬಾರದೇ?" ಎಂದು ಹೇಳುತ್ತಾ, ಬಹಳ ಷ್ಟಕರವಾದ ಕೆಲಸ ಬಹಳ ಸುಲಭದಿಂದ ಮುಗಿಯಿತು. ದಿನಂಪ್ರತಿ ಬಹಳ ಕೋಪ ಂದ ಕಿರುಚಾಡುತ್ತ ಸಾಗುತ್ತಿದ್ದ ಸಮಯವು ಶಾಂತಿ ನೆಮ್ಮದಿಯೊಂದಿಗೆ ಕಳೆಯಿತು.

ನಾನು ಪರೀಕ್ಷೆಯಲ್ಲಿ ಉತ್ತೀರ್ಣಳಾದೆ ಹೌದು! ನಾನು ಉತ್ತೀರ್ಣಳಾದೆ ಂದು ತಗ್ಗಿದ ಧ್ವನಿ ಮತ್ತು ಶಾಂತಿ ನೆಮ್ಮದಿಯಿಂದ ಮಾತನಾಡಿದಾಗ ನನ್ನ ಪತಿ

ಗಾಬರಿಗೊಂಡು 'ನಿನ್ನ ಆರೋಗ್ಯ ಸರಿ ಇದೆ ತಾನೆ?' ಎಂದು ಪ್ರಶ್ನಿಸಿದರು. 'ನಾನ ರೋಗಗ್ರಸ್ತಳಾಗಿದ್ದೆ, ಆದರೆ ಅಲ್ಲಾಹನು ನನಗೆ ಆರೋಗ್ಯವನ್ನು ದಯಪಾಲಿಸಿದ ಪವಿತ್ರ ಕುರ್‌ಆನನ್ನು ಅನುಸರಿಸುವ ಮುಖಾಂತರ ನಾನು ಗುಣಮುಖಳಾಗಿದ್ದೇನ ನನ್ನ ಮಾತು ಪತಿಗೆ ನಂಬಲಸಾಧ್ಯವಾಯಿತು. ಆದರೂ, 'ಇದು ಒಳ್ಳೆಯ ವಿಷಯ ಸ್ವತಃ ನಿನ್ನೊಳಗಿನಿಂದ ಬಂದ ಈ ಬದಲಾವಣೆ ಬಹಳ ಸಂತೋಷದ ವಿಷಯ ಈ ಬದಲಾವಣೆ ಸದಾ ಇರಲಿ ಎಂದು ನಾನು ಹಾರೈಸುತ್ತೇನೆ' ಎಂದರು. 'ಇನ ಶಾ ಅಲ್ಲಾಹ್ ನಾನು ಇದೇ ರೀತಿ ಇರುವೆನು. ಅಲ್ಲಾಹನ ಆಜ್ಞೆ ಸದಾ ನನ ಮನಸ್ಸಲ್ಲಿ ಜಾಗೃತವಾಗಿರುವುದು. ಅಲ್ಲಾಹನು ತನ್ನ ಗ್ರಂಥದ ಮೂಲಕ ಜೀವನ ಬಹಳ ಸಂತೋಷಭರಿತ ಹಾದಿಯನ್ನು ದಯಪಾಲಿಸಿದನು' ಎಂದು ಉತ್ತರಿಸಿ

ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಅನುಸರಿಸಿದ ಪ್ರತಿಯೋರ್ವ ಮಹಿ ತನ್ನಲ್ಲಿ ಮತ್ತು ತನ್ನ ಮನೆಯಲ್ಲಾದ ಬದಲಾವಣೆಯನ್ನು ಹಾಗೂ ಸಫಲತೆಯನ ಅನುಭವಿಸಿದಳು. ನಿಶ್ಚಯವಾಗಿಯೂ ಪರಿಶುದ್ಧ ಆತ್ಮಗಳನ್ನು ಹಿಡಿದಿಡುವ ಶಕ್ತಿ ಈ ಗ್ರಂಥಕ್ಕಿದೆ. ಅದಕ್ಕೆ ಮನುಷ್ಯನಲ್ಲಿ, ಅದನ್ನು ಅನುಸರಿಸಬೇಕೆಂಬ ಹಂಬಲ ಹಾಗ ಸಂಕಲ್ಪ ಇರಬೇಕಾದುದು ಅಗತ್ಯ. ಮಾನವರ ಜೀವನವನ್ನು ಬದಲಿಸಿ ಬಿಡು ಶಕ್ತಿ ಪವಿತ್ರ ಕುರ್‌ಆನಿಗಿದೆ. ಪವಿತ್ರ ಕುರ್‌ಆನನ್ನು ಅನುಸರಿಸುತ್ತ ಜೀವಿಸುವ ಸವಿಯ ಸಿಕ್ಕಿದಾತ, ಮತ್ತೆ ಯಾವ ಕಾರಣಕ್ಕೂ ಅದರಿಂದ ಹಿಂದೆ ಸರಿಯಲಾರ. ತ ಜೀವನವನ್ನು ಈ ಗ್ರಂಥದ ಆದೇಶದಂತೆ ರೂಪಿಸುತ್ತಾನೆ. ಇದು ಮನುಷ್ಯ ಪ್ರಗತಿಯ ಪ್ರಕ್ರಿಯೆಯಾಗಿದೆ.

❖ ❖ ❖ ❖

# ಫಜ್ರ್ ನಮಾಝ್‌ಗಾಗಿ ಏಳುವುದು

ಪವಿತ್ರ ಕುರ್‌ಆನ್ ಅವತೀರ್ಣದ ಮುಖ್ಯ ಉದ್ದೇಶ ಅದರ ಅನುಸರಣೆಗಾಗಿದೆ. ರ್‌ಆನಿನ ಮಾರ್ಗದರ್ಶನದಂತೆ ಜೀವನವನ್ನು ರೂಪಿಸುವುದರಿಂದ, ಲೋಕದಲ್ಲಿ ರ್ಗವನ್ನು ಪಡೆದಂತೆ ಈ ಪವಿತ್ರ ಗ್ರಂಥದ ಅನುಸರಣೆಯಿಂದ ಗಾಯಗೊಂಡ ೃದಯಗಳ ಗಾಯ ವಾಸಿಯಾಯಿತು, ಬೇರ್ಪಟ್ಟ ಸಂಬಂಧಗಳು ಒಂದಾದವು, ಸಾಶದ ಅಂಚಿನಲ್ಲಿದ್ದ ಕುಟುಂಬಗಳು ಸುಖ ಸಂತೋಷದಿಂದ ಬಾಳಿದವು ಇದರ ಮಾರ್ಗದರ್ಶನದಿಂದ ಆಗುವ ವೈಯಕ್ತಿಕ ಸುಧಾರಣೆಗಳ ಅನುಭವವನ್ನು ಸಹೋದರಿ ಯರಿಂದ ತಿಳಿಯೋಣ.

ಸಹೋದರಿ ಸುಮಯ್ಯ ರಮಝಾನ್‌ರವರ ಕುರ್‌ಆನ್ ತರಗತಿಗೆ ಹೋಗುವ ಮೊದಲು ನನಗೆ ತಡರಾತ್ರಿಯಾಗಿ ಮಲಗುವ ಅಭ್ಯಾಸವಿತ್ತು. ಮಸೀದಿಯಲ್ಲಿ ಬೆಳಿಗ್ಗೆ ಅದಾನ್ ಆಗುವ ಸಮಯ ನಿದ್ದೆಯಲ್ಲಿ ಮುಳುಗಿರುತ್ತಿದ್ದೆ. ಅಲ್ಲಾಹನ ಮಲಕ್‌ಗಳು ಮಸೀದಿಯಲ್ಲಿ ನನ್ನ ಗೈರು ಹಾಜರಿಯನ್ನು ನೋಡುತ್ತಿದ್ದರು. ಈ ಶುಭ ಸಮಯದಲ್ಲಿ ನಾನು ಮತ್ತು ನನ್ನ ಮನೆಯವರು ಶೈತಾನನ ಬಾಹುಗಳಲ್ಲಿ ಗಾಢ ನಿದ್ದೆಯಲ್ಲಿ ಮಲಗಿರುತ್ತೇವೆ. ಎಚ್ಚರಗೊಂಡ ನಂತರ ನನಗೆ ಈ ಬಗ್ಗೆ ಬಹಳ ಪಶ್ಚಾತ್ತಾಪ ಉಂಟಾಗುತ್ತಿತ್ತು. ಮುಂಜಾನೆ ನಮಾಝಿಗೆ ಏಳಬೇಕೆಂಬ ಸಂಕಲ್ಪ ಹಲವು ಸಲ ಮಾಡಿದ್ದರೂ ಮುಂಜಾನೆ ಏಳಲು ಸಾಧ್ಯವಾಗುತ್ತಿರಲಿಲ್ಲ. ಪ್ರತಿ ಬಾರಿಯೂ ಸೋಲುಂಟಾ ಗುತ್ತಿತ್ತು. ಸುಮಯ್ಯರವರು ಹಲವಾರು ಸಮಸ್ಯೆಗಳ ಪರಿಹಾರವನ್ನು ಕುರ್‌ಆನಿನ ಮೂಲಕ ತಿಳಿಸುತ್ತಾರೆ ಎಂದು ತಿಳಿದಾಗ ನಾನು ಕೂಡ ಅವರಲ್ಲಿಗೆ ಹೋದೆ. ಆಗ ಅವರು, الَّذِىْ يَرَاكَ حِيْنَ تَقُوْمُ وَتَقَلُّبَكَ فِي السّٰجِدِيْنَ "ನೀವು ಏಳುವಾಗ ಅವನು ನಿಮ್ಮನ್ನು ನೋಡುತ್ತಿರುತ್ತಾನೆ ಮತ್ತು ಸಾಷ್ಟಾಂಗವೆರುಗುವವರ ಮಧ್ಯೆ ನಿಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾನೆ" (ಪವಿತ್ರ ಕುರ್‌ಆನ್: **26: 218–219**) ಎಂಬ ಸೂಕ್ತವನ್ನು ಪುನರಾವರ್ತಿಸಲು ತಿಳಿಸಿದರು. ಈ ರೀತಿ ನಾನು ಆ ಸೂಕ್ತವನ್ನು ಪದೇ ಪದೇ ಪುನರಾವರ್ತಿಸುತ್ತ ಕಂಠಪಾಠ ಮಾಡುತ್ತ, ಹೃದಯಾಂತರಾಳದಲ್ಲಿ ಇಳಿಸಿದೆ.

ಕೊನೆಗೆ ಈ ಸೂಕ್ತವನ್ನು ಅನುಸರಿಸುವ, ಆ ನಿರ್ಣಾಯಕ ಸಮಯ ಬಂದಿತು. ಮಸೀದಿಯಿಂದ ಬೆಳಿಗ್ಗೆ 'ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್' ಎಂಬ ಕರೆ ಕೇಳಿದಾಗ ನಾನು ಹಾಸಿಗೆಯಲ್ಲಿ ಚಡಪಡಿಸತೊಡಗಿದೆ. ಅದಾನ್‌ನ ಶಬ್ದ ಓಗೊಡಲು ನನ್ನ ಮನಸ್ಸು ಒಪ್ಪುತ್ತಿರಲಿಲ್ಲ. ನಿದ್ದೆಯನ್ನು ಬಹಳ ನೆಮ್ಮದಿಯಂತೆಯೂ ನಮಾಝನ್ನು ಒಂದು ಸಾಧಾರಣ ವಿಷಯವೆಂಬಂತೆಯೂ ಶೈತಾನನು ತೋರಿಸುತ್ತಿದ್ದ 'ನೀನು ಮುಸ್ಲಿಮನಾಗಿರುವಿ' ಎಂಬ ಸತ್ಯವನ್ನು ಅದಾನ್ ಕರೆ ನನಗೆ ನೆನಪಿಸುತ್ತಿತ್ತು 'ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹ್' ಎಂಬ ಪದಗಳು ನನಗೆ ನನ್ನ ಆತ್ಮೀಯ ಪ್ರವಾದಿವರ್ಯರ(ಸ) ನೆನಪು ಮಾಡಿಸುತ್ತಿತ್ತು. 'ಹಯ್ಯ ಅಲಸ್ಸಲಾಹ್' ಎಂಬ ಪದಗಳು 'ನಿನ್ನ ನೈಜ ವಿಜಯ ಹಾಗೂ ಸಮೃದ್ಧಿ ನಮಾಝಿನಲ್ಲಿದೆ' ಎಂದು ಹೇಳುತ್ತಿತ್ತು. 'ಹಯ್ಯಅಲಲ್ ಫಲಾಹ್' ಹಾಗೂ ನಾನು ಬಾಯಿ ಪಾಠ ಮಾಡಿ ಅನುಸರಿಸಲು ಹೇಳಲಾದ ಸೂಕ್ತ ನನ್ನನ್ನು ನಮಾಝಿಗಾಗಿ ಕೂಗಿ ಕರೆಯುತ್ತಿತ್ತು ಸ್ವಲ್ಪ ಹೊತ್ತಿನ ನಂತರ ಆ ಸೂಕ್ತ ಹಾಗೂ ಅದಾನ್ ನನ್ನ ಮನದಾಳದಲ್ಲಿ ಇಳಿಯ ತೊಡಗಿತು. ಕಣ್ಣಿನಿಂದ ನಿದ್ದೆ ದೂರವಾಯಿತು. ದಯಾಮಯನಾದ ಅಲ್ಲಾಹನ ನನ್ನ ಹತ್ತಿರ ಇರುವಂತೆ ನನಗೆ ಭಾಸವಾಯಿತು. ಈ ಪ್ರಜ್ಞೆ ಬರುತ್ತಲೇ ನಾನ ಎದ್ದು ಕೂತೆ, ನನ್ನ ಉಡುಪನ್ನು ಸರಿ ಮಾಡುತ್ತಿರುವಾಗ, ಈ ಕೋಣೆಯ ನಾನೊಬ್ಬಳೇ ಅಲ್ಲ ನನ್ನೊಂದಿಗೆ ಯಾರೋ ಇದ್ದಾರೆ, ನನ್ನ ಕಂಠನಾಡಿಗಿಂತಲು ಸಮೀಪ ಇರುವಂತೆ ಅನಿಸುತ್ತಿತ್ತು.

ಈ ಅನಿಸಿಕೆ ಬಂದಾಕ್ಷಣ ನಾನು ದೇಹ ಶುದ್ಧಿಗಾಗಿ ತೆರಳಿದೆ, ಅಂಗಸ್ನಾನ (ವುಝೂ) ಮಾಡಿ ನನ್ನ ಸೃಷ್ಟಿಕರ್ತ ಹಾಗೂ ಪಾಲಕ ಪ್ರಭುವಾದ ಅಲ್ಲಾಹನ ಮುಂದೆ ನಿಲ್ಲಲು ಫಜ್ರ್ ನಮಾಝ್‌ಗಾಗಿ ಸಿದ್ಧಗೊಂಡೆ. ಈ ಹೊತ್ತಿನ ನಮಾಝನ ನೆರವೇರಿಸಬೇಕೆಂಬ ಹಂಬಲ ಬಹಳ ವರ್ಷಗಳಿಂದ ಇತ್ತು. ಹಲವು ಫಜ್ ನಮಾಝಿನ ಸಂಕಲ್ಪ ಮಾಡಿ ಮುರಿದಿದ್ದೆ. ನನ್ನ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದವು. ನಮಾಝಿನ ನಂತರ ನನಗೆ ನಮಾಝ್ ನೆರವೇರಿಸುವ ಸೌಭಾಗ್ಯವನ ಒದಗಿಸಿದ, ಎಲ್ಲ ರೀತಿಯ ನ್ಯೂನತೆ ಹಾಗೂ ಕೊರತೆಗಳಿಂದ ಶುದ್ಧವಾಗಿರು ಆ ಪ್ರಭುವಿನ ಸ್ತುತಿಯನ್ನು ನನ್ನ ತುಟಿಗಳು ಹೇಳುತ್ತಲೇ ಇತ್ತು. ಮರಣದ ಮುಂ ನಾನು ನಮಾಝ್ ನೆರವೇರಿಸುವಂತೆ ಸಹಕರಿಸಿದ ಆ ಪಾಲಕ ಪ್ರಭುವಾ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದೆ. ಅಲ್ಲಾಹನು ನನ್ನ ಮೇಲೆ ನಾಲ್ಕು ಅಲ್ಲ, ಐದ ಹೊತ್ತಿನ ನಮಾಝನ್ನು ಕಡ್ಡಾಯಗೊಳಿಸಿದ್ದನು. ಆದರೆ ನಾನು ಆಲಸ್ಯದ ಕಾರ ನಾಲ್ಕು ಹೊತ್ತಿನ ನಮಾಝನ್ನು ನೆರವೇರಿಸುತ್ತಿದ್ದೆ. ನಾನು ಬಿಕ್ಕಿ ಬಿಕ್ಕಿ ಅಳುತ್ತ ನ ಪಾಪಗಳಿಗಾಗಿ ಅಲ್ಲಾಹನಲ್ಲಿ ಕ್ಷಮೆ ಯಾಚಿಸಿದೆ ಮತ್ತು ಮರಣದ ತನಕ ಇದ

ೀತಿ ಐದು ಹೊತ್ತಿನ ನಮಾಝನ್ನು ನೆರವೇರಿಸುವ ಸೌಭಾಗ್ಯ ನೀಡುವಂತೆ ಪ್ರಾರ್ಥಿಸಿದೆ.

ಅಲ್ಲಾಹನಲ್ಲಿ ಕ್ಷಮೆ ಯಾಚಿಸಿದ ನಂತರ ನೆಮ್ಮದಿಯಿಂದ ಸ್ವಲ್ಪ ಹೊತ್ತು ಕೂತೆ. ನ್ನ ಕಣ್ಣಿನ ಮುಂದೆ ನನ್ನ ಜೀವನದ ಚಕ್ರ ಚಲಿಸತೊಡಗಿತು. ಜೀವನಕ್ಕೆ ಗೊತ್ತು ುರಿ ಇಲ್ಲದ ಓರ್ವ ಸಾಮಾನ್ಯ ಹುಡುಗಿಯಾಗಿದ್ದೆ ನಾನು. ಇತರ ಜನರಂತೆ ನನ್ನ ೀವನ ಕೂಡ ಎತ್ತಿನ ಗಾಡಿಯಂತೆ ತಿರುಗುತ್ತಿತ್ತು. ಉದ್ದೇಶರಹಿತವಾದ ಜೀವನ. ನಗೆ ವಿವಾಹವಾಯಿತು ಆದರೆ ನನಗೆ ನನ್ನ ಪತಿಯ ಅಭಿಪ್ರಾಯ ಹಾಗೂ ಯೋಚನೆಗಳ ಮೇಲೆ ಆಸಕ್ತಿ ಇರಲಿಲ್ಲ. ನನಗೆ ಕೇವಲ ಆತನ ಸ್ಥಾನಮಾನ ಮತ್ತು ಂಪತ್ತಿನಲ್ಲಿ ಆಸಕ್ತಿಯಿತ್ತು. ಆತನಿಗೂ ನಮಾಝ್ ಮತ್ತು ಉಪವಾಸದಲ್ಲಿ ಕಿಂಚಿತ್ತೂ ಸಕ್ತಿ ಇರಲಿಲ್ಲ. ಬದಲಾಗಿ ಲೌಕಿಕ ವಿಷಯಗಳ ಮೇಲೆ ಆಸಕ್ತಿ! ನನ್ನ ಜೀವನ ಈ ರೀತಿ ಸಾಗುತ್ತಿತ್ತು. ಮಕ್ಕಳು ಹುಟ್ಟಿದರು, ನನಗೆ ನನ್ನ ಮಕ್ಕಳ ಆಹಾರ, ಶಾಲೆ, ಕ್ಷಣ, ಮನೆಕೆಲಸ ಇತ್ಯಾದಿಗಳ ಹೊರತು, ಅವರ ನಮಾಝ್, ಕುರ್‌ಆನ್ ಲಿಯುವ ಬಗ್ಗೆ ಅದನ್ನು ಬಾಯಿಪಾಠ ಮಾಡುವ ಬಗ್ಗೆ ಕಿಂಚಿತ್ತೂ ಆಸಕ್ತಿ ಇರಲಿಲ್ಲ. ಅವರಿಗೆ ಪ್ರವಾದಿಗಳ ಜೀವನ ಚರಿತ್ರೆಯ ಬಗ್ಗೆ ತಿಳಿದಿದೆಯೇ ಅಥವಾ ಪ್ರವಾದಿ ಮುಹಮ್ಮದ್(ಸ) ರ ಜೀವನ ಚರಿತ್ರೆ ತಿಳಿದಿದೆಯೇ ಎಂಬ ಬಗ್ಗೆ ಕಿಂಚಿತ್ತೂ ಆಸಕ್ತಿ ಇರಲಿಲ್ಲ. ನಾನು ಅವರೊಂದಿಗೆ ಕುಳಿತು ತಡ ರಾತ್ರಿಯ ತನಕ ಟಿ.ವಿ ವೀಕ್ಷಿಸುತ್ತಿದ್ದೆ. ಟಿ.ವಿಯಲ್ಲಿ ಬಿತ್ತರಿಸುವ ಪ್ರತಿಯೊಂದು ನಾಟಕ, ಕಾರ್ಯಕ್ರಮ, ಸಂಗೀತ, ನೃತ್ಯ ಮತ್ತು ಸಿನೆಮಾಗಳ ಬಗ್ಗೆ ಮನವರಿಕೆ ಮಾಡಿಸಿ ಕೊಡುತ್ತಿದ್ದೆ. ಅವರಿಗೆ ಅದನ್ನು ಅರಿಯಲು ಕಷ್ಟವಾಗದಿರಲಿ ಎಂಬ ಕಾರಣಕ್ಕೆ ಹಾಗೆ ಮಾಡುತ್ತಿದ್ದೆ.

ನಮಾಝ್ ನೆರವೇರಿಸಿ ನನ್ನ ಜೀವನದ ಬಗ್ಗೆ ಯೋಚಿಸುತ್ತಿದ್ದಾಗ ಪತಿಯ ಗೊರಕೆ ಶಬ್ದ ಕೇಳಿತು. ಯೋಚನಾ ಲಹರಿಯಿಂದ ಹೊರ ಬಂದೆ. ನನ್ನ ಜೀವನ ಸಂಗಾತಿ ಬೆಚ್ಚನೆಯ ನಿದ್ದೆಯಲ್ಲಿ ಮುಳುಗಿದ್ದಾರೆ. ಅವರನ್ನು ನಮಾಝಿಗಾಗಿ ಎಬ್ಬಿಸಿ ನನ್ನ ಬಗ್ಗೆ ಹೇಳಬೇಕೆಂದು ಯೋಚಿಸಿದೆ, ನಾನು ಯಾವಾಗಲೂ ಅವರನ್ನು ಎಬ್ಬಿಸುವಾಗ ಅವರ ಹೆಸರನ್ನು ಕೂಗಿ ಕರೆಯುತ್ತಿದ್ದೆ. ಅದರೆ ಈವತ್ತು ಹಾಗೆ ಕರೆಯಲು ಮನಸ್ಸಾಗಲಿಲ್ಲ ಅವರ ಭುಜವನ್ನು ಅಲುಗಾಡಿಸುತ್ತ ಅವರ ಕಿವಿಯಲ್ಲಿ ಸ್ವಲ್ಪ ಎತ್ತರದ ಧ್ವನಿಯಲ್ಲಿ, الَّذِي يَرَاكَ حِينَ تَقُومُ وَتَقَلُّبَكَ فِي السَّاجِدِينَ "ನೀವು ಏಳು ವಾಗ ಅವನು ನಿಮ್ಮನ್ನು ನೋಡುತ್ತಿರುತ್ತಾನೆ ಮತ್ತು ಸಾಷ್ಟಾಂಗವೆರುಗುವವರ ಮಧ್ಯೆ ನಿಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾನೆ" **(ಪವಿತ್ರ ಕುರ್‌ಆನ್: 26: 218–219)** ಎಂಬ ಸೂಕ್ತಗಳನ್ನು ಪಠಿಸಿದೆ.

ಈ ಸೂಕ್ತವನ್ನು ಕೇಳಿ ನನ್ನ ಪತಿ ಎದ್ದು, ಅಂಗಸ್ನಾನ ಮಾಡಿ ನಮಾಝ್
ನೆರವೇರಿಸಿ ನನ್ನ ಹತ್ತಿರ ಬಂದು ಕುಳಿತುಕೊಂಡು "ಈವತ್ತಿನ ಮುಂಜಾನೆ ಬಹ
ಶುಭ ಹಾಗೂ ಸುಂದರವಾಗಿದೆ. ಈವತ್ತು ನಿನ್ನಿಂದ ಕುರ್‌ಆನ್ ಕೇಳುವ ಅವಕಾ
ಸಿಕ್ಕಿರುವುದು ನನ್ನ ಸೌಭಾಗ್ಯ ಎಂದು ನಾನ ಭಾವಿಸುತ್ತೇನೆ" ಎಂದು ಹೇಳಿದರು
"ನಿಜ ಹೇಳುವುದಾದರೆ ಭಾಗ್ಯಶಾಲಿ ನಾನು, ಈವತ್ತು ನಾನು ಮಸೀದಿಯ ಅದಾನ
ಕೇಳಿ, ನಾನು ಕಲಿತ ಸೂಕ್ತವನ್ನು ಅನುಸರಿಸಿದೆ. ಆದುದರಿಂದ ಭಾಗ್ಯಶಾಲಿ ನಾನು
ಈವತ್ತು ಮೊದಲನೆಯ ಸಲ ನೀವು ನಮಾಝ್ ನೆರವೇರಿಸುವುದನ್ನು ನೋಡುತ್ತಿದ್ದೇನೆ.
ಇದನ್ನು ಕೇಳಿ ನನ್ನ ಪತಿಯವರ ಹೃದಯ ಈಮಾನಿನಿಂದ ಬೆಳಗಿತು. ಅವರ
ಹೇಳಿದರು, "ನಿನಗೊಂದು ವಿಚಿತ್ರ ವಿಷಯವನ್ನು ತಿಳಿಸುತ್ತೇನೆ. ನಿನ್ನೆ ನಾನು ಮನೆ
ಮರಳುತ್ತಿರುವಾಗ ರೇಡಿಯೋ ಕೇಳಲು, ರೇಡಿಯೋದ ಸೂಜಿ ತಿರುಗಿಸುತ್ತಿದ್ದಾ
ಸೂಜಿ ಪವಿತ್ರ ಕುರ್‌ಆನ್ ಓದಲಾಗುತ್ತಿದ್ದ ಸ್ಟೇಷನಿನಲ್ಲಿ ನಿಂತಿತು. ಇದನ್ನು ಕೇಳ
ಆಸಕ್ತಿ ಇಲ್ಲದ ಕಾರಣ ಅದನ್ನು ಬದಲಿಸಬೇಕೆಂದು ಯೋಚಿಸುತ್ತಿದ್ದಂತೆ ಟ್ರಾಫಿ
ಪೊಲೀಸ್ ಕಾರ್ ನಿಲ್ಲಿಸುವಂತೆ ಸೂಚಿಸಿದ. ರೇಡಿಯೋ ಕುರ್‌ಆನಿನ ಸೂಕ್ತಗಳನ
ಬಿತ್ತರಿಸುತ್ತಲೇ ಇತ್ತು. ಆ ಸೂಕ್ತದ ಮೂಲಕ ಅಲ್ಲಾಹನು ನನ್ನೊಡನೆ ಸಂಭಾಷಿಸು
ಇರುವಂತೆ ಭಾಸವಾಯಿತು. ನನ್ನ ಪ್ರಭು ನನ್ನೊಡನೆ ಏನು ಹೇಳುತ್ತಿದ್ದನೆಂದು ನಿನ
ತಿಳಿದಿದೆಯಾ?

مَا قَدَرُوا اللَّهَ حَقَّ قَدْرِهِ وَالْأَرْضُ جَمِيعًا قَبْضَتُهُ يَوْمَ الْقِيَامَةِ وَالسَّمَاوَاتُ مَطْوِيَّاتٌ بِيَمِينِهِ
سُبْحَانَهُ وَتَعَالَىٰ عَمَّا يُشْرِكُونَ ﴿٦٧﴾

"ಇವರು ಅಲ್ಲಾಹನನ್ನು ಗೌರವಿಸಬೇಕಾದ ರೀತಿಯಲ್ಲಿ ಗೌರವಿಸಲಿಲ್ಲ (ಅವನೆಂತ
ಮಹಿಮಾವಂತನೆಂದರೆ) ಪುನರುತ್ಥಾನ ದಿನ ಇಡೀ ಭೂಮಿಯು ಅವನ ಮುಷ್ಟಿಯೊಳ
ರುವುದು ಮತ್ತು ಆಕಾಶಗಳು ಅವನ ಬಲಗೈಯಲ್ಲಿ ಸುತ್ತಿಕೊಂಡಿರುವುವು. ಇವರ
ಮಾಡುತ್ತಿರುವ ದೇವಸಹಭಾಗಿತ್ವದಿಂದ ಅವನು ಪಾವನನೂ ಅತ್ಯುನ್ನತನೂ ಅಗಿ
ತ್ತಾನೆ." (ಪವಿತ್ರ ಕುರ್‌ಆನ್: 39: 67)

ಪವಿತ್ರ ಕುರ್‌ಆನಿನ ಈ ಸೂಕ್ತ ನನ್ನಲ್ಲಿ ಒಂದು ರೀತಿಯ ಕಂಪನವನ್ನುಂಟ
ಮಾಡಿತು. ನಾನು ಸಮುದ್ರ ತೀರದಿಂದ ಸಾಗುತ್ತಿದ್ದೆ. ನಾನು ನನ್ನ ಮುಷ್ಟಿಯನ
ಮತ್ತು ಸಮುದ್ರವನ್ನು ನೋಡಿದೆ. ಈ ವ್ಯತ್ಯಾಸವು ನನ್ನನ್ನು ನಲುಗಿಸಿತು. ಈ ವಿಶ್ವ
ಅಲ್ಲಾಹನ ಹಿಡಿತದಲ್ಲಿದೆ. ಅದರ ಮುಂದೆ ಈ ಸಮುದ್ರ ಯಾವ ಲೆಕ್ಕಕ್ಕೆ? ಅಲ್ಲಾಹನ
ಎಷ್ಟು ಶ್ರೇಷ್ಠನು? ತಕ್ಷಣ ನಾನು ಈ ಸೂಕ್ತವನ್ನು ಬಾಯಿಪಾಠ ಮಾಡಿದೆ. ಅದ
ನನ್ನ ಹೃದಯದಲ್ಲಿರುವಂತೆಯೂ ಮತ್ತು ನನ್ನ ಹೃದಯ ಅದರೊಂದಿ

ಮಿಡಿಯುತ್ತಿರುವಂತೆಯೂ ಭಾಸವಾಯಿತು. ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಉಂಟಾಯಿತು ಮತ್ತು ಈವತ್ತು ನೀನು ಈ ಸೂಕ್ತವನ್ನು ಓದಿ ನನ್ನನ್ನು ಎಬ್ಬಿಸಿದಾಗ, ಅಲ್ಲಾಹನ ಅನುಗ್ರಹ ನನ್ನ ಮೇಲೆ ಪೂರ್ತಿಗೊಂಡಿತು. ನನ್ನನ್ನು ನೀನು ಎಬ್ಬಿಸಿದ್ದಲ್ಲ, ನನ್ನನ್ನು ಅಲ್ಲಾಹನು ಫಜ್ರ್ ನಮಾಝಿಗಾಗಿ ಎಬ್ಬಿಸಿರುವನು."

"ನನ್ನನ್ನು ಕೂಡ ನನ್ನ ಅಲ್ಲಾಹನು ಈ ಸೂಕ್ತದ ಮೂಲಕ ಎಬ್ಬಿಸಿದನು. ನಮ್ಮಿಬ್ಬರಿಂದ ಈ ಸೂಕ್ತ ಈವತ್ತು ಪುನಃ ಜೀವಂತಗೊಂಡಿತು" ಎಂದು ಹೇಳಿದೆ. ನನ್ನ ಪತಿಯವರು ಪಶ್ಚಾತ್ತಾಪ ಪಡುತ್ತಾ, "ನನಗೆ 40 ವರ್ಷ ದಾಟಿದೆ. ಪವಿತ್ರ ಕುರ್‌ಆನ್ ನನ್ನ ಮನೆಯಲ್ಲಿದೆ. ನಾನು ಕುರ್‌ಅನ್ ಓದುವುದಿಲ್ಲ ಎಂದಲ್ಲ, ನಾನು ಓದುತ್ತೇನೆ, ಅದರ ಹಲವು ಸೂಕ್ತಗಳು ಹಾಗೂ ಅಧ್ಯಾಯಗಳ ಕಂಠಪಾಠವು ಮಾಡಿರುವೆನು. ಆದರೆ ನನ್ನ ಮತ್ತು ಪವಿತ್ರ ಕುರ್‌ಆನಿನ ನಡುವೆ ಒಂದು ರೀತಿಯ ಅಂತರವಿದೆ" ಎಂದು ಹೇಳಿದರು. ನಾನು ತಕ್ಷಣ ಅವರ ಮಾತಿಗೆ ಉತ್ತರಿಸುತ್ತ "ಹೌದು, ಅಂತರವಿತ್ತು. ಕುರ್‌ಆನನ್ನು ಅನುಸರಿಸದ ಅಂತರ, ಕುರ್‌ಆನಿನಂತೆ ನಡೆಯದ ಅಂತರ. ಪ್ರವಾದಿ ಮುಹಮ್ಮದ್(ಸ) ನಡೆದಾಡುವ ಕುರ್‌ಆನ್ ಆಗಿದ್ದರು. ನಾನು ಕೂಡ ಲೋಕದಲ್ಲಿ ನಡೆದಾಡುತ್ತೇನೆ. ಆದರೆ ಕುರ್‌ಆನಿನಂತೆ ಅಲ್ಲ!"

ಹೀಗೆ ಹೇಳುತ್ತಾ ನಾನು ಬಿಕ್ಕಿ ಬಿಕ್ಕಿ ಅಳತೊಡಗಿದೆ. ನಾನು ಅಳುವುದನ್ನು ನೋಡಿ, ಪತಿಯವರ ಕಣ್ಣು ಕೂಡ ತೇವಗೊಂಡಿತು. ಅವರು ಒಮ್ಮೆಲೇ ಎದ್ದು ಮಕ್ಕಳ ಕೋಣೆಯ ಕಡೆ ಹೋದರು. ಕೋಣೆಯ ದೀಪ ಹೊತ್ತಿಸಿ ಪುನಃ ಆರಿಸಿದರು. ಪದೇ ಪದೇ ಹೀಗೆ ಮಾಡಿದಾಗ ಮಕ್ಕಳು ಎಚ್ಚೆತ್ತುಕೊಂಡರು. ಪತಿಯವರು ಉಚ್ಚಸ್ವರದಲ್ಲಿ ನಮಾಝಿಗಾಗಿ 'ಅಲ್ಲಾಹು ಅಕ್ಬರ್' ಎಂದು ಹೇಳಿದಾಗ ಮಕ್ಕಳು ಆಶ್ಚರ್ಯಚಕಿತರಾಗಿ ತಂದೆಯನ್ನು ನೋಡುತ್ತಿದ್ದರು. ನನ್ನ ಜೀವನ ಸಂಗಾತಿ ಮಕ್ಕಳೊಡನೆ ಹೀಗೆ ಹೇಳುತ್ತಿದ್ದರು, "ನಮ್ಮನ್ನು ಭೇಟಿಯಾಗಲು ಯಾರು ಬಂದಿದ್ದಾರೆ ಎಂದು ನಿಮಗೆ ತಿಳಿದಿದೆಯೇ? ಅವರು ನಮ್ಮನ್ನು ನೋಡುತ್ತಲೂ ಇದ್ದಾರೆ. ಮಕ್ಕಳೇ ಅಲ್ಲಾಹನು ನಮ್ಮನ್ನು ಭೇಟಿಯಾಗಲು ಬಂದಿರುವನು. ತಂದೆಯ ಮಾತು ಅರ್ಥವಾಗದೆ ಮಕ್ಕಳು ಪರಸ್ಪರ ಮುಖ ನೋಡತೊಡಗಿದರು. ಪತಿಯವರು ಉಚ್ಚಸ್ವರದಲ್ಲಿ... الَّذِي يَرَاكَ حِينَ تَقُومُ وَتَقَلُّبَكَ فِي السَّاجِدِينَ "ನೀವು ಏಳುವಾಗ ಅವನು ನಿಮ್ಮನ್ನು ನೋಡುತ್ತಿರುತ್ತಾನೆ ಮತ್ತು ಸಾಷ್ಟಾಂಗವೆರುಗುವವರ ಮಧ್ಯೆ ನಿಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾನೆ" (ಪವಿತ್ರ ಕುರ್‌ಆನ್: **26: 218–219**) ಎಂಬ ಸೂಕ್ತಗಳನ್ನು ಪಠಿಸಿದರು.

"ಈವತ್ತು ಮನೆಯಲ್ಲಿ ನಮಾಝ್ ನೆರವೇರಿಸುವ, ಆದರೆ ನಾಳೆ ನಾವೆಲ್ಲ

ಮಸೀದಿಗೆ ಹೋಗುವ" ಎಂದು ಮಕ್ಕಳೊಡನೆ ಹೇಳಿದರು. ಮಕ್ಕಳು ನಮಾಝ್ ನೆರವೇರಿಸುವುದನ್ನು ನೋಡಿ ಅವರಿಗೆ ನೆಮ್ಮದಿ ಆಯಿತು. ಎಲ್ಲರ ನಮಾಝ್ ಮುಗಿದ ನಂತರ ಸಮಾಧಾನಗೊಂಡು ಪತಿಯವರು ಈ ಸೂಕ್ತವನ್ನು ಓದಿದರು:

وَكَانَ يَأْمُرُ أَهْلَهُ بِالصَّلَوٰةِ وَالزَّكَوٰةِ وَكَانَ عِندَ رَبِّهِ مَرْضِيًّا

"ಅವರು ತನ್ನ ಮನೆಯವರಿಗೆ ನಮಾಝ್ ಮತ್ತು ಝಕಾತ್‌ನ ಅಪ್ಪಣೆ ಕೊಡುತ್ತಿದ್ದರು ಮತ್ತು ತನ್ನ ಪ್ರಭುವಿನ ಬಳಿ ಓರ್ವ ಪ್ರೀತಿ ಪಾತ್ರ ವ್ಯಕ್ತಿಯಾಗಿದ್ದರು."

(ಪವಿತ್ರ ಕುರ್‌ಆನ್: 19: 55)

ನಂತರ, "ಓ ಅಲ್ಲಾಹನೇ ನೀನು ನನ್ನಿಂದ ಸಂತುಷ್ಟನಾಗು, ನನ್ನನ್ನು ಕ್ಷಮಿಸು, ನನ್ನ ಮೇಲೆ ದಯೆ ತೋರು" ಎಂದು ಪ್ರಾರ್ಥಿಸಿದ ಅವರು, "ಈವತ್ತಿನಿಂದ ಮಕ್ಕಳ ನಮಾಝಿನ ಮೇಲ್ವಿಚಾರಣೆಯ ಜವಾಬ್ದಾರಿ ನಿನ್ನ ಮೇಲೆ. ಅವರು ನಮಾಝ್ ನೆರವೇರಿಸುವಂತೆ ಆಜ್ಞಾಪಿಸು" ಎಂದು ನನ್ನನ್ನುದ್ದೇಶಿಸಿ ಹೇಳಿದರು. "ಮಕ್ಕಳು ನನ್ನ ಮಾತು ಕೇಳುವುದಿಲ್ಲ. ನನಗೆ ಬಹಳ ಸಮಯ ಹಾಗೂ ಪ್ರಯತ್ನದ ಅಗತ್ಯವಿರಬಹುದು" ಎಂದು ನಾನು ಹೇಳಿದಾಗ ಅವರು ನನ್ನ ಮಾತು ಕೇಳಿ ಮಕ್ಕಳನ್ನು ಈ ಸೂಕ್ತ ಹೇಳಿ ಆಕರ್ಷಿಸಿದರು.

وَكَانَ يَأْمُرُ أَهْلَهُ بِالصَّلَوٰةِ وَالزَّكَوٰةِ وَكَانَ عِندَ رَبِّهِ مَرْضِيًّا

"ಅವರು ತನ್ನ ಮನೆಯವರಿಗೆ ನಮಾಝ್ ಮತ್ತು ಝಕಾತ್‌ನ ಅಪ್ಪಣೆ ಕೊಡುತ್ತಿದ್ದರು ಮತ್ತು ತನ್ನ ಪ್ರಭುವಿನ ಬಳಿ ಓರ್ವ ಪ್ರೀತಿ ಪಾತ್ರ ವ್ಯಕ್ತಿಯಾಗಿದ್ದರು."

(ಪವಿತ್ರ ಕುರ್‌ಆನ್: 19: 55)

ಮಕ್ಕಳು ನಮಾಝ್ ನೆರವೇರಿಸುವಂತೆ ನಾನು ಪ್ರಯತ್ನಿಸುತ್ತೇನೆ ಎಂದು ನಾನು ನನ್ನಲ್ಲಿ ವಾಗ್ದಾನ ಮಾಡಿ ಒಂದು ದೊಡ್ಡ ಫಲಕದಲ್ಲಿ ಹೀಗೆ ಬರೆದೆ,

الَّذِي يَرَاكَ حِينَ تَقُومُ ﴿٢١٨﴾ وَتَقَلُّبَكَ فِي السَّاجِدِينَ ﴿٢١٩﴾

"ನೀವು ಏಳುವಾಗ ಅವನು ನಿಮ್ಮನ್ನು ನೋಡುತ್ತಿರುತ್ತಾನೆ ಮತ್ತು ಸಾಷ್ಟಾಂಗವೆರಗುವವರ ಮಧ್ಯೆ ನಿಮ್ಮ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾನೆ."

(ಪವಿತ್ರ ಕುರ್‌ಆನ್: 26: 218–219)

ಇದು ಪವಿತ್ರ ಕುರ್‌ಆನಿನ ಅಪ್ಪಣೆಯಂತೆ ಬೆಳಗಿನ ನಮಾಝ್ ನೆರವೇರಿಸಿ ದುದರ ನೈಜ ಘಟನೆಯಾಗಿದೆ. ನಂತರ ಈ ಮಹಿಳೆ ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ದೊಡ್ಡ ಫಲಕದಲ್ಲಿ ಬರೆದು ಮಸೀದಿಯ ಗೋಡೆಯ ಮೇಲೆ ನೇತು

ಹಾಕಿ, ಉಚ್ಚ ಸ್ವರದಲ್ಲಿ ಎಲ್ಲ ಸಹೋದರಿಯರಿಗೂ ಈ ಘಟನೆ ಬಗ್ಗೆ ತಿಳಿಸಿದರು.

ನಮ್ಮಲ್ಲಿ ಪ್ರತಿಯೊಬ್ಬರ ಕಣ್ಣುಗಳ ಮೇಲೆ ಬಿದ್ದಿರುವ ಪರದೆಯನ್ನು ಸರಿಸಿ, ಹೃದಯಕ್ಕೆ ಅಂಟಿಕೊಂಡಿರುವ ಮುದ್ರೆಯನ್ನು ಕೆರೆಕೆರೆದು ತೆಗೆಯಬೇಕು. ಹೃದಯದ ಮೇಲೆ ಬಿದ್ದಿರುವ ಆಲಸ್ಯದ ಪರದೆಯ ಕಾರಣ ನಾವು ಪವಿತ್ರ ಕುರ್‌ಆನನ್ನು ಅರ್ಥೈಸದೆ ಓದುತ್ತಿದ್ದೇವೆ. ಅದನ್ನು ಅರ್ಥೈಸುವುದೂ ಇಲ್ಲ. ಅನುಸರಿಸುವುದೂ ಇಲ್ಲ! ನಮ್ಮ ಈ ಕರೆ ಕೇವಲ ಮುಸ್ಲಿಮ್ ಮಹಿಳೆಗೆ ಮಾತ್ರವಲ್ಲ, ಬದಲಾಗಿ ಜಗತ್ತಿನ ಎಲ್ಲ ಮುಸ್ಲಿಮರಿಗಾಗಿದೆ. ಈ ಬಗ್ಗೆ ಎಚ್ಚರಗೊಳಿಸಬೇಕು. ಬನ್ನಿ ನಾವು ಪವಿತ್ರ ಕುರ್‌ಆನಿನ ಅಧ್ಯಯನವನ್ನು ಪ್ರವಾದಿವರ್ಯರು(ಸ) ಹಾಗೂ ಅವರ ಸಂಗಾತಿಗಳು ಮಾಡಿದ ರೀತಿಯಲ್ಲಿ ಮಾಡೋಣ. ಪ್ರವಾದಿ ಮುಹಮ್ಮದ್(ಸ)ರಲ್ಲಿ ಹಾಗೂ ಅವರ ಸಂಗಾತಿಗಳಲ್ಲಿದ್ದ ಸ್ಫೂರ್ತಿ ನಮ್ಮಲ್ಲೂ ಬರಲಿ. ಅದರಂತೆ ನಾವು ಪವಿತ್ರ ಕುರ್‌ಆನಿನ ಅಧ್ಯಯನ ಮಾಡುವಾಗ, ಪ್ರಕಾಶಮಯವಾದ ಸೂಕ್ತಗಳು, ಪುಸ್ತಕ, ಕ್ಯಾಸೆಟ್ ಹಾಗೂ ಸಿ.ಡಿ.ಗಳಿಂದ ಹೊರ ಬಂದು ನಮ್ಮ ಮುಂದೆ ನಿಂತಿರುವಂತೆ ತಿಳಿದುಕೊಳ್ಳೋಣ. ಅದು ನಮ್ಮನ್ನು ಕೂಗಿ ಕರೆಯುತ್ತಿದೆ, ಸೂಕ್ತಗಳು ನಮ್ಮ ಸೃಷ್ಟಿಕರ್ತನ, ನಮ್ಮ ಪ್ರಭುವಿನ ಏಕದೇವತ್ವದ ಘೋಷಣೆ ಮಾಡುತ್ತಿದೆ. ಯಾವ ಕಾರ್ಯಗಳನ್ನು ಮಾಡುವಂತೆ ಪವಿತ್ರ ಗ್ರಂಥವಾದ ಕುರ್‌ಆನ್ ನಮಗೆ ಆಜ್ಞಾಪಿಸುತ್ತದೆಯೋ ಅದನ್ನು ಮಾಡೋಣ ಮತ್ತು ಯಾವುದರಿಂದ ತಡೆದಿದೆಯೋ ಅದರಿಂದ ತನ್ನನ್ನು ತಡೆಯುತ್ತೇನೆ ಎಂಬ ವಾಗ್ದಾನ ಮಾಡೋಣ.

❖ ❖ ❖ ❖

# ತಲಾಕ್‌ನ ಬೆದರಿಕೆ

ಈ ಆಂದೋಲನದ ಮೂಲಕ ತಮ್ಮ ಜೀವನದ ಪ್ರತಿಯೊಂದು ರಂಗವನ್ನು ಅಲ್ಲಾಹನ ಇಚ್ಛೆಯಂತೆ ರೂಪಿಸುವುದು ಈ ಮಹಿಳೆಯರ ಉದ್ದೇಶವಾಗಿತ್ತು. ಈ ಲೋಕದಲ್ಲಿ ಸ್ವರ್ಗದಂತಹ ಜೀವನ ಬಾಳುವುದೇ ಈ ಗ್ರಂಥದ ಕರೆಯಾಗಿದೆ. ಇದರ ಅರ್ಥ ಪವಿತ್ರ ಕುರ್‌ಆನಿನ ಪ್ರತಿಯೊಂದು ಸೂಕ್ತವನ್ನು ಅನುಸರಿಸುವ ಕರೆ. ಪವಿತ್ರ ಕುರ್‌ಆನಿನ ಅಧ್ಯಯನ ಮತ್ತು ಅಧ್ಯಯನದ ನಂತರ ಗ್ರಂಥವನ್ನು ಮುಚ್ಚಿಡುವಂತಹ ಮುಸ್ಲಿಮರು ನಾವಾಗಬಾರದು. ಕುರ್‌ಆನಿನ ಪ್ರತಿಯೊಂದು ಸೂಕ್ತವನ್ನು ಗ್ರಹಿಸಿ ಅದನ್ನು ಜೀವನದಲ್ಲಿ ಅಳವಡಿಸುವುದು ಪ್ರತಿಯೋರ್ವ ಮುಸ್ಲಿಮನ ಮೇಲೆ ಕಡ್ಡಾಯ ವಾಗಿದೆ. ಆ ಸೂಕ್ತಗಳಿಂದ ಹೃದಯ ಬಡಿತ ಜೋರಾಗುವುದು ಮಾತ್ರವಲ್ಲದೆ ಅಂಗಾಂಗಗಳು ಕೂಡ ಅದರಂತೆ ಚಲಿಸಬೇಕು. ಅದನ್ನು ಅನುಸರಿದಾಗ ನಮ್ಮ ಹೃದಯಗಳು ಅರಳುವುದು ಮತ್ತು ಎಲ್ಲ ರೀತಿಯ ದುಃಖ ದುಮ್ಮಾನಗಳು ದೂರವಾಗುವುದು. ಪವಿತ್ರ ಕುರ್‌ಆನಿನ ಒಂದು ಸೂಕ್ತವನ್ನು ಅನುಸರಿಸುವುದರಿಂದ ಆದ ನೈಜ ಬದಲಾವಣೆಯ ಒಂದು ಘಟನೆಯನ್ನು ನಿಮಗೆ ತಿಳಿಸುತ್ತೇನೆ. ಮಹಿಳೆಯರ ಒಂದು ಗುಂಪು ನಮ್ಮ ಈ ಪ್ರಯೋಗದಲ್ಲಿ ಭಾಗವಹಿಸಿತ್ತು. ಆ ಸೂಕ್ತವನ್ನು ಯಾವ ರೀತಿ ಅನುಸರಿಸಬೇಕೆಂದು ನಾವು ಅವರಿಗೆ ತಿಳಿಸಿದೆವು. ನಮ್ಮ ಈ ಪ್ರಯೋಗದಿಂದ ಬಹಳಷ್ಟು ಲಾಭದಾಯಕ ಹಾಗೂ ಉನ್ನತ ಪರಿಣಾಮ ಹೊರ ಬಂದವು. ಬನ್ನಿ ಇದರಿಂದಾದ ಅನುಭವವನ್ನು ಕೇಳೋಣ.

ಸುಖ ಸಂತೋಷದಿಂದ ಕೂಡಿರುವ ಮನೆ ತಲಾಕ್‌ನ ಕಾರಣ ಕ್ಷಣಾರ್ಧದಲ್ಲಿ, ತೀವ್ರವಾಗಿ ನುಚ್ಚುನೂರಾಗಿ ಬಿಡುತ್ತದೆ. ನೆಮ್ಮದಿಯ ತಾಣವಾಗಿದ್ದ ಕುಟುಂಬವು ದುಃಖದ ಕಡಲಾಗಿ ಮಾರ್ಪಡುತ್ತದೆ. ಸಮಾಜದಲ್ಲಿ ಅದು ಒಂದು ಕಪ್ಪು ಚುಕ್ಕೆ ಯನ್ನು ಬೀರುತ್ತದೆ. ಪತ್ನಿಯ ಭವಿಷ್ಯ ಕತ್ತಲಕೂಪದಲ್ಲಿ ಬೀಳುತ್ತದೆ, ಮಕ್ಕಳು ನಾನಾ ರೀತಿಯ ಸಂಕಷ್ಟಗಳನ್ನು ಸಹಿಸಬೇಕಾಗುತ್ತದೆ, ಮಕ್ಕಳು ಒತ್ತಡಕ್ಕೆ ಒಳಗಾಗುತ್ತಾರೆ. ತಾಯಿಯೊಂದಿಗಿದ್ದರೆ ತಂದೆಯ ಪ್ರೀತಿ ಹಾಗೂ ಕರುಣೆಯ ಛಾಯೆಯಿಂದ ದೂರ

ಆಗುತ್ತಾರೆ ಮತ್ತು ತಂದೆಯೊಂದಿಗೆ ಇದ್ದರೆ ತಾಯಿಯ ದಯೆ, ಮಮತೆ ಇತ್ಯಾದಿ ಗಳಿಂದ ದೂರವಾಗುತ್ತಾರೆ. ಪತಿ ಒತ್ತಡದಲ್ಲಿ ಬೀಳುತ್ತಾನೆ. ಮುಂದಕ್ಕೇನು ಎಂದು ಯೋಚಿಸುತ್ತಾ ಕೈಚೆಲ್ಲಿ ಕೂತಿರುತ್ತಾನೆ. ಭವಿಷ್ಯವನ್ನು ಹೇಗೆ ರೂಪಿಸಬೇಕು ಎಂದು ಆತನಿಗೆ ತೋಚುವುದಿಲ್ಲ. ತಕ್ಷಣ ಮರು ವಿವಾಹ ಮಾಡುವುದೇ ಅಥವಾ ಸ್ವಲ್ಪ ಸಮಯದ ನಂತರ ನೋಡುವುದೇ ಎಂದು ಚಿಂತಾಕ್ರಾಂತನಾಗುತ್ತಾನೆ. ಹಲವಾರು ಮಂದಿ ತಮ್ಮ ಕರುಳ ಕುಡಿಯನ್ನು, ತಮ್ಮ ಮಕ್ಕಳೇ ಅಲ್ಲವೋ ಎಂಬಂತೆ ಮರೆತು, ಅವರನ್ನು ಮೂಲೆಗುಂಪು ಮಾಡಿ ಬಿಡುತ್ತಾರೆ.

ತದನಂತರ ಕೊನೆ ಇಲ್ಲದಂತಹ ತೊಂದರೆಗಳ ಸರಮಾಲೆ ಆರಂಭಗೊಳ್ಳುತ್ತವೆ. ಈ ಸಂಕಷ್ಟಗಳು ಕೆಲವು ತಿಂಗಳಲ್ಲಿ ಮುಗಿಯುವುದಿಲ್ಲ. ಹಲವು ವರ್ಷಗಳ ತನಕ ಜಾರಿಯಲ್ಲಿರುತ್ತವೆ. ತಲಾಕ್‌ನಿಂದ ಸಮಾಜಕ್ಕೂ ಹಾನಿ ಉಂಟಾಗುತ್ತದೆ. ಮನೆಗಳು ಅಪಶಕುನದ ತಾಣಗಳಾಗಿ ಬದಲಾಗುತ್ತವೆ. ಕೆಲವೊಮ್ಮೆ ಗೌರವಾನ್ವಿತ ಮನೆಯ ಪುರುಷ ಹಾಗೂ ಮಹಿಳೆಯರು ನ್ಯಾಯಾಲಯಗಳ ಮೆಟ್ಟಿಲುಗಳನ್ನು ಏರಿಳಿಯ ಬೇಕಾಗುತ್ತದೆ ಹಾಗೂ ಸಮಾಜದಲ್ಲಿ ಅಪಮಾನಿತರಾಗಿ ಜೀವಿಸಬೇಕಾಗುತ್ತದೆ. ಮನೆ ಯೊಳಗಿನ ವಿಷಯಗಳು ನ್ಯಾಯಾಲಯಗಳಲ್ಲಿ ಜನರ ಮುಂದೆ ಚರ್ಚೆಗೆ ಒಳಪಡುತ್ತದೆ. ಇದರಿಂದ ಅಪಮಾನ ಹಾಗೂ ಕಳಂಕವಲ್ಲದೆ ಮತ್ತೇನು ದಕ್ಕುವುದಿಲ್ಲ. ಪತಿ–ಪತ್ನಿ ಯರು ಸ್ವತಃ ತಮ್ಮ ಬಾಯಿಯಿಂದ ತಮ್ಮ ಗೌಪ್ಯ ವಿಷಯಗಳನ್ನು ಜನರ ಮುಂದೆ ಹೇಳಬೇಕಾಗುತ್ತದೆ. ಅಲ್ಲಾಹನ ಹೊರತು ಆ ಮಕ್ಕಳ ರಕ್ಷಕರು ಹಾಗೂ ಸಹಾಯಕರು ಯಾರೂ ಇರುವುದಿಲ್ಲ. ಮಾತಾಪಿತರಿದ್ದರೂ ಕೂಡ, ಅವರ ಪ್ರೀತಿ, ಮಮತೆ, ದಯೆ, ಕರುಣೆ ಇತ್ಯಾದಿಗಳಿಂದ ವಂಚಿತರಾಗಿ ಮಕ್ಕಳು ಅನಾಥರಂತೆ ಬಾಳಬೇಕಾಗುತ್ತದೆ. ಮಾತಾಪಿತರೊಂದಿಗೆ ಒಟ್ಟಿಗೆ ಕೂಡಿ ಮಾತನಾಡುವ ಅಥವಾ ಆಟ ಆಡುವ ಸೌಭಾಗ್ಯ ಮಕ್ಕಳಿಗೆ ಇರುವುದಿಲ್ಲ. ತಲಾಕ್‌ನ ಈ ಭಯಾನಕ ಸಮಸ್ಯೆಯ ಪರಿಹಾರ ಕೂಡ ಅಲ್ಲಾಹನು ತನ್ನ ಗ್ರಂಥದಲ್ಲಿ ಇರಿಸಿದ್ದಾನೆ. ನಾವು ಈ ಗ್ರಂಥದ ಪದಗಳನ್ನು ಓದುತ್ತೇವೆ, ಆದರೆ ಅದನ್ನು ಅನುಸರಿಸುವುದಿಲ್ಲ.

ನಾವು ನಮ್ಮ ತರಗತಿಯಲ್ಲಿ ಈ ಸಮಸ್ಯೆಯ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದೆವು. ಈ ಪತನದಿಂದ ಹೊರ ಬರಲು ಇರುವ ಏಕೈಕ ಮಾರ್ಗ, ಪವಿತ್ರ ಕುರ್‌ಆನಿನ ಸೂಕ್ತಗಳ ಅಧ್ಯಯನ ಎಂದು ನಾವು ಮಹಿಳೆಯರು ತಿಳಿದು ಕೊಂಡೆವು ಮತ್ತು ಈ ಮೂಲಕವೇ ಈ ಸಮಸ್ಯೆಯ ಪರಿಹಾರ ಮಾಡುವೆವು ಎಂದು ನಾವು ಪಣತೊಟ್ಟೆವು. ನಾವು ಮಾಡಿದಂತಹ ವಾಗ್ದಾನವನ್ನು ಈಡೇರಿಸುವ ಸಮಯ ಬಂದಾಗ ನಮ್ಮ ಆಶೆ, ಸಮಾಜದ ಅಡೆತಡೆಗಳು ಹಾಗೂ ಸಂಪ್ರದಾಯಗಳನ್ನು

ಲೆಕ್ಕಿಸದೆ ಯಾವ ಅಧ್ಯಾಯ ಹಾಗೂ ಸೂಕ್ತವನ್ನು ಆರಿಸುವುದೆಂದು ಚರ್ಚಿಸಿದೆವು. ನಂತರ ಪವಿತ್ರ ಕುರ್‌ಆನಿನ ಈ ಅಧ್ಯಾಯ ಹಾಗೂ ಸೂಕ್ತವನ್ನು ಆರಿಸಿದೆವು.

يَٰٓأَيُّهَا ٱلنَّبِيُّ إِذَا طَلَّقْتُمُ ٱلنِّسَآءَ فَطَلِّقُوهُنَّ لِعِدَّتِهِنَّ وَأَحْصُوا۟ ٱلْعِدَّةَ ۖ وَٱتَّقُوا۟ ٱللَّهَ رَبَّكُمْ ۖ لَا تُخْرِجُوهُنَّ مِنۢ بُيُوتِهِنَّ وَلَا يَخْرُجْنَ إِلَّآ أَن يَأْتِينَ بِفَٰحِشَةٍ مُّبَيِّنَةٍ ۚ وَتِلْكَ حُدُودُ ٱللَّهِ ۚ وَمَن يَتَعَدَّ حُدُودَ ٱللَّهِ فَقَدْ ظَلَمَ نَفْسَهُۥ ۚ لَا تَدْرِى لَعَلَّ ٱللَّهَ يُحْدِثُ بَعْدَ ذَٰلِكَ أَمْرًا ①

"ಸಂದೇಶವಾಹಕರೇ, ನೀವು ಸ್ತ್ರೀಯರಿಗೆ ತಲಾಕ್ ಕೊಡುವಾಗ ಅವರಿಗೆ ಅವರ ಇದ್ದತ್‌ಗಾಗಿ ತಲಾಕ್ ಕೊಡಿರಿ ಮತ್ತು ಇದ್ದತಿನ ಕಾಲಾವಧಿಯನ್ನು ಸರಿಯಾಗಿ ಎಣಿಸಿರಿ ಮತ್ತು ನಿಮ್ಮ ಪ್ರಭುವಾದ ಅಲ್ಲಾಹನನ್ನು ಭಯಪಡಿರಿ. (ಇದ್ದತಿನ ಕಾಲಾವಧಿಯಲ್ಲಿ) ಸ್ಪಷ್ಟವಾದ ಅಶ್ಲೀಲ ಕಾರ್ಯವೆಸಗದಿರುವಾಗ ನೀವು ಅವರನ್ನು ಅವರ ಮನೆಗಳಿಂದ ಹೊರ ಹಾಕಬಾರದು ಮತ್ತು ಅವರಾಗಿಯೂ ಹೊರಟು ಹೋಗಬಾರದು. ಅಲ್ಲಾಹನು ನಿಶ್ಚಯಿಸಿದ ಮೇರೆಗಳಿವು. ಅಲ್ಲಾಹನ ಮೇರೆಗಳನ್ನು ಮೀರುವವನು ತನ್ನ ಮೇಲೆ ತಾನೇ ಅಕ್ರಮವೆಸಗುವನು. ಪ್ರಾಯಶಃ ಇದಾದ ಬಳಿಕ ಅಲ್ಲಾಹನು (ಹೊಂದಾಣಿಕೆಯ) ಯಾವುದಾದರೂ ದಾರಿಯನ್ನು ಉಂಟು ಮಾಡಲೂ ಬಹುದು– ಅದು ನಿಮಗೆ ಅರಿಯದು." **(ಪವಿತ್ರ ಕುರ್‌ಆನ್: 65: 1)**

ಈ ಸೂಕ್ತದ ಒಳಾರ್ಥವನ್ನು ಹಾಗೂ ಅಲ್ಲಾಹನ ಆಜ್ಞೆಯ ಮರ್ಮವನ್ನು ಅರಿತು ಅದನ್ನು ಅನುಸರಿಸುವ ಮಾರ್ಗವನ್ನು ಈ ಅಧ್ಯಯನ ತರಗತಿಯಲ್ಲಿ ವಿವರಿಸಿದಾಗ ಓರ್ವ ಮಹಿಳೆ ಎದ್ದು ನಿಂತು, "ನೀವೇನು ಹೇಳುತ್ತಿದ್ದೀರಿ? ನನಗೊಂದೂ ಅರ್ಥವಾಗುತ್ತಿಲ್ಲ! ಪತಿಯಿಂದ ತಲಾಕ್ ಪಡೆದ ಮಹಿಳೆ ಪತಿಗೃಹದಲ್ಲಿಯೇ ತನ್ನ ಇದ್ದತನ್ನು ಪೂರೈಸಬೇಕೇ? ಇದು ಹೇಗೆ ಸರಿಯಾದೀತು?" ಎಂದು ಪ್ರಶ್ನಿಸಿದರು. "ಹೌದು, ಆ ಸಮಯದಲ್ಲಿ ಪತಿ–ಪತ್ನಿಯರ ಮಧ್ಯೆ ಪುನಃ ಸ್ನೇಹ ಹಾಗೂ ಪ್ರೀತಿ ಉಂಟಾಗುವ ಸಂಭವ ಇರುವ ಕಾರಣ ಅಲ್ಲಾಹನು ಹೀಗೆ ಆಜ್ಞಾಪಿಸಿರುವನು. ಪತಿ–ಪತ್ನಿಯರ ಸಂಬಂಧಿಕರು ಮಧ್ಯೆ ಪ್ರವೇಶಿಸಿದಾಗ ಅನುಕೂಲಕರ ವಾತಾವರಣ ಉಂಟಾಗಬಹುದು. ಸುರಕ್ಷಿತ ವಾತಾವರಣ ಉಂಟಾಗಬಹುದು ಮತ್ತು ಬೇರ್ಪಡಲು ನಿಶ್ಚಯಿಸಿದ ಪತಿ–ಪತ್ನಿಯರು ಪುನಃ ಉತ್ತಮ ಜೀವನ ನಡೆಸಲೂ ಬಹುದು ಎಂಬ ಕಾರಣಕ್ಕಾಗಿ ಹೀಗೆ ಆಜ್ಞಾಪಿಸಲಾಗಿದೆ" ಎಂದು ಆಕೆಗೆ ತಿಳಿಸಿದೆವು. ಪತ್ನಿಯು ಪತಿಯ ಮನೆಯನ್ನು ಬಿಟ್ಟು ಹೋಗುವುದರಿಂದ ಅಥವಾ ಅವಳನ್ನು ಮನೆಯಿಂದ ಹೊರ ಹಾಕುವುದರಿಂದ, ಪ್ರಚೋದನೆಯ ವಾತಾವರಣ ಹುಟ್ಟಬಹುದು. ವೈರಿಗಳು

ಹಾಗೂ ಅಸೂಯೆ ಪಡುವವರಿಗೆ ನೆಮ್ಮದಿ ದೊರಕುವುದು ಮತ್ತು ನಗೆ ಪಾಟಲಿಗೆ ಈಡಾಗಲೂಬಹುದು. ಪರಸ್ಪರ ಕೋಪ, ದ್ವೇಷ, ಪ್ರಚೋದನೆ, ಪ್ರತಿರೋಧ, ದೂರು ದೋಷಾರೋಪಣೆ, ವಾಗ್ವಾದ ಇತ್ಯಾದಿಗಳಿಂದ ಪಿಶಾಚಿ ಬಹಳ ಸಂತೋಷ ಪಡುತ್ತಾನೆ. ಪಿಶಾಚಿ ಇದರ ನೇತೃತ್ವ ವಹಿಸುತ್ತಾನೆ ಮತ್ತು ತಲಾಕ್‌ನಲ್ಲಿ ಎಲ್ಲವೂ ಕೊನೆಗೊಳ್ಳುತ್ತದೆ. ಇದು ಪಿಶಾಚಿಗೆ ಸಂತೋಷದ ವಿಷಯವಾಗುತ್ತದೆ.

ನನ್ನ ಈ ವಿವರಣೆಯನ್ನು ಕೇಳಿ, ಪ್ರಶ್ನಿಸಿದ ಆ ಮಹಿಳೆ "ಓ ಅಲ್ಲಾಹನೇ, ಇದೆಂತಹ ದೌರ್ಭಾಗ್ಯ! ಧರ್ಮವನ್ನು ಸರಿಯಾಗಿ ಅರಿಯದ ಕಾರಣ ನನ್ನ ಕುಟುಂಬ ಛಿದ್ರವಾಯಿತು. ಪವಿತ್ರ ಕುರ್‌ಆನಿನ ಶಿಕ್ಷಣದಿಂದ ದೂರ ಇದ್ದ ಕಾರಣ ನನ್ನ ಮಕ್ಕಳು ನನ್ನಿಂದ ದೂರವಾದರು. ನನ್ನ ಮತ್ತು ನನ್ನ ಪತಿಯ ನಡುವೆ ಒಂದು ಸಣ್ಣ ವೈಮನಸ್ಸು ಉಂಟಾಗಿತ್ತು. ನನ್ನ ಕೆಲವೊಂದು ಮಾತುಗಳ ಕಾರಣ ನನ್ನ ಪತಿ ಕೆರಳಿದರು ಮತ್ತು ಅವರ ಕೋಪ ನೆತ್ತಿಗೇರಿತು. ಕೋಪದಲ್ಲಿ ಅವರು 'ತಲಾಕ್' ನಂತಹ ಪದಗಳನ್ನು ಉಪಯೋಗಿಸಿದರು. ಇದನ್ನು ಕೇಳಿದ ತಕ್ಷಣ ನಾನು ನನ್ನೆಲ್ಲಾ ವಸ್ತುಗಳನ್ನು ತೆಗೆದುಕೊಂಡು ಮನೆಯಿಂದ ಹೊರಟು ಬಿಟ್ಟೆ. ಹೃದಯ ನುಚ್ಚು ನೂರಾಗಿತ್ತು ಮತ್ತು ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯುತ್ತಿತ್ತು. ತವರು ಮನೆಯಲ್ಲಿ ಎಲ್ಲಾ ವಿಷಯಗಳನ್ನು ತಿಳಿಸಿದಾಗ ತವರು ಮನೆಯ ಸದಸ್ಯರೆಲ್ಲ ನನ್ನ ಪತಿಯಿಂದ ನನಗಾದ ಅವಮಾನದ ಪ್ರತೀಕಾರ ಪಡೆಯುವ ವಾಗ್ದಾನ ಮಾಡಿದರು. ನಾನು ಮರಳಿ ಮನೆಗೆ ಬರುವಂತೆ ಪತಿ ಹೇಳಿ ಕಳಿಸಿದರು. ಆದರೆ ನಾನು ಅವರ ಕರೆಯನ್ನು ತಿರಸ್ಕರಿಸಿದೆ. ನನ್ನ ಅಹಂಭಾವ ನನ್ನನ್ನು ಚಿಂತಿಸದಂತೆ ಮಾಡಿತು ಮತ್ತು ಸರಿಯಾದ ನಿರ್ಣಯ ತೆಗೆಯದಂತೆ ತಡೆಯಿತು.

ನೀವು ಓದಿದಂತಹ ಈ ಸೂಕ್ತವನ್ನು ನಾನು ಹಲವು ಸಲ ಓದಿದ್ದೇನೆ. ಆದರೆ, ಅದನ್ನು ಅರಿಯುವ ಪ್ರಯತ್ನ ಮಾಡಲಿಲ್ಲ. ಇದ್ದತ್‌ನ ಅವಧಿ ಮುಗಿದ ನಂತರ ನಾವು ಶಾಶ್ವತವಾಗಿ ಬೇರ್ಪಟ್ಟೆವು. ಇದ್ದತ್‌ನ ಸಮಯ ಮನೆಯಿಂದ ಹೊರ ಬರುವ ಪಾಪ ನನ್ನಿಂದ ಸಂಭವಿಸಿತು. ನಾನು ನನ್ನ ಪತಿ ಹಾಗೂ ಮಕ್ಕಳನ್ನು ಕಳೆದದ್ದು ಮಾತ್ರವಲ್ಲ ಬದಲಾಗಿ ಅಲ್ಲಾಹನ ಆಜ್ಞೆಯನ್ನು ತಿರಸ್ಕರಿಸಿದ ಪಾಪವನ್ನು ತಲೆಗೆ ಕಟ್ಟಿಕೊಂಡಿದ್ದೇನೆ."

ಇಷ್ಟು ಹೇಳಿ ಅಕೆ ಜೋರಾಗಿ ಅಳುತ್ತಾ, "ನನ್ನ ದೌರ್ಭಾಗ್ಯವೇ! ಸಹೋದರಿಯರೇ, ನೀವೆಲ್ಲರೂ ಅಲ್ಲಾಹನ ಗ್ರಂಥವನ್ನು ಅನುಸರಿಸುವ ವಾಗ್ದಾನ ಮಾಡಿರುವಿರಿ, ನಿಮ್ಮ ವಾಗ್ದಾನದಲ್ಲಿ ಸ್ಥಿರವಾಗಿರಿ ಎಂದು ನಾನು ನಿಮ್ಮೊಂದಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ" ಎಂದು ಹೇಳಿದರು.

ಆಕೆಯ ದುಃಖಭರಿತ ಕಥೆ ಕೇಳಿ ನಾವು ಈ ಸೂಕ್ತವನ್ನು ಅನುಸರಿಸುವ ದೃಢವಾದ ಸಂಕಲ್ಪ ಮಾಡಿದೆವು ಮತ್ತು ಇದರ ಅನುಸರಣೆಯಿಂದ ಆಗುವ ಅನುಭವವನ್ನು ಹೇಳುವ ನಿರ್ಧಾರ ಮಾಡಿದೆವು.

ಓರ್ವ ಸಹೋದರಿ ತನ್ನ ಅನುಭವವನ್ನು ಈ ರೀತಿ ಹಂಚಿದರು: ನನ್ನ ಜೀವನವನ್ನು ಅಲ್ಲಾಹನ ಆಜ್ಞೆಯಂತೆ ಪಾಲಿಸುವ ವಾಗ್ದಾನವನ್ನು ಅಲ್ಲಾಹನೊಂದಿಗೆ ಮಾಡುತ್ತ, ಸಮಯ ಬಂದಾಗ ಅದರಲ್ಲಿ ಸ್ಥಿರವಾಗಿ ನಿಲ್ಲುವ ಶಕ್ತಿಯನ್ನು ದಯಪಾಲಿಸು ಪ್ರಭುವೇ ಎಂದು ಪ್ರಾರ್ಥಿಸಿದೆ. ಪತಿಯವರ ಮುಂಗೋಪ ಸ್ವಭಾವದ ಕಾರಣ, ಕೋಪ ಬಂದಾಗ ಅಶ್ಲೀಲವಾಗಿ ಬಯ್ಯುತ್ತಿದ್ದರು. ಈ ಸೂಕ್ತದ ಅಧ್ಯಯನ ಮಾಡುವ ಮೊದಲು, ಅವರ ಮಾತಿಗೆ ಪ್ರತ್ಯುತ್ತರ ಕೊಡುವುದು ನನ್ನ ಅಭ್ಯಾಸವಾಗಿತ್ತು. ಅವರ ಮಾತಿಗೆ ಪ್ರತ್ಯುತ್ತರಿಸದೆ ಸುಮ್ಮನಿರಲು ನನ್ನಿಂದ ಸಾಧ್ಯವಿರಲಿಲ್ಲ. ನಮ್ಮಲ್ಲಾಗುವ ಈ ಜಗಳವನ್ನು ನನ್ನ ಕಿರಿಯ ಮಗ ದುಃಖದೊಂದಿಗೆ ಸಣ್ಣ ಮುಖ ಮಾಡಿ ಸದಾ ವೀಕ್ಷಿಸುತ್ತಿದ್ದ. ಅದರೆ ನಮಗೆ ಈ ಬಗ್ಗೆ ಪರಿವೇ ಇರಲಿಲ್ಲ. ನಾವು ಪರಸ್ಪರ ನಮ್ಮ ಮಾತೇ ಸರಿ ಎಂಬಂತೆ ಜಗಳಾಡುತಿದ್ದೆವು.

ಈಗಲೂ ಅಂತಹ ಪರಿಸ್ಥಿತಿ ಉಂಟಾಗುತ್ತದೆ. ನಾನು ನನ್ನ ಸಂಬಂಧವನ್ನು ಅಲ್ಲಾಹನೊಂದಿಗೆ ಗಟ್ಟಿಯಾಗಿ ಜೋಡಿಸುತ್ತ, ಪವಿತ್ರ ಕುರ್‌ಆನಿನ ಸೂಕ್ತವನ್ನು ಅನು ಸರಿಸುವ ನಿರ್ಧಾರವನ್ನು ಮಾಡಿರುವ ಕಾರಣ ಎಂತಹ ಪರಿಸ್ಥಿತಿಯಲ್ಲೂ ಪತಿಗೆ ಕೋಪ ಬರದಂತೆ ನೋಡಿಕೊಳ್ಳಬೇಕೆಂಬುದು ನನ್ನ ಪ್ರಯತ್ನವಾಗಿತ್ತು. ನಾನು ಗಾಬರಿಗೊಂಡು ಒತ್ತಡಕ್ಕೆ ಒಳಗಾಗುತ್ತಿದ್ದೆ, ಮನೆಯಲ್ಲಿರಲು ಮನಸ್ಸಾಗುತ್ತಿರಲಿಲ್ಲ, ಮಸೀದಿಗೆ ಹೋಗಬೇಕು, ಅಲ್ಲೇ ಉಳಿಯಬೇಕು ಎಂದು ಅನಿಸುತ್ತಿತ್ತು. ಅಲ್ಲಿ ನನಗೆ ನೆಮ್ಮದಿ, ಸಮಾಧಾನ ಸಿಗುವುದು ಎಂದು ಭರವಸೆ ಇತ್ತು. ಕೆಲವೊಮ್ಮೆ ಓರ್ವ ಮುಸ್ಲಿಮ್ ಸಹೋದರಿಯ ಮನೆಗೆ ಹೋಗಿ ನನ್ನ ಕಥೆಯನ್ನು ಹೇಳಿ ಆಕೆಯ ಭುಜದ ಮೇಲೆ ತಲೆ ಇಟ್ಟು ಅಳಬೇಕು ಮತ್ತು ಆಕೆ ನನ್ನನ್ನು ಸಂತೈಸಬೇಕು ಎಂದು ಅನಿಸುತ್ತಿತ್ತು. ಈ ರೀತಿಯಾದರೂ ಮನಸ್ಸಿಗೆ ನೆಮ್ಮದಿ ಸಮಾಧಾನ ಸಿಗಬಹುದೇ ಎಂದು ಯೋಚಿಸುತ್ತಿದ್ದೆ. ಇನ್ನೊಂದು ಕಡೆ ಪತಿಯ ಕೋಪ ನಿಯಂತ್ರಣ ಬಹಳ ಕಷ್ಟಕರವಾದ ಕೆಲಸವಾಗಿತ್ತು. ಕೋಪದ ಭರದಲ್ಲಿ ಅವರು ತಲಾಕ್ ಕೊಟ್ಟು ಬಿಡು ವರೋ ಎಂದು ಭಯವಾಗುತ್ತಿತ್ತು.

ಇಂತಹ ಪರಿಸ್ಥಿತಿಯಲ್ಲಿ ಪತಿಗೆ ಪ್ರತ್ಯುತ್ತರಿಸಬೇಕೆಂದು ಪಿಶಾಚಿಯ ಉದ್ರೇಕಕ್ಕೆ ಒಳಗಾಗದೆ, ಅಲ್ಲಾಹನನ್ನು ನೆನಪಿಸುತ್ತ, ಆತನ ಸ್ತುತಿಗೈಯುತ್ತ ನನ್ನನ್ನು ನಿಯಂತ್ರಿಸು ತ್ತಿದ್ದೆ. ತಲಾಕ್‌ನಂತಹ ಪರಿಸ್ಥಿತಿ ಉಂಟಾದರೆ ನಾನು ಮನೆಯಲ್ಲೇ ಇರಬೇಕಲ್ಲವೇ

ಎಂಬ ಯೋಚನೆ ಬರುತ್ತಿತ್ತು. ಇದ್ದತ್‌ನ ಸಮಯ ಮಹಿಳೆ ಮನೆಯಿಂದ ಹೊರಗೆ ಹೋಗಬಾರದೆಂಬ ನಿರ್ಬಂಧ ಇರುವುದರಿಂದ ಕುರ್‌ಆನಿನ ಸಾಪ್ತಾಹಿಕ ತರಗತಿಗೂ ಹಾಜರಾಗಲು ಸಾಧ್ಯವಾಗದು ಎಂದು ಅನಿಸುತ್ತಿತ್ತು. ಕುರ್‌ಅನ್ ಪ್ರವಚನದಿಂದ ವಂಚಿತಳಾಗುವ ಯೋಚನೆಯು ಜೀವ ಹಿಂಡಿದಂತೆ ಭಾಸವಾಯಿತು. ಅಲ್ಲಾಹನ ಮನೆಯ ಪರಿಶುದ್ಧ ವಾತಾವರಣದಲ್ಲಿ ಅಲ್ಲಾಹನ ಗ್ರಂಥವನ್ನು ಅರಿಯುವುದು, ಅರಿತು ಅನುಸರಿಸುವುದರಿಂದ ಮನಸ್ಸಿಗೆ ಸುಖ–ಶಾಂತಿ ದೊರೆಯುತ್ತದೆ. ನೆಮ್ಮದಿಯೊಂದಿಗೆ ದೂರ ಬರುತ್ತೇನೆ. ಇದ್ದತ್‌ನ ಸಮಯ ಇಂತಹ ಪರಿಶುದ್ಧ ವಾತಾವರಣದಿಂದ ದೂರ ಇರಬೇಕಾದುದನ್ನು ಯೋಚಿಸಿ ಭಯವಾಗುತ್ತಿತ್ತು. ನಾನು ದಿನನಿತ್ಯ ಕುರ್‌ಆನ್ ಓದುತ್ತಿದ್ದರೂ ಅದು ನನ್ನ ಗಂಟಲ ಕೆಳಗೆ ಇಳಿದಿರಲಿಲ್ಲ.

ನಾನು ನನ್ನ ಈ ಕಾಲ್ಪನಿಕ ಲೋಕದಿಂದ ಹೊರ ಬಂದಾಗ, ಅಮ್ಮನಂತೆ ನಿಮಗೂ ಸುಮ್ಮನಿರಲಾಗದೆ ಎಂಬಂತೆ ಮಕ್ಕಳು ತಂದೆಯನ್ನು ದುರುಗುಟ್ಟಿ ನೋಡುತ್ತಿದ್ದರು. ನಾನು ಮಗುವನ್ನು ಮಡಿಲಲ್ಲಿ ಕುಳ್ಳಿರಿಸಿ, ಪತಿಗಾಗಿ ಪ್ರಾರ್ಥಿಸತೊಡಗಿದೆ.

ಕ್ರಮೇಣ ಪತಿಯ ಕೋಪ ತಣ್ಣಗಾಯಿತು. ಅವರು ಅಲ್ಲಾಹನೊಡನೆ ಕ್ಷಮೆಯಾಚಿಸತೊಡಗಿದರು ಮತ್ತು ಅಲ್ಲಾಹನ ಸ್ಮರಣೆಯಲ್ಲಿ ತಲ್ಲೀನರಾದರು. ನಾನೂ ತಸ್ಬೀಹ್, ದಿಕ್ರ್ ಮತ್ತು ದುಆದಲ್ಲಿ ತಲ್ಲೀನನಾದೆ. ನಂತರ ಮನೆಯ ವಾತಾವರಣ ಬದಲಾಯಿತು. ಮನೆಯಲ್ಲಿ ಪ್ರೀತಿ ಮತ್ತು ನೆಮ್ಮದಿ ಉಂಟಾಯಿತು. ಪತಿಯ ಕೋಪ ತಣಿಯಗೊಂಡಿತು. 'ನನ್ನನು ಕ್ಷಮಿಸು, ಎಂದಿನಂತೆ ಈವತ್ತು ಕೂಡ ನೀನು ಪ್ರತ್ಯುತ್ತರ ನೀಡುತ್ತಿ. ಈವತ್ತು 'ತಲಾಕ್' ಪದ ನನ್ನ ನಾಲಗೆಯ ತುದಿಯಲ್ಲಿತ್ತು. ನೀನು ಕೇಳಿದ ತಕ್ಷಣ ಕೊಡುವುದೆಂದು ನಿರ್ಧರಿಸಿದ್ದೆ. ಆದರೆ ಈವತ್ತು ನೀನು ಮೌನವಾಗಿರುವುದು ನೋಡಿ ಆಶ್ಚರ್ಯವಾಯಿತು. ನೀನು ಯಾಕೆ ಈವತ್ತು ತಲಾಕ್ ಕೇಳಲಿಲ್ಲ?' ಎಂದು ಪತಿ ಕೇಳಿದರು. 'ನನ್ನ ಸೃಷ್ಟಿಕರ್ತನು ನನಗೆ ತನ್ನ ಗ್ರಂಥ ಹಾಗೂ ತನ್ನ ಆಜ್ಞೆಗಳ ಮುಖಾಂತರ ಶಿಷ್ಟಾಚಾರಗಳನ್ನು ಕಲಿಸಿರುವನು. ತಲಾಕ್‌ನ ನಂತರ ನನಗೆ ಸ್ವಾತಂತ್ರ್ಯ ಸಿಗುಬಹುದು ಎಂದು ನಾನು ತಿಳಿದಿದ್ದೆ. ಅದರೆ ನನ್ನ ಯೋಚನೆ ಹಾಗೂ ಅಲ್ಲಾಹನ ಗ್ರಂಥದಲ್ಲಿರುವ ಆಜ್ಞೆ ಎರಡು ವ್ಯತಿರಿಕ್ತವಾಗಿವೆ' ಎಂದು ಹೇಳಿದೆ.

ಅಂದಿನ ಆ ಘಟನೆಯಿಂದ ಹಿಡಿದು ಇಂದಿನ ವರಗೆ ನಾವು ಮನೆಯಲ್ಲಿ ಬಹಳ ಸಂತೋಷ ಹಾಗೂ ಪ್ರೀತಿ ವಾತ್ಸಲ್ಯದಿಂದ ಬಾಳುತ್ತಿದ್ದೇವೆ. ಈಗ ಇರುವಂತಹ ಐಕ್ಯತೆ, ಶಾಂತಿ, ನೆಮ್ಮದಿ, ಸಮಾಧಾನ ಇದರ ಮೊದಲು ಯಾವತ್ತೂ ದೊರೆತಿರಲಿಲ್ಲ. ಪವಿತ್ರ ಗ್ರಂಥದ ಆಜ್ಞೆಯ ಕಾರಣ ನಾನು ತಲಾಕ್‌ನಿಂದ ದೂರ ಉಳಿದೆ. ಇದು ಅಲ್ಲಾಹನ ಅತಿ ದೊಡ್ಡ ಕೃಪೆ. ತಲಾಕ್ ಒಂದು ಬಹಳ ಉತ್ತಮವಾದ ಅಸ್ತ್ರ ಎಂದು

ಪಿಶಾಚಿ ನನ್ನನ್ನು ಉತ್ತೇಜಿಸುತ್ತಿತ್ತು. ತಲಾಕ್‌ನಿಂದ ನಾನು ಸ್ವತಂತ್ರಳಾಗುವೆ ಎಂದು ಪ್ರೇರೇಪಿಸುತ್ತಿತ್ತು. ಆದರೆ ತಲಾಕ್ ಪ್ರತಿ ಬಂಧನವಾಗಿದೆ ಎಂದು ನಾನು ಅರಿತೆ. ಈ ಘಟನೆಯ ನಂತರ ನನ್ನ ಪತಿಯಲ್ಲಿ ಬಹಳ ಬದಲಾವಣೆ ಉಂಟಾಯಿತು. ಅವರ ವರ್ತನೆ ಬದಲಾಯಿತು, ತಮ್ಮ ಕೋಪ, ದ್ವೇಷ, ಹಠ, ಜಗಳ ಎಲ್ಲವನ್ನೂ ಹತೋಟಿಯಲ್ಲಿಡತೊಡಗಿದರು. ಇದಕ್ಕೆ ಕಾರಣ ನನ್ನ ಶಾಂತಿಯುತ ನಡೆ ಅಲ್ಲಾಹನು ನನಗೆ ಕುರ್‌ಆನನ್ನು ಅರಿಯಲು ಕೊಟ್ಟ ಅವಕಾಶಕ್ಕೆ ನಾನು ವಿನಮ್ರಳಾಗಿ ಪದೇ ಪದೇ ಅಲ್ಲಾಹನನ್ನು ಸ್ಮರಿಸತೊಡಗಿದೆ. ಪವಿತ್ರ ಕುರ್‌ಆನಿನ ಮುಖಾಂತರ ವಿಷಯ ಗಳನ್ನು ಅರಿಯುವಂತೆ ಅನುಗ್ರಹಿಸಿದನು. ಅಲ್ಲಾಹನ ಗ್ರಂಥದ ಒಂದು ಸೂಕ್ತವನ್ನು ಅನುಸರಿಸಿದಾಗ ನನ್ನ ಮನೆ ಛಿದ್ರವಾಗುವುದರಿಂದ ಉಳಿಯಿತು. ಇದು ಅಲ್ಲಾಹನ ಅನುಗ್ರಹ... ಎಂದು ಆಕೆ ತನಗಾದ ಅನುಭವವನ್ನು ವಿವರಿಸುತ್ತ ಹೋದರು.

ಅವರು ತನ್ನ ಅನುಭವ ಹೇಳಿ ಮುಗಿಸಿದ ತಕ್ಷಣ ಇನ್ನೋರ್ವ ಸಹೋದರಿ ತನ್ನ ಅನುಭವವನ್ನು ಹೇಳಲು ಎದ್ದು ನಿಂತು, ನಾಚಿಕೆಯಿಂದ ಪುನಃ ಕುಳಿತುಕೊಂಡಳು. ಸ್ವಲ್ಪ ಹೊತ್ತು ಯೋಚಿಸುತ್ತ, ಧೈರ್ಯದಿಂದ ಪುನಃ ಎದ್ದು ಮಾತನಾಡಲು ಅನುಮತಿ ಕೇಳಿದಳು.

ಅನುಮತಿ ಸಿಕ್ಕಿದ ತಕ್ಷಣ ಆಕೆ ಎದ್ದು "ನನ್ನ ಪತಿ ಶುದ್ಧ ಮನಸ್ಸಿನವರು. ಆದರೆ ಮುಂಗೋಪಿ, ದುಡುಕು ಸ್ವಭಾವ ಮತ್ತು ನಿರ್ಣಯಗಳನ್ನು ಮಾಡುವಾಗ ಹಿಂದು ಮುಂದು ಯೋಚಿಸದೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಕಾರಣಕ್ಕೆ ನಾನು ಅವರನ್ನು ದ್ವೇಷಿಸುತ್ತಿದ್ದೆ. ನನ್ನ ವಿರುದ್ಧ ಒಂದು ಮಾತು ಹೇಳಿದರೆ ನಾನು ಹತ್ತು ಮಾತು ಹೇಳುತ್ತಿದ್ದೆ. ಅವರ ಪ್ರತಿಯೊಂದು ಕೆಲಸವನ್ನು ತೀವ್ರವಾಗಿ ಟೀಕಿಸುತ್ತಿದ್ದೆ. ಅವರ ಮಾತುಗಳನ್ನು ಕೇಳಿಯೂ ಕೇಳದಂತೆ ಕಲ್ಲಿನಂತೆ ವರ್ತಿಸುತ್ತಿದ್ದೆ. ಈ ಕಲ್ಲಿನೊಂದಿಗೆ ಯಾಕೆ ಹೇಳಬೇಕಿತ್ತು ಎನ್ನುವಷ್ಟರ ಮಟ್ಟಿಗೆ ಸುಮ್ಮನಿರುತ್ತಿದ್ದೆ. ಒಮ್ಮೆ ನಮ್ಮ ಮಧ್ಯೆ ಬಹಳ ಕೆಟ್ಟ ರೀತಿಯಲ್ಲಿ ಜಗಳ ಉಂಟಾಯಿತು. ಬಹಳ ಹೊತ್ತಿನ ಉತ್ತರ ಪ್ರತ್ಯುತ್ತರದ ನಂತರ ಅವರು ನನ್ನನ್ನು ಕರೆದರು ನನ್ನೊಂದಿಗೆ ರಾಜಿ ಸಂಧಾನಕ್ಕೆ ಕರೆದಿರ ಬಹುದೆಂದು ನೆನಸಿ, ಏನು? ಎಂದು ಕೇಳಿದಾಗ, ಅವರು ನನ್ನ ಹೆಸರೆತ್ತಿ 'ನಿನಗೆ ತಲಾಕ್' ಎಂದು ಹೇಳಿದರು. 'ಏನು! ಏನಂದಿರಿ? ತಲಾಕ್? ನನ್ನ ಐದು ಮಕ್ಕಳ ಗತಿಯೇನು? ಎಷ್ಟು ಸುಲಭ ತಲಾಕ್ ಹೇಳಲು' ಎಂದು ಕೇಳಿದೆ. ಅದರೆ ನನ್ನ ಮಾತುಗಳು ಅವರ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ. ನನ್ನ ಅಳು, ನನ್ನ ಚೀರಾಟ ಎಲ್ಲವೂ ವ್ಯರ್ಥವಾಗಿತ್ತು. ನಾನು ತಕ್ಷಣ ನನ್ನ ಕೋಣೆಗೆ ಹೋಗಿ ನನ್ನಿಷ್ಟದ ಕೆಲವು ಬಟ್ಟೆಗಳನ್ನು ಪೆಟ್ಟಿಗೆಯಲ್ಲಿ ತುಂಬ ತೊಡಗಿದೆ. ಮಕ್ಕಳು

ಅಳುತ್ತಿದ್ದರು. ಅವರ ಅಳುವ ಧ್ವನಿ ಯಾವುದೇ ಕಲ್ಲು ಹೃದಯವನ್ನೂ ಕರಗಿಸಲು ಸಾಕಿತ್ತು. ಬಟ್ಟೆ ತುಂಬಿ ಪೆಟ್ಟಿಗೆ ಬಂದು ಮಾಡಿದಾಗ, ನನ್ನ ಮನಸ್ಸನ್ನು ಕೂಡ ಆ ಕಠೋರ ವ್ಯಕ್ತಿಗಾಗಿ ಮುಚ್ಚಿ ಬಿಟ್ಟೆ.

ನಾನು ಮನೆಯಿಂದ ಹೊರ ಹೋಗಲು ಹೆಜ್ಜೆ ಇಡುವಷ್ಟರಲ್ಲಿ ಅವರು ನನಗೆ ಪವಿತ್ರ ಗ್ರಂಥದ ಒಂದು ಸೂಕ್ತವನ್ನು ನೆನಪಿಸಿದರು.

وَلَا يَخْرُجْنَ 'ಮತ್ತು ಅವರು ಸ್ವತಃ ಹೊರ ಹೋಗದಿರಲಿ' ಇದನ್ನು ಕೇಳಿದ ತಕ್ಷಣ ನಾನು ನನ್ನ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿದೆ. ನಾನು ಏನು ಮಾಡಲು ಹೊರಟಿದ್ದೆ ಎಂದು ಯೋಚಿಸತೊಡಗಿದೆ. ನಾನು ಅಳತೊಡಗಿದೆ, ಮಕ್ಕಳು ನನ್ನ ಹತ್ತಿರ ಕೂತು ನನ್ನನ್ನು ಸಮಾಧಾನ ಪಡಿಸುವ ಪ್ರಯತ್ನ ಮಾಡುತ್ತಿದ್ದರು ಮತ್ತು ನನ್ನ ಕಣ್ಣೀರನ್ನು ಒರೆಸುತ್ತಿದ್ದರು. ನಾನು ಸಮಾಧಾನಗೊಂಡ ನಂತರ, ಪತಿ ನನ್ನ ಕೋಣೆಯ ಬಾಗಿಲಲ್ಲಿ ನಿಂತು, "ನಾನು ನಿನಗೆ ತಲಾಕ್ ಕೊಟ್ಟ ನಂತರವೂ ನೀನು ಯಾಕೆ ಮನೆ ಬಿಟ್ಟು ಹೋಗಲಿಲ್ಲ?" ಎಂದು ಪ್ರಶ್ನಿಸಿದರು. ನಾನು ವಿನಮ್ರಳಾಗಿ "ಬಹು ದೊಡ್ಡ ವಸ್ತುವೊಂದು ನನ್ನನ್ನು ಹೋಗದಂತೆ ತಡೆಯಿತು" ಎಂದೆ. ಆತ ಅಪಹಾಸ್ಯ ಮಾಡುತ್ತ "ಅಷ್ಟು ದೊಡ್ಡ ವಸ್ತು ಯಾವುದು?" ಎಂದು ಕೇಳಿದರು. "ಅಲ್ಲಾಹನ ಒಂದು ವಾಕ್ಯ ನನ್ನನ್ನು ಹೋಗದಂತೆ ತಡೆಯಿತು." ಎಂದು ಉತ್ತರಿಸಿದೆ. "ಪವಿತ್ರ ಕುರ್‌ಆನಿನ ಅಪ್ಪಣೆ ಈಗ ನೆನಪಾಯಿತೇ? ನೀನು ನನ್ನ ಆಜ್ಞೆಗಳನ್ನು ನಿರಾಕರಿಸುತ್ತಿದ್ದಾಗ, ನನ್ನ ಹಕ್ಕುಗಳನ್ನು ತಿರಸ್ಕರಿಸುತ್ತಿದ್ದ ವೇಳೆ, ಪವಿತ್ರ ಕುರ್‌ಆನಿನ ಆಜ್ಞೆಗಳು ನೆನಪಾಗಲಿಲ್ಲವೇ? ಈಗ ನೀನು ಓರ್ವ ವಿಚ್ಛೇದಿತ ಮಹಿಳೆ. ಆದುದರಿಂದ ಈ ಮನೆಯಲ್ಲಿ ನಿಲ್ಲುವ ಅಧಿಕಾರವಿಲ್ಲ" ಎಂದರು. ಆಗ ನಾನು "ಇದು ನಿಮ್ಮ ಮಾತು, ಆದರೆ ನನ್ನ ಒಡೆಯನ ಆಜ್ಞೆ ಬೇರೆ ಆಗಿದೆ. ತಲಾಕ್ ಕೊಡುವ ಪುರುಷ ನೊಂದಿಗೆ ಅವನು ಈ ರೀತಿ ಹೇಳುತ್ತಾನೆ:

لَا تُخْرِجُوهُنَّ مِنْ بُيُوتِهِنَّ وَلَا يَخْرُجْنَ

"ನೀವು ಅವರನ್ನು ಅವರ ಮನೆಗಳಿಂದ ಹೊರ ಹಾಕಬಾರದು ಮತ್ತು ಅವರಾಗಿಯೂ ಹೊರಟು ಹೋಗಬಾರದು." (ಪವಿತ್ರ ಕುರ್‌ಆನ್: 65: 1)

ಅಲ್ಲಾಹನ ಈ ಆಜ್ಞೆ ನಮ್ಮಿಬ್ಬರ ಮೇಲೆ ಇದೆ. ಪವಿತ್ರ ಕುರ್‌ಆನಿನಂತೆ ಜೀವನ ಸಾಗಿಸದ ಕಾರಣ ಈವತ್ತು ಈ ಶಿಕ್ಷೆಗೆ ಒಳಗಾಗಿದ್ದೇನೆ. ಇದು ನನ್ನ ಪಾಲಿಗೆ ಸಾಕು. ನಾನು ಮನೆ ಬಿಟ್ಟು ಹೋಗಲಾರೆ ಎಂದು ಹಠ ಹಿಡಿದಾಗ ಮತ್ತು ಅಲ್ಲಾಹನ ಆಜ್ಞೆಯ ಮುಂದೆ ಅವರು ತಲೆ ಬಾಗಿಸಿದರು.

ಅಲ್ಲಾಹನ ಆಜ್ಞೆಯಂತೆ ತಲಾಕ್ ನಂತರವು ಪತಿಯ ಮನೆಯಲ್ಲೇ ಇರುವುದರಿಂದ, ನನ್ನ ಪತಿ ನನ್ನೊಡನೆ ಮಾತನಾಡಲು ಆರಂಭಿಸಿದರು. ಪರಸ್ಪರ ನಮ್ಮಲ್ಲಿ ಸ್ನೇಹ ಉಂಟಾಯಿತು ಮತ್ತು ಪರಸ್ಪರ ಸಂತೋಷ ಪಡಿಸುವ ಪ್ರಯತ್ನ ಮಾಡತೊಡಗಿದೆವು. ತಿಂಗಳೊಳಗೆ ನಮ್ಮ ಮನೆ ನೆಮ್ಮದಿಯಿಂದ ಕೂಡಿತು ಮತ್ತು ಮನೆಯ ವಾತಾವರಣ ಪ್ರೀತಿಯ ವಾತಾವರಣಕ್ಕೆ ಬದಲಾಯಿತು. ನನ್ನ ಪತಿಯವರು ಕೊಟ್ಟ ತಲಾಕನ್ನು ಹಿಂದಕ್ಕೆ ಪಡೆದರು. ಇದರಿಂದ ನನಗಾದ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ನನ್ನ ಪ್ರಾರ್ಥನೆಗಳು ಸ್ವೀಕೃತಗೊಂಡಿದ್ದವು ಮತ್ತು ಪವಿತ್ರ ಕುರ್‌ಆನಿನ ಅನುಗ್ರಹದಿಂದ ನನ್ನ ಜೀವನ, ನನ್ನ ಪತಿ, ನನ್ನ ಮಕ್ಕಳು ಮತ್ತು ನನ್ನ ಕುಟುಂಬ ಬಹು ದೊಡ್ಡ ದುರಂತದಿಂದ ಪಾರಾಯಿತು. ನನ್ನ ಮಕ್ಕಳು ದಾರಿ ತಪ್ಪುವುದರಿಂದ ಮತ್ತು ಮಾನಸಿಕ ರೋಗಿಗಳಾಗುವುದರಿಂದ ರಕ್ಷಿಸಲ್ಪಟ್ಟರು. ನನ್ನ ಸೃಷ್ಟಿಕರ್ತನು ನನ್ನನ್ನು ಬಹು ದೊಡ್ಡ ಅನಾಹುತದಿಂದ ರಕ್ಷಿಸಿ ನನ್ನ ಜೀವನದಲ್ಲಿ ಸಂತೋಷವನ್ನು ತುಂಬಿದ. ಅಲ್ಲಾಹನು ಸರಿಯಾದುದನ್ನೇ ಹೇಳಿದನು.

لَعَلَّ اللّٰهَ يُحْدِثُ بَعْدَ ذٰلِكَ اَمْرًا

"ಪ್ರಾಯಶಃ ಇದಾದ ಬಳಿಕ ಅಲ್ಲಾಹನು (ಹೊಂದಾಣಿಕೆಯ) ಯಾವುದಾದರೂ ದಾರಿಯನ್ನು ಉಂಟು ಮಾಡಲೂ ಬಹುದು – ಅದು ನಿಮಗೆ ಅರಿಯದು."

**(ಪವಿತ್ರ ಕುರ್‌ಆನ್: 65: 1)**

ಆತ್ಮೀಯ ಸಹೋದರಿಯರೇ! ಈವತ್ತು ನಾನು ನನ್ನ ಮನೆಯಲ್ಲಿ ನನ್ನ ಮಕ್ಕಳೊಂದಿಗೆ ಬಹಳ ಸಂತೋಷ ಹಾಗೂ ನೆಮ್ಮದಿಯೊಂದಿಗೆ ಬಾಳುತ್ತಿದ್ದೇನೆ. ನನ್ನ ಕಷ್ಟದ ದಿನಗಳು ಮಾಯವಾದವು. ನಾನು ನನ್ನ ಪತಿಯನ್ನು ನನ್ನಿಂದ ಆದಷ್ಟು ಸಂತೋಷಗೊಳಿಸಲು ಪ್ರಯತ್ನಿಸುತ್ತೇನೆ. ಅವರ ಆಹಾರ, ವಸ್ತ್ರ, ನೆಮ್ಮದಿ ಇತ್ಯಾದಿಗಳ ಬಗ್ಗೆ ವಿಶೇಷ ಕಾಳಜಿ ವಹಿಸುತ್ತೇನೆ. ನನ್ನ ಗತಿಸಿ ಹೋದ ದಿನಗಳ ಬಗ್ಗೆ ಯೋಚಿಸಿ ವಿಷಾದ ಪಡುತ್ತೇನೆ. ನನ್ನಿಂದ ಸಂಭವಿಸಿದ ದೋಷಗಳನ್ನು ಸರಿಪಡಿಸಲು, ಪತಿಯನ್ನು ಸಂತೋಷಪಡಿಸಲು ಗರಿಷ್ಠ ಪ್ರಯತ್ನ ಮಾಡುತ್ತೇನೆ ಮತ್ತು ಅವರ ಸೇವೆ ಮಾಡುತ್ತೇನೆ. ಐಚ್ಛಿಕ ನಮಾಝಿನೊಂದಿಗೆ ಅಲ್ಲಾಹನೊಡನೆ ಕ್ಷಮೆಯನ್ನು ಕೋರುತ್ತೇನೆ. ಪತಿಯ ಸೇವೆಯನ್ನು ಇನ್ನಷ್ಟು ಮಾಡಲು ಅಲ್ಲಾಹನು ಸಹಕರಿಸಲಿ ಎಂದು ಪ್ರಾರ್ಥಿಸುತ್ತೇನೆ. ಅವರು ಬಹಳ ಉತ್ತಮ ಮನುಷ್ಯ. ಅವರ ಒಳ್ಳೆತನವನ್ನು ಅವರ ದುರ್ಬಲತೆ ಎಂದು ನಾನು ಭಾವಿಸಬಾರದೆಂದು ಅವರ ಇಚ್ಛೆ.

ಇದು ನನ್ನ ಜೀವನದ ಕಥೆ. ನಮ್ಮ ಜೀವನ ಬಹಳ ಸಂತೋಷದಿಂದ ಕೂಡಿದೆ. ಮನೆಯ ವಾತಾವರಣ ಪ್ರೇಮಾನುರಾಗದಿಂದ ತುಂಬಿದೆ. ಮನುಷ್ಯರನ್ನು

ಸೃಷ್ಟಿಸಿದ ಆ ಸೃಷ್ಟಿಕರ್ತನು ಎಲ್ಲ ನ್ಯೂನತೆಗಳಿಂದ ಪರಿಶುದ್ಧನಾಗಿದ್ದಾನೆ. ಮನುಷ್ಯನ ಅಂತರಾತ್ಮವನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ. ವಿಚ್ಛೇದಿತ ಮಹಿಳೆಯ ಬಾಳು ಹಾಳಾಗದೆ ನೆಮ್ಮದಿ ಹಾಗೂ ಸುಖದಾಯಕ ಬದುಕು ಕಾಣಲೆಂದು ವಿಚ್ಛೇದನೆಗೆ ಒಳಪಟ್ಟರೂ ಪತಿ ಮನೆಯಲ್ಲೇ ಇರಬೇಕೆಂದು ಆಜ್ಞಾಪಿಸಿದನು. ಸಹೋದರಿಯರೇ! ಒಂದು ವೇಳೆ ನೀವು ಇಂತಹ ಸಂದಿಗ್ಧ ಪರಿಸ್ಥಿಯಲ್ಲಿ ಸಿಲುಕಿಕೊಂಡಿದ್ದರೆ, ಪತಿಯ ಮನೆಯನ್ನು ತೊರೆಯಬೇಡಿ. ನಿಮ್ಮ ಅಹಂಭಾವವನ್ನು ಅದುಮಿ ಬುದ್ಧಿವಂತಿಕೆಯನ್ನು ಉಪಯೋಗಿಸಿ ಅಲ್ಲಾಹನ ಆಜ್ಞೆಯನ್ನು ಗಮನದಲ್ಲಿಟ್ಟು ಅದರಂತೆ ನಡೆಯಿರಿ. ಅದು ನಮ್ಮೆಲ್ಲರ ಸೃಷ್ಟಿಕರ್ತನಾದ ಅಲ್ಲಾಹನ ಆಜ್ಞೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಗೌರವ, ಪ್ರತಿಷ್ಠೆಗೆ ಹೆಚ್ಚು ಮಹತ್ವ ಕೊಡದೆ ಅಲ್ಲಾಹನ ಆಜ್ಞೆ ಉಲ್ಲಂಘನೆಯಾಗದಂತೆ ನೋಡುವುದೇ ಬುದ್ಧಿವಂತಿಕೆ.

ಆ ಮಹಿಳೆಯ ಅನುಭವವನ್ನು ಕೇಳಿ ನಾವು ಅಲ್ಲಾಹನ ಮುಂದೆ ಸಾಷ್ಟಾಂಗ ನೆರಗಿದೆವು. ನಮ್ಮ ಕುರ್‌ಆನ್ ತರಗತಿಯಲ್ಲಿ ಇಂತಹ ಅನುಭವಗಳನ್ನು ಕೇಳಿದಾಗ ಹಾಗೂ ನೋಡಿದಾಗ ಅಲ್ಲಾಹನ ಯುಕ್ತಿಯನ್ನು ಕೇಳಿ ನಮ್ಮ ವಿಶ್ವಾಸ ಹೆಚ್ಚಿತು. ನಮ್ಮ ಅಜ್ಞಾನದಿಂದ ಉಂಟಾಗುವ ಸಮಸ್ಯೆಗಳಿಂದ ನಮ್ಮನ್ನು ರಕ್ಷಿಸುವ ಶಕ್ತಿ ಕೇವಲ ಅಲ್ಲಾಹನಿಗಿದೆ. ನಮ್ಮನ್ನು ಕತ್ತಲೆ ಮತ್ತು ಅಜ್ಞಾನದಿಂದ ರಕ್ಷಿಸಿ, ಬೆಳಕು ಮತ್ತು ವಿವೇಕ ನೆಡೆಗೆ ಕೊಂಡೊಯ್ಯುವ ಸಾಮರ್ಥ್ಯ ಕೇವಲ ಅಲ್ಲಾಹನಿಗಿದೆ. ಅದಕ್ಕಾಗಿ ನಾವು ನಮ್ಮ ಜೀವನವನ್ನು ಕುರ್‌ಆನಿನ ಆದೇಶದಂತೆ ರೂಪಿಸಬೇಕಾದುದು ಅತ್ಯಗತ್ಯ.

ಇವು ನಮ್ಮ ತರಗತಿಯಲ್ಲಿ ಉಂಟಾದ ಕೆಲವು ಉದಾಹರಣೆಗಳು. ಪ್ರತಿ ವಾರ ಪವಿತ್ರ ಕುರ್‌ಆನಿನ ಒಂದು ಸೂಕ್ತವನ್ನು ಆಯ್ಕೆ ಮಾಡಿ ಅದರಂತೆ ನಮ್ಮ ಜೀವನ ವನ್ನು ರೂಪಿಸುವ ದೃಢ ನಿರ್ಧಾರದ ಅಗತ್ಯವಿದೆ. ಅಲ್ಲಾಹನ ಪವಿತ್ರ ಗ್ರಂಥದ ಬೋಧನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿದಾಗ ಆದ ಬದಲಾವಣೆಗಳ ಉದಾಹರಣೆಗಳನ್ನು ನಾವು ಕೇಳಿದೆವು ಮತ್ತು ಮನೆಗಳು ನೆಮ್ಮದಿಯ ತಾಣವಾದು ದನ್ನು ಹಾಗೂ ಮನೆಯ ಸದಸ್ಯರು ಶಾಂತಿಯಿಂದ ಜೀವಿಸಿದ್ದನ್ನು ನಾವು ಅರಿತೆವು. ಇಂತಹ ಸುಂದರ ಹಾಗೂ ಅಭೂತಪೂರ್ವ ಬದಲಾವಣೆ ಕೇವಲ ಪವಿತ್ರ ಕುರ್‌ಆನಿನಿಂದ ಸಾಧ್ಯ. ಅದನ್ನು ಅರಿತು ತಮ್ಮ ಜೀವನದಲ್ಲಿ ಅಳವಡಿಸುವುದೆಂದರೆ, ಪವಿತ್ರ ಕುರ್‌ಆನಿನ ಆಜ್ಞೆಯಂತೆ ತಮ್ಮನ್ನು ಸುಧಾರಿಸುವುದಾಗಿದೆ.

❖ ❖ ❖ ❖

# ಜಗಳ ಮತ್ತು ಕೋಪ

ಜಗಳಾಡಿ ಕೋಪಗೊಂಡು, ಸಂಬಂಧಗಳನ್ನು ಮುರಿಯುವುದರಿಂದ ಎಲ್ಲ ಸಮಸ್ಯೆಗಳು ಸುಲಭದಲ್ಲಿ ಪರಿಹಾರಗೊಳ್ಳಬಹುದು ಎಂದು ಜನರು ಭಾವಿಸುತ್ತಾರೆ. ವಿಶೇಷತಃ ಮಹಿಳೆಯರು ತಮ್ಮ ಕರ್ತವ್ಯಗಳಿಂದ ನುಣುಚಿಕೊಳ್ಳಲು, ಕೋಪದಿಂದ ಸಂಬಂಧಗಳನ್ನು ಮುರಿಯುವುದೇ ಅಸ್ತ್ರವೆಂದು ಭಾವಿಸುತ್ತಾರೆ. ಅದರೆ ಇದು ಅತ್ಯಂತ ಹಾನಿಕಾರಕ ಅಸ್ತ್ರ. ಮಹಿಳೆಯರು ತಮ್ಮ ಪತಿಯ ಸಂಬಂಧಿಕರೊಂದಿಗೆ ಜಗಳವಾಡಿ ಸಂಬಂಧ ಮುರಿದರೆ, ಕೆಲವರು ನೆರೆಕರೆಯವರೊಂದಿಗೆ ಜಗಳವಾಡಿ ಮಾತನಾಡದೆ ಇರುತ್ತಾರೆ, ಇನ್ನು ಕೆಲವರು ತಮ್ಮ ಸಹೋದರ-ಸಹೋದರಿಯರು ಅಥವಾ ಅವರ ಕುಟುಂಬದವರೊಂದಿಗೆ ಜಗಳವಾಡಿ ಹಗೆತನ ಬೆಳೆಸಿಕೊಳ್ಳುತ್ತಾರೆ. ಕೆಲವರು ತಮ್ಮ ನಾದಿನಿಯರೊಂದಿಗೆ ದ್ವೇಷ ಬೆಳೆಸಿಕೊಳ್ಳುತ್ತಾರೆ. ಎಲ್ಲದರಿಂದಲೂ ಮುಂದುವರಿದು ಕೆಲವರು ತಮ್ಮ ಮಾತಾಪಿತರೊಂದಿಗೆ ಸಂಬಂಧವನ್ನು ಮುರಿಯುತ್ತಾರೆ. ಇಂತಹ ಮಹಿಳೆಯರೊಂದಿಗೆ ಇದರ ಕಾರಣ ಕೇಳಿದರೆ, وَاهْجُرْهُمْ هَجْرًا جَمِيلًا "ಮತ್ತು ಸಭ್ಯ ರೀತಿಯಲ್ಲಿ ಅವರಿಂದ ಬೇರ್ಪಡಿರಿ." (ಪವಿತ್ರ ಕುರ್‌ಆನ್: 73: 10) ಎಂಬ ಸೂಕ್ತವನ್ನು ನೆವನವನ್ನಾಗಿಟ್ಟುಕೊಂಡು ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ.

ಈ ಸೂಕ್ತದಲ್ಲಿ ಸತ್ಯನಿಷೇಧಿಗಳ ಬಗ್ಗೆ ಹೇಳಲಾಗಿದೆ. ಹೀಗಿರುತ್ತ ಈ ಸಂಬಂಧಿಕರು, ನೆರೆಕೆರೆಯವರು, ನೆಂಟರಿಷ್ಟರು ಎಲ್ಲ ಸತ್ಯನಿಷೇಧಿಗಳೇ? ಇಂತಹ ಜಗಳಗಂಟಿ ಮಹಿಳೆಯರೊಂದಿಗೆ ಈ ಸೂಕ್ತದ ಸತ್ಯಾಂಶದ ಬಗ್ಗೆ ಕೇಳಿದಾಗ ಅವರು ಅಲ್ಲವೆನ್ನುತ್ತಾರೆ, ನೀವೂ ಮುಸಲ್ಮಾನರು, ಅವರೂ ಮುಸಲ್ಮಾನರಾಗಿರುವಾಗ ಅವರೊಂದಿಗೆ ಸಂಬಂಧ ಮುರಿಯುವುದು ಹೇಗೆ?

ಓರ್ವ ಸತ್ಯವಿಶ್ವಾಸಿಯು ಇನ್ನೋರ್ವ ಸತ್ಯ ವಿಶ್ವಾಸಿಯೊಂದಿಗೆ ತನ್ನ ಸಂಬಂಧ ಕಡಿದಾಗ ಅವರು ಮಾಡಿದ ಯಾವುದೇ ಪುಣ್ಯ ಕರ್ಮಗಳು ಆಕಾಶದೆತ್ತರಕ್ಕೆ ಹೋಗಲಾರದು ಎಂಬ ವಿಷಯ ಕಟು ಸತ್ಯ. ತಮ್ಮ ಸಂಬಂಧಗಳನ್ನು ಸರಿಪಡಿಸದಿದ್ದರೆ

ುಣ್ಯ ಕರ್ಮಗಳು ಸ್ವೀಕೃತವಾಗುವುದಿಲ್ಲ. ಜಗಳ, ದ್ವೇಷ, ಮತ್ಸರ, ಇವುಗಳ ನೇರ ಏರಿ ನಮ್ಮ ವೈರಿಗಳಾಗಿರದೆ, ಸ್ವತಃ ನಾವಾಗಿದ್ದೇವೆ. ಇದರಿಂದಾಗಿ ನಮ್ಮ ಪುಣ್ಯ ರ್ಮಗಳು ಸ್ವೀಕೃತವಾಗುವುದಿಲ್ಲವೆಂದಾದರೆ ಇಂತಹ ಲೌಕಿಕ ಜೀವನದ ಅಗತ್ಯವೇನಿದೆ?

ನಮ್ಮ ಸಂಬಂಧಿಕರೊಂದಿಗೆ ಸಂಬಂಧ ಮುರಿದು ನಾವು ಶಾಂತಿ ಹಾಗೂ ನೆಮ್ಮದಿಯ ಜೀವನ ಸಾಗಿಸುತ್ತಿದ್ದೇವೆ ಮತ್ತು ಹಲವು ಸಮಸ್ಯೆಗಳಿಂದ ರಕ್ಷಿಸಲ್ಪಡುತ್ತಿದ್ದೇವೆ ಎಂದು ಹಲವು ಮಹಿಳೆಯರ ಅಭಿಪ್ರಾಯ. ಹೀಗೆ ಇವರು ಎಲ್ಲ ರೀತಿಯ ಜಗಳ ಹಾಗೂ ತಿಕ್ಕಾಟದಿಂದ ತಮ್ಮನ್ನು ದೂರವಿಟ್ಟುಕೊಂಡಿದ್ದೇವೆಂದು ಹೇಳುತ್ತಾರೆ. ಆದರೆ ಇವರ ಈ ಅನಿಸಿಕೆ ತಪ್ಪು. ನಾವು ನಮ್ಮ ಹತ್ತಿರದ ಸಂಬಂಧಿಕರಿಂದ ಬೇರ್ಪಟ್ಟು ಜೀವಿಸಲು ಸಾಧ್ಯವೇ? ಓರ್ವ ಮಹಿಳೆ ತನ್ನ ಪತಿಯೊಂದಿಗೆ ಕೋಪಗೊಂಡು ನೆಮ್ಮದಿಯಿಂದ ಜೀವಿಸಬಲ್ಲಳೇ? ಇದು ನೈಜ ಜೀವನವೇ? ಇಂತಹ ಸ್ತ್ರೀ-ಪುರುಷರು ಸಂತೋಷದಿಂದಿರಲು ಸಾಧ್ಯವೇ? ಜಗಳ, ತಿಕ್ಕಾಟ, ಸಂಬಂಧ ಮುರಿಯುವುದು ಇತ್ಯಾದಿಗಳಿಂದ ಮುಸ್ಲಿಮ್ ಸಮುದಾಯಕ್ಕೆ ನಷ್ಟ ಉಂಟಾಗುತ್ತದೆ. ಪರಸ್ಪರ ಇರಬೇಕಾಗಿರುವ ಪ್ರೀತಿ ಮುರಿದು ಹೋಗುತ್ತದೆ. ಅನುರಾಗ ಬೆಳೆಯುವುದಿಲ್ಲ ಹೊಂದಾಣಿಕೆ ಮುಗಿದು ಬಿಡುತ್ತದೆ. ಮುಸ್ಲಿಮ್ ಸಮುದಾಯದ ಸ್ತ್ರೀ-ಪುರುಷರು ದೌರ್ಭಾಗ್ಯವನ್ನು ಕಾರಿವಾಳದಂತೆ ಕಣ್ಣು ಮುಚ್ಚಿ, ಸತ್ಯದಿಂದ ನುಣುಚಿಕೊಂಡು, ಭಾಗ್ಯವೆಂದು ಬಗೆದರೆ, ದುರದೃಷ್ಟವನ್ನು ಅದೃಷ್ಟವೆಂದು ಭಾವಿಸಿದರೆ ಇದು ಬೇರೆ ವಿಷಯ!

ಸಾಪ್ತಾಹಿಕ ಕುರ್‌ಆನ್ ತರಗತಿಯಲ್ಲಿ, ಸೌಭಾಗ್ಯದ ಕೀಲಿಕೈಯನ್ನು ಪಡೆಯುವ ವಿಧಾನವನ್ನು ಸಹೋದರಿಯರಿಗೆ ತಿಳಿಸಿದೆ. ನೆಮ್ಮದಿಯ ಜೀವನ ಪಡೆಯುವ ವಿಧಾನ ತೋರಿಸಿದೆ. ಇದರಿಂದ ಸಂತೋಷ ಹಾಗೂ ನೆಮ್ಮದಿಯ ಬಾಗಿಲು ಸದಾ ಕ್ರಮಗಾಗಿ ತೆರೆದಿರುವುದು ಎಂದು ಹೇಳಿದೆ. ಅಲ್ಲಾಹನು ಹೇಳುತ್ತಾನೆ:

ٱدْفَعْ بِٱلَّتِى هِىَ أَحْسَنُ فَإِذَا ٱلَّذِى بَيْنَكَ وَبَيْنَهُۥ عَدَٰوَةٌ كَأَنَّهُۥ وَلِىٌّ حَمِيمٌ

"ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ, ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ."

(ಪವಿತ್ರ ಕುರ್‌ಆನ್: 41: 34)

ಈ ಸೂಕ್ತದ ಉದ್ದೇಶ ಹಾಗೂ ತಾತ್ಪರ್ಯವನ್ನು ಕೂಲಂಕುಷವಾಗಿ ವಿವರಿಸಿದೆ. ಈ ಸೂಕ್ತವನ್ನು ಜೀವನದಲ್ಲಿ ಅಳವಡಿಸುತ್ತಾ ಜೀವಿಸಲು ಅಲ್ಲಾಹನ ಮೇಲೆ ಪರಿಪೂರ್ಣ ವಿಶ್ವಾಸ ಹಾಗೂ ತಾಳ್ಮೆಯ ಅಗತ್ಯವಿದೆ.

ಈ ಸೂಕ್ತದಂತೆ ಜೀವನ ಸಾಗಿಸುವಲ್ಲಿ ಅಲ್ಲಾಹನು ನಮಗೆ ಸಹಕರಿಸಲಿ

ಎಂದು ಪ್ರಾರ್ಥಿಸಿದೆ. ಇನ್ನು ನಾವು ಮಾಡಿದ ಕರ್ಮದ ಫಲವನ್ನು ಕಾದುನೋಡಬೇಕಿತ್ತು ಇಲ್ಲಿಯ ವರೆಗೆ ನಾವು ನಮ್ಮ ಸಮಸ್ಯೆಗಳನ್ನು ಕಡೆಗಣಿಸುತ್ತ, ಕಠಿಣ ಪರಿಸ್ಥಿತಿಗಳಿಂದ ನುಣುಚಿಕೊಳ್ಳುವ ಅಭ್ಯಾಸ ಹೊಂದಿದ್ದೆವು. ಅದರೆ ಇನ್ನು ಮುಂದಕ್ಕೆ ನಿಜಾಂಶವನ್ನು ಎದುರಿಸಬೇಕಾಗಿದೆ. ಪ್ರತಿಯೊಬ್ಬರೂ ತಮ್ಮ ಸಂಬಂಧಿಕರೊಂದಿಗೆ ಉತ್ತಮ ಸಂಬಂಧ ಬೆಳಸುವ ರೀತಿಯನ್ನು ಕಾರ್ಯರೂಪಕ್ಕೆ ತರುವ ಸಮಯ ಬಂದಿತ್ತು. ವೈರಿಯನ್ನು ನಮ್ಮ 'ಆಪ್ತ ಸ್ನೇಹಿತೆ'ಯನ್ನಾಗಿ ಪರಿವರ್ತಿಸುವಲ್ಲಿ ಎಷ್ಟು ಪ್ರಯತ್ನ ಪಡಬೇಕಾಗಿದೆ ಹಾಗೂ ಎಷ್ಟು ಸಮಯ ತಗುಲುತ್ತದೆ ಎಂದು ಕೂಡ ನೋಡಬೇಕಾಗಿದೆ. ಮುಂದಿನ ವಾರ ನಿಮ್ಮಲ್ಲಿ ಯಾರಾದರೂ ಅಳುತ್ತಾ 'ನಾನು ನನ್ನ ಎದುರಾಳಿಯರನ್ನು ಭೇಟಿ ಯಾಗಲು ಹೋಗಿದ್ದೆ, ಅವರನ್ನು ಮನ ಒಲಿಸುವ ಸಂಪೂರ್ಣ ಪ್ರಯತ್ನ ಮಾಡಿದೆ ಆದರೆ ನನಗೆ ಜಯ ದೊರಕಲಿಲ್ಲ' ಎಂದು ಹೇಳಬಹುದು. ಎಷ್ಟೋ ಅಡಚಣೆಗಳು ಕೂಡ ಎದುರಾಗಿರಬಹುದು. ಇಂತಹ ಸಹೋದರಿಯರಿಗೆ ನನ್ನದೊಂದು ಕಿವಿಮಾತು ನೀವು ಹೋಗುವಾಗ ಒಬ್ಬಂಟಿಗರಾಗಿ ಹೋಗಬೇಡಿ. ನಿಮ್ಮೊಂದಿಗೆ ಸಹನೆಯ ಸಂಪತ್ತನ್ನು ಕೊಂಡುಹೋಗಿ. ಪದೇ ಪದೇ ಹೋಗಿ, ನಿರಾಶರಾಗಬೇಡಿ.

ಹಲವು ದಿನಗಳು ಕಳೆದವು, ಹಲವು ವಾರಗಳು ಉರುಳಿದುವು. ಆದರೆ ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಯಾವ ರೀತಿಯಲ್ಲಿ ಅನುಸರಿಸಲಾಗಿದೆ ಎಂಬ ಅವಲೋಕನ ನಡೆಯಲಿಲ್ಲ. ಒಮ್ಮೆ ನಾನು, ಎಲ್ಲ ಗೌರವಾನ್ವಿತ ಸಹೋದರಿಯರೊಂದಿಗೆ "ಈವತ್ತು ಎಲ್ಲ ಸಹೋದರಿಯರು ತಮ್ಮ ಅನುಭವಗಳನ್ನು ಹೇಳಬೇಕು. ಯಾರೆಲ್ಲ ಈ ಸೂಕ್ತದ ಮೇಲೆ ವಿಶ್ವಾಸವಿಟ್ಟು, ಅದನ್ನು ತಮ್ಮ ಹೃದಯಾಂತರಾಳದಲ್ಲಿ ಇಳಿಸಿ ಸದ್ಬುದ್ಧಿ ಹಾಗೂ ಪ್ರಜ್ಞೆಯೊಂದಿಗೆ ಈ ಸೂಕ್ತವನ್ನು ಅನುಸರಿಸಿದ್ದೀರಿ, ಆ ಭಾಗ್ಯಶಾಲಿ ಯಾರೆಂದು ಹೇಳುವ ಸಮಯ ಬಂದಿದೆ" ಎಂದು ಹೇಳಿದೆ.

ಓರ್ವ ಮಹಿಳೆ ಎದ್ದು ನಿಂತು 'ಅಲ್ಲಾಹನ ಅನುಗ್ರಹದಿಂದ ನನಗೆ ಈ ಸೂಕ್ತ ವನ್ನು ಅನುಸರಿಸುವ ಅವಕಾಶ ದೊರೆಯಿತು. ನನ್ನ ಹಾಗೂ ನನ್ನ ನಾದಿನಿಯ ಸಂಬಂಧ ಸರಿಯಿರಲಿಲ್ಲ. ಆಕೆಯ ಹಲವು ವಿಷಯಗಳು ನನಗೆ ಇಷ್ಟವಿರಲಿಲ್ಲ. ಪದೇ ಪದೇ ನಮ್ಮ ನಡುವೆ ಜಗಳ ಅಗುತ್ತಿತ್ತು. ಆದುದರಿಂದ ಆಕೆಯೊಂದಿಗೆ ಮಾತನಾಡಲಾರೆ ಎಂದು ನಿರ್ಧರಿಸಿದ್ದೆ. ಆಕೆ ಕೂಡ ನನ್ನೊಂದಿಗೆ ಅದೇ ರೀತಿ ವರ್ತಿಸುತ್ತಿದ್ದಳು. ನಿಜ ಹೇಳುವುದಾದರೆ ನಾನು ಆಕೆಯನ್ನು ಬಹಳ ಇಷ್ಟ ಪಡುತ್ತಿದ್ದೆ, ಕಾರಣ ಆಕೆ ನನ್ನ ಪ್ರೀತಿಯ ಪತಿಯ ಸಹೋದರಿ ಹಾಗೂ ನನ್ನ ಮಕ್ಕಳ ಸೋದರತ್ತೆಯಾಗಿದ್ದರು. ಆದರೆ ಪಿಶಾಚಿ ನಮ್ಮ ನಡುವೆ ಬಂದು ನಮ್ಮಿಬ್ಬರನ್ನು ದಾರಿ ತಪ್ಪಿಸುತ್ತಿದ್ದ. ನಮ್ಮ ತಪ್ಪುಗಳನ್ನು ನಮಗೆ ಸುಂದರವಾಗಿ ತೋರಿಸುತ್ತಿದ್ದ. ನಾವು

ಅದರಲ್ಲಿ ಸಂತೃಪ್ತಿಪಟ್ಟುಕೊಳ್ಳುತ್ತಿದ್ದೆವು. ಹೀಗೆ ನಾನು ಈ ಸೂಕ್ತವನ್ನು ಅನುಸರಿಸುವೆ ಎಂದು ಮನದಾಳದಿಂದ ತೀರ್ಮಾನಿಸಿದೆ. ನಂತರ ಪದೇ ಪದೇ ಅದನ್ನು ಓದಿದೆ. ತೀರ್ಮಾನಿಸುವುದು ಸುಲಭವಾದರೂ ಅದರಂತೆ ನಡೆಯುವುದು ಬಹಳ ಕಷ್ಟ ಎಂದು ನನಗೆ ತಿಳಿದಿತ್ತು. ಅದರೊಂದಿಗೆ ನಾದಿನಿ ನನ್ನ ಮಾತನ್ನು ಒಪ್ಪಬಹುದೇ ಎಂಬ ಭಯ ಕೂಡ ಇತ್ತು.

ನಮ್ಮ ನಡುವಿನ ಮನಸ್ತಾಪವನ್ನು ಮುಗಿಸಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದೆ. ಶೀಘ್ರವೇ ಅಲ್ಲಾಹನು ಅದರ ಅವಕಾಶವನ್ನು ಮಾಡಿ ಕೊಟ್ಟ. ಆಕೆ ತನ್ನ ಮೂರನೆಯ ಹೆರಿಗೆಗಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಳೆ ಎಂಬ ಸುದ್ದಿ ನನಗೆ ಸಿಕ್ಕಿತು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಪತಿಯವರಿಗೆ ಒತ್ತಾಯ ಪಡಿಸಿದೆ. ನನ್ನ ಮಾತು ಅವರಿಗೆ ಆಶ್ಚರ್ಯವನ್ನುಂಟು ಮಾಡಿತು. ಅವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ನನ್ನ ಹೃದಯ ಜೋರಾಗಿ ಬಡಿಯುತ್ತಿತ್ತು. ನಗು ಮುಖದಿಂದಲೇ ಬಾಗಿಲು ತೆರೆದು ಒಳಗೆ ಪ್ರವೇಶಿಸಿದೆ. ಹೊಸ ಮಗುವಿನ ಆಗಮನಕ್ಕೆ ಹಾರೈಸುತ್ತ, ಆಕೆಯ ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥಿಸಿದೆ ಆದರೆ ಅಕೆ ನನ್ನನ್ನು ನಿರ್ಲಕ್ಷಿಸಿ ತನ್ನ ಸಹೋದರನೊಂದಿಗೆ ಮಾತನಾಡಿದಳು. ಪತಿಯವರು ಆಶ್ಚರ್ಯದಿಂದ ನೋಡುತ್ತಿದ್ದರು. ನಾನು ನಗುತ್ತಾ ಮಗುವನ್ನು ಕೈಯಲ್ಲಿ ಎತ್ತಿ ಚುಂಬಿಸುತ್ತ, 'ಮಗು ಬಹಳ ಸುಂದರವಾಗಿದೆ. ಅಲ್ಲಾಹನು ಇಚ್ಛಿಸಿದರೆ ಉತ್ತಮ ಗುಣವಂತನೂ ಅಗಬಹುದು' ಎಂದು ಹಾರೈಸಿದೆ.

ನನ್ನ ಮಾತು ಕೇಳಿ ಆಕೆ ಮುಗುಳ್ನಕ್ಕಳು. ಭೇಟಿ ಮುಗಿದು ಕಾರಲ್ಲಿ ಕೂತು ದೊಡ್ಡ ನಿಟ್ಟುಸಿರು ಬಿಟ್ಟದ್ದನ್ನು ಗಮನಿಸಿದ ಪತಿಯವರು ಕಾರಣ ಕೇಳಿದರು. ನಾನು ಸೋಲಲಾರೆ ಎಂದು ನನ್ನಲ್ಲೇ ದೃಢವಾಗಿ ನಿರ್ಧರಿಸಿದೆ. ನನ್ನ ಭಯಕ್ಕಿಂತಲೂ ಮಿಗಿಲಾದುದು ಅಲ್ಲಾಹನ ಗ್ರಂಥ, ಆ ಗ್ರಂಥ ಸತ್ಯವಾಗಿದೆ. ನಾನು ಸದ್ವರ್ತನೆಯನ್ನು ಮಾಡಿದ್ದೇನೆ. ಇನ್ನು ಆಕೆಯನ್ನು 'ಆಪ್ತ ಸ್ನೇಹಿತೆಯನ್ನಾಗಿ' ಮಾಡುವುದು ಉಳಿದಿದೆ. ಈ ಕಾರ್ಯದಲ್ಲಿ ನಾನು ತಾಳ್ಮೆ ವಹಿಸಬೇಕಾಗಿದೆ. ಅದಕ್ಕೆ ಸ್ವಲ್ಪ ಸಮಯ ತಗಲಬಹುದು ಎಂದು ಯೋಚಿಸಿದೆ. ಮನೆಗೆ ಬಂದು ಭಯವನ್ನು ದೂರ ಮಾಡಿ, ಕೆಡುಕನ್ನು ಒಳಿತಿನಿಂದ ದೂರೀಕರಿಸಬೇಕೆಂದು ಯೋಚಿಸುತ್ತ, ನಾದಿನಿಯ ಮಕ್ಕಳಿಗಾಗಿ ಊಟ ತಯಾರಿಸಿ ಆಕೆಯ ಮನೆಗೆ ಹೋಗಿ ಕೊಟ್ಟು ಬಂದೆ. ಅಂದು ಆ ಏಕಾಂತದ ರಾತ್ರಿಯಲ್ಲಿ ನೆಮ್ಮದಿಯಿಂದ ಮಲಗಿದೆ. ಅಲ್ಲಾಹನ ಆಜ್ಞಾನುಸರಣೆ ಮಾಡಿದ ಕಾರಣ ಬಹಳ ನೆಮ್ಮದಿ ಹಾಗೂ ಸಂತೋಷ ಆಗುತ್ತಿತ್ತು. ಅದರ ಪರಿಣಾಮ ಉತ್ತಮ ಆಗುವುದೆಂದು ನಂಬಿದೆ.

ಮರುದಿನ ನಾದಿನಿಯ ಪ್ರತಿಕ್ರಿಯೆಯ ಬಗ್ಗೆ ವಿಚಾರಿಸಿದೆ. ನನ್ನ ವರ್ತನೆಯಿಂದ ಆಕೆ ಬಹಳ ಸಂತುಷ್ಟಳಾಗಿದ್ದಾಳೆ ಮತ್ತು ಆಭಾರಿಯೂ ಆಗಿದ್ದಾಳೆಂದು ತಿಳಿದು ಬಂತು. ಆಕೆಯ ಮಕ್ಕಳೊಂದಿಗೆ ನಾನು ಮಾಡಿದ ವ್ಯವಹಾರ ಆಕೆಯ ಮೇಲೆ ಉತ್ತಮ ಪರಿಣಾಮ ಬೀರಿತ್ತು. ಮರುದಿನ ಪುನಃ ರುಚಿಕರವಾದ ಆಹಾರವನ್ನು ತಯಾರಿಸಿ ನಾದಿನಿಯ ಮನೆಗೆ ಹೋದೆ. ನನ್ನ ಪ್ರಯತ್ನ ಹಾಗೂ ಪರಿಶ್ರಮದ ಪರಿಣಾಮ ಅಲ್ಲಿ ಗೋಚರಿಸುತ್ತಿತ್ತು.

ನಾನು ಆಕೆಯ ಮಕ್ಕಳ ಆರೈಕೆ ಮಾಡತೊಡಗಿದೆ. ಆಕೆಯು ನನ್ನೊಂದಿಗೆ ಪ್ರೀತಿ ವಾತ್ಸಲ್ಯದಿಂದ ಮಾತನಾಡಿದಳು. ತನ್ನ ಮಗುವಿನ ಅಕೀಕಃಕ್ಕೆ ಬರುವಂತೆ ಆಹ್ವಾನಿಸಿದಳು. ನಾನು ಹೋದಾಗ ಬಹಳ ಪ್ರೀತ್ಯಾದರದಿಂದ ನನ್ನನ್ನು ಬರಮಾಡಿ ಕೊಂಡಳು. ಬಹಳ ವರ್ಷಗಳ ನಂತರ ಅಲ್ಲಾಹನ ಕೃಪೆಯಿಂದ ಪುನರ್ಮಿಲನವಾದಂತೆ ಭಾಸವಾಯಿತು. ನಾನು ಆಕೆಯನ್ನು ಹಿಡಿದಪ್ಪಿದೆ. ಅಲ್ಲಾಹನು ನನ್ನ ಈ ಕಾರ್ಯ ವನ್ನು ಸ್ವೀಕರಿಸಿದ್ದನು ಮತ್ತು ನನಗೆ ಬಹುಮಾನವನ್ನು ದಯಪಾಲಿಸಿದ್ದನು. ಪಿಶಾಚ ನಮ್ಮ ನಡುವೆ ತಪ್ಪು ಕಲ್ಪನೆಯನ್ನು ಹುಟ್ಟಿಸಿದ್ದ. ಈ ಘಟನೆಯ ನಂತರ, ನನಗೆ ನನ್ನ ನಾದಿನಿ ಎಲ್ಲರಿಗಿಂತ ಮಿಗಿಲಾಗಿ ಪ್ರಿಯಳಾದಳು. ಆತ್ಮೀಯ ಸಹೋದರಿಯರೇ ಕುರ್‌ಆನಿನ ಬೋಧನೆ ಬಹಳ ಪ್ರಭಾವಶಾಲಿ ಹಾಗೂ ಯುಕ್ತಿಯಿಂದ ಕೂಡಿದೆ ಮಾನವನ ಜೀವನ ಅಲ್ಲಾಹನ ವಿಧೇಯತೆಯಿಂದ ಕೂಡಿದಾಗ ಅತಿ ದೊಡ್ಡ ಬದಲಾವಣೆಯಾಗುವುದರಲ್ಲಿ ಸಂದೇಹವಿಲ್ಲ.

ಸಹೋದರಿ ತನ್ನ ಅನುಭವವನ್ನು ಹಂಚಿದ ನಂತರ ನಾನು ಆಕೆಯೊಂದಿಗೆ ನಿಮ್ಮ ಮುಂದೆ ಒಂದು ಧ್ಯೇಯವಿತ್ತು, ಅಂದರೆ ಅಲ್ಲಾಹನ ಸಂಪ್ರೀತಿಯ ಗುರಿ ಆದ ಕಾರಣ ಮೊದಲ ಹೆಜ್ಜೆ ಇಡಲು ಸುಲಭವಾಯಿತು. ಆ ಹೆಜ್ಜೆ ನಿಮ್ಮಲ್ಲಿ ಬದಲಾವಣೆ ಉಂಟುಮಾಡಿತು. ಪವಿತ್ರ ಕುರ್‌ಆನಿನ ಮೂಲಕ ನಿಮ್ಮ ಗುರಿಯನ್ನು ತಲುಪಲು ನಿಮಗೆ ಸಾಧ್ಯವಾಯಿತು. ನೀವು ಪವಿತ್ರ ಕುರ್‌ಆನನ್ನು ಅನುಸರಿಸುತ್ತ ಅಲ್ಲಾಹನೊಡನೆ ಸಹಾಯ ಯಾಚಿಸಿದಿರಿ, ತಾಳ್ಮೆ ವಹಿಸಿದಿರಿ. ಹೃದಯ ಹಾಗೂ ದೇಹಗಳ ಸೃಷ್ಟಿಕರ್ತನಾದ ಅಲ್ಲಾಹನು ಹೃದಯಗಳನ್ನು ಮೃದುಗೊಳಿಸಿದನು ಮತ್ತು ವೈರತ್ವವನ್ನು ಸ್ನೇಹದೊಂದಿಗೆ ಬದಲಾಯಿಸಿದನು ಎಂದು ಹೇಳಿದೆ.

ಇನ್ನೋರ್ವ ಮಹಿಳೆ ಎದ್ದು ನಿಂತು "ನಾನು ನನ್ನ ಘಟನೆಯನ್ನು ಹೇಳ ಬಯಸುತ್ತೇನೆ, ನಿಮ್ಮಲ್ಲಿ ನನ್ನ ಮಾತು ಕೇಳುವಷ್ಟು ಸಮಯ ಇದೆಯೇ? ನನಗೆ ಸ್ವತಃ ಈ ಪ್ರಯೋಗದ ಮೇಲೆ ವಿಶ್ವಾಸವಿರಲಿಲ್ಲ. ಆದರೂ ಇದು ವಾಸ್ತವವಾಗಿದೆ." ನಾನು ಆಕೆಗೆ ತನ್ನ ಘಟನೆ ತಿಳಿಸಲು ಅನುಮತಿಸಿದೆ. ಆಕೆ ಹೇಳಿದಳು:

ನನ್ನ ನೆರೆಕರೆಯಲ್ಲಿ ಓರ್ವ ಮಹಿಳೆ ಇದ್ದರು. ನಾನು ಆಕೆಯನ್ನು ಬಹಳ ಷ್ಟ ಪಡುತ್ತಿದ್ದೆ ಹಾಗೂ ಆಕೆ ನನ್ನ ಸ್ನೇಹಿತೆಯೂ ಅಗಿದ್ದರು. ನನ್ನ ತವರೂರು ಾಗೂ ಸಂಬಂಧಿಕರು ಬಹಳ ದೂರದೂರಿನಲ್ಲಿರುವ ಕಾರಣ ಹೆಚ್ಚಿನ ಸಮಯವನ್ನು ಾನು ಆಕೆಯೊಂದಿಗೆ ಕಳೆಯುತ್ತಿದ್ದೆ. ನನ್ನ ಹಲವು ರಹಸ್ಯಗಳನ್ನು ಆಕೆಯೊಂದಿಗೆ ಂಚಿದ್ದೆ. ಹಲವು ವರ್ಷಗಳ ಪ್ರೀತಿ ಬಾಂಧವ್ಯದ ನಂತರ ಆಕೆಯ ವರ್ತನೆ ನ್ನೊಂದಿಗೆ ಕ್ರಮೇಣ ಬದಲಾಗತೊಡಗಿತು. ನನ್ನ ಮೇಲೆ ಆಕೆಗೆ ಅಪನಂಬಿಕೆ ುಂಟಾಯಿತು. ನನ್ನಿಂದ ದೂರ ಉಳಿಯಲು ಪ್ರಾರಂಭಿಸಿದಳು. ನಾನು ಹೇಳದ ಾತುಗಳನ್ನು ನಾನು ಹೇಳಿದ್ದೇನೆ ಎಂಬ ಅಪವಾದ ಮಾಡಲಾರಂಭಿಸಿದಳು. ಕೆಯ ಇಂತಹ ಕೆಟ್ಟ ಕೃತ್ಯಗಳನ್ನು ನಿರ್ಲಕ್ಷಿಸಿ ಆಕೆಯನ್ನು ಕ್ಷಮಿಸುವ ಹಲವು ಯತ್ನಗಳನ್ನು ಮಾಡಿದೆ. ಅದರೆ ಆಕೆ ಪಿಶಾಚಿಯ ವಂಚನೆಯ ಹಿಡಿತದಲ್ಲಿ ಂದಿಯಾಗಿದ್ದಳು. ನನ್ನಿಂದ ಸಂಬಂಧ ಕಡಿದುಕೊಂಡಳು. ಮಾತನಾಡುವುದು, ುನೆಗೆ ಬರುವುದು ಎಲ್ಲವೂ ಸ್ಥಗಿತಗೊಂಡಿತು. ಆಕೆಯಿಂದ ದೂರ ಇರುವಂತೆ ಾಗೂ ನಮ್ಮ ಸ್ನೇಹದ ಸಂಬಂಧ ಕಡಿಯುವಂತೆ ನನ್ನ ಸ್ವಾಭಿಮಾನ ಪ್ರೇರೇಪಿಸಿತು. ದೇ ಸಮಯ ನಾನು ಪವಿತ್ರ ಕುರ್‌ಆನಿನ ತರಗತಿಗೆ ಬರಲು ಪ್ರಾರಂಭಿಸಿದೆ. ಾಮ್ಮೀಮ್ ಸಜ್ದಾ' ಅಧ್ಯಾಯದ ಈ ಸೂಕ್ತವನ್ನು ಅನುಸರಿಸುವ ನಿರ್ಧಾರ ಾಡಿದೆ. ಈ ಸೂಕ್ತದ ವ್ಯಾಖ್ಯಾನ ಆಗುತ್ತಿದ್ದಾಗ 'ನಾನು ಪ್ರಯತ್ನ ಪಟ್ಟೆ ಆದರೆ ನ್ನ ಪ್ರಯತ್ನ ನಿಷ್ಫಲವಾಯಿತು' ಎಂದು ಯೋಚಿಸುತ್ತಿದ್ದೆ. ಅದೇ ಸಮಯ ನಮ್ಮ ಕ್ಷಕಿ ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಓದಿದರು.

وَمَا يُلَقَّاهَا إِلَّا الَّذِينَ صَبَرُوا "ಈ ಗುಣ ವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಭ್ಯವಾಗುವುದಿಲ್ಲ" (ಪವಿತ್ರ ಕುರ್‌ಆನ್: 41: 35) ಎಂದು ನನ್ನ ಹೃದಯ ಚೀರಿತು. ರ್‌ಆನ್ ತರಗತಿಯ ನಂತರ ಮಸೀದಿಯಿಂದ ಹೊರಗೆ ಬಂದ ನಂತರ, ನಾನು ನ್ನ ಪ್ರಯತ್ನವನ್ನು ಕೈಬಿಡಲಿಲ್ಲ. ನನ್ನ ನಿರ್ಧಾರ ಈಡೇರುವ ವರಗೆ ನಾನು ತಾಳ್ಮೆ ಹಿಸುವೆ ಎಂದು ದೃಢ ನಿರ್ಧಾರ ಮಾಡಿದೆ. ನನ್ನ ಈ ಸ್ನೇಹಿತೆ 4ನೆಯ ಂತಸ್ತಿನಲ್ಲಿ ವಾಸಿಸುತ್ತಿದ್ದಳು. ನಾನು ಮೆಟ್ಟಲು ಹತ್ತ ತೊಡಗಿದೆ. ಪ್ರತಿಯೊಂದು ಜ್ಜೆಯಲ್ಲಿ 'ನೀನು ಸೋಲುತ್ತಿ' ಎಂದು ಪಿಶಾಚಿ ಪಿಸುಗುಡುತ್ತಿದ್ದ. ಆದರೆ ನನ್ನ ಢ ನಿರ್ಧಾರವು ನನ್ನನ್ನು ಪಿಶಾಚಿಯ ಬಲೆಯಲ್ಲಿ ಸಿಲುಕದಂತೆ ತಡೆಯಿತು. ನಾನು ುಟ್ಟಲುಗಳನ್ನು ಏರುತ್ತ, ಸ್ನೇಹಿತೆ ಮನೆಯ ಬಾಗಿಲ ಮುಂದೆ ನಿಂತೆ. ನಾನು ಕೆಗೆಂದು ತಂದ ಉಡುಗೊರೆಯ ಕಡೆಗೆ ಒಮ್ಮೆ ನೋಡಿದೆ. ಕರೆಗಂಟೆಯಲ್ಲಿ ರಳಿಟ್ಟು 'ಎರಡರಲ್ಲಿ ಒಂದು ಆಗಬಹುದು' ಎಂದು ಯೋಚಿಸಿದೆ. ಯಾವ ರಿಣಾಮವಾದರೂ ಸರಿ, ಅದನ್ನು ಎದುರಿಸುವ ನಿರ್ಧಾರ ಮಾಡಿದೆ. ಈವತ್ತು

ಈ ನೆರೆಯಾಕೆಯ ಬಾಗಿಲ ಮುಂದೆ ನಿಂತಿರುವುದು ಆಕೆಯನ್ನು ಸಂತೋಷಪಡಿಸಲಿಕ್ಕಲ್ಲ ಬದಲಾಗಿ ಅಲ್ಲಾಹನಿಗಾಗಿ, ಕೇವಲ ಅಲ್ಲಾಹನ ಸಂಪ್ರೀತಿ ಗಳಿಸುವುದು ನನ ಉದ್ದೇಶವಾಗಿತ್ತು.

ಬಾಗಿಲು ತೆರೆಯಿತು. ಆಕೆ ನನ್ನೆದುರು ನಿಂತಿದ್ದಳು. ನಾನು ಸಂಪೂರ್ಣ ಭರವಸೆ ಮತ್ತು ಪ್ರೀತ್ಯಾದರದಿಂದ ಆಕೆಯೊಂದಿಗೆ, 'ಒಳಗೆ ಬರುವ ಅನುಮ ಇದೆಯೇ?' ಎಂದು ಕೇಳಿದೆ. ಆಕೆ ತಕ್ಷಣ ಬಾಗಿಲನ್ನು ತೆರೆದು ನನ್ನನ್ನು ಒಳ ಕರೆದುಕೊಂಡು ಹೋದಳು. ಇಷ್ಟು ದೀರ್ಘ ಕಾಲದ ನಂತರ ನಾನು ಆಕೆಯನ ಭೇಟಿಯಾಗಲು ಹೋಗುವೆನೆಂದು ಆಕೆ ಯೋಚಿಸಿರಲಿಲ್ಲ. ನಾವು ಮೊದಲಿನಂ ಮಾತನಾಡಲು ಪ್ರಾರಂಭಿಸಿದೆವು. ಹಲವು ವಿಷಯಗಳ ಬಗ್ಗೆ ಚರ್ಚಿಸಿದೆವು. ನನ ನನ್ನ ಸ್ನೇಹಿತೆಯ ಮನೆಯ ಬದಲು ಅಲ್ಲಾಹನ ತೋಟದಲ್ಲಿ ಇರುವಂತೆ ಭಾಸವ ಯಿತು. ಅಲ್ಲಾಹನ ಒಂದು ಸೂಕ್ತವನ್ನು ಅನುಸರಿಸಿದ ಕಾರಣ ನನ್ನ ಆತ್ಮ ಹಾಗು ದೇಹವನ್ನು ಕತ್ತಲೆಯಿಂದ ಬೆಳಕಿನೆಡೆಗೆ ತಂದಿದ್ದೆ. ಈಗ ಆಕೆ ನನ್ನ ಆತ್ಮೀಯ ಸ್ನೇಹಿತೆಯಾದಳು. ನಾನು ತಾಳ್ಮೆವಹಿಸಿದ್ದೆ. ತಾಳ್ಮೆಯನ್ನು ಕೈಬಿಟ್ಟಿರಲಿಲ್ಲ. ಕೆಡಕನ ಒಳಿತಿನಿಂದ ಬದಲಾಯಿಸಿದೆ. ನಾನು ಹತಾಶಳಾಗಿರಲಿಲ್ಲ. ನಾನು ನನ್ನ ಭಾಗ್ಯ ಸಂತೋಷಪಟ್ಟೆ. ನನ್ನ ಸಂತೋಷವನ್ನು ವ್ಯಕ್ತಪಡಿಸಲು ಪದಗಳೇ ಸಿಗುತ್ತಿಲ್ಲ. ನಾನ ನಿಮ್ಮೆಲ್ಲರಿಗೂ ಅಭಾರಿಯಾಗಿದ್ದೇನೆ.

ಆ ಸಹೋದರಿಯನ್ನು ಉದ್ದೇಶಿಸಿ ನಾನು "ನೀವು ನನ್ನ ಆಭಾರಿಯಾಗಬೇಡ ನಿಮ್ಮನ್ನು ನಿಮ್ಮ ಚಿತ್ತದ ಗುಲಾಮಳನ್ನಾಗಿ ಮಾಡದೆ ನಿಮ್ಮನ್ನು ರಕ್ಷಿಸಿದ ಜಗದೊಡೆಯನ ಸೃಷ್ಟಿಕರ್ತನೂ ಆದ ಅಲ್ಲಾಹನನ್ನು ಮನದಾಳದಿಂದ ಸ್ತುತಿಸಿರಿ. ನಮ್ಮನ್ನು ಇನ್ನೊಬ್ಬ ಗುಲಾಮರಾಗದಂತೆ ರಕ್ಷಿಸಿದ ಹಾಗೂ ಇನ್ನೊಬ್ಬರ ಆಸೆ ಆಕಾಂಕ್ಷೆಗಳ ಎದು ತಲೆ ಬಾಗದಂತೆ ತಡೆದ ಹಾಗೂ ತನ್ನ ಪವಿತ್ರ ಬೋಧನೆಯಿಂದ ಮಾರ್ಗದರ್ಶ ಮಾಡಿದ ಆ ಅಲ್ಲಾಹನನ್ನು ಸ್ತುತಿಸಿರಿ. ಪವಿತ್ರ ಕುರ್‌ಆನನ್ನು ಅನುಸರಿಸುವಂ ಅಲ್ಲಾಹನು ಅನುಗ್ರಹಿಸಿದ ಮನುಷ್ಯನಿಗೆ ಯಾವುದು ಒಳಿತು ಎಂಬ ಬಗ್ಗೆ ಯಾ ಕೈಯಲ್ಲಿ ನಮ್ಮ ಪ್ರಾಣವಿದೆಯೋ ಆತನು ಮಾತ್ರ ಅರಿತಿರುವನು. ಮನು ಜನಾಂಗದ ಕಲ್ಯಾಣಕ್ಕಾಗಿ ಪವಿತ್ರ ಕುರ್‌ಆನನ್ನು ತನ್ನ ಕೊನೆಯ ಪ್ರವಾದಿಂ ಮುಖಾಂತರ ಲೋಕಕ್ಕೆ ಕಳುಹಿಸಿದ ಆ ಮಹಾನ್ ಒಡೆಯನಾದ ಅಲ್ಲಾಹನಿ ಅನಂತಾನಂತ ಸ್ತುತಿಯನ್ನು ಅರ್ಪಿಸಬೇಕಾಗಿದೆ.

❖ ❖ ❖ ❖

# ದ್ವೇಷ ಮತ್ತು ತಿರಸ್ಕಾರ

ಕುರ್‌ಆನ್ ತರಗತಿಗೆ ಬರುತ್ತಿರುವ ಓರ್ವ ಮಹಿಳೆ ಒಮ್ಮೆ ನನ್ನ ಮನೆಗೆ ೨ಗಮಿಸಿದರು. ಆಕೆಗೆ ತನ್ನಲ್ಲಿರುವ ಒಂದು ಕೊರತೆಯ ಬಗ್ಗೆ ಚರ್ಚಿಸಬೇಕಾಗಿತ್ತು. ುಸೀದಿಯಲ್ಲಿ ನಿಮ್ಮ ಪ್ರವಚನ ಕೇಳುವಾಗ ನಾನು ಆಕಾಶದಲ್ಲಿ ಹಾರುತ್ತಿರುವ ಪಕ್ಷಿ ುಂತೆ ಭಾಸವಾಗುತ್ತದೆ. ನಿಮ್ಮ ಮಾತುಗಳಿಂದ ನನ್ನ ಮನಸ್ಸು ಮತ್ತು ಹೃದಯಕ್ಕೆ ಹಳ ನೆಮ್ಮದಿ ಉಂಟಾಗುತ್ತದೆ. ಆದರೆ ಮನೆಗೆ ಬಂದ ನಂತರ ಜೀವನದ ಕಹಿ ನುಭವಗಳ ಕಾರಣ ನನ್ನ ನಡೆ–ನುಡಿ ಎರಡರಲ್ಲಿ ಬಹಳ ವ್ಯತ್ಯಾಸ ಉಂಟಾಗುತ್ತದೆ. ಷ್ಟು ಹೇಳಿ ಅವರು ಬಿಕ್ಕಿ ಬಿಕ್ಕಿ ಅಳತೊಡಗಿದರು. ಈ ಘಟನೆಯು ನನಗೆ ಹೊಸದಾ ರಲಿಲ್ಲ. ಬಹಳಷ್ಟು ಮಹಿಳೆಯರು ತನ್ನ ದುಃಖವನ್ನು ತೋಡಿಕೊಳ್ಳಲು ನನ್ನಲ್ಲಿಗೆ ುರುತ್ತಿದ್ದರು. ಆದರೆ ಕೆಲವು ಮಹಿಳೆಯರು ಇದಕ್ಕೆ ವ್ಯತಿರಿಕ್ತವಾಗಿದ್ದಾರೆ. ಅವರ ತಿಯಂದಿರು ಅವರಿಗೆ ಪ್ರವಚನ ತರಗತಿಗೆ ಹೋಗಲು ಬಿಡುತ್ತಿರಲಿಲ್ಲ. ಕಾರಣ, ಈ ಪ್ರವಚನದಿಂದ ಅವರ ಜೀವನದ ಮೇಲೆ ಯಾವುದೇ ರೀತಿಯ ಪರಿಣಾಮ ೀರುತ್ತಿರಲಿಲ್ಲ. ಅವರ ಮಾತು ಕೃತಿಯಲ್ಲಿ ಹೊಂದಾಣಿಕೆ ಇರಲಿಲ್ಲ. ಅಳುತ್ತಿದ್ದ ಆ ಹೋದರಿಯನ್ನು ಸಮಾಧಾನಪಡಿಸುತ್ತಾ ಆಕೆಯ ಸಮಸ್ಯೆಯ ಬಗ್ಗೆ ಕೇಳಿದೆ.

"ನನ್ನ ಪತಿ ಬಹಳ ಕೋಪಿಷ್ಠ. ಮಾತು ಮಾತಿಗೆ ಉದ್ರೇಕಗೊಳ್ಳುತ್ತಾರೆ. ಅವರ ಈ ಸ್ವಭಾವದ ಕಾರಣ ನಾನು ಕೂಡ ವಿವಶಳಾಗಿ ಪ್ರತ್ಯುತ್ತರಿಸುತ್ತೇನೆ. ಅವರೂ ಅದೇ ರೀತಿ ಉತ್ತರಿಸುತ್ತಾರೆ. ನಾನು ಅವರನ್ನು ದ್ವೇಷಿಸುತ್ತೇನೆ ಮತ್ತು ಅವರ ಬಗ್ಗೆ ುನಸ್ಸಲ್ಲಿ ತಿರಸ್ಕಾರವೂ ಇದೆ. ಅದರೆ ನನಗೆ ಈ ವರ್ತನೆಯ ಬಗ್ಗೆ ಪಶ್ಚಾತ್ತಾಪವೂ ದೆ. ಇದರ ಪರಿಣಾಮ ಬಹಳ ಕೆಟ್ಟದಾಗಿದೆ ಎಂಬ ಪ್ರಜ್ಞೆ ನನಗೆ ಸತಾಯಿಸುತ್ತದೆ."

ನಾನು ನಗುತ್ತ "ನೀವು ಪವಿತ್ರ ಕುರ್‌ಆನಿನೆಡೆಗೆ ಮರಳಿ ಮತ್ತು ಅದರಂತೆ ಡೆಯಿರಿ, ಅದೇ ಇದಕ್ಕೆ ಚಿಕಿತ್ಸೆ" ಎಂದು ಹೇಳಿದೆ. "ಈ ಕಾರಣಕ್ಕಾಗಿಯೇ ನಾನು ಮ್ಮನ್ನು ಭೇಟಿಯಾಗಲು ಬಂದೆ" ಆಕೆ ತನ್ನ ಕಣ್ಣೀರನ್ನು ಒರಸುತ್ತಾ ಹೊಸ ರವಸೆಯೊಂದಿಗೆ ನನ್ನ ಕಡೆಗೆ ನೋಡಿದರು. "ಸುಬ್ಹಾನಲ್ಲಾಹ್! ನಾವು ಅಲ್ಲಾಹನ

ಗ್ರಂಥವನ್ನು ಅರಿತು, ಅದರಂತೆ ತಮ್ಮ ಜೀವನವನ್ನು ಸಾಗಿಸಬೇಕೆಂಬ ಕಾರಣ ಅಲ್ಲಾಹನು ತನ್ನ ಗ್ರಂಥವನ್ನು ಅವತೀರ್ಣಗೊಳಿಸಿರುವನು. ಮೊದಲನೆಯದಾಗಿ ನಾವು ನಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕು, ನಿಮ್ಮ ಸ್ವರ್ಗದ ಕೀಲಿಕೈ ನಿಮ್ಮ ಪತಿಯ ಕೈಯಲ್ಲಿದೆ ಎಂದು ನೀವು ನಂಬುತ್ತೀರಿ ತಾನೇ? ಎಲ್ಲಿಯ ವರೆಗೆ ನಿಮ್ಮ ಪ ಆ ಕೀಲಿಕೈಯನ್ನು ನಿಮ್ಮ ಕೈಯಲ್ಲಿಡುವುದಿಲ್ಲವೋ, ಅಲ್ಲಿಯ ವರೆಗೆ ನೀವು ಸ್ವರ್ಗ ಪ್ರವೇಶಿಸಲಾರಿರಿ" ಎಂದು ಹೇಳಿದೆ. "ಹೌದು! ಈ ಯೋಚನೆಯೇ ನನ್ನನ ಚಿಂತೆಗೀಡು ಮಾಡುತ್ತಿರುವುದು" ಎಂದು ಆಕೆ ಉತ್ತರಿಸಿದಳು. "ನಿಮ್ಮ ಪತಿಯ ಕೈಯಿಂದ ಆ ಕೀಲಿಕೈಯನ್ನು ಪಡೆಯದೆ ಇದ್ದರೆ ನೀವು ಸ್ವರ್ಗ ಪ್ರವೇಶಿಸಲಾರಿ ಎಂದು ನೀವು ಭಾವಿಸುತ್ತೀರಿ ಎಂದಾದರೆ, ಆತ್ಮೀಯ ಸಹೋದರಿ! ನಿಮ್ಮ ಪ ನಿಮ್ಮ ವೈರಿಯಲ್ಲ, ಅವರು ನಿಮ್ಮ ಆತ್ಮೀಯ ಮಿತ್ರನಾಗಿದ್ದಾರೆ. ಅವರು ನಿಮ್ಮಿಂ ಸಂತುಷ್ಟನಾದರೆ ಅಲ್ಲಾಹನ ಸಂಪ್ರೀತಿ ಗಳಿಸುವಲ್ಲಿ ಸಂದೇಹವಿಲ್ಲ, ಅಲ್ಲಾಹನ ದಯ ಪಡೆಯುವ ರೀತಿ ಇದೇ ಅಗಿದೆ" ಎಂದು ವಿವರಿಸಿದೆ.

"ಬನ್ನಿ, ನಾವು ಪವಿತ್ರ ಕುರ್‌ಆನನ್ನು ಅನುಸರಿಸಿ ನಿಮ್ಮ ಪತಿಯ ಬಗ್ಗೆ ನಿಮ ಮನಸ್ಸಿನಲ್ಲಿರುವ ಮತ್ಸರಕ್ಕೆ ಚಿಕಿತ್ಸೆ ಮಾಡುವ, ಬದಲಾಗಿ ಯಾರ ಮನಸ್ಸಿನಲ್ಲಿ ತ ಪತಿ, ಸಹೋದರ-ಸಹೋದರಿಯರು, ನೆರೆಕರೆಯವರು, ಮಕ್ಕಳ ಬಗ್ಗೆ ಮನಸ್ಸ ದ್ವೇಷ ಹಾಗೂ ತಿರಸ್ಕಾರ ಭಾವನೆ ಇದೆಯೋ ಅವರೆಲ್ಲ ಪವಿತ್ರ ಕುರ್‌ಆನಿನ ಮೂಲ ತಮ್ಮ ಚಿಕಿತ್ಸೆಯನ್ನು ಮಾಡಿಕೊಳ್ಳಲಿ. ಒಂದು ವೇಳೆ ನಿಮ್ಮ ಪತಿ ನಿಮ್ಮೊಡನೆ ಕೆಟ್ಟದಾ ವರ್ತಿಸಿದರೆ ನೀವು ಪತಿಯೊಂದಿಗೆ ಸದ್ವರ್ತನೆ ಮಾಡಿರಿ. ಅವರು ಮನೆಯಿಂ ಹೊರಡುವಾಗ ಜಗಳಾಡುತ್ತ ಹೋದರೆ ನೀವು ಚಿಂತಿಸಬೇಡಿ. ಪಿಶಾಚಿ ದುರಾಲೋಚ ಗಳನ್ನು ತುಂಬುತ್ತಾನೆ. ಅದರೆ ನೀವು ಭಯ ಪಡದೆ ಪತಿಯ ದುರ್ವರ್ತನೆಯ ಬದಲು ಸದ್ವರ್ತನೆ ಮಾಡಿ. ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಅನುಸರಿಸಿ

ادْفَعْ بِالَّتِي هِيَ أَحْسَنُ فَإِذَا الَّذِي بَيْنَكَ وَبَيْنَهُ عَدَاوَةٌ كَأَنَّهُ وَلِيٌّ حَمِيمٌ

"ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ, ನಿಮ್ಮೊಂದಿ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ.

**(ಪವಿತ್ರ ಕುರ್‌ಆನ್: 41: 3**

ನೀವು ಅಲ್ಲಾಹನ ಹೆಸರಿನೊಂದಿಗೆ ಅಲ್ಲಾಹನ ಆಜ್ಞಾಪಾಲನೆಗೆ ಸನ್ನದ್ಧರಾಗಿ ನಿಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ ಪತಿಯನ್ನು ಸಂತೋಷ ಪಡಿಸು ಅತ್ಯುತ್ತಮ ಉಪಾಯಗಳನ್ನು ಕಂಡು ಹಿಡಿಯಿರಿ. ಪತಿಯವರು ಮನೆಗೆ ಬರುವಾ ನಗುಮುಖದಿಂದ ಸ್ವಾಗತಿಸಿರಿ. ಅವರ ಇಷ್ಟದ ಆಹಾರವನ್ನು ಮಾಡಿ. ಉತ್ತಮ

ವಸ್ತ್ರಧಾರಣೆ ಹಾಗೂ ಶೃಂಗಾರದಿಂದ ಅವರ ಆಗಮನಕ್ಕಾಗಿ ಕಾಯುತ್ತಿರಿ. ಮಾತು ಮಾತಿಗೆ ಜಗಳಾಡದಂತೆ ಜಾಗ್ರತೆ ವಹಿಸಿ. ನಗುನಗುತ್ತಾ ಮಾತನಾಡಿಸಿರಿ. ಅವರ ಯಾವುದಾದರೊಂದು ಮಾತು ನಿಮ್ಮನ್ನು ಉದ್ರೇಕಿಸಿದರೂ ಅದನ್ನು ತೋರ್ಪಡಿಸದೆ, ಸಂದರ್ಭ ನೋಡಿ ನಿಮ್ಮ ಮಾತನ್ನು ಹೇಳಿರಿ. ಈ ಸೂಕ್ತವನ್ನು ಅನುಸರಿಸಿದ ನಂತರ ಆಗುವ ಪರಿಣಾಮವನ್ನು ನೀವು ಸ್ವತಃ ಅನುಭವಿಸುವಿರಿ. ಹಲವು ಮಹಿಳೆಯರು ಈ ಸೂಕ್ತವನ್ನು ಅನುಸರಿಸಿ ಸಫಲತೆಯನ್ನು ಪಡೆದಿದ್ದಾರೆ. ನೀವೂ ಪಡೆಯಿರಿ. ಹಲವರು ಈ ಸೂಕ್ತವನ್ನು ಓದುತ್ತಾರೆ. ಆದರೆ, ಅನುಸರಿಸುವವರು ಬಹಳ ವಿರಳ."

ನನ್ನ ಈ ಉಪದೇಶವನ್ನು ಕೇಳಿ ಆಕೆ, "ಓ ಅಲ್ಲಾಹನೇ! ಇದು ಹೇಳುವಷ್ಟು ಸುಲಭವಲ್ಲ" ಎಂದು ಉದ್ಗರಿಸಿದರು. ನಾನು ಹೇಳಿದೆ: ನಿಮ್ಮ ಈ ಮಾತು ಕಿಂಚಿತ್ತೂ ಸರಿಯಲ್ಲ. ಇದು ಪಿಶಾಚಿಯ ಪ್ರೇರಣೆ. ಪವಿತ್ರ ಕುರ್‌ಆನ್ ಜನರ ಸ್ವಭಾವ ಹಾಗೂ ಮನೋಭಾವದಂತೆ ದಾರಿ ತೋರಿಸುತ್ತದೆ. ಅಲ್ಲಾಹನು ತನ್ನ ಸೃಷ್ಟಿಗಳನ್ನು ಬಹಳ ಉತ್ತಮ ರೀತಿಯಲ್ಲಿ ಅರಿಯುತ್ತಾನೆ. ಆದುದರಿಂದ ಪವಿತ್ರ ಗ್ರಂಥವನ್ನು ಅನುಸರಿಸುವುದು ಕಷ್ಟದಾಯಕ ಎಂದು ಹೇಳುವುದು ಪವಿತ್ರ ಗ್ರಂಥದ ಕಾರ್ಯಕುಶಲತೆ ಮತ್ತು ಯುಕ್ತಿಗೆ ವಿರುದ್ಧವಾಗಿದೆ. ಒಂದು ವೇಳೆ ನಿಮ್ಮ ಮನಸ್ಸಿನಲ್ಲಿ ಸಂದೇಹವುಂಟಾದರೆ, ತಕ್ಷಣ ಈ ಸೂಕ್ತವನ್ನು ಅನುಸರಿಸಿರಿ.

وَإِمَّا يَنزَغَنَّكَ مِنَ الشَّيْطَانِ نَزْغٌ فَاسْتَعِذْ بِاللَّهِ ۖ إِنَّهُ هُوَ السَّمِيعُ الْعَلِيمُ

"ನಿಮಗೆ ಶೈತಾನನ ಕಡೆಯಿಂದೇನಾದರೂ ಪ್ರಚೋದನೆಯುಂಟಾದರೆ ನೀವು ಅಲ್ಲಾಹನ ಅಭಯವನ್ನು ಯಾಚಿಸಿರಿ, ನಿಶ್ಚಯವಾಗಿಯೂ ಅವನು ಸಕಲವನ್ನೂ ಆಲಿಸುತ್ತಾನೆ ಮತ್ತು ಸಕಲವನ್ನೂ ಅರಿತಿದ್ದಾನೆ." **(ಪವಿತ್ರ ಕುರ್‌ಆನ್: 41: 36)**

ನಿಮ್ಮ ಮಾತುಗಳನ್ನು ಆಲಿಸುವ, ನೋಡುವ ಹಾಗೂ ಅರಿಯುವ ಆ ಸೃಷ್ಟಿಕರ್ತನ ಅಭಯವನ್ನು ಯಾಚಿಸಿದರೆ ಖಂಡಿತವಾಗಿಯೂ ಪೈಶಾಚಿಕ ದುಷ್ಪ್ರೇರಣೆಯಿಂದ ರಕ್ಷಿಸಲ್ಪಡುವಿರಿ. ನಿಮ್ಮ ಹೊರತು ಹಲವರು ಈ ಸೂಕ್ತವನ್ನು ಅನುಸರಿಸಿದ್ದಾರೆ. ಒಂದು ವೇಳೆ ನಿಮಗೆ ಅಲ್ಲಾಹನ ಈ ಆಜ್ಞೆಯನ್ನು ಅನುಸರಿಸುವಲ್ಲಿ ಉದಾಸೀನತೆ ಉಂಟಾಗುತ್ತಿದ್ದರೆ, ಈ ಸೂಕ್ತವನ್ನು ಓದಿರಿ.

وَقُل رَّبِّ أَعُوذُ بِكَ مِنْ هَمَزَاتِ الشَّيَاطِينِ ﴿٩٧﴾ وَأَعُوذُ بِكَ رَبِّ أَن يَحْضُرُونِ ﴿٩٨﴾

"ನನ್ನ ಪ್ರಭೂ, ನಾನು ಶೈತಾನರ ದುಷ್ಪ್ರೇರಣೆಗಳಿಂದ ನಿನ್ನ ಅಭಯ ಯಾಚಿಸುತ್ತೇನೆ. ನನ್ನ ಪ್ರಭೂ, ಅವರು ನನ್ನ ಬಳಿ ಸುಳಿಯುವುದರಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ." **(ಪವಿತ್ರ ಕುರ್‌ಆನ್: 23: 97–98)**

ಪವಿತ್ರ ಕುರ್‌ಆನನ್ನು ಅನುಸರಿಸಲು ಎರಡು ವಿಷಯಗಳ ಅಗತ್ಯವಿದೆ ಎಂಬ ಮಾತು ಮರೆಯಬೇಡಿ. ಒಂದು ತಾಳ್ಮೆ, ಮತ್ತೊಂದು ಸ್ಥೈರ್ಯ, ಅದರೊಂದಿಗೆ ಅಲ್ಲಾಹನ ಮೇಲೆ ಅಚಲವಾದ ಭರವಸೆ. ಈ ಗುಣಗಳಿದ್ದವರಿಗೆ ಅಲ್ಲಾಹನ ಆಜ್ಞೆಗಳನ್ನು ಅನುಸರಿಸಲು ಕಷ್ಟವಾಗುವುದಿಲ್ಲ.

وَمَا يُلَقّٰهَآ اِلَّا الَّذِيْنَ صَبَرُوْا ۚ وَمَا يُلَقّٰهَآ اِلَّا ذُوْ حَظٍّ عَظِيْمٍ

"ಈ ಗುಣ ವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ.'

(ಪವಿತ್ರ ಕುರ್‌ಆನ್: 41: 35

"ಓ ರಹ್ಮಾನನೇ (ಕರುಣಾಳುವೇ) ನನಗೆ ನೆರವಾಗು" ಎಂದು ಆಕೆ ಪ್ರಾರ್ಥಿಸಿದಳು. "ನಿಮಗೆ ಅಲ್ಲಾಹನ ಸಹಾಯ ದೊರಕಬೇಕೆಂದಾದರೆ ನೀವು ಪತಿಯನ್ನು ಕ್ಷಮಿಸಿ. ಅವರು ಕೋಪದಲ್ಲಿರದ ಸಮಯ ನಿಮ್ಮ ಮೇಲೆ ಮಾಡಿದ ಉಪಕಾರಗಳ ಬಗ್ಗೆ ಮತ್ತು ಒಳಿತುಗಳ ಬಗ್ಗೆ ಯೋಚಿಸಿ. ನೀವು ನಿಮ್ಮ ಕೋಪವನ್ನು ನಿಯಂತ್ರಣದಲ್ಲಿಡಿ ಯಾಕೆಂದರೆ ಪವಿತ್ರ ಕುರ್‌ಆನಿನಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ ಈ ರೀತಿ ಹೇಳಲಾಗಿದೆ, وَاِذَا مَا غَضِبُوْا هُمْ يَغْفِرُوْنَ "ಕೋಪ ಬಂದರೆ ಅವರು ಕೋಪವನ್ನು ಮನ್ನಿಸುತ್ತಾರೆ." (ಪವಿತ್ರ ಕುರ್‌ಆನ್: 42: 37) ನೀವೂ ಅನೇಕ ತಪ್ಪುಗಳನ್ನು ಮಾಡಿರುತ್ತೀರಿ ಅದನ್ನು ಅಲ್ಲಾಹ್ ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಈಗ ಅತ್ಯುತ್ತಮವಾದ ಒಂದು ಅವಕಾಶ ನಿಮ್ಮ ಮುಂದಿದೆ. ಇದನ್ನು ಅನುಗ್ರಹವೆಂದು ಭಾವಿಸಿ ಇದರಿಂದ ಲಾಭ ಪಡೆಯಿರಿ.

وَلْيَعْفُوْا وَلْيَصْفَحُوْا ۭ اَلَا تُحِبُّوْنَ اَنْ يَّغْفِرَ اللّٰهُ لَكُمْ ۭ

"ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ನೀವು ಮಾಡಿದಂತಹ ಅನೇಕ ತಪ್ಪುಗಳನ್ನು ಅಲ್ಲಾಹನು ಕ್ಷಮಿಸಬೇಕೆಂದು ನೀವು ಬಯಸುವುದಿಲ್ಲವೇ?'

(ಪವಿತ್ರ ಕುರ್‌ಆನ್: 24: 22

ಇಂತಹ ಸಮಯದಲ್ಲಿ ನೀವು ಬಹಳ ಕೋಪದಲ್ಲಿ ಇರುತ್ತೀರೆಂದು ಅಲ್ಲಾಹನಿಗೆ ತಿಳಿದಿದೆ. ನಿಮ್ಮ ನಿಮ್ಮ ಕೋಪವನ್ನು ನೀವು ನಿಯಂತ್ರಿಸಿದಾಗ ಅಲ್ಲಾಹನು ನಿಮ್ಮನ್ನು ಸಜ್ಜನರ ಸಾಲಿನಲ್ಲಿ ಸೇರಿಸುವನು. ನೀವು ನಿಮ್ಮ ಮಾತು ಹಾಗೂ ಕ್ರಿಯೆಯಲ್ಲಿ ಕೋಪವನ್ನು ಪ್ರಕಟಿಸಬೇಡಿ.

وَالْكٰظِمِيْنَ الْغَيْظَ وَالْعَافِيْنَ عَنِ النَّاسِ ۭ وَاللّٰهُ يُحِبُّ الْمُحْسِنِيْنَ

"ಅವರು ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ. ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವರು."
(ಪವಿತ್ರ ಕುರ್‌ಆನ್: 3: 134)

"ಸುಬ್ಹಾನಲ್ಲಾಹ್! ನನಗಂತೂ ಈ ಸೂಕ್ತ ಮೊದಲ ಬಾರಿ ಕೇಳಿದಂತೆ ಭಾಸವಾಗುತ್ತಿದೆ" ಎಂದು ಆಕೆ ನುಡಿದಳು.

"ಈ ಸೂಕ್ತವನ್ನು ನೀವು ಅನುಸರಿಸಬೇಕೆಂದು ನಾನು ಬಯಸುತ್ತೇನೆ" ಎಂದೆ. ಆಕೆ ಹೇಳಿದಳು, "ಹೇಳುವುದು ಬಹಳ ಸುಲಭ. ಅದರೆ ಅದರಂತೆ ನನ್ನ ಕೋಪ ವನ್ನು ನಿಯಂತ್ರಿಸುವುದು ಬಹಳ ಕಷ್ಟ. ನನ್ನ ಕೋಪ ಬೆಂಕಿಯ ಜ್ವಾಲೆ ಇದ್ದಂತಿದೆ. ಈ ಜ್ವಾಲಾಮುಖಿ ಹೊರ ಬರುವ ತನಕ ನನಗೆ ನೆಮ್ಮದಿ ದೊರೆಯುವುದಿಲ್ಲ."

ನಾನು ಹೇಳಿದೆ: ನಮ್ಮ ಸೃಷ್ಟಿಕರ್ತನೂ ಒಡೆಯನೂ ಅಗಿರುವ ಅಲ್ಲಾಹನು ಮಾತ್ರ ನಮ್ಮ ಸಮಸ್ಯೆಗಳನ್ನು ಪರಿಹರಿಸುವ ಸರಿಯಾದ ದಾರಿಯನ್ನು ತೋರಿಸುತ್ತಾನೆ. ಆ ಮಹಾನ್ ಸೃಷ್ಟಿಕರ್ತನು, ನೀವು ನಿಮ್ಮ ಕೋಪದ ಜ್ವಾಲೆಯನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ದಯಪಾಲಿಸಿರುವನು. ಅದರೆ ನೀವು ಇಂದಿನ ವರೆಗೆ ನಿಮ್ಮ ಈ ಸಾಮರ್ಥ್ಯವನ್ನು ಉಪಯೋಗಿಸಿಲ್ಲ. ಅಲ್ಲಾಹನು ಹೇಳುತ್ತಾನೆ:

فَسَبِّحْ بِحَمْدِ رَبِّكَ وَكُن مِّنَ السَّاجِدِينَ ﴿٩٨﴾ وَاعْبُدْ رَبَّكَ حَتَّىٰ يَأْتِيَكَ الْيَقِينُ ﴿٩٩﴾

"(ಇದಕ್ಕೆ ಪರಿಹಾರವೇನೆಂದರೆ) ನಿಮ್ಮ ಪ್ರಭುವಿನ ಕೀರ್ತನೆಯೊಂದಿಗೆ ಅವನನ್ನು ಸ್ತುತಿಸಿರಿ. ಅವನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿರಿ. ಖಂಡಿತವಾಗಿಯೂ ಬಂದೇ ತೀರುವ ಆ ಕೊನೆಯ ಘಳಿಗೆಯ ವರೆಗೂ ನಿಮ್ಮ ಪ್ರಭುವಿನ ದಾಸ್ಯ-ಅರಾಧನೆ ಮಾಡುತ್ತಲಿರಿ." (ಪವಿತ್ರ ಕುರ್‌ಆನ್: 15: 98-99)

ಓರ್ವ ವಿದ್ಯಾವಂತೆ ಹಾಗೂ ಬುದ್ಧಿವಂತೆ ಸಹೋದರಿ, ಅಲ್ಲಾಹನ ಸೂಕ್ತಗಳಂತೆ ತನ್ನ ಜೀವನವನ್ನು ರೂಪಿಸಿದ ಒಂದು ಘಟನೆಯನ್ನು ನಿಮ್ಮ ಮುಂದೆ ಇಡ ಬಯಸುತ್ತಿದ್ದೇನೆ. ಪವಿತ್ರ ಕುರ್‌ಆನನ್ನು ಕೇವಲ ತನ್ನ ನಾಲಿಗೆ ಹಾಗೂ ಹೃದಯದಲ್ಲಿ ಡದೆ, ತನ್ನ ದೇಹದ ಅಂಗಾಂಗಗಳನ್ನು ಕುರ್‌ಆನಿನ ಆಜ್ಞೆಯಂತೆ ವ್ಯವಹರಿಸಲು ಆಕೆ ನಿರ್ಧರಿಸಿದ್ದಳು. ಸಹೋದರಿ ನಡೆದ ವೃತ್ತಾಂತವನ್ನು ಈ ರೀತಿ ವಿವರಿಸುತ್ತಾಳೆ:

ಒಮ್ಮೆ ಪತಿಯವರಿಗೆ ಸಣ್ಣ ವಿಷಯಕ್ಕೆ ಕೋಪ ಬಂದು ಗಲಾಟೆ ಮಾಡ ತೊಡಗಿದರು. ಕ್ರಮೇಣ ನನಗೂ ಕೋಪ ಉಕ್ಕಿ ಬರತೊಡಗಿತು. ತಾಳ್ಮೆ ವಹಿಸುತ್ತಿದ್ದರೂ ಕೋಪದ ಜ್ವಾಲಾಮುಖಿ ಹೊರಬರುವಂತೆ ಭಾಸವಾಗುತ್ತಿತ್ತು. ನಾನು ಪ್ರತ್ಯುತ್ತರಿಸಲು ಮುಂದಾದ ತಕ್ಷಣ ನನಗೆ ಈ ಸೂಕ್ತ ನೆನಪಿಗೆ ಬಂತು. ಅಲ್ಲಾಹನ ಸೂಕ್ತಗಳು

ನನ್ನ ನಿಕಟವಾಗಿರುವಂತೆಯೂ ನನಗೆ ಶಕ್ತಿ ಒದಗಿಸುತ್ತಿರುವಂತೆಯೂ ಅನಿಸಿತು. ಅಲ್ಲಾಹನ ಸ್ಮರಣೆಯು ನನ್ನ ರೋಗಕ್ಕೆ ಇರುವ ಏಕೈಕ ಔಷಧಿ ಎಂದು ಭಾವಿಸಿದೆ. فَسَبِّحْ بِحَمْدِ رَبِّكَ وَكُنْ مِّنَ السّٰجِدِيْنَ ﴿٩٨﴾ وَاعْبُدْ رَبَّكَ حَتّٰى يَأْتِيَكَ الْيَقِيْنُ ﴿٩٩﴾ (ಅಲ್ ಹಿಜ್ರ್: 98–99) ಈ ಸೂಕ್ತ ನೆನಪಾಯಿತು. ಅದರೆ ಈ ಸಮಯ ಈ ಸೂಕ್ತವನ್ನು ಓದುವ ಸ್ಥಿತಿಯಲ್ಲಿ ನಾನಿದ್ದೇನೆಯೇ ಎಂದು ನನ್ನನ್ನು ಪ್ರಶ್ನಿಸಿದೆ. ನಾನು ಪಿಶಾಚಿಯ ದುಷ್ಪ್ರೇರಣೆಯಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ ಮತ್ತು ನನ್ನ ಅಂತರಾಳದಲ್ಲಿರುವ ಪ್ರತಿಯೊಂದು ವಿಷಯವನ್ನು ಅಲ್ಲಾಹನು ಅರಿಯುತ್ತಾನೆ ಎಂದು ನಾನು ನನ್ನಲ್ಲೇ ಅಂದುಕೊಂಡು لَآ اِلٰهَ اِلَّآ أَنْتَ سُبْحَانَكَ اِنِّي كُنْتُ مِنَ الظّٰلِمِيْنَ ಓದತೊಡಗಿದೆ ಮತ್ತು ನನಗೆ ತಿಳಿದಿದ್ದ ಎಲ್ಲ ತಸ್ಬೀಹ್‌ಗಳನ್ನು ಹೇಳತೊಡಗಿದೆ. ಇನ್ನೊಂದು ಕಡೆ ಪತಿಯವರು ಮನಸ್ಸಿಗೆ ಬಂದಂತೆ ಬೈಯುತ್ತಿದ್ದರು, ಅವರು ಪಿಶಾಚಿಯ ದುಷ್ಪ್ರೇರಣೆಯಲ್ಲಿ ಸಂಪೂರ್ಣವಾಗಿ ಸಿಲುಕಿಕೊಂಡಿದ್ದರು. ನಾನು ಅಲ್ಲಿಂದ ಓಡಿ ಹೋಗಿ ಅಂಗಸ್ನಾನ (ವುಝೂ) ಮಾಡಿ ಸಾಷ್ಟಾಂಗವೆರಗುವವರ ಸಾಲಿನಲ್ಲಿ ಸೇರಲು ನಮಾಝ್ ಮಾಡತೊಡಗಿದೆ. ನಾನು ನಮಾಝ್ ಮಾಡುವುದನ್ನು ನೋಡಿ ಪತಿಯವರು ಮೌನವಹಿಸಿ ದಂಗು ಬಡಿದವರಂತೆ ನನ್ನನ್ನು ನೋಡತೊಡಗಿದರು. ಬಳಿಕ ಅವರು ಅಲ್ಲಾಹನಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆ ಯಾಚಿಸತೊಡಗಿದರು. ಮನಸ್ಸಿಗೆ ನೆಮ್ಮದಿ ಹಾಗೂ ಶಾಂತಿ ದೊರಕುವ ತನಕ ಅವರು ಅಲ್ಲಾಹನೊಂದಿಗೆ ಕ್ಷಮೆ ಯಾಚಿಸತೊಡಗಿದರು. ನನ್ನನ್ನು ಸಮಾಧಾನ ಪಡಿಸಲು ನನ್ನ ಹತ್ತಿರ ಬಂದರು. ಆದರೆ ನಾನು ಮೊದಲೇ ಕೋಪವನ್ನು ನಿಯಂತ್ರಿಸುತ್ತ ಸಮಾಧಾನದಿಂದ ಕೂತಿದ್ದೆ. ನನ್ನ ಮೃದುವಾದ ಮಾತು ಹಾಗೂ ಮೃದು ವರ್ತನೆ ನೋಡಿ ಅವರು ಇನ್ನು ಹೆಚ್ಚು ಕಕ್ಕಾಬಿಕ್ಕಿಯಾದರು. ನಾನು ನಗುಮುಖದೊಂದಿಗೆ ಅವರನ್ನು ನೋಡಿ, “ದಯಮಾಡಿ ನನ್ನ ಸ್ವರ್ಗದ ಕೀಲಿ ಕೈಯನ್ನು ನನಗೆ ಕೊಟ್ಟು ಬಿಡಿ, ನಾನು ಸ್ವರ್ಗವನ್ನು ಅಪೇಕ್ಷಿಸುತ್ತಿದ್ದೇನೆ. ಪಿಶಾಚಿ ನನ್ನ ಕನಸು ಭಂಗ ಮಾಡದಂತೆ ನನ್ನ ಈ ಅಪೇಕ್ಷೆಯನ್ನು ಕಾಪಾಡಬೇಕಾಗಿದೆ” ಎಂದು ಹೇಳಿದಾಗ ಅವರು ಆಶ್ಚರ್ಯಚಕಿತರಾಗಿ ನನ್ನನ್ನೇ ದಿಟ್ಟಿಸಿ ನೋಡತೊಡಗಿದರು.

ನನ್ನ ಮಾತನ್ನು ಕೇಳಿದ ಪತಿಯವರು, “ಪವಿತ್ರ ಕುರ್‌ಆನ್ ಭೂಲೋಕದ ಸ್ವರ್ಗ ಎಂದು ನೀನು ಸದಾ ಹೇಳುತ್ತಿದ್ದಿ. ಈ ದಿನ ನೀನು ನಿನ್ನ ವರ್ತನೆಯಿಂದ ಅದನ್ನು ತೋರಿಸಿ ಕೊಟ್ಟಿರುವಿ.” ಅಂದಿನಿಂದ ನಾವಿಬ್ಬರೂ ಕುರ್‌ಆನಿನ ಇತರ ಸೂಕ್ತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಲು, ಕುರ್‌ಆನಿನ ತರಗತಿಯ ದಿನಕ್ಕೆ ಕಾಯುತ್ತಿರುತ್ತೇವೆ. ಈ ರೀತಿ ನಾವೆಲ್ಲರೂ ಕುರ್‌ಆನನ್ನು ಅನುಸರಿಸುತ್ತಿದ್ದೇವೆ. ನಮ್ಮೊಂದಿಗೆ ನಮ್ಮ ಮಕ್ಕಳು ಕೂಡ ಅನುಸರಿಸುತ್ತಾರೆ. ಅಲ್ಲಾಹನ ದಯೆ ಹಾಗೂ

ಪವಿತ್ರ ಕುರ್‌ಆನಿನ ಪವಾಡದ ಕಾರಣ ನಮ್ಮ ಮನೆ ಸ್ವರ್ಗದಂತೆ ಆಯಿತು.

ಈ ಘಟನೆಯನ್ನು ಕೇಳಿದ ನನ್ನ ಅತಿಥಿ ಸಹೋದರಿ 'ಅಲ್ಲಾಹನ ಗ್ರಂಥದ ಆಜ್ಞೆಗಳಂತೆ ನನ್ನ ಜೀವನವನ್ನು ಬದಲಿಸಲು ನಾನು ಈ ದಿನದಿಂದ ಪ್ರಯತ್ನಿಸುತ್ತೇನೆ' ಎಂದು ಆಕೆ ವಾಗ್ದಾನ ಮಾಡಿದಳು.

ಅತಿಥಿ ಸಹೋದರಿಯನ್ನು ಬೀಳ್ಕೊಟ್ಟ ನಂತರ, ನಾನು ಆಕೆಗಾಗಿ ಪ್ರಾರ್ಥಿಸಿದೆ. ಒಮ್ಮೆ ನಾನು ಕುರ್‌ಆನ್ ಪ್ರವಚನಕ್ಕಾಗಿ ಮಸೀದಿಗೆ ಹೋದಾಗ, ಈ ಸಹೋದರಿ ಇನ್ನೋರ್ವ ಸಹೋದರಿಯ ಕಣ್ಣೀರು ಒರೆಸುತ್ತ ಸಾಂತ್ವನ ಹೇಳುತ್ತಿದ್ದರು ಮತ್ತು ಪವಿತ್ರ ಕುರ್‌ಆನನ್ನು ಅನುಸರಿಸುವುದರಿಂದ ನಮ್ಮ ಸಮಸ್ಯೆಗಳು ಪರಿಹಾರ ಅಗುತ್ತದೆ ಎಂದು ಆಕೆ ಹೇಳುತ್ತಿದ್ದುದನ್ನು ಕೇಳಿ ಬಹಳ ಸಂತೋಷವಾಯಿತು. ಆಕೆಯ ಮುಖ ನೆಮ್ಮದಿ ಮತ್ತು ಸಮಾಧಾನದಿಂದ ಕೂಡಿತ್ತು. ಆಕೆ ಇನ್ನಷ್ಟು ಸುಂದರಿಯಾಗಿ ಕಾಣುತ್ತಿದ್ದರು. ಆಕೆಯನ್ನು ನೋಡಿ ನನಗೆ ಓರ್ವ ಸಹಾಬಿಯ ನೆನಪಾಯಿತು. ಅವರು ಸ್ವರ್ಗದ ವಾರೀಸುದಾರರಾಗುವರು ಎಂದು ಪ್ರವಾದಿ ಮುಹಮ್ಮದ್(ಸ) ಅವರ ಬಗ್ಗೆ ಹೇಳಿದ್ದರು. ಇದಕ್ಕೆ ಕಾರಣ ಏನಿರಬಹುದು ಎಂದು ಅರಿಯಲು ಹ. ಅಬ್ದುಲ್ಲ ಬಿನ್ ಉಮರ್(ರ) ಪತ್ತೆ ಹಚ್ಚತೊಡಗಿದರು. ಈ ಕಾರಣಕ್ಕಾಗಿ ಅವರು ಆ ಸಹಾಬಿಯ ಮನೆಯಲ್ಲಿ ಅತಿಥಿಯಾಗಿ ಉಳಿದುಕೊಂಡರು. ಅವರ ಪ್ರತಿಯೊಂದು ಚಲನ ವಲನ, ಆರಾಧನೆ ಎಲ್ಲವನ್ನೂ ಸೂಕ್ಷ್ಮವಾಗಿ ವೀಕ್ಷಿಸತೊಡಗಿದರು. ಅವರ ನಮಾಝ್, ಐಚ್ಛಿಕ ನಮಾಝ್, ಉಪವಾಸ, ತಹಜ್ಜುದ್ ಇತ್ಯಾದಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬರಲಿಲ್ಲ. ಪ್ರವಾದಿವರ್ಯರು(ಸ) ಸುವಾರ್ತೆ ಕಾರಣ ಅವರಿಗೆ ತಿಳಿಯಲಿಲ್ಲ. ಆದ್ದರಿಂದ ಈ ಬಗ್ಗೆ ಅವರೊಂದಿಗೇ ವಿಚಾರಿಸಲು ನಿರ್ಧರಿಸಿ, "ಪ್ರವಾದಿವರ್ಯರು(ಸ) ನಿಮಗೆ ಸ್ವರ್ಗದ ಸುವಾರ್ತೆಯನ್ನು ಕೊಟ್ಟಿರುವರು. ಅಂತಹ ಆರಾಧನೆ ಯಾವುದೆಂದು ತಿಳಿಸಿದರೆ ನಾನು ಕೂಡ ಆ ಆರಾಧನೆಯನ್ನು ಮಾಡುವೆ" ಎಂದು ಹೇಳಿದರು. ಆ ಸಹಾಬಿ ಸ್ವಲ್ಪ ಹೊತ್ತು ಯೋಚಿಸಿ ನಂತರ "ನನ್ನಲ್ಲಿ ಅಂತಹ ಯಾವುದೇ ವೈಯಕ್ತಿಕ ಗುಣ ಇಲ್ಲ. ಆದರೆ ನಾನು ಮಲಗುವ ಮುಂಚೆ ನನ್ನ ಮನಸ್ಸಿನಲ್ಲಿ ಯಾರ ಮೇಲೂ ದ್ವೇಷಾಸೂಯೆ ಇಲ್ಲದಂತೆ ನೋಡಿ ಕೊಳ್ಳುತ್ತೇನೆ ಹಾಗೂ ಎಲ್ಲರನ್ನೂ ಕ್ಷಮಿಸಿ ಸಮಾಧಾನ ಹಾಗೂ ನೆಮ್ಮದಿಯೊಂದಿಗೆ ಮಲಗುತ್ತೇನೆ" ಎಂದು ಹೇಳಿದರು.

❖ ❖ ❖ ❖

# ಜಪಮಾಲೆ (ತಸ್ಬೀಹ್)

ಕುರ್‌ಆನ್ ತರಗತಿಯಲ್ಲಿ ಭಾಗಿಯಾಗಲು ಕೆಲವು ಮಹಿಳೆಯರು ನನ್ನನ್ನು ಭೇಟಿಯಾಗಲು ಬಂದಿದ್ದರು. ಕುರ್‌ಆನಿನ ಬೋಧನೆಯನ್ನು ಅನುಸರಿಸುವ ಅತ್ಯುತ್ತಮ ಮಾದರಿ ಪ್ರವಾದಿ ಮುಹಮ್ಮದ್(ಸ) ಆಗಿದ್ದಾರೆ ಎಂದು ಅವರಿಗೆ ತಿಳಿಸಿದೆ. ಅದೇ ರೀತಿ ಕುರ್‌ಆನಿನ ಸೂಕ್ತಗಳನ್ನು ಕುರ್‌ಆನ್‌ನಿಂದ ಹೊರಗೆ ತಂದು ಅದನ್ನು ಅನು ಸರಿಸಬೇಕಾದುದು ಮತ್ತು ನಮ್ಮ ಜೀವನವನ್ನು ಅಲ್ಲಾಹನ ಇಚ್ಛೆಗೆ ಅನುಗುಣವಾಗಿ ರೂಪಿಸಬೇಕಾದುದು ನಮ್ಮ ಕರ್ತವ್ಯ. ಮೊದಲನೆಯದಾಗಿ ಕುರ್‌ಆನ್ ಪಠಣದ ರೀತಿಯನ್ನು ಸರಿಪಡಿಸಬೇಕು. ನಂತರ ಅದರ ಅರ್ಥ ಹಾಗೂ ವ್ಯಾಖ್ಯಾನವನ್ನು ತಿಳಿಯುತ್ತಾ, ಪ್ರವಾದಿ ಮುಹಮ್ಮದ್(ಸ)ರು ತಮ್ಮ ಜೀವನದ ಪ್ರತಿಯೊಂದು ರಂಗ ದಲ್ಲಿ ಹೇಗೆ ಅನುಸರಿಸಿದರು ಎಂದು ತಿಳಿಯಿರಿ. ಅಲ್ಲಾಹನ ಈ ಸೂಕ್ತವು ನನ್ನಲ್ಲಿ ಯಾವ ರೀತಿಯ ಬೇಡಿಕೆಯನ್ನು ಇಟ್ಟು ಕೊಂಡಿದೆ ಎಂದು ಪ್ರತಿಯೊಬ್ಬರೂ ತಮ್ಮಲ್ಲಿ ಪ್ರಶ್ನಿಸಿರಿ ಎಂದು ಅವರಿಗೆ ತಿಳಿಸಿದೆ.

ಓರ್ವ ಮಹಿಳೆ ಎದ್ದು ನಿಂತು “ಇದು ಬಹಳ ಕಠಿಣ ಕಾರ್ಯ ಎಂಬಂತೆ ಭಾಸವಾಗುತ್ತಿದೆ. ಅದರ ಪರಿಣಾಮ ತಿಳಿಯಲು ಬಹಳ ಸಮಯ ತಗಲಬಹುದು. ಎಷ್ಟರ ಮಟ್ಟಿಗೆ ನನ್ನ ಮೇಲೆ ಇದರ ಪರಿಣಾಮ ಬೀರಬಹುದು ಎಂದು ಅಲ್ಲಾಹ ನಿಗೇ ಗೊತ್ತು” ಎಂದು ಹೇಳಿದರು.

ಸ್ವತಃ ಪವಿತ್ರ ಕುರ್‌ಆನ್ ಈ ವಿಧಾನವನ್ನು ತೋರಿಸಿಕೊಡುತ್ತಿದೆ. ಇದರಲ್ಲಿ ಹೊಸತು ಎಂದು ಹೇಳುವ ಅಂಶವಿಲ್ಲ. ಅಲ್ಲಾಹನು ತನ್ನ ಪ್ರವಾದಿಯ ಮೇಲೆ ಇದನ್ನು ಅವತೀರ್ಣಗೊಳಿಸಿದನು. ಪ್ರವಾದಿವರ್ಯರು(ಸ) ಅದನ್ನು ಅನುಸರಿಸಿ ತೋರಿಸಿಕೊಟ್ಟರು. ಇದನ್ನು ಅಲ್ಲಾಹನ ಆಜ್ಞೆ ಹಾಗೂ ಬೇಡಿಕೆಯೆಂದು ಪರಿಗಣಿಸುತ್ತಾ ಅನುಸರಿಸಬೇಕು. ನಾವು ನಮ್ಮ ಜೀವನವನ್ನು ಅಲ್ಲಾಹನ ಆಜ್ಞೆಯಂತೆ ರೂಪಿಸಿಕೊಂಡಾಗ ಸದ್ಗುಣ ಸಂಪನ್ನರಾಗಿ ಜೀವಿಸಬಹುದು ಮತ್ತು ಅಲ್ಲಾಹನ ವಾಗ್ದಾನದಂತೆ ಅಲ್ಲಾಹನ ಈ ಭೂಲೋಕದ ವಾರೀಸುದಾರರಾಗುವೆವು.

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَرْضِ

"ನಿಮ್ಮ ಪೈಕಿ ವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ ಅಲ್ಲಾಹನು ಅವರಿಗಿಂತ ಮುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಗಳನ್ನಾಗಿ ಮಾಡಿದಂತೆಯೇ ಅವರನ್ನೂ ಮಾಡುವನು ಎಂದು ವಾಗ್ದಾನ ಮಾಡಿರುವನು." (ಪವಿತ್ರ ಕುರ್‌ಆನ್: 24: 55)

ಮಾತುಗಾರಿಕೆಯಲ್ಲಿ ನಾವು ಮುಂದಿದ್ದೇವೆ. ಆದರೆ ಅನುಸರಣೆಯ ಸಂದರ್ಭ ಬಂದಾಗ ನಾವು ನುಣುಚಿಕೊಳ್ಳುತ್ತೇವೆ. ಈ ರೀತಿ ನಾವು ಒಂದು ಸೂಕ್ತವನ್ನು ಆರಿಸಿ, ಅದನ್ನು ಅನುಸರಿಸುವುದಾಗಿ ಮಹಿಳೆಯರೆಲ್ಲರೂ ನಿರ್ಧರಿಸಿದರು. ಆರಿಸಲಾದ ಸೂಕ್ತದ ವ್ಯಾಖ್ಯಾನವನ್ನು ವಿವರಿಸಿ ಈ ಸೂಕ್ತವನ್ನು ಅನು ಸರಿಸುವಿರಾ? ಎಂದು ಕೇಳಿದೆ. "ಅದರ ವಿಧಾನವನ್ನು ನಾನು ನಿಮಗೆ ಹೇಳಿ ಕೊಡಲಾರೆ. ನೀವು ಸ್ವತಃ ಮಾಡಿಕೊಳ್ಳಿ, ಆದರೆ ಒಂದು ಮಾತು. ಆ ಸೂಕ್ತವನ್ನು ಪದೇ ಪದೇ ಪುನರಾವರ್ತಿಸುತ್ತಾ ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿ" ಎಂದು ಹೇಳಿದೆ.

وَاِنْ مِّنْ شَيْءٍ اِلَّا يُسَبِّحُ بِحَمْدِهٖ وَلٰكِنْ لَّا تَفْقَهُوْنَ تَسْبِيْحَهُمْ

"ಅವನ ಪ್ರಶಂಸೆಯೊಂದಿಗೆ ಅವನ ತಸ್ಬೀಹ್ (ಜಪ) ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ ತಸ್ಬೀಹ್ ಅನ್ನು ಗ್ರಹಿಸುವುದಿಲ್ಲ."
(ಪವಿತ್ರ ಕುರ್‌ಆನ್: 17: 44)

ಈ ಸೂಕ್ತ ಕೇವಲ ನಾಲಗೆಯಲ್ಲಿರದೆ ಹೃದಯದಲ್ಲಿ ಇಳಿಯಬೇಕು ಎಂದು ಹೇಳಿದೆ. ಮನೆಗೆ ತೆರಳಿದ ಮಹಿಳೆಯರು ಕೆಲವು ದಿನಗಳ ನಂತರ ನಿಗದಿ ಪಡಿಸಲಾದ ದಿನದಂದು, ನಾನು ಬರುವ ಮೊದಲೇ ಬಂದು ನನಗಾಗಿ ಕಾಯುತ್ತಿದ್ದರು. ಪ್ರತಿಯೊಬ್ಬರೂ ನಾ ಮೊದಲು, ತಾ ಮೊದಲು ಎಂಬಂತ್ತಿದ್ದರು. "ಯಾರು ಯಾವ ರೀತಿಯಲ್ಲಿ ಈ ಸೂಕ್ತವನ್ನು ಅನುಸರಿಸಿದ್ದೀರಿ?" ಎಂದು ಪ್ರಶ್ನಿಸಿದೆ. ಓರ್ವ ಸಹೋದರಿ ತಟ್ಟನೆ ಎದ್ದು ನಿಂತು ತನ್ನ ಅನುಭವವನ್ನು ವಿವರಿಸ ತೊಡಗಿದರು.

"ನಾನು ವಿವಾಹಿತೆ. ನನಗೆ ಸಣ್ಣ ಸಣ್ಣ ಮಕ್ಕಳಿದ್ದಾರೆ. ಮನೆವಾರ್ತೆಗೆ ಜನ ಇಲ್ಲ. ಪತಿಯವರು ಬೆಳಿಗ್ಗೆ ಹೋದರೆ ಮನೆಗೆ ಬರುವಾಗ ತಡರಾತ್ರಿಯಾಗಿರುತ್ತದೆ. ದೊಡ್ಡ ಮಕ್ಕಳು ಶಾಲೆಗೆ ಹೋಗುತ್ತಾರೆ. ಬೆಳಿಗ್ಗೆ ಕೆಲಸಕ್ಕೆ ತೊಡಗಿದರೆ ರಾತ್ರಿಯಾದರೂ ಕೆಲಸ ಮುಗಿಯುವುದಿಲ್ಲ. ಮನೆಯ ಎಲ್ಲಾ ಸದಸ್ಯರ ಕೆಲಸಗಳನ್ನು ನನ್ನಲ್ಲೇ ಮಾಡಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಪಿಶಾಚಿ ನನ್ನ ಮನಸ್ಸನ್ನು ಹಾಳು ಮಾಡುತ್ತದೆ. ನೀನು ಈ ಮನೆಯ ಕೆಲಸದಾಳುವೆ? ಕೆಲಸದಾಳಿಗಾದರೂ ಒಂದು ನಿಗದಿತ ಸಮಯ

ಹಾಗೂ ಸಂಬಳವಿದೆ. ನಿನಗೇನು ಸಿಗುತ್ತದೆ? ಎಂದು ಪಿಶಾಚಿಯ ಪಿಸುಮಾತು ಕೆಲವೊಮ್ಮೆ ನನ್ನನ್ನು ಪ್ರೇರೇಪಿಸುತ್ತಿತ್ತು. ಆತನ ಪಿಸುಮಾತಿಗೆ ಪ್ರಭಾವಿತಳಾಗಿ ಮನೆಯ ಕೆಲಸದಲ್ಲಿ ಉದಾಸೀನತೆ ತೋರುತ್ತಿದ್ದೆ. ಏನು ಮಾಡಿದರೂ ಎಲ್ಲ ಕೆಲಸ ನಾನೇ ಮಾಡಬೇಕಲ್ಲವೆ ಎಂಬ ಯೋಚನೆ ಪದೇ ಪದೇ ಬರುತ್ತಿತ್ತು.

ನಿಮ್ಮ ಕುರ್‌ಆನ್ ತರಗತಿಯಲ್ಲಿ ಬರುವ ಅವಕಾಶ ದೊರೆತದ್ದು ನನ್ನ ಭಾಗ್ಯ ಎಂದು ಹೇಳಬೇಕು. ಮನಸ್ಸಿಗೆ ಸಮಾಧಾನವನ್ನುಂಟು ಮಾಡುವ ಈ ಸೂಕ್ತವನ್ನು ಅನುಸರಿಸುವ ಸಂದರ್ಭ ಸಿಕ್ಕಿದ್ದು ನನ್ನ ಭಾಗ್ಯ. ಒಂದು ದಿನ ಬೆಳಿಗ್ಗೆ ಎದ್ದು ಕೆಲಸ ನೋಡಿ ತಲೆಗೆ ಕೈಹೊತ್ತು ಕೂತೆ. ಎಲ್ಲಿಂದ ಆರಂಭಿಸಬೇಕು? ಯಾವುದನ್ನು ಯಾವಾಗ ಮಾಡಬೇಕು? ಒಂದೂ ತೋಚುತ್ತಿರಲಿಲ್ಲ. ನೀವು ಹೇಳಿದ ಸೂಕ್ತವನ್ನು ಹೇಳುತ್ತಲೇ ಇದ್ದೆ. ಅಷ್ಟರಲ್ಲಿ ನನ್ನ ದೃಷ್ಟಿ ಮೇಜಿನ ಮೇಲೆ ಹೋಯಿತು. 'ಸುಬ್ಹಾನಲ್ಲಾಹ್' ಮೇಜು ಧೂಳಿನಿಂದ ತುಂಬಿತ್ತು. ಈ ಮೇಜು ಕೂಡ ಅಲ್ಲಾಹನನ್ನು ಸ್ತುತಿಸುತ್ತಿರಬಹುದೇ? ಎಂದು ಯೋಚಿಸಿದೆ. ನನ್ನ ಬಾಯಿಯಿಂದ 'ಅವನ ಪ್ರಶಂಸೆಯೊಂದಿಗೆ ಅವನ ತಸ್ಬೀಹ್ ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ ತಸ್ಬೀಹನ್ನು ಗ್ರಹಿಸುವುದಿಲ್ಲ.' ಎಂಬ ಸೂಕ್ತ ತನ್ನಷ್ಟಕ್ಕೆ ಬಂತು. ಈ ಮೇಜು ಯಾವ ರೀತಿ ತಸ್ಬೀಹನ್ನು (ಜಪ) ಹೇಳುತ್ತಿರಬಹುದು ಎಂದು ಯೋಚಿಸಿದೆ. 'ಆದರೆ ನೀವು ಅವು ಗಳ ತಸ್ಬೀಹನ್ನು ಗ್ರಹಿಸುವುದಿಲ್ಲ' ಎಂಬ ಸೂಕ್ತ ತಕ್ಷಣ ನೆನಪಾಯಿತು.

ನನಗರಿವಿಲ್ಲದೆಯೇ ನಾನು ಎದ್ದು, ಅಲ್ಲಾಹನನ್ನು ಜಪಿಸುತ್ತಿರುವ ಮೇಜಿನ ಮೇಲಿನ ಧೂಳನ್ನು ಒರೆಸಿ ಸ್ವಚ್ಛಗೊಳಿಸಿದೆ. ನಾವಿಬ್ಬರೂ ಅಲ್ಲಾಹನನ್ನು ಜಪಿಸುತ್ತಿದ್ದೇವೆ ಎಂದು ಯೋಚಿಸಿ ಆ ಮೇಜಿನ ಮೇಲೆ ಒಲವು ಉಂಟಾಯಿತು. ನಂತರ ನಾನು ಮನೆಯ ಎಲ್ಲ ವಸ್ತುಗಳನ್ನು ಸ್ವಚ್ಛಗೊಳಿಸಿದೆ. ಅಡುಗೆ ಕೋಣೆಯಲ್ಲಿರುವ ಪ್ರತಿಯೊಂದು ವಸ್ತು ಅಲ್ಲಾಹನನ್ನು ಜಪಿಸುತ್ತಿದೆ ಎಂದು ಯೋಚಿಸಿ ಗೋಡೆ, ಒಲೆ, ಗ್ಯಾಸ್, ಪಾತ್ರೆ ಗಳು ಮಾತ್ರವಲ್ಲ ನಾನು ಮಾಡುವ ಅಡುಗೆ ಕೂಡ ಅಲ್ಲಾಹನನ್ನು ಜಪಿಸುತ್ತಿರಬಹುದು ಎಂದು ಯೋಚಿಸಿದೆ. ಈ ಯೋಚನೆ ನನ್ನ ಜೀವನದಲ್ಲಿ ಬಹು ದೊಡ್ಡ ಕ್ರಾಂತಿ ಯನ್ನುಂಟು ಮಾಡಿದಂತೆ ಅನಿಸಿತು. ಈ ಸತ್ಯವನ್ನು ಅರಿತು ಜೀವನ ಬಹಳ ಸುಂದರ, ಮನೋಹರ ಹಾಗೂ ಉಲ್ಲಾಸಭರಿತವಾಗಿರುವಂತೆ ಅನಿಸಿತು. ಅಲ್ಪ ಸಮಯದಲ್ಲೇ ಮನೆಯ ಕೆಲಸ ಮುಗಿದಂತೆ ಭಾಸವಾಯಿತು. ಇದರೊಂದಿಗೆ ಸಯ್ಯಿದಾ ಫಾತಿಮಾರ(ರ) ನೆನಪಾಯಿತು. ಅವರೊಮ್ಮೆ ಸೇವಕಿಯ ಬೇಡಿಕೆಯೊಂದಿಗೆ ಪ್ರವಾದಿವರ್ಯರ(ಸ) ಹತ್ತಿರ ಹೋದರು. ಪ್ರವಾದಿವರ್ಯರು(ಸ) ಸೇವಕಿಯ ಬದಲು, ಅದಕ್ಕಿಂತ ಉತ್ತಮವಾದ ವಸ್ತುವನ್ನು ಕೊಡುತ್ತೇನೆ ಎಂದು ಹೇಳಿ,

ಅಲ್ಲಾಹನ ತಸ್ಬೀಹ್ ಮಾಡುವಂತೆ ತಿಳಿಸಿದರು. ಅಲ್ಲಾಹನ ತಸ್ಬೀಹ್‌ನಿಂದ ಮಾನಸಿಕ ಶಕ್ತಿ ಹೆಚ್ಚಿ, ಅದು ಕೆಲಸದಲ್ಲಿ ಸಹಾಯವಾಗುತ್ತದೆ ಎಂದು ನನಗನಿಸಿತು. ಆದರೆ ತಸ್ಬೀಹ್ ಹೇಳುತ್ತಾ ಕೆಲಸ ಮುಗಿಸಿದಾಗ ಆಯಾಸ ಆಗದೆ ಅಲ್ಪ ಸಮಯದಲ್ಲಿ ಎಲ್ಲ ಕೆಲಸ ಮುಗಿಯಿತು.

ಓರ್ವ ಮುಸ್ಲಿಮನು ತಸ್ಬೀಹ್ (ಜಪ) ಮಾಡಿದಾಗ ನೆಮ್ಮದಿ, ಉಲ್ಲಾಸದೊಂದಿಗೆ ಮಾಡುತ್ತಾನೆ. ಈ ರೀತಿ ಕೆಲಸ ಮಾಡಿದಾಗ ಪರಿಶ್ರಮದ ದಣಿವು ತಿಳಿಯುವುದಿಲ್ಲ. ಆದುದರಿಂದ ಪರಿಶ್ರಮವೆಸಗುವ ಪ್ರತಿಯೋರ್ವ ಸಹೋದರಿ ಸುಬ್ಹಾನಲ್ಲಾಹ್, ಸುಬ್ಹಾನಲ್ಲಾಹ್, ಸುಬ್ಹಾನಲ್ಲಾಹಿಲ್ ಅಝೀಮ್ ಎಂಬ ತಸ್ಬೀಹ್‌ನೊಂದಿಗೆ ಕೆಲಸ ಮಾಡಲಿ ಎಂಬುದು ನನ್ನ ಸಲಹೆ. ಕೆಲಸವು ಸುಲಭವಾಗುವುದರೊಂದಿಗೆ ಮನಸ್ಸಿಗೆ ಉಲ್ಲಾಸ ಹಾಗೂ ಎಲ್ಲ ಸೌಲಭ್ಯದೊಂದಿಗೆ ಬೇಗನೆ ಮುಗಿಯುವುದು.

ಸಹೋದರಿ ತನ್ನ ಅನುಭವ ಹೇಳಿ ಮುಗಿಸಿದ ಮೇಲೆ "ಆತ್ಮೀಯ ಸಹೋದರಿಯರೇ, ಪವಿತ್ರ ಕುರ್‌ಆನಿನ ಆಜ್ಞೆಯಂತೆ ಕಾರ್ಯವೆಸಗುವುದೆಂದರೆ ಇದೇ ಆಗಿದೆ. ನಮ್ಮ ಈ ಸಹೋದರಿ ಆ ಸೂಕ್ತವನ್ನು ಕೇವಲ ಬಾಯಿಯಿಂದ ಉಚ್ಚರಿಸದೆ ಅದನ್ನು ತನ್ನ ಹೃದಯದಲ್ಲಿ ಇಳಿಸಿ, ತನ್ನ ಪ್ರಜ್ಞೆ ಹಾಗೂ ಬುದ್ಧಿಯೊಂದಿಗೆ ಕಾರ್ಯವೆಸಗಿದರು. ಕುರ್‌ಆನಿನ ಅನುಸರಣೆ ಎಂದರೆ ಇದೇ ಆಗಿದೆ" ಎಂದು ಹೇಳಿದೆ.

## ಟಿ.ವಿ. ಮತ್ತು ಗೋಡೆಗಳ ತಸ್ಬೀಹ್ (ಜಪ)

ಓರ್ವ ಸಹೋದರಿ ಎದ್ದು ನಿಂತು ಹೇಳಿದಳು: ನನಗಾದ ಅನುಭವವನ್ನು ನಾನು ಹಂಚಲಿಚ್ಛಿಸುತ್ತೇನೆ. ಬಹಳ ವಿಚಿತ್ರ ಅನುಭವ! ನಾನು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ. ನಮ್ಮ ದೇಹದ ಅಂಗಾಂಗಗಳನ್ನು ಅಲ್ಲಾಹನು ಯಾವ ರೀತಿ ಸೃಷ್ಟಿಸಿದ್ದಾನೆ ಎಂದು ಶಿಕ್ಷಕರಿಂದ ಕೇಳಿದೆ. ಸೃಷ್ಟಿಕರ್ತನ ಈ ಅದ್ಭುತ ಸೃಷ್ಟಿಯ ಬಗ್ಗೆ ಕೇಳಿ ಬಹಳ ಆಶ್ಚರ್ಯವಾಯಿತು. 'ಸುಬ್ಹಾನಲ್ಲಾಹ್' ಎಂದು ಆಗಾಗ ಹೇಳುತ್ತಿದ್ದೆ. ಇದನ್ನು ಕೇವಲ ನಾನೊಬ್ಬಳು ಹೇಳುತ್ತಿದ್ದೆ. ಅಲ್ಲಾಹನು ದಯಪಾಲಿಸಿರುವ ಅನುಗ್ರಹಗಳಿಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕೆಂದು ನನಗೆ ತಿಳಿದಿರಲಿಲ್ಲ. ಅಲ್ಲಾಹನು ದಯಪಾಲಿಸಿರುವ ಅನುಗ್ರಹಗಳ ಮುಖಾಂತರ ನಾನು ಅಲ್ಲಾಹನ ಸಂಪ್ರೀತಿ ಗಳಿಸಬೇಕು ಹಾಗೂ ಈ ಎಲ್ಲ ಅನುಗ್ರಹಗಳ ಏಕೈಕ ಕಾರಣ ಅಲ್ಲಾಹನ ಸಂಪ್ರೀತಿ ಎಂಬ ವಿಷಯ ತಿಳಿದಿರಲಿಲ್ಲ. ಆದರೆ ಈ ಸೂಕ್ತವನ್ನು ಅರಿತ ನಂತರ ಅಲ್ಲಾಹನು ನನ್ನ ಹೃದಯ ಹಾಗೂ ವಿವೇಕವನ್ನು ಬೆಳಗಿಸಿದ. ಮಲಗುವಾಗ, ಏಳುವಾಗ, ನಡೆದಾಡುವಾಗ, ಕುಳಿತುಕೊಂಡಾಗ, ಹೀಗೆ ಎಲ್ಲ ಸಮಯ ನಾನು ಈ ಸೂಕ್ತವನ್ನು ನನ್ನ ಹೃದಯದ ಅಂತರಾಳದಲ್ಲಿ ಹುದುಗಿ ಹೋಗುವ ತನಕ ಪಠಿಸುತ್ತಿದ್ದೆ.

ಒಮ್ಮೆ ನಾನು ಟಿ.ವಿಯ ರಿಮೋಟ್ ತೆಗೆದುಕೊಂಡು ಟಿ.ವಿ. ಆನ್ ಮಾಡಿ ನನ್ನಿಷ್ಟದ ಸಿನೆಮಾ ವೀಕ್ಷಿಸುತ್ತಿದ್ದೆ. ಅಷ್ಟರಲ್ಲಿ ಆ ಟಿ.ವಿ. ಕೂಡ ತಸ್ಬೀಹ್ (ಜಪ) ಮಾಡುತ್ತಿರಬಹುದೇ ಎಂಬ ಯೋಚನೆ ಬಂತು. ಹೌದು 'ಪ್ರತಿಯೊಂದು ವಸ್ತು ಅಲ್ಲಾಹನ ಕೃತಜ್ಞತೆಯೊಂದಿಗೆ ತಸ್ಬೀಹ್ ಮಾಡುತ್ತದೆ ಎಂಬ ಭರವಸೆ ನನಗೆ ಇತ್ತು. ಲೋಕದಲ್ಲಿರುವ ಪ್ರತಿಯೊಂದು ವಸ್ತು ತನ್ನ ಪ್ರಭುವಿನ ಪ್ರಶಂಸೆಯೊಂದಿಗೆ ತಸ್ಬೀಹ್ ಮಾಡಲೇ ಬೇಕೆಂಬ ನಿರ್ಬಂಧ ಅಲ್ಲಾಹನು ತನ್ನ ಸೃಷ್ಟಿಗಳ ಹಾಗೂ ಎಲ್ಲ ವಸ್ತುಗಳ ಮೇಲೆ ಹಾಕಿರುವನು. ಈ ರೀತಿ ಯಾರು ಉತ್ತಮ ಕರ್ಮಗಳನ್ನು ಮಾಡುತ್ತಾರೆ ಎಂಬ ಬಗ್ಗೆ ಅಲ್ಲಾಹನು ಪರೀಕ್ಷಿಸುತ್ತಾನೆ, ಅಲ್ಲಾಹನು ಟಿ.ವಿ.ಯನ್ನು ನಮ್ಮ ಸ್ವಾಧೀನ ದಲ್ಲಿರಿಸಿದ್ದಾನೆ. ಟಿ.ವಿ. ಅಲ್ಲಾಹನ ಗುಣಗಾನ ಮಾಡುತ್ತಿದೆ. ಆದರೆ ನಾನು ಅದನ್ನು ತಡೆಯುತ್ತಿದ್ದೇನೆ. ಅಲ್ಲಾಹನಿಗೆ ಇಷ್ಟ ಇಲ್ಲದ ಕಾರ್ಯಕ್ರಮವನ್ನು ಈ ಟಿ.ವಿ.ಯ ಪರದೆಯಲ್ಲಿ ನನಗೆ ಕಾಣಬರುತ್ತಿದೆ. ಟಿ.ವಿ. ನನ್ನನ್ನು ದ್ವೇಷಿಸುತ್ತಿರಬಹುದು ಪುನರುತ್ಥಾನದ ದಿನದಂದು ನನ್ನ ವಿರುದ್ಧ ಸಾಕ್ಷ್ಯ ಹೇಳಬಹುದು. ಅಲ್ಲಾಹನಲ್ಲಿ ನನ್ನ ಬಗ್ಗೆ ದೂರು ಹೇಳಬಹುದು ಎಂಬ ಯೋಚನೆ ನನ್ನಲ್ಲಿ ಉಂಟಾಯಿತು.

ಈ ಯೋಚನೆ ಬಂದ ತಕ್ಷಣ ನನ್ನ ಬೆರಳು ತನ್ನಿಂತಾನೆ ರಿಮೋಟ್‌ನ ಮೇಲೆ ಹೋಯಿತು. ಅಲ್ಲಾಹನ ಅನುಗ್ರಹದಿಂದ ನಾನಂದು ಟಿ.ವಿ.ಯಲ್ಲಿ ಅಲ್ಲಾಹನಿಗೆ ಇಷ್ಟ ಇಲ್ಲದ ದೃಶ್ಯಗಳನ್ನು ವೀಕ್ಷಿಸಲಿಲ್ಲ. ಅಲ್ಲಾಹನು ನನ್ನನ್ನು ರಕ್ಷಿಸಿದ. ಇನ್ನು ಮುಂದಕ್ಕೆ ಯಾವ ಕಾರಣಕ್ಕೂ ಟಿ.ವಿ.ಗೆ ತೊಂದರೆ ಕೊಡಲಾರೆ ಮತ್ತು ಟಿ.ವಿ.ಯಲ್ಲಿ ಕೇವಲ ಅಲ್ಲಾಹನಿಗೆ ಇಷ್ಟ ಇರುವ ಕಾರ್ಯಕ್ರಮಗಳನ್ನು ವೀಕ್ಷಿಸುವೆ ಎಂಬ ವಾಗ್ದಾನವನ್ನು ನಾನು ನನ್ನಲ್ಲೇ ಮಾಡಿದೆ.

ನನ್ನ ಈ ನಿರ್ಣಯದಿಂದ ನನಗೆ ಸಿಕ್ಕಿದ ನೆಮ್ಮದಿ, ಸಮಾಧಾನವು ನಿಮಗಾರಿಗೂ ಅರಿಯಲು ಸಾಧ್ಯವಿಲ್ಲ. ನನಗೆ ನಿರರ್ಥಕ ಕಾರ್ಯಗಳಿಂದ ರಕ್ಷಣೆ ದೊರೆಯಿತು. ನಿರರ್ಥಕ ಕಾರ್ಯಗಳಲ್ಲಿ ವ್ಯಯಿಸಿದ ಸಮಯದ ಬಗ್ಗೆ ಯೋಚಿಸಿ ಪಶ್ಚಾತ್ತಾಪ ಪಟ್ಟೆ. ಅಲ್ಲಾಹನು ದಯಪಾಲಿಸಿರುವ ಅನುಗ್ರಹಗಳಿಗೆ ಹೇಗೆ ಕೃತಜ್ಞತೆ ಸಲ್ಲಿಸಬೇಕು ಎಂದು ತಿಳಿದುಕೊಂಡೆ. ನನ್ನ ಕೈಗಳು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ಕೆಲಸ ಮಾಡಿದರೆ ಅದು ಅಲ್ಲಾಹನಿಗೆ ಸಲ್ಲಿಸುವ ಕೃತಜ್ಞತೆ. ನನ್ನ ಕಣ್ಣುಗಳು ಅಲ್ಲಾಹನ ಸಂಪ್ರೀತಿಗಾಗಿ ಅಲ್ಲಾಹನಿಗೆ ಇಷ್ಟವಾದುದನ್ನು ನೋಡಿದರೆ ಅದು ಕಣ್ಣುಗಳು ಸಲ್ಲಿಸುತ್ತಿರುವ ಕೃತಜ್ಞತೆ. ನನ್ನ ಕಾಲುಗಳು ಅಲ್ಲಾಹನ ಅನುಸರಣೆ ಮಾಡುವತ್ತ ಸಾಗಿದರೆ ಅದು ಕಾಲುಗಳು ಸಲ್ಲಿಸುವ ಕೃತಜ್ಞತೆ. ಅಂದರೆ ನಾಲಿಗೆಯೊಂದಿಗೆ ದೇಹದ ಪ್ರತಿಯೊಂದು ಅಂಗ ಮತ್ತು ನಮ್ಮ ಬುದ್ಧಿ ಶಕ್ತಿಯು ಅಲ್ಲಾಹನ ಪ್ರಶಂಸೆಯೊಂದಿಗೆ ತಸ್ಬೀಹ್ ಮಾಡುತ್ತದೆ.

## ತಸ್ಬೀಹ್(ಜಪ)ನ ಕಾರಣ ದೊಡ್ಡ ಪಾಪಗಳನ್ನು ತ್ಯಜಿಸಿದೆ

ಸಹೋದರಿ ತನ್ನ ಆತ್ಮಕಥೆಯನ್ನು ಹೇಳಿ ಮುಗಿಸುವಷ್ಟರಲ್ಲಿ ಇನ್ನೋರ್ವ ಸಹೋದರಿ ತನಗಾದ ಅನುಭವ ಹಂಚಲು ಪ್ರಾರಂಭಿಸಿದಳು. 'ಈ ಸೂಕ್ತ ನನ್ನನ್ನು ದೊಡ್ಡ ಪಾಪಗಳನ್ನು ಮಾಡುವುದರಿಂದ ತಡೆದಿದೆ.' ಆಕೆಯ ಮಾತು ಕೇಳಿ ಎಲ್ಲರೂ ಆಶ್ಚರ್ಯಚಕಿತರಾಗಿ ಆಕೆಯ ಕಡೆ ನೋಡಿದರು. "ಹೌದು, ಈ ಸೂಕ್ತ ಪರದೂಷಣೆ ಯಂತಹ ದೊಡ್ಡ ಪಾಪದಿಂದ ನನ್ನನ್ನು ತಡೆದಿದೆ. ಒಮ್ಮೆ ನಾನು ಅಮ್ಮನ ಆರೋಗ್ಯದ ಬಗ್ಗೆ ವಿಚಾರಿಸಲು ಕರೆ ಮಾಡಿದ್ದೆ, ಮಾತನಾಡುತ್ತಾ ಆಕೆ ತನ್ನ ಸಂಬಂಧಿಕರೊಬ್ಬರ ಬಗ್ಗೆ ಹೇಳತೊಡಗಿದರು. ಅಮ್ಮ ಸಂಬಂಧಿಕರ ಬಗ್ಗೆ ಹೇಳಿದರೆ ಬಹಳ ಆಸಕ್ತಿಯಿಂದ ಕೇಳುವುದು, ಹೇಳುವುದು ನಮ್ಮ ರೂಢಿಯಾಗಿತ್ತು. 'ವೈರಿ'ಯ ಪರದೂಷಣೆ ನಮಗೆ ಉತ್ಸಾಹ ಕೊಡುತ್ತಿತ್ತು. ಅಂದು ಕೂಡ ನಾವು ಪರದೂಷಣೆಯಲ್ಲಿ ಮಗ್ನರಾಗಿದ್ದೆವು. ಅಷ್ಟರಲ್ಲಿ ನನ್ನ ಕೈಯಲ್ಲಿರುವ ಫೋನ್ ಕೂಡ ಅಲ್ಲಾಹನ ತಸ್ಬೀಹ್ ಮಾಡುತ್ತಿದೆ ಎಂಬ ಮಾತು ನೆನಪಾಯಿತು. ಹಾಗಾದರೆ ಫೋನ್ ನಮ್ಮ ಮಾತಿನಿಂದ ಸಂತೋಷದ ಬದಲು ಎಷ್ಟು ನೊಂದುಕೊಳ್ಳುತ್ತಿರಬಹುದು ಎಂದು ಯೋಚನೆ ಬಂದ ತಕ್ಷಣ, ಸಂಬಂಧಿಕರ ಪರದೂಷಣೆಯನ್ನು ನಿಲ್ಲಿಸಿ, ಸೂಕ್ತವನ್ನು ಅನುಸರಿಸುವ ಬಗ್ಗೆ ಮಾತನಾಡಿದೆ. ಯಾವ ಸೂಕ್ತವನ್ನು ಹೇಗೆ ಆಯ್ದು, ಯಾವ ರೀತಿ ಅನುಸರಿ ಸುತ್ತೇನೆ ಎಂಬ ಬಗ್ಗೆ ಅಮ್ಮನಿಗೆ ವಿವರಿಸಿದೆ. ಫೋನ್ ತಸ್ಬೀಹ್ ಮಾಡುತ್ತಿರುವ ಬಗ್ಗೆ ಈಗ ಜ್ಞಾಪಕಕ್ಕೆ ಬಂತು ಎಂದು ಅಮ್ಮನಿಗೆ ಹೇಳಿದೆ. ತಸ್ಬೀಹ್ ಮಾಡುತ್ತಿರುವ ಫೋನಿನ ಮುಖಾಂತರ ನಾವು ಪರದೂಷಣೆ ಮಾಡಿ ಫೋನಿಗೆ ಎಷ್ಟು ಕಷ್ಟ ಕೊಟ್ಟಿರಬಹುದು ಎಂದು ಅಮ್ಮನಿಗೆ ಹೇಳಿದೆ.

ಈ ರೀತಿ ಅಲ್ಲಾಹನು ಅವತೀರ್ಣಗೊಳಿಸಿದ ಸೂಕ್ತ, وَإِنْ مِّنْ شَيْءٍ إِلَّا يُسَبِّحُ بِحَمْدِهِ وَلَٰكِن لَّا تَفْقَهُونَ تَسْبِيحَهُمْ "ಅವನ ಪ್ರಶಂಸೆಯೊಂದಿಗೆ ಅವನ ತಸ್ಬೀಹ್(ಜಪ) ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ ತಸ್ಬೀಹನ್ನು ಅರಿಯುವುದಿಲ್ಲ" ಎಂಬ ಸೂಕ್ತವನ್ನು ಅನುಸರಿಸಿದೆ. ಪರದೂಷಣೆಯನ್ನು ಬಿಟ್ಟು, ಪವಿತ್ರ ಕುರ್‌ಆನಿನ ಅನುಸರಣೆ, ತಹಜ್ಜುದ್, ಬೆಳಗ್ಗಿನ ನಮಾಝ್ ಇತ್ಯಾದಿಗಳ ಬಗ್ಗೆ ಮಾತನಾಡತೊಡಗಿದೆ. ಈ ರೀತಿ ನಮ್ಮ ಮಾತು ಅಲ್ಲಾಹನ ಮಾತಿನೊಂದಿಗೆ ಮುಗಿಯಿತು. ಆದರೆ ನನಗೆ ಒಂದು ಮಾತು ನೆನಪಾಗಿ ಬಹಳ ಸಂತೋಷವಾಯಿತು. ನನಗೆ ಮತ್ತು ಈ ಫೋನಿಗೆ ಗಾಢವಾದ ಸಂಬಂಧವಿರುವಂತೆ ಭಾಸವಾಯಿತು. ನಾವಿಬ್ಬರೂ ಪ್ರಶಂಸೆಯೊಂದಿಗೆ ತಸ್ಬೀಹ್(ಜಪ) ಮಾಡುವ ದೇವನು ಒಂದೇ ಆಗಿದ್ದಾನೆ. ಆತನ ಸೂಕ್ತವನ್ನು ಅನು ಸರಿಸುವುದು ಅದರ ನೈಜ ಸೌಂದರ್ಯವಾಗಿದೆ

ಎಂಬ ವಿಷಯ ಮನವರಿಕೆ ಆಗಿ ಪುಳಕಗೊಂಡೆ.

ಕುರ್‌ಆನ್ ತರಗತಿಗೆ ಬರುವ ಪ್ರತಿಯೊಬ್ಬರಲ್ಲೂ ಈ ಸೂಕ್ತ ಪ್ರಭಾವ ಬೀರಿತು ಕುರ್‌ಆನಿನ ಅನುಸರಣೆ ಕಷ್ಟದಾಯಕ ವಿಷಯವಲ್ಲ ಎಂದು ಎಲ್ಲರ ಅರಿವಿ ಬಂತು. ಆದರೆ ಅದಕ್ಕಾಗಿ ಸನ್ನದ್ಧರಾಗುವುದು, ಚಿಂತನೆ ನಡೆಸುವುದು ಮತ ಅದರಂತೆ ನಡೆಯುವುದು ಅಗತ್ಯ.

## ಮಕ್ಕಳ ಮೇಲೆ ಪರಿಣಾಮ

ಮಸೀದಿಯಿಂದ ಹೊರಟು ಮನೆಗೆ ಹೋಗಲು ಅನುವಾದಾಗ, ಸಹೋದ ಯೊಬ್ಬರು ನನ್ನೊಂದಿಗೆ ಬರುತ್ತೇನೆ ಎಂದು ಕೇಳಿಕೊಂಡರು. ದಾರಿಯಲ್ಲಿ ಮಾತನ ಡುತ್ತಾ ನನ್ನ ಮೇಲೆ ಬಹಳ ಪ್ರಭಾವಗೊಳ್ಳುವಂತಹ ಒಂದು ಮಾತನ್ನು ಹೇಳಿದರು

ನಮ್ಮ ಮನೆಯಲ್ಲಿ ಐದು ವರ್ಷಕ್ಕೆ ಸ್ವಲ್ಪ ಮೇಲ್ಪಟ್ಟ ಸೋದರನ ಮಗ ಇದ್ದಾನ ಅವನಿಗೆ ಗೋಡೆಯಲ್ಲಿ, ಮೇಜಿನ ಮೇಲೆ, ಬಾಗಿಲು ಎಲ್ಲ ಕಡೆ ಗೆರೆ ಎಳೆಯು ಅಭ್ಯಾಸ. ಅವನಿಗೆ ಹಲವು ಸಲ ಹೊಡೆದರೂ ಬಡಿದರೂ ಗದರಿಸಿದರೂ ಅರ್ಥ ಮಾಡಿಕೊಟ್ಟರೂ ಅವನು ಕೇಳುತ್ತಿರಲಿಲ್ಲ. ಅಂದು ಕುರ್‌ಆನ್ ತರಗತಿಯಲ್ಲಿ ಕೇಳಿ وَإِنْ مِّنْ شَيْءٍ إِلَّا يُسَبِّحُ بِحَمْدِهِ وَلَٰكِن لَّا تَفْقَهُونَ تَسْبِيحَهُمْ ಎಂಬ ಸೂಕ್ತವನ್ನು ಅನುಸರಿಸ ವುದು ಕಷ್ಟ ಎಂದು ತೋರಿದಾಗ, ಸೂಕ್ತವನ್ನು ಪುನಾರಾವರ್ತಿಸತೊಡಗಿದೆ. ನ ಮನಸ್ಸು ಅದನ್ನು ಸ್ವೀಕರಿಸಬೇಕು. ನನ್ನ ಯೋಚನೆ ಅದರಂತೆ ಸಾಗಬೇಕು ಮತ ನನ್ನ ಅಂಗಾಂಗಗಳು ಅದರಂತೆ ಕಾರ್ಯವೆಸಗಬೇಕು ಎಂಬುದು ನನ್ನ ಆಶೆಯಾಗಿತ್ತು

ಅಂದು ಮಗು ಮೇಜಿನ ಮೇಲೆ ಗೆರೆ ಎಳೆಯುತ್ತಿದ್ದ ಮೇಜು ಗೆರೆಯಿಂ ತುಂಬಿತ್ತು. ಆತನನ್ನು ಹತ್ತಿರ ಕರೆದು 'ಈ ಮೇಜು ಅಲ್ಲಾಹನ ತಸ್ಬೀಹ್ ಮಾಡುತ್ತ ನಿನಗೆ ಗೊತ್ತಿದೆಯೇ?' ಎಂದು ಕೇಳಿದೆ. ಆತ ಆಶ್ಚರ್ಯಚಕಿತನಾಗಿ ನನ್ನ ಕ ನೋಡಿದ. ಆತನ ಮುಖ ಕಪ್ಪೇರಿ 'ಸತ್ಯವಾ?' ಎಂದು ಕೇಳಿದ. 'ಹೌದು, ಎಲ್ಲವನು ಅರಿಯುವ ಅಲ್ಲಾಹನು ನಮಗೆ ಈ ವಿಷಯವನ್ನು ತಿಳಿಸಿರುವನು, ನೀನು ಮೇಜನ್ನು ಏನು ಮಾಡಿರುವಿ ನೋಡು. ಮೇಜಿಗೆ ನಿನ್ನ ಮೇಲೆ ಎಷ್ಟು ಕೋ ಬಂದಿರಬಹುದು. ಅದು ಅಲ್ಲಾಹನಲ್ಲಿ ದೂರು ಕೊಡಲೂ ಬಹುದಲ್ಲವೆ?' ಎಂ

ಮಗು ನನ್ನನ್ನೊಮ್ಮೆ ಮೇಜನ್ನೊಮ್ಮೆ ನೋಡಿ, ಮೇಜಿನ ಮೇಲೆ ಕಿವಿ ಇ 'ನನಗೆ ಕೇಳುತ್ತಿಲ್ಲವಲ್ಲ' ಎಂದು ಹೇಳಿದ. 'ಹೌದು, ನಿನ್ನ ಮಾತು ಸರಿ ಅದ ತಸ್ಬೀಹ್ ನಮಗೆ ಕೇಳುವುದಿಲ್ಲ ಎಂದು ಅಲ್ಲಾಹನು ಹೇಳುತ್ತಾನೆ.' ಮಗು ಸ್ವ ಹೊತ್ತು ಅದೇ ರೀತಿ ನಿಂತು, ಓಡಿ ಹೋಗಿ ಒಂದು ಬಟ್ಟೆ ತಂದು ಮೇಜನ

ಚ್ಛಗೊಳಿಸತೊಡಗಿದ. ಮೆಲ್ಲಮೆಲ್ಲನೆ ಆದರೆ ಬಹಳ ಆವೇಶದಿಂದ ಒರೆಸತೊಡಗಿದ. ಲ್ಲೆಲ್ಲ ಆತ ಗೆರೆ ಎಳೆದಿದ್ದಾನೋ ಅಲ್ಲೆಲ್ಲಾ ಒರೆಸತೊಡಗಿದ 'ನಾನು ಸಹಕರಿಸಲೇ' ಂದು ನಾನು ಕೇಳಿದೆ. 'ಹೌದು ಬನ್ನಿ, ಇಬ್ಬರೂ ಒಟ್ಟಿಗೆ ಒರೆಸಿದರೆ ಬೇಗ ಆಗುತ್ತದೆ. ವೆಲ್ಲ ಅಲ್ಲಾಹನ ತಸ್ಬೀಹ್ ಮಾಡುತ್ತಿವೆಯಲ್ಲ? ಬೇಗ ಸ್ವಚ್ಛಗೊಳಿಸುವ' ಎಂದ.

ಸಂಜೆ ಆತನ ಅಮ್ಮ ಕೆಲಸದಿಂದ ಮನೆಗೆ ಬಂದಾಗ, ಮಗು ಓಡಿ ಹೋಗಿ ನ್ನ ಅಮ್ಮನನ್ನು ಅಪ್ಪಿ ಹಿಡಿದು, ತನ್ನ ಪುಟ್ಟ ಕೈಗಳಿಂದ ಮೇಜನ್ನು ತೋರಿಸುತ್ತಾ. ಅಮ್ಮ ಈ ಮೇಜು ಅಲ್ಲಾಹನ ತಸ್ಬೀಹ್ ಮಾಡುತ್ತದೆ ನಿನಗೆ ಗೊತ್ತಾ?' ಎಂದು ೕಳಿದ. 'ಹೌದು ಮಗೂ! ಪ್ರತಿಯೊಂದು ವಸ್ತು ಅಲ್ಲಾಹನ ತಸ್ಬೀಹ್ ಮಾಡುತ್ತದೆ' ಂದು ಆಕೆ ಹೇಳಿದಾಗ ಆತ ನನ್ನ ಮುಖ ನೋಡಿದ. ನಂತರ ಕೋಣೆಯಲ್ಲಿದ್ದ ್ರತಿಯೊಂದು ವಸ್ತುವನ್ನು ನೋಡಿ, ತನ್ನ ಕೋಣೆಗೆ ಹೋಗಿ ಮಲಗಿದ. ಅಂದಿನ ಂತರ ಅಲ್ಲಲ್ಲಿ ಗೀಚುವುದನ್ನು ಬಿಟ್ಟುಬಿಟ್ಟ, ಮತ್ತು ತನ್ನ ಸಂಗಡಿಗರಿಗೂ ವಿಷಯ ಳಿಸಿದ. ಒಮ್ಮೆ ಆತನ ಅಣ್ಣ ಆತನಿಗೆ ಹೊಡೆಯುತ್ತಿರುವಾಗ, ಆತ 'ಅಣ್ಣ ನನಗೆ ಹೊಡೆಯಬೇಡಿ, ನಾನು ಅಲ್ಲಾಹನ ತಸ್ಬೀಹ್ ಮಾಡುತ್ತಿದ್ದೇನೆ' ಎಂದು ಬೊಬ್ಬಿಡ ೊಡಗಿದ. ಆತನ ಮಾತು ಕೇಳಿ ಎಲ್ಲರೂ ನಕ್ಕರು. ಆತನ ಅಣ್ಣ ಸಂತೋಷದಿಂದ ನ ತ್ತುಬಿಟ್ಟ, ಮಗು 'ನಾನು ಅಲ್ಲಾಹನ ತಸ್ಬೀಹ್ ಮಾಡುತ್ತಿದೇನೆ, ನನ್ನನ್ನು ಹೊಡೆಯ ೇಡಿ' ಎಂದು ಹೇಳುತ್ತ ಅಳುತ್ತಿದ್ದನು.

ಪವಿತ್ರ ಕುರ್‌ಆನಿನ ಆದೇಶದಂತೆ ಜೀವನ ಸಾಗಿಸುವುದು ಬಹಳ ಅಗತ್ಯ. ಅಲ್ಲಾಹನು ಪವಿತ್ರ ಕುರ್‌ಆನನ್ನು ಅದೇ ಕಾರಣಕ್ಕೆ ಅವತೀರ್ಣಗೊಳಿಸಿರುವುದು. ನ್ನ ದಾಸರು ಕುರ್‌ಆನಿನ ಆದೇಶದಂತೆ ಜೀವನ ಸಾಗಿಸಬೇಕೆಂದು ಅಲ್ಲಾಹನು ಯಸುತ್ತಾನೆ. ಐದು ವರ್ಷದ ಮಗು ಅರ್ಥ ಮಾಡಿಕೊಂಡ ವಿಷಯವನ್ನು ರಿಯರು ಯಾವಾಗ ಅರ್ಥ ಮಾಡಿಕೊಳ್ಳುತ್ತಾರೋ?

❖ ❖ ❖ ❖

# ಮಾತಾಪಿತರೊಂದಿಗೆ ಸದ್ವರ್ತನೆ

ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ಹೇಳುವುದು ಹಾಗೂ ಭಾಷಣ ಮಾಡುವುದು ಬಹಳ ಸುಲಭ. ಆದರೆ ಅವರ ಸೇವೆ ಹಾಗೂ ಅವರೊಂದಿಗೆ ಸೌಜನ್ಯದೊಂದಿಗೆ ವರ್ತಿಸುವುದು ಅಷ್ಟೇ ಕಷ್ಟ. ಅಲ್ಲಾಹನ ಮೇಲೆ ದೃಢ ಮತ್ತು ಅಚಲವಾದ ವಿಶ್ವಾಸ, ತಾಳ್ಮೆ, ಸಹನೆ ಇದ್ದವರು ನಿಸ್ಸಂದೇಹವಾಗಿ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸುತ್ತಾರೆ. ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸುತ್ತಾ, ಸವಿನುಡಿಯೊಂದಿಗೆ ಮಾತನಾಡಬೇಕೆಂದು ಕುರ್‌ಆನ್ ಮಕ್ಕಳಿಗೆ ಆದೇಶಿಸುತ್ತದೆ. ಮಾತಾಪಿತರೊಂದಿಗೆ ನಿಷ್ಠೆ, ಒಲವು ಹಾಗೂ ಸೌಜನ್ಯದಿಂದ ವರ್ತಿಸುವುದು ಒಂದು ಸುಗಂಧವನ್ನು ಪಸರಿಸುವಂತೆ. ಇದು ದೇವಾನುಸರಣೆಯ ಸಾಕ್ಷ್ಯ ವಹಿಸುವಂತೆಯೂ ಹೌದು. ಈ ಕರ್ಮವು ಮೂಲಭೂತ ಒಳಿತುಗಳಲ್ಲಿ ಸೇರಿಕೊಂಡಿದೆ. ಆದುದರಿಂದ ಮುಸ್ಲಿಮ್ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಇದರಲ್ಲಿ ತರಬೇತಿ ಪಡೆಯಬೇಕು. ಈ ಬಗ್ಗೆ ಅಲ್ಲಾಹ್ ಮತ್ತು ಅಲ್ಲಾಹನ ಸಂದೇಶ ವಾಹಕರು(ಸ) ಕೂಡ ತಾಕೀತು ಮಾಡಿರುವರು.

ಈ ವಾರದ ಕುರ್‌ಆನ್ ತರಗತಿಯಲ್ಲಿ ಅಲ್ಲಾಹನ ಈ ಸೂಕ್ತವನ್ನು ಅನುಸರಿಸುವೆವು ಎಂದು ನಾವು ನಿರ್ಧರಿಸಿದೆವು–

فَلَا تَقُلْ لَهُمَا أُفٍّ وَلَا تَنْهَرْهُمَا "ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ." (ಪವಿತ್ರ ಕುರ್‌ಆನ್: 17: 23)

ಎಂದಿನಂತೆ, ನಾನು ಈ ಸೂಕ್ತವನ್ನು ವ್ಯಾಖ್ಯಾನಿಸಿದೆ. ಈ ಬಗ್ಗೆ ಸರಿಯಾದ ಮಾಹಿತಿ ಕೊಟ್ಟ ನಂತರ, ತರಗತಿಯ ಪ್ರತಿಯೋರ್ವ ಸದಸ್ಯ, ಯಾವ ಕಾರಣಕ್ಕೂ ತಮ್ಮ ಮಾತಾಪಿತರನ್ನು ಅವರು ಏನೇ ಹೇಳಿದರೂ ಮಾಡಿದರೂ ನಿಂದಿಸಲಾರೆವು ಹಾಗೂ ಹಿಂಸಿಸಲಾರೆವು ಎಂದು ವಾಗ್ದಾನ ಮಾಡಿದೆವು.

ಕೆಲವು ದಿನಗಳ ನಂತರ, ತಮ್ಮ ಅನುಭವಗಳನ್ನು ಹೇಳಲು ಕುರ್‌ಆನಿನ

ತರಗತಿಯಲ್ಲಿ ಸೇರಿದ ಮಹಿಳೆಯರಲ್ಲಿ ಐವರು ಮಹಿಳೆಯರು, ಈ ಸೂಕ್ತವನ್ನು ಅನುಸರಿಸಿದ ಅನುಭವವನ್ನು ನಮ್ಮ ಮುಂದಿಟ್ಟರು.

## ಅಲ್ಲಾಹನ ಬದಲಿಗೆ ಮಂತ್ರವಾದಿ!

ನಮ್ಮಮ್ಮ ನನ್ನನ್ನು ಭೇಟಿಯಾಗಲು ಮನೆಗೆ ಬಂದಿದ್ದರು. ಅವರು ಬಹಳ ಬೇಸರ ಹಾಗೂ ದುಃಖದಲ್ಲಿರುವಂತೆ ಕಂಡು ಬರುತ್ತಿತ್ತು. ದುಃಖದ ಕಾರಣ ಏನೆಂದು ಕೇಳಿದೆ. "ನಿನ್ನ ಸಹೋದರಿ ಅವಿವಾಹಿತಳಾಗಿ ಉಳಿದಿದ್ದಾಳೆ. ಸಮಯ ಮೀರುತ್ತಿದೆ. ಆಕೆಯ ಮೇಲೆ ಯಾರಾದರೂ ಮಾಟ ಮಾಡಿರಬಹುದೇ ಎಂದು ಜನರು ಕೇಳುತ್ತಿದ್ದಾರೆ. ಆಕೆಗೆ ಭೂತ ಹಿಡಿದಿರಬಹುದು. ಅದೇ ಆಕೆಯ ವಿವಾಹವಾಗದಂತೆ ತಡೆಯುತ್ತಿದೆ ಎಂದು ಜನರು ಮಾತನಾಡುತ್ತಿದ್ದಾರೆ. ನಾವಿಬ್ಬರೂ ಮಂತ್ರವಾದಿಯ ಬಳಿ ಹೋಗುವ. ಆತನ ಸಹಕಾರದಿಂದ ನಿನ್ನ ಸಹೋದರಿಯ ವಿವಾಹ ನಡೆಯಬಹುದು" ಎಂದು ಹೇಳಿದರು. ಅಮ್ಮನ ಮಾತು ಕೇಳಿ ಬಹಳ ಬೇಸರವಾಯಿತು. ತಕ್ಷಣ ನನ್ನ ಬಾಯಿಯಿಂದ ಪವಿತ್ರ ಕುರ್‌ಆನಿನ ಈ ಸೂಕ್ತ ಹೊರಟಿತು.

وَإِن يَمْسَسْكَ ٱللَّهُ بِضُرٍّ فَلَا كَاشِفَ لَهُۥٓ إِلَّا هُوَ ۖ وَإِن يَمْسَسْكَ بِخَيْرٍ فَهُوَ عَلَىٰ كُلِّ شَىْءٍ قَدِيرٌ

"ಅಲ್ಲಾಹನು ನಿಮಗೆ ಯಾವುದೇ ರೀತಿಯ ಕೇಡನ್ನುಂಟು ಮಾಡಿದರೆ ಅವನ ಹೊರತು ನಿಮ್ಮನ್ನು ಆ ಕೇಡಿನಿಂದ ರಕ್ಷಿಸುವವರು ಯಾರೂ ಇಲ್ಲ, ಅವನು ನಿಮಗೆ ಒಳಿತನ್ನುಂಟು ಮಾಡಿದರೆ ಅವನು ಸಕಲ ಕಾರ್ಯಗಳಿಗೆ ಸಮರ್ಥನು."

**(ಪವಿತ್ರ ಕುರ್‌ಆನ್: 6: 17)**

ಇದನ್ನು ಕೇಳಿ ತಾಯಿ ಬಹಳ ಕೋಪಗೊಂಡು, "ನನ್ನ ಮಗಳ ಒಳಿತಿಗಾಗಿ ನಾನು ಈ ದಾರಿಯನ್ನು ಹಿಡಿದಿದ್ದೇನೆ. ಇದರಲ್ಲಿ ತಪ್ಪೇನಿದೆ? ಇತರರಿಗೆ ಹಾನಿಯುಂಟು ಮಾಡಲು ಹೋಗುತ್ತಿಲ್ಲವಲ್ಲ? ಆದರೆ ನೀನು ನಿನ್ನ ಸಹೋದರಿಯ ಒಳಿತು ಬಯಸದ ಕಾರಣ, ನೀನು ನನ್ನೊಂದಿಗೆ ಬರಲು ಇಷ್ಟ ಪಡುತ್ತಿಲ್ಲ" ಎಂದರು.

ಈ ವಿಷಯದ ಕುರಿತು ನಮ್ಮಿಬ್ಬರ ನಡುವೆ ಬಹಳ ಜಗಳವಾಯಿತು. ನಾನು ಸತ್ಯದ ಹಾದಿಯಲ್ಲಿದ್ದರೆ ನನ್ನ ತಾಯಿ ತಪ್ಪು ಹಾದಿಯಲ್ಲಿದ್ದಾರೆ. ಅವರಿಗೆ ಸತ್ಯದ ಹಾದಿ ತೋರಿಸಬೇಕೆಂದು ಯೋಚಿಸಿದೆ. ಆದರೆ ಪಿಶಾಚಿಯ ದುಷ್ಪ್ರೇರಣೆಯಲ್ಲಿ ಸಿಲುಕಿದ ನನಗೆ ಸರಿಯಾದ ದಾರಿ ಹೊಳೆಯದಾಯಿತು. ಸತ್ಯವನ್ನು ಆದಷ್ಟು ಬೇಗ ಹೇಳಿಬಿಡಬೇಕೆಂಬ ರಭಸದಲ್ಲಿ ತಪ್ಪು ದಾರಿಯನ್ನು ಹಿಡಿದೆ. ಆಕೆ ನನ್ನ ಮಾತೆಯೆಂದು ಮರೆತು, ಆಕೆಯೊಂದಿಗೆ ತಕರಾರಿಗೆ ನಿಂತೆ, ನನ್ನ ಸ್ವರ ಆಕೆಯ ಸ್ವರಕ್ಕಿಂತ ಎತ್ತರಕ್ಕೆ ಹೋಯಿತು. ಅಷ್ಟರಲ್ಲಿ ಕುರ್‌ಆನ್ ತರಗತಿಯಲ್ಲಿ ಕಲಿತ ಕುರ್‌ಆನ್ ಸೂಕ್ತ ನೆನಪಿಗೆ

ಬಂತು. ತಕ್ಷಣ ನನ್ನ ಸ್ವರ ಕ್ಷೀಣಿಸಿತು, ಕೋಪ ತಣ್ಣಗಾಯಿತು; ತಾಯಿಯ ಗೌರವ ಹಾಗೂ ಸ್ಥಾನಮಾನದ ಬಗ್ಗೆ ನೆನಪಾಯಿತು. ಆಕೆಯ ಕೈ ಹಿಡಿದು ಮುದ್ದಿ ಸಿದ ಮತ್ತು ತನ್ನ ವರ್ತನೆಗೆ ಕ್ಷಮೆಯಾಚಿಸಿದೆ. ಆಕೆಯ ಮನವೊಲಿಸಲು ಪ್ರಯತ್ನಿ ಸಿದೆ ಇಷ್ಟು ಮಾಡಿದಾಗ ನನ್ನ ಮನಸ್ಸಿಗೆ ಸಮಾಧಾನ ಹಾಗೂ ನೆಮ್ಮದಿ ದೊರೆಯಿತು

ನನ್ನ ಈ ಬದಲಾದ ವರ್ತನೆಯಿಂದ ಅಮ್ಮನಿಗೆ ಸಮಾಧಾನವಾಯಿತು ಅವರು ನೆಮ್ಮದಿಯಿಂದ ಕುಳಿತು ಸ್ವಲ್ಪ ಸುಧಾರಿಸಿಕೊಂಡು, "ಎಲ್ಲರ ಬಾಯಿಯಲ್ಲಿ ಆ ಮಂತ್ರವಾದಿಯ ಹೆಸರು ಕೇಳಿಬರುತ್ತಿದೆ. ಬಹಳ ಪ್ರಸಿದ್ಧ ಮಂತ್ರವಾದಿಯಂತೆ ಆತ ನಿನ್ನ ಸಹೋದರಿಯ ವಿವಾಹ ಮಾಡಿಸಲೂ ಬಹುದು ಎಂಬ ಭರವಸೆ ನನಗಿದೆ. ಒಂದು ವೇಳೆ ನನ್ನ ಈ ಕಾರ್ಯ ನೆರವೇರಿಸಿದರೆ ಉತ್ತಮ ಉಡುಗೊರೆಯಿಂದ ಸತ್ಕರಿಸುವೆ. ಯಾವಾಗ ಹೋಗುವ ಹೇಳು?" ಎಂದು ಹೇಳಿದರು. ನಾನು ಕೋಪಗೊಳ್ಳದೆ ಬಹಳ ಪ್ರೀತಿಯಿಂದ "ನನಗೋರ್ವರ ಪರಿಚಯವಿದೆ. ಅವರು ಉತ್ತಮ ರೀತಿಯಿಂದ ಪರಿಹಾರವನ್ನು ತೋರಿಸುತ್ತಾರೆ. ಅವರು ಸಂಭಾವನೆಯನ್ನು ಪಡೆಯುವುದಿಲ್ಲ ಅವರು ಮಾಡುವ ಕೆಲಸದಲ್ಲಿ ಯಾವುದೇ ಸಂದೇಹವಿಲ್ಲ. ನಿಮ್ಮ ಕಾರ್ಯ ಆಗುವ ತನಕ ನಿಮಗೆ ನೆಮ್ಮದಿ ದೊರೆಯುವಂತೆ ಅವರು ಮಾಡುತ್ತಾರೆ" ಎಂದು ಉತ್ತರಿಸಿದ

ಇದನ್ನು ಆಲಿಸಿದ ಅಮ್ಮ, ಸಂತೋಷದಿಂದ ಹೇಳಿದರು, "ಸುಬ್ಹಾನಲ್ಲಾಹ್ ನನ್ನ ಸ್ನೇಹಿತೆಯರಿಗೆ ಬಹುಶಃ ಈ ವ್ಯಕ್ತಿಯ ಬಗ್ಗೆ ತಿಳಿದಿಲ್ಲ. ಆದರೆ ನಿನಗೆ ಈ ವ್ಯಕ್ತಿಯ ಮೇಲೆ ಭರವಸೆಯಿದ್ದರೆ ಸಾಕು, ನಾವು ಅಲ್ಲಿಗೆ ಹೋಗುವ." ನಾನ ಹೇಳಿದೆ,"ಈ ಮಂತ್ರವಾದಿಯ ಸಾಮರ್ಥ್ಯ ಹಾಗೂ ಅರ್ಹತೆಯ ಬಗ್ಗೆ ಎರಡ ಮಾತಿಲ್ಲ. ಆತ ಒಂದು ಕೆಲಸ ಮಾಡಬೇಕೆಂದು ನಿರ್ಧರಿಸಿದರೆ, ಕೇವಲ 'ಆಗು' ಎಂದು ಆಜ್ಞಾಪಿಸಿದಾಗ, ಆ ಕೆಲಸ ತಕ್ಷಣ ಆಗುತ್ತದೆ. ಅತ ಸ್ವತಃ ಧನಿಕನಾಗಿರುವುದರಿಂದ ನಿಮ್ಮಿಂದ ಹಣ ಪಡೆಯಲಾರ" ಅತನಿಗೆ, ಆಶೆ, ಬಯಕೆಗಳೆಂಬುದು ಇಲ್ಲ. ಅ ಸ್ವತಃ ದಾನಿಯಾಗಿರುವನು. ನೀವು ಆತನಲ್ಲಿ ಹೋಗಿ, ಆತನ ಮುಂದೆ ಕೈ ಚಾಚಿ ನಿಮ್ಮ ಕಷ್ಟವನ್ನು ಹೇಳಿ ಪರಿಹಾರವನ್ನು ಕೇಳಿ."

ನನ್ನ ಮಾತಿನಿಂದ ಅಮ್ಮನಿಗೆ ಬಹಳ ಸಂತೋಷವಾಯಿತು. "ಈ ಮಂತ್ರವಾದಿಯ ಬಗ್ಗೆ ಕೇಳಿ ಬಹಳ ನೆಮ್ಮದಿಯೆನಿಸುತ್ತಿದೆ, ನಾವು ಸಮಯ ವ್ಯರ್ಥ ಮಾಡದೆ ಆದಷ್ಟು ಬೇಗ ಆತನಲ್ಲಿಗೆ ಹೋಗುವ ಮಗಳೇ. ನಿನಗೆ ಆತನ ಪರಿಚಯ ಇದೆ ತಾನೆ ನಮ್ಮನ್ನು ಕಾಯಿಸದೆ ತಕ್ಷಣ ಭೇಟಿಯಾಗುವಂತೆ ಮಾಡು" ಎಂದು ಹೇಳಿದರು "ಹಾಗೇ ಆಗಲಿ. ಹೊರಡಿ, ಅರೆ! ನಾವು ಹೋಗಬೇಕೆಂದಿಲ್ಲ. ಅವರು ಸ್ವತಃ ನಮ್ಮ ಬಂದಿದ್ದಾರೆ" ಅಮ್ಮ ಆಶ್ಚರ್ಯಚಕಿತರಾಗಿ ಆಚೆ ಈಚೆ ನೋಡ ತೊಡಗಿದರು

ನಾನು ತಕ್ಷಣ ಕಿಬ್ಲಾಭಿಮುಖವಾಗಿ ಕೂತು ಪ್ರಾರ್ಥಿಸತೊಡಗಿದೆ. ಬಹಳ ನಮ್ರತೆಯೊಂದಿಗೆ ಪ್ರಾರ್ಥಿಸತೊಡಗಿದೆ. ಅಲ್ಲಾಹನೊಡನೆ ಸಹಾಯ ಯಾಚಿಸತೊಡದೆ. ಕೈ ಎತ್ತಿ ಅಳುತ್ತಾ ಬೇಡತೊಡಗಿದೆ. ನನ್ನಮ್ಮ ಸಾಷ್ಟಾಂಗವೆರಗಿ ಒಂದೇ ಸಮನೆ ಅಳತೊಡಗಿದರು. ಅಲ್ಲಾಹನೊಡನೆ ಕ್ಷಮೆ ಯಾಚಿಸುತ್ತ ಸಹಾಯಕ್ಕಾಗಿ ಬೇಡತೊಡಗಿದರು. ಬೇಡುವವನು ಈ ರೀತಿ ಬೇಡುವಾಗ ಆತನ ಬೇಡಿಕೆಯನ್ನು ಪೂರೈಸಲಾಗುತ್ತದೆ. ಆ ಮಹಾದಾನಿ ಯಾವತ್ತೂ ಯಾರನ್ನೂ ಬರಿಗೈಯಲ್ಲಿ ಹಿಂದಿರುಗಿಸುವುದಿಲ್ಲ. ಸಹೋದರಿ ತನ್ನ ದುಃಖ ಭರಿತ ವೃತ್ತಾಂತ ಹೇಳಿ ಮುಗಿಸಿದಾಗ ಎಲ್ಲರ ಕಣ್ಣುಗಳು ಜೀವಗೊಂಡಿದ್ದವು.

## ಮಾತಾಪಿತರಲ್ಲಿ ಬದಲಾವಣೆ

ಆ ಸಹೋದರಿ ತನ್ನ ವೃತ್ತಾಂತ ಹೇಳಿ ಮುಗಿಸಿದಾಗ ಸಭೆಯಿಂದ ಇನ್ನೊಂದು ಸ್ವರ ಕೇಳಿ ಬಂತು "ನಾನೊಂದು ವಿಷಯ ತಿಳಿಸಲೇ? ನನ್ನ ವೃತ್ತಾಂತ ಕೇಳಲು ನೀವು ಇಷ್ಟ ಪಡುವಿರಾ?" ನಮ್ಮೆಲ್ಲರ ಕಣ್ಣು ಆ ಸ್ವರದ ಕಡೆ ತಿರುಗಿತು. 20 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವತಿಯೊಬ್ಬಳು ಅಲ್ಲಿ ನಿಂತಿದ್ದಳು. ಆಕೆ ತನ್ನ ವೃತ್ತಾಂತವನ್ನು ಹೇಳಲು ಪ್ರಾರಂಭಿಸಿದಳು. ನಾನು ನನ್ನ ಮಾತಾಪಿತರ ಏಕೈಕ ಸಂತಾನ. ಆದುದರಿಂದ ನನ್ನ ಆರೈಕೆಯಲ್ಲಿ ಅವರು ಬಹಳ ಕಾಳಜಿ ವಹಿಸುತ್ತ, ನನ್ನ ಪ್ರತಿಯೊಂದು ಮಾತನ್ನು ಕೇಳುತ್ತಿದ್ದರು ಹಾಗೂ ಪ್ರತಿಯೊಂದು ಬೇಡಿಕೆಯನ್ನು ಪೂರೈಸುತ್ತಿದ್ದರು. ಬಹಳ ಮುದ್ದಿನಿಂದ ಸಾಕುತ್ತಿದ್ದರು. ತಂದೆ ಸಂಪಾದಿಸಿ ತಂದದ್ದನ್ನು ನಾವು ಹರಾಮ್, ಹಲಾಲ್ ಎಂಬ ಬಗ್ಗೆ ಚಿಂತಿಸದೆ ತಿನ್ನುತ್ತಿದ್ದೆವು. ಜೀವನ ಈ ರೀತಿ ಸಾಗುತ್ತಿದ್ದಾಗ ಒಮ್ಮೆ ನಿಮ್ಮಂತಹ ಗೌರವಾನ್ವಿತ ಪರ್ದಾಧಾರಿಣಿ ಸ್ತ್ರೀಯೊಂದಿಗೆ ಭೇಟಿಯಾಗುವ ಅವಕಾಶ ದೊರೆಯಿತು.

ಇದರ ನಂತರ ನನಗೆ ಅತ್ಯುತ್ತಮ ಸಿಹಿಯನ್ನು ಆಸ್ವಾದಿಸುವ ಅವಕಾಶ ದೊರೆಯಿತು. ಅದು ಅಲ್ಲಾಹನ ಪವಿತ್ರ ಗ್ರಂಥ. ಸುಬ್ಹಾನಲ್ಲಾಹ್! ಇದರ ರುಚಿ ಹಾಗೂ ಸ್ವಾದದ ಬಗ್ಗೆ ಏನು ಹೇಳಲಿ! ನಾನು ನನ್ನನ್ನು ಆ ಸೂಕ್ತಗಳಲ್ಲಿ ಬಂಧಿಸಿಟ್ಟು ಅನುಸರಿಸತೊಡಗಿದೆ. ಪವಿತ್ರ ಕುರ್‌ಆನನ್ನು ಅನುಸರಿಸುವುದರಿಂದ ಆಗುವ ಬದಲಾವಣೆಯನ್ನು ಜನರಿಗೆ ತಿಳಿಸುವ ಸೌಭಾಗ್ಯಕ್ಕಿಂತ ದೊಡ್ಡ ಸೌಭಾಗ್ಯ ಬೇರೇನಿದೆ ಹೇಳಿ?

ಇದಂತೂ ಅತಿ ಶ್ರೇಷ್ಠ ಸೌಭಾಗ್ಯವಾಗಿದೆ. ನಮ್ಮ ಮನೆಯಲ್ಲಿ ಜಗಳ ಪ್ರಾರಂಭಗೊಂಡಿತು. ನನ್ನ ಹಾಗೂ ನನ್ನ ಮಾತಾಪಿತರ ನಡುವೆ ಒಂದು ರೀತಿಯ ತಿಕ್ಕಾಟ ಉಂಟಾಯಿತು. ನನ್ನ ಜೀವನ ಅವರ ಇಚ್ಛೆಯಂತೆ ಸಾಗಬೇಕೆಂದು ಅವರು ಬಯಸುತ್ತಿದ್ದರು. ಹರಾಮ್, ಹಲಾಲ್ ಬಗ್ಗೆ ಯೋಚಿಸಿದೆ. ನನ್ನ ಲೌಕಿಕ ಜೀವನಕ್ಕೆ

ಉಪಯುಕ್ತವಾಗಬಲ್ಲ ಎಲ್ಲ ಕೆಲಸಗಳನ್ನು ಮಾಡಬೇಕೆಂದು ಅವರು ಹೇಳುತ್ತಿದ್ದರು ಅವರೊಂದಿಗೆ ಕ್ಲಬ್‌ಗಳಿಗೆ ಹೋಗಬೇಕು, ಅರೆ ನಗ್ನ ಬಟ್ಟೆ ಧರಿಸುತ್ತ ಸುಂದರಿಯಾ ಕಾಣಬೇಕು, ಹೊಸ ಸ್ನೇಹಿತರನ್ನು ಮಾಡಬೇಕು, ಸ್ನೇಹಿತೆಯರೊಂದಿಗೆ ಸೇರಿ ಆ ಕುಣಿಯಬೇಕು, ಅವರ ಇಷ್ಟದ ವಸ್ತ್ರಧಾರಣೆ ಮಾಡಬೇಕು, ಕ್ಲಬ್‌ನ ಎಲ್ಲ ಆಟಗಳ ಭಾಗವಹಿಸಬೇಕು, ಇದರ ಮುಖಾಂತರ ಯುವಕರು ನನ್ನನ್ನು ಮೆಚ್ಚಬೇಕು ಎಂ ಆಸೆಯನ್ನು ಅವರು ಹೊಂದಿದ್ದರು. ಹಾಗೆಯೇ ಅಸಭ್ಯ ಸಿನಿಮಾ, ನಾಟಕ ಇತ್ಯಾ ಗಳನ್ನು ವೀಕ್ಷಿಸಬೇಕೆಂದು ಅವರು ಒತ್ತಾಯಿಸುತ್ತಿದ್ದರು.

ನನ್ನ ಮಾತಾಪಿತರ ಬೇಡಿಕೆ, ಈ ಕುರ್‌ಆನ್ ತರಗತಿ– ಎರಡು ವಿರು ದಿಕ್ಕು ಹೊಂದಿವೆ. ನಾನು ಈ ಪುಣ್ಯದಾಯಕ ಸಭೆಯಲ್ಲಿ ಸೇರದೆ ಇರುತ್ತಿದ್ದ ಮಾತಾಪಿತರ ಒತ್ತಾಯದ ಮೇರೆಗೆ ಅವರು ಬಯಸಿದ್ದನ್ನು ಮಾಡಬೇಕಾ ಅನಿವಾರ್ಯತೆ ಇತ್ತು. ಆದರೆ ನನ್ನ ಸೌಭಾಗ್ಯ, ನಾನು ಈ ಸಭೆಯಲ್ಲಿ ಭಾಗವಹಿಸಿದ ಕ್ಲಬ್ ಹಾಗೂ ಸಿನಿಮಾಗಳಿಗೆ ಹೋಗಲೇ ಬೇಕೆಂಬ ಒತ್ತಾಯ ಬಂದಾಗ, ನಾನ ಉಚ್ಚ ಸ್ವರದಲ್ಲಿ, ಬೊಬ್ಬೆ ಹಾಕಿ ಮಾತನಾಡುತ್ತ, ಹಾಗೆ ಮಾಡಲಾರೆ ಎಂದು ಹೇಳುತ್ತ ನನ್ನ ಕೋಣೆಗೆ ಹೋಗಿ ಬಾಗಿಲು ಮುಚ್ಚಿ ಕುಳಿತುಕೊಳ್ಳುತ್ತಿದ್ದೆ. ಅವರಲ್ಲಿ ಮಾತನಾಡ ವಾಗ ಮುಖ ಗಂಟಿಕ್ಕಿ, ಅಪ್ರಸನ್ನತೆಯನ್ನು ತೋರ್ಪಡಿಸುತ್ತಿದ್ದೆ ಹಾಗೂ ಒರಟಾ ಮಾತನಾಡುತ್ತಿದ್ದೆ. ನನ್ನ ಈ ವರ್ತನೆ ಅಲ್ಲಾಹನಿಗೆ ಇಷ್ಟವಾಗಬಹುದು ಹಾಗೂ ಇದು ಜಿಹಾದಿಗೆ ಸಮಾನವಾಗಿರಬಹುದು ಎಂದು ನಾನು ಅನಿಸಿದ್ದೆ. ಆದರೆ ನಿಮ ಬಳಿ ಬಂದಾಗ, فَلَا تَقُلْ لَهُمَا أُفٍّ وَلَا تَنْهَرْهُمَا (ಪವಿತ್ರ ಕುರ್‌ಆನ್: 17: 23) ಎಂಬ ಸೂ ವನ್ನು ಅನುಸರಿಸಬೇಕೆಂದು ಹೇಳಿದಾಗ, ಕೋಪದಿಂದ ಗಂಟಿಕ್ಕುತ್ತಿದ್ದ ನನ್ನ ಮುಖ ನಗುಮುಖವಾಗಿ ಬದಲಾಯಿತು. ಬಾಗಿಲು ಮುಚ್ಚಿ ಕೋಣೆಯಲ್ಲಿ ಕುಳಿತುಕೊಳ್ಳು ಬದಲು, ನಾನು ಮಾತಾಪಿತರೊಂದಿಗೆ ಕುಳಿತುಕೊಳ್ಳಲು ಪ್ರಾರಂಭಿಸಿದೆ. ಪ್ರೀತ್ಯಾದರದಿಂ ಅವರೊಂದಿಗೆ ಮಾತನಾಡತೊಡಗಿದೆ. ಅವರು ನನಗಾಗಿ ಪಡುವ ಕಷ್ಟಗಳು ಹಾಗೂ ಖರ್ಚುಗಳ ಬಗ್ಗೆ ಕೃತಜ್ಞತೆ ತೋರಿಸುತ್ತ ಅಲ್ಲಾಹನ ಅನುಸರಣೆ ಮಾಡತೊಡಗಿದ ಕ್ರಮೇಣ ಅವರನ್ನು ನನ್ನ ಸ್ನೇಹಿತೆಯರೊಂದಿಗೆ ಭೇಟಿ ಮಾಡಿಸಿದೆ. ಈ ರೀ ಜೀವನ ಸಾಗಿಸಿದಾಗ ಅಲ್ಲಾಹನು ಸಂತುಷ್ಟನಾಗುತ್ತಾನೆ ಹಾಗೂ ಅಲ್ಲಾಹನ ಸಂಪ್ರೀ ದೊರಯುತ್ತದೆ ಎಂದು ತಿಳಿಸಿದೆ. ಈ ಬಗ್ಗೆ ಅಲ್ಲಾಹನ ಆಜ್ಞೆ ಹೀಗಿದೆ ಹಾಗೂ ಇಂತಿಂತಹ ಕೆಲಸದಿಂದ ತಡೆದಿದ್ದಾನೆ ಎಂದು ತಿಳಿಸಿದೆ.

ಕ್ರಮೇಣ ಅಮ್ಮನಲ್ಲಿ ಬದಲಾವಣೆ ಕಾಣತೊಡಗಿತು, ಪವಿತ್ರ ಗ್ರಂಥ ಹಾಗೂ ಅಲ್ಲಾಹನ ಬಗ್ಗೆ ತಿಳಿಯುವ ಆಸಕ್ತಿ ವಹಿಸಿದರು. ತನ್ನಲ್ಲಿದ್ದ ವಿಚಾರ ಹಾಗೂ ತಾನ

ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಯೋಚಿಸಿ ಪಶ್ಚಾತ್ತಾಪ ಪಡತೊಡಗಿದರು. ಅದು ಅವರ ಮುಖಭಾವದಲ್ಲೂ ಕಾಣುತ್ತಿತ್ತು. ಇವತ್ತು ಒಂದು ವಿಶೇಷ ಹಾಗೂ ಆಶ್ಚರ್ಯಕರ ವಿಷಯ ನಾನು ನಿಮಗೆ ತಿಳಿಸಬಯಸುತ್ತೇನೆ. ಇವತ್ತು ನನ್ನಮ್ಮ ನನ್ನೊಂದಿಗೆ ಇಲ್ಲಿಗೆ ಬಂದಿದ್ದಾರೆ. ನನ್ನ ಪಕ್ಕದಲ್ಲಿ ಕುಳಿತಿರುವವರೇ ನನ್ನ ಅಮ್ಮ.

ಆ ತಾಯಿ ಎದ್ದು ಮಗಳನ್ನು ಆಲಂಗಿಸಿ ಮುತ್ತಿಕ್ಕತೊಡಗಿದರು. ಅಲ್ಲಾಹನ ಮಹಿಮೆಯನ್ನು ಈ ಅದ್ಭುತ ಶೈಲಿಯಲ್ಲಿ ಕಂಡು ನಾವೆಲ್ಲ ಆಶ್ಚರ್ಯಗೊಂಡೆವು. ಅಲ್ಲಾಹನು ಜನರ ಹೃದಯಗಳನ್ನು ಬೆಸೆಯುವ ಹಾಗೂ ಬದಲಿಸುವ ರೀತಿ ಕಂಡು ಆಶ್ಚರ್ಯಗೊಂಡೆವು. ಅಲ್ಲಾಹನು ಮಹಾ ದಯಾಮಯನಾಗಿದ್ದಾನೆ.

## ಇನ್ನೋರ್ವ ಸಹೋದರಿಯ ವಿಚಿತ್ರ ಘಟನೆ

ಈ ವಿಶ್ವಾಸ ಉದ್ದೀಪನದ ವೃತ್ತಾಂತ ಮುಗಿದಾಗ ಇನ್ನೋರ್ವ ಸಹೋದರಿ ತನ್ನ ಘಟನೆಯನ್ನು ಹೇಳಲು ಆರಂಭಿಸಿದರು. ಆ ತಾಯಿ ಮಗಳ ಕಡೆಗೆ ವಿಷಾದ ದಿಂದ ನೋಡುತ್ತ, "ಸುಬ್ಹಾನಲ್ಲಾಹ್! ಈ ಮಹಿಮೆ ಹೇಗಾಯಿತು? ಎಂದು ಆಶ್ಚರ್ಯ ವಾಗುತ್ತಿದೆ. ನನ್ನಮ್ಮ ನನ್ನ ಯಾವುದೇ ಮಾತನ್ನು ಕೇಳಲು ಇಷ್ಟಪಡುವುದಿಲ್ಲ. ಅವ ರನ್ನು ತಿಳಿ ಹೇಳುವ ಬಹಳ ಪ್ರಯತ್ನ ಮಾಡಿದೆ. ಆದರೂ ನನ್ನ ಪ್ರಯತ್ನ ಫಲಕಾರಿ ಯಾಗಲಿಲ್ಲ."

ಇದಕ್ಕೆ ತಾಳ್ಮೆ ಹಾಗೂ ಸಹನೆಯ ಅವಶ್ಯಕತೆ ಇದೆ ಎಂದು ನಾವು ಆಕೆಗೆ ಹೇಳಿದೆವು. ಅಲ್ಲಾಹನೊಡನೆ ಪ್ರಾರ್ಥಿಸುತ್ತ ಈ ಸೂಕ್ತವನ್ನು ಅನುಸರಿಸಬೇಕು. ಕಾರಣ, ಮನಸ್ಸುಗಳು ಅಲ್ಲಾಹನ ಹಿಡಿತದಲ್ಲಿದೆ, ತಾನು ಇಚ್ಛಿಸಿದ ಮನಸ್ಸುಗಳನ್ನು ಅಲ್ಲಾಹನು ಬದಲಾಯಿಸುತ್ತಾನೆ. ನಾವು ಸದಾ ಅಲ್ಲಾಹನ ಅನುಸರಣೆ, ಪ್ರಾರ್ಥನೆ ಯೊಂದಿಗೆ ಆತನ ಅಪಾರವಾದ ಅನುಗ್ರಹ ಹಾಗೂ ದಯೆಯ ಮೇಲೆ ವಿಶ್ವಾಸ ಇರಿಸಿಕೊಳ್ಳಬೇಕು. ಕುರ್‌ಆನ್ ತರಗತಿಗೆ ಬರುತ್ತಿದ್ದ ಪ್ರತಿಯೋರ್ವ ಮಹಿಳೆ ಆಕೆಯ ತಾಯಿಗಾಗಿ ತಹಜ್ಜುದ್ ನಮಾಝ್ ಮಾಡಿ ಪ್ರಾರ್ಥಿಸ ಬೇಕೆಂದು ನಾವು ಹೇಳಿದೆವು.

ಮರುದಿನದಿಂದ ಈ ಸೂಕ್ತವನ್ನು ಅನುಸರಿಸುವೆವು ಎಂಬ ನಿರ್ಧಾರದೊಂದಿಗೆ ತರಗತಿ ಮುಕ್ತಾಯಗೊಂಡಿತು. ಅದರೊಂದಿಗೆ, وَقُل لَّهُمَا قَوْلًا كَرِيمًا (ಪವಿತ್ರ ಕುರ್‌ಆನ್: 17: 23) ಎಂಬ ಸೂಕ್ತವನ್ನು ಸೇರಿಸಲಾಯಿತು. ಈ ಸೂಕ್ತವು ನಮ್ಮ ಮನದಾಳದಲ್ಲಿ ಬೇರೂರುವ ತನಕ ಪುನರಾವರ್ತಿಸುತ್ತಾ, ನಮ್ಮ ದೇಹದ ಅಂಗಾಂಗಗಳು ಕೂಡ ಇದನ್ನು ಅನುಸರಿಸುವಂತೆ ಪ್ರಯತ್ನಿಸುವೆವು ಹಾಗೂ ಮುಂದಿನ ವಾರ ಇದರಿಂದಾದ ಅನುಭವವನ್ನು ಹೇಳುವೆವು ಎಂಬ ನಿರ್ಧಾರದೊಂದಿಗೆ ತರಗತಿಯಿಂದ ಹೊರಬಂದೆವು.

ಪ್ರತಿಯೊಬ್ಬರಲ್ಲಿ ಪ್ರಕೃತಿದತ್ತವಾದ ಸ್ವಭಾವ ಇರುತ್ತದೆ. ಮನುಷ್ಯ ಆ ಸ್ವಭಾವ ದೊಂದಿಗೆ ಪೋಷಿಸಲ್ಪಡುತ್ತಾನೆ. ಆದುದರಿಂದ ಆ ಸ್ವಭಾವವನ್ನು ಬಿಡುವುದು ಸುಲಭ ವಲ್ಲ. ಜನರು ಮಾತಾಪಿತರೊಡನೆ ನಡೆಸುವ ಸಂಭಾಷಣೆಗೂ ಸಾಮಾನ್ಯ ಜನ ರೊಂದಿಗೆ ನಡೆಸುವ ಸಂಭಾಷಣೆಗೂ ವ್ಯತ್ಯಾಸವಿದೆ. ತಮ್ಮ ಮಾತಾಪಿತರೊಡನೆ ಸಿಡುಕು ಸ್ವಭಾವದಿಂದ, ಅವರ ಪ್ರತಿಯೊಂದು ಮಾತನ್ನು ತಿರಸ್ಕರಿಸುತ್ತ ಮಾತನಾಡುವ ವರು ಇಲ್ಲಿ ಇದ್ದಾರೆ. ಕೆಲವರು ದುಡುಕುತನದಿಂದ ವರ್ತಿಸಿದರೆ, ಇನ್ನು ಕೆಲವರು ಸಾಂಪ್ರದಾಯಿಕವಾಗಿ ಮಾತನಾಡುತ್ತಾರೆ. ಕೆಲವರು ಬಹಳ ಕಾಠಿಣ್ಯದಿಂದ ವರ್ತಿಸುತ್ತಾರೆ. ಬೇಸರವೆಂದರೆ ಅಂತಹವರಿಗೆ ಅವರ ಈ ತಪ್ಪಿನ ಬಗ್ಗೆ ತಿಳಿದಿರುವುದಿಲ್ಲ. ತಾನು ಜೀವನಪರ್ಯಂತ ತನ್ನ ಅಮ್ಮನ ಕೈಯನ್ನು ಹಿಡಿಯಲಿಲ್ಲ, ಆ ಕೈಗೆ ಮುತ್ತಿಕ್ಕಲಿಲ್ಲ ಎಂಬ ಅರಿವು ಕೂಡ ಇರುವುದಿಲ್ಲ. ಇಂತಹ ಕೆಲವು ಜನರ ಉದಾಹರಣೆಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಇದರಿಂದ ವಿಷಯದ ಗಂಭೀರತೆಯನ್ನು ಅರಿಯಬಹುದು.

## ಮಾತಾಪಿತರೊಂದಿಗೆ ನಮ್ಮ ಪ್ರೀತಿಯನ್ನು ವ್ಯಕ್ತವಡಿಸುವುದು

'ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ' ಎಂದು ಅಲ್ಲಾಹನು ಆಜ್ಞಾಪಿ ಸಿದ ಸೂಕ್ತವನ್ನು ಓದುವಾಗ ಇದರ ಮಹತ್ವ ನನಗೆ ಗೊತ್ತಿರಲಿಲ್ಲ. ಮಾತಾಪಿತರೊಂದಿಗೆ ಸಾಂಪ್ರದಾಯಿಕವಾಗಿ ಮಾತನಾಡಿದರೆ ಅವರನ್ನು ಗೌರವಿಸಿದ ಹಾಗೆ ಎಂದು ನಾನು ಭಾವಿಸಿದ್ದೆ. ಆದರೆ ಇದು ಸರಿಯಲ್ಲ ಎಂದು ತಿಳಿದಾಗ, ಅಮ್ಮನೊಂದಿಗೆ ಮಾತ ನಾಡಬೇಕೆಂದು ಯೋಚಿಸಿದೆ. ಏನು ಮಾತನಾಡಬೇಕೆಂಬ ಬಗ್ಗೆಯೂ ಯೋಚಿಸಿ, ಅಮ್ಮನ ಕೋಣೆಗೆ ಹೋದೆ. ಅಮ್ಮನೆದುರು ನಿಂತು ಮಾತು ಬಾರದಾಯಿತು. ನಾಲಗೆ ಅಲುಗಾಡಲಿಲ್ಲ. ಎಷ್ಟು ಪ್ರಯತ್ನ ಪಟ್ಟರೂ ನನ್ನ ನಾಲಗೆ ಸಹಕರಿಸಲಿಲ್ಲ. ಅಮ್ಮನಲ್ಲಿ ಮಾತನಾಡದೆ ಬಹಳ ಬೇಸರದಿಂದ ಹಿಂದಿರುಗಿದೆ. ಅಪ್ಪನೊಂದಿಗೆ ಮಾತನಾಡಬೇಕೆಂದು ತೀರ್ಮಾನಿಸಿದೆ. ಏನು ಹೇಳಬೇಕೆಂದು ತೀರ್ಮಾನಿಸುತ್ತಾ ಬಹಳ ಗೌರವ ಮತ್ತು ಆದರಪೂರ್ವಕವಾಗಿ ಮಾತನಾಡಬೇಕೆಂದು ಅವರಲ್ಲಿಗೆ ಹೋದೆ. ಆದರೆ ಅಲ್ಲಿ ಕೂಡ ನನ್ನ ನಾಲಗೆಯಿಂದ ಮಾತು ಹೊರ ಬರಲಿಲ್ಲ.

ಅಲ್ಲಾಹನು ಇಚ್ಛಿಸಿದರೆ ಎಲ್ಲವೂ ಸರಿ ಹೋಗುವುದು ಎಂದು ನಾನು ನನ್ನಲ್ಲೇ ಹೇಳಿಕೊಂಡೆ. ಒಂದು ಸಾಮಾನ್ಯ ವಿಷಯವನ್ನು ಅವರ ಮುಂದೆ ಇಡಲಾಗಲಿಲ್ಲವಲ್ಲ? ಏನಾಗಿದೆ ನನಗೆ? ಎಂದು ಯೋಚಿಸಿ ಬೇಸರವಾಯಿತು. ಅಷ್ಟರಲ್ಲಿ ನನ್ನ ಆಂತರಾಳ ದಿಂದ ಒಂದು ಧ್ವನಿ ಹೊರಗೆ ಬಂತು. "ನೀನು ಮಾತಾಪಿತರೊಂದಿಗೆ ಈ ರೀತಿ ಮಾತನಾಡುವಾಗ ಅವರಿಗೆ ಅಚ್ಚರಿಯಾಗಬಹುದು. ನಿನ್ನ ಸಹೋದರ ಸಹೋದರಿಯರು ನಿನ್ನನ್ನು ನೋಡಿ ಗೇಲಿ ಮಾಡಬಹುದು." ನಾನು ಅಲ್ಲಾಹನಲ್ಲಿ "ನಿನ್ನ ಸೂಕ್ತದಂತೆ

ನಡೆಯುವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸಿದೆ. ತಕ್ಷಣ ಪೇಟೆಗೆ ಹೋಗಿ ಅವರಿಬ್ಬರೂ ಇಷ್ಟಪಡುವ ಹೂವನ್ನು ಖರೀದಿಸಿದೆ. ಮೊದಲು ಅಮ್ಮನಿಗೆ ಕೊಡುತ್ತ "ನನ್ನ ಪ್ರೀತಿಯ ಅಮ್ಮನಿಗಾಗಿ" ಎಂದು ಹೇಳಿದೆ. ಇದನ್ನು ನೋಡಿ ಅಮ್ಮ ಮುಗುಳು ನಕ್ಕಳು. ಅಮ್ಮನ ಆ ಪ್ರೀತಿಯ ನಗುಮುಖ ಸಾವಿನ ತನಕ ಮರೆಯಲು ಅಸಾಧ್ಯ ವಾಗಿತ್ತು. "ನೀನು ನನ್ನನ್ನು ಹೇಗೆಂದು ಭಾವಿಸುತ್ತೀಯ?" ಎಂದು ಅಮ್ಮ ಪ್ರಶ್ನಿಸಿ ದರು. ನಾನು ಉತ್ತರಿಸಿದೆ, "ಭೂಲೋಕದಲ್ಲಿ ನೀವು ನನಗೆ ಅತ್ಯಂತ ಪ್ರಿಯವಾಗಿದ್ದೀರಿ ಈ ಹೂವಿಗಿಂತ ಪ್ರಿಯ. ವಿಶ್ವದಲ್ಲಿ ಅತ್ಯಮೂಲ್ಯವಾದವರು ಕೇವಲ ನೀವು ಅಮ್ಮಾ! ನೀವಿಲ್ಲದೆ ಈ ಭೂಲೋಕ ನಿರರ್ಥಕ."

ಇಷ್ಟನ್ನು ಹೇಳಿ ಅವರ ಪ್ರತಿಕ್ರಿಯೆಗಾಗಿ ಕಾಯದೆ, ನೇರವಾಗಿ ಅಪ್ಪನ ಕೋಣೆಗೆ ಹೋದೆ. ಅವರಿಗೂ ಹೂಗುಚ್ಛ ಕೊಟ್ಟು "ಈ ಹೂಗುಚ್ಛ ನಿಮಗಾಗಿ, ನಾನು ನಿಮ ಗಾಗಿ ಸದಾ ಪ್ರಾರ್ಥಿಸುತ್ತಿರುತ್ತೇನೆ, ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸಲಿ" ಎಂದು ಹೇಳಿದೆ. "ಎಲ್ಲ ಕ್ಷೇಮ ತಾನೆ? ಇವತ್ತು ನೀನು ಬಹಳ ಸಂತೋಷದಲ್ಲಿರುವಂತೆ ಕಾಣುತ್ತಿದೆ! ಏನು ಸಮಾಚಾರ?" ಎಂದು ಕೇಳಿದರು. "ಹೌದು! ನಾನು ನಿಮ್ಮಿಬ್ಬರಿಂದ ಬಹಳ ಸಂತುಷ್ಟಳಾಗಿದ್ದೇನೆ" ಎಂದು ಹೇಳಿದೆ.

ನನ್ನ ಹೃದಯ ಜೋರಾಗಿ ಬಡಿಯುತ್ತಿತ್ತು. ನಾನು ನೇರವಾಗಿ ನನ್ನ ಕೋಣೆಗೆ ಹೋದೆ. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಎಲ್ಲವೂ ಎಷ್ಟು ಸುಲಭವಾಗಿತ್ತು. ನನ್ನ ಮಾತಾಪಿತರು ನನ್ನ ಪ್ರೀತಿಯನ್ನು ಸ್ವೀಕರಿಸಿದರು ಎಂದು ಯೋಚಿಸಿದೆ. ಈ ಘಟನೆಯ ನಂತರ ನಾನು ನನ್ನ ಮಾತಾಪಿತರ ಕೈಯನ್ನು ಚುಂಬಿಸುತ್ತೇನೆ. ನನ್ನ ಜೀವನದ ಉದ್ದೇಶ ಸಿಕ್ಕಿದಂತಾಯಿತು. ಈ ಘಟನೆಯ ಮೊದಲು ನನ್ನ ಜೀವನ ಇಷ್ಟು ಆನಂದದಾಯಕವಾಗಿರಲಿಲ್ಲ. ಸಹೋದರಿಯರೇ! ನೀವೆಲ್ಲರೂ ಕೂಡ ಪವಿತ್ರ ಕುರ್‌ಆನಿನ ಈ ಸೂಕ್ತವನ್ನು ಅನುಸರಿಸಿ ಹಾಗೂ ಭಾಗ್ಯಶಾಲಿಗಳ ಸಾಲಿಗೆ ಸೇರಿಕೊಳ್ಳಿ ಎಂದು ನಾನು ನಿಮ್ಮಲ್ಲಿ ಕಳಕಳಿಯಿಂದ ನಿವೇದಿಸುತ್ತಿದ್ದೇನೆ.

## ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿದ ಸಹೋದರನ ಕಥೆ

ಇದರ ನಂತರ ಇನ್ನೋರ್ವ ಸಹೋದರಿ ಎದ್ದು ನಿಂತು ಹೇಳಿದಳು: ಈಗ ತಾನೇ ತನ್ನ ಅನುಭವವನ್ನು ಹೇಳಿದ ಸಹೋದರಿ ಬಹಳ ಭಾಗ್ಯಶಾಲಿ. ನನಗೆ ನನ್ನ ಮಾತಾಪಿತರೊಂದಿಗೆ ಇಷ್ಟು ಉತ್ತಮ ರೀತಿಯಲ್ಲಿ ಮಾತನಾಡಲು ಸಾಧ್ಯವಾಗಲಿಲ್ಲ. ನನಗೋರ್ವ ಸಹೋದರನಿದ್ದಾನೆ. ನಾನು ಕುರ್‌ಆನ್ ತರಗತಿಯಿಂದ ಮರಳುವುದನ್ನು ಆತ ಕಾಯುತ್ತಿರುತ್ತಾನೆ. ನಾನು ಮರಳಿದ ತಕ್ಷಣ, "ಈವತ್ತು ತರಗತಿಯಲ್ಲಿ ಯಾವ ಸೂಕ್ತವನ್ನು ಅನುಸರಿಸಲು ಹೇಳಿದ್ದಾರೆ?" ಎಂದು ಕೇಳುತ್ತಾನೆ. ಆತನಿಗೆ ಸೂಕ್ತದ

ಅನುವಾದ, ಸಾರಾಂಶ, ಅವತೀರ್ಣಕಾಲ ಎಲ್ಲವನ್ನೂ ವಿವರವಾಗಿ ಹೇಳುತ್ತೇನೆ. ಆದರೆ ಈವತ್ತು, وَقُلْ لَّهُمَا قَوْلًا كَرِيمًا (ಪವಿತ್ರ ಕುರ್‌ಆನ್: 17:23) ಈ ಸೂಕ್ತವನ್ನು ಅನುಸರಿಸಲು ಹೇಳಲಾಗಿದೆ ಎಂದು ತಿಳಿಸಿದೆ. ಆ ಸೂಕ್ತ ಆತನ ನಾಲಗೆಯಲ್ಲಿ ಹತ್ತಿಕೊಂಡಿತು. ಆತ ಆ ಸೂಕ್ತವನ್ನು ಅನುಸರಣೆ ಮಾಡತೊಡಗಿದ. ಕ್ರಮೇಣ ಮಾತಾಪಿತರೊಡನೆ ಆತನ ವರ್ತನೆ ಬದಲಾಗತೊಡಗಿತು. ಮಾತಿನಲ್ಲಿ ನಯ ವಿನಯ, ವಿನಮ್ರತೆ ಹಾಗೂ ಸಭ್ಯತೆ ಗೋಚರಿಸತೊಡಗಿತು. ನಾನು ಆತನಿಗಾಗಿ ಪ್ರಾರ್ಥಿಸುತ್ತಿದ್ದೆ. "ನಾನೋರ್ವ ಸಜ್ಜನ ಆಜ್ಞಾಪಾಲಕ ಮಗನಿಗೆ ಜನ್ಮ ಕೊಟ್ಟ ಕಾರಣ ಅಲ್ಲಾಹನು ನನಗೆ ಸ್ವರ್ಗ ದಯಪಾಲಿಸುವನು" ಎಂದು ಕೆಲವು ದಿನಗಳ ಹಿಂದೆ ಅಮ್ಮನ ಬಾಯಿಯಿಂದ ಕೇಳಿದ್ದೆ. ಅಮ್ಮನ ಮಾತು ನನ್ನನ್ನು ಚಿಂತೆಗೀಡು ಮಾಡಿತು. ಕಾರಣ, ನನ್ನ ತಮ್ಮ ನನ್ನನ್ನು ಮೀರಿಸಿದ. ಆದರೆ ನಾನೇನು ಮಾಡಬೇಕೆಂದು ತೋಚದಾಯಿತು.

ಇದನ್ನು ಕೇಳಿದ ಓರ್ವ ಸಹೋದರಿ, ಆಕೆಯಲ್ಲಿ ಧೈರ್ಯ ತುಂಬುತ್ತ, "ಪದೇ ಪದೇ ಪ್ರಯತ್ನಿಸಿದರೆ ಪ್ರತಿಫಲ ದೊರಕುವುದು" ಎಂದು ಹೇಳಿದಳು. ಪವಿತ್ರ ಕುರ್‌ಆನಿನ ಆದೇಶದಂತೆ ನಡೆಯಲು ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ. ಇದುವೇ ಸರಿಯಾದ ರೀತಿ.

❖ ❖ ❖ ❖

# ವಾರೀಸು ಹಕ್ಕು

ವಾರೀಸು ಹಕ್ಕು ಅಲ್ಲಾಹನ ಕಾನೂನಿನ ಒಂದು ಭಾಗವಾಗಿದೆ. ವಾರೀಸು ಹಕ್ಕನ್ನು ವಿಭಜಿಸುವ ರೀತಿಯನ್ನು ಅಲ್ಲಾಹನು ಸ್ವತಃ ನಿರ್ಣಯಿಸಿದ್ದಾನೆ. ಇದರಲ್ಲಿ ಮನುಷ್ಯನ ಹಸ್ತಕ್ಷೇಪವಿಲ್ಲ. ಅಲ್ಲಾಹನು ತನ್ನ ನ್ಯಾಯ ಹಾಗೂ ಯುಕ್ತಿಯಿಂದ ವಾರೀಸು ಹಕ್ಕನ್ನು ಪರಿಪೂರ್ಣ ರೀತಿಯಲ್ಲಿ ವಿಂಗಡಿಸಿದ್ದಾನೆ. ಯಾರಿಗೆ ಎಷ್ಟು ಹಕ್ಕು, ಯಾರು ಹಕ್ಕುದಾರರು ಎಂದು ಬಹಳ ಸ್ಪಷ್ಟ ರೀತಿಯಲ್ಲಿ ವಿವರಿಸಿದ್ದಾನೆ.

ನಾನು ಪವಿತ್ರ ಕುರ್‌ಆನ್ ತರಗತಿಯಲ್ಲಿ ವಾರೀಸು ಹಕ್ಕಿನ ಬಗ್ಗೆ ವಿವರಿಸಿದೆ. ಎಲ್ಲರೊಂದಿಗೆ ತಮ್ಮ ಜೀವನದಲ್ಲಿ ಇದನ್ನು ಅಳವಡಿಸುವಂತೆ ಹೇಳಲಾಯಿತು. ಎಲ್ಲರ ಅಭಿಪ್ರಾಯದೊಂದಿಗೆ, ವಾರೀಸು ಹಕ್ಕಿನ ಎಲ್ಲ ಸೂಕ್ತಗಳನ್ನು ಅನುಸರಿಸಲಾಗುವುದು ಎಂದು ನಿರ್ಧರಿಸಿದೆವು. ಮೊದಲನೆಯದಾಗಿ ಈ ಸೂಕ್ತವನ್ನು ಆರಿಸಿಕೊಂಡೆವು.

يُوصِيكُمُ اللَّهُ فِي أَوْلَادِكُمْ لِلذَّكَرِ مِثْلُ حَظِّ الْأُنثَيَيْنِ

"ಅಲ್ಲಾಹನು ನಿಮ್ಮ ಮಕ್ಕಳ ಬಗ್ಗೆ ನಿಮಗೆ ಹೀಗೆ ಆದೇಶವನ್ನೀಯುತ್ತಾನೆ, ಪುರುಷನಿಗೆ, ಇಬ್ಬರು ಸ್ತ್ರೀಯರಿಗೆ ಸಮಾನವಾದ ಪಾಲಿದೆ." (ಪವಿತ್ರ ಕುರ್‌ಆನ್: 4: 11)

## ಆಭರಣಗಳ ವಿಂಗಡನೆ

ಓರ್ವ ಮಹಿಳೆ ನನ್ನಲ್ಲಿ ಬಂದು "ನನ್ನ ಅಮ್ಮ ಮರಣಹೊಂದಿದ್ದಾರೆ. ನನಗೋರ್ವ ಸಹೋದರನಿದ್ದಾನೆ. ನಾವಿಬ್ಬರೂ ಅಮ್ಮನ ಸಂಪತ್ತಿನ ಹಕ್ಕುದಾರರು. ನಮ್ಮ ನಾಡಿನ ಸಂಪ್ರದಾಯದಂತೆ, ಎಲ್ಲ ಆಭರಣಗಳು ನನ್ನಲ್ಲಿವೆ. ನಮ್ಮ ಪೂರ್ವಜರ ಆಸ್ತಿ ಹೊರಗೆ ಹೋಗದಿರಲೆಂದು ಭೂಮಿಯನ್ನು ಮಗನಿಗೆ ಕೊಡಲಾಗುತ್ತದೆ. ಹೊರಗಿನವರು ತಾಯಿಯ ಆಭರಣ ಧರಿಸಬಾರದೆಂದು ಆಭರಣವನ್ನು ಮಗಳಿಗೆ ಕೊಡುವುದು ಇಲ್ಲಿಯ ರೂಢಿ. ಅಮ್ಮ ಮರಣ ಹೊಂದಿ ಹಲವು ವರ್ಷಗಳಾಗಿವೆ ಅಂದಿನಿಂದ ಆಕೆಯ ಆಭರಣಗಳೆಲ್ಲ ನನ್ನಲ್ಲಿವೆ. ಸಹೋದರನಿಗೆ ಕೊಡಲಿಲ್ಲ. ಆತ

ಕೇಳಲೂ ಇಲ್ಲ. ಈಗ ಈ ಸೂಕ್ತವನ್ನು ಕೇಳಿದ ನಂತರ ನಾನು ಅದರಂತೆ ನಡೆಯ ಬಯಸುತ್ತೇನೆ. ನೀವು ದಾರಿ ತೋರಿಸಬೇಕು. ನನ್ನಮ್ಮ ಹಾಗೂ ಅತ್ತಿಗೆಯ ಮಧ್ಯೆ ಸದಾ ಜಗಳವಾಗುತ್ತಿತ್ತು. ಆದುದರಿಂದ ನಾನು ಅತ್ತಿಗೆಯನ್ನು ಯಾವತ್ತೂ ಭೇಟಿ ಯಾಗಲು ಇಷ್ಟಪಡಲಿಲ್ಲ; ಅದಕ್ಕಾಗಿ ಪ್ರಯತ್ನಿಸಲೂ ಇಲ್ಲ. ಅಮ್ಮನನ್ನು ಸದಾ ಸತಾಯಿಸಿ, ನೋವನ್ನು ಕೊಟ್ಟ ಆ ಮಹಿಳೆ ನನ್ನ ಅಮ್ಮನ ಒಡವೆಗಳನ್ನು ಧರಿಸುವುದು ನನಗೆ ಇಷ್ಟವಿಲ್ಲದ ವಿಷಯವಾಗಿತ್ತು" ಎಂದು ಹೇಳಿದರು.

"ಆತ್ಮೀಯ ಸಹೋದರಿ! ವಾರೀಸು ಸಂಪತ್ತು ಅಲ್ಲಾಹನ ಸೊತ್ತಾಗಿದೆ. ಅಲ್ಲಾಹನು ಇದನ್ನು ನಮಗೆ ನಮ್ಮ ಮಾಲಕತ್ವದಲ್ಲಿ ಕೊಟ್ಟಿರುವನು. ಓರ್ವ ಮುಸ್ಲಿಮನ ಮರಣಾನಂತರ, ಆತನ ಆಸ್ತಿಯನ್ನು ಅಲ್ಲಾಹನ ಆದೇಶದಂತೆ ಹಾಗೂ ಈ ಸೂಕ್ತ ದಲ್ಲಿ ತಿಳಿಸಿದ ನಿಯಮದಂತೆ ವಾರೀಸುದಾರರಲ್ಲಿ ವಿಭಜಿಸಲಾಗುತ್ತದೆ. ಆದುದರಿಂದ ಒಡವೆ ಕೇವಲ ನಿಮ್ಮ ಸೊತ್ತು ಹಾಗೂ ಹಕ್ಕೂ ಅಲ್ಲ. ಹಕ್ಕುದಾರರು ಯಾರೆಲ್ಲಾ ಎಂದು ತಿಳಿಸಿರುವಾಗ, ಆತನ ಮಾರ್ಗದರ್ಶನಂತೆ ಒಡವೆಯನ್ನು ಹಂಚಬೇಕಾಗಿದೆ. ಯಾರು ಹಕ್ಕನ್ನು ಕಬಳಿಸುತ್ತಾರೆಯೋ ಅವರನ್ನು ಅಲ್ಲಾಹನು ಕಠಿಣ ಶಿಕ್ಷೆಗೆ ಒಳ ಪಡಿಸುತ್ತಾನೆ."

ಪ್ರಶ್ನೆಯನ್ನು ಕೇಳಿದ ಆ ಮಹಿಳೆ ತನ್ನ ಎರಡು ಕೈಗಳನ್ನು ಮುಖದ ಮೇಲಿಟ್ಟು "ಅಲ್ಲಾಹನಾಣೆ! ಅಲ್ಲಾಹನ ಆದೇಶವನ್ನು ತಿರಸ್ಕರಿಸುವ ಉದ್ದೇಶ ನನ್ನಲ್ಲಿರಲಿಲ್ಲ. ನಾನು ನಮ್ಮ ನಾಡಿನ ಸಂಪ್ರದಾಯವನ್ನು ನಿಮ್ಮ ಮುಂದೆ ಇಟ್ಟಿರುವೆನು. ಈ ಸಂಪ್ರದಾಯ ಹಲವು ವರ್ಷಗಳಿಂದ ಇಲ್ಲಿ ನಡೆಯುತ್ತಿದೆ ಎಂದು ನಾನು ನಿಮಗೆ ತಿಳಿಸಿರುವೆನು" ಎಂದು ಹೇಳಿದರು.

"ಈ ಕಾರಣಕ್ಕಾಗಿಯೇ ನಾವು ಈ ಸೂಕ್ತವನ್ನು ಅನುಸರಿಸುವುದಾಗಿ ತೀರ್ಮಾನಿಸಿರುವುದು, ಅಲ್ಲಾಹನ ಹೊರತು ಅನ್ಯರ ಸಂಪ್ರದಾಯವನ್ನು ಬಿಡಬೇಕಾಗಿದೆ. ಈ ರೀತಿಯ ಸಂಪ್ರದಾಯ ಕೇವಲ ಮನುಷ್ಯನ ಅಭಿಲಾಷೆ. ಇಂತಹ ಆದೇಶಗಳನ್ನು ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ನೀಡಿಲ್ಲ. ಆದರೂ ಜನರು ತಮ್ಮ ಇಚ್ಛೆಯ ಕಾನೂನುಗಳನ್ನು ಮಾಡಿ ಅದನ್ನು ಅನುಸರಿಸುತ್ತಾರೆ. ಆತ್ಮೀಯ ಸಹೋದರಿ! ನೀವು ನಿಮ್ಮ ನೈಜ ಮಾಲಿಕನಲ್ಲಿ ಸಹಾಯ ಯಾಚಿಸಿರಿ. ಆತನ ನ್ಯಾಯಯುಕ್ತ ಉಪದೇಶದ ಎದುರು ತಲೆ ಬಾಗಿರಿ. ಅಲ್ಲಾಹನ ಆದೇಶದಂತೆ ಹಾಗೂ ಪವಿತ್ರ ಗ್ರಂಥದ ಕಾನೂನಿ ನಂತೆ ಎಲ್ಲ ಹಕ್ಕುದಾರರಿಗೆ ಹಂಚಿಬಿಡಿ. ಸಹೋದರನ ಬಳಿ ನಿಮ್ಮ ಹಕ್ಕು ಉಳಿದಿದ್ದರೆ ಅದನ್ನು ಕೇಳಿ ಪಡೆದುಕೊಳ್ಳಿ, ಅಲ್ಲಾಹನ ಆದೇಶಗಳನ್ನು ಜಾರಿಗೊಳಿಸಿ, ಹಕ್ಕುದಾರರಿಗೆ ಅವರ ಹಕ್ಕನ್ನು ನೀಡಿದ ನಂತರ, ಅವರು ಮನಸಾರೆ ಯಾವುದೇ ವಸ್ತುವನ್ನು

ತ್ಯಜಿಸಬಯಸಿದರೆ ಅಥವಾ ಕೊಡುಗೆಯಾಗಿ ಕೊಡುವುದರಲ್ಲಿ ಅಭ್ಯಂತರವಿಲ್ಲ. ಇದರಲ್ಲಿ ಸಂಕೋಚ, ದಾಕ್ಷಿಣ್ಯ, ಸಂಪ್ರದಾಯ, ಆಸೆ ಇತ್ಯಾದಿಗಳು ಮನಸ್ಸಿನಲ್ಲಿ ಇರದಂತೆ ಮನಸ್ಸು ಶುದ್ಧವಾಗಿಟ್ಟು ಈ ಕಾರ್ಯವನ್ನು ಮಾಡಬೇಕು.

"ಇನ್ಶಾಅಲ್ಲಾಹ್ ನಾನು ಈ ಸೂಕ್ತದ ಆದೇಶದಂತೆ ನಡೆಯುತ್ತೇನೆ" ಎಂದು ಆಕೆ ಹೇಳಿದಳು.

ಇದಾದ ಕೆಲವು ದಿನಗಳ ನಂತರ ಆಕೆ ಪುನಃ ನಮ್ಮ ಮನೆಗೆ ಬಂದಳು. ಆಕೆಯ ಮುಖ ಸಂತೋಷದಿಂದ ಅರಳಿತ್ತು. ಬಂದ ತಕ್ಷಣ, "ಆತ್ಮೀಯ ಸಹೋದರಿ! ಅಲ್ಲಾಹನ ಸೂಕ್ತ ನನ್ನ ಹೃದಯದಲ್ಲಿದ್ದ ಒಂದು ಹೊರೆಯನ್ನು ಕಡಿಮೆ ಮಾಡಿತು. ಅಂದು ನಾನು ಇಲ್ಲಿಂದ ಮನೆಗೆ ಮರಳಿದಾಗ, ನನಗೆ ನಾನು ಕಳ್ಳಿಯಂತೆ ಭಾಸವಾಗುತ್ತಿತ್ತು ಅಲ್ಲಾಹನ ಸೊತ್ತನ್ನು ಕದ್ದಂತೆ ಅನಿಸುತ್ತಿತ್ತು. ಅಲ್ಲಾಹನು ತನ್ನ ಯುಕ್ತಿಯನುಸಾರ ತನ್ನ ಸೊತ್ತನ್ನು ಉಪಯೋಗಿಸುತ್ತಾನೆ. ಕಾನೂನಿನ ಪ್ರಕಾರ ಆ ಸೊತ್ತು ನನ್ನದಾಗಿರದಿದ್ದರೂ, ನಾನು ಅಲ್ಲಾಹನ ಸೊತ್ತನ್ನು ಕಬಳಿಸಿ ಇಟ್ಟಿದ್ದೆ. ಆತನ ಅನುಮತಿ ಇಲ್ಲದೆ ಆತನ ವಸ್ತುವನ್ನು ಬಳಸಿದ್ದೆ. ಈ ಸೊತ್ತು ನನ್ನದಲ್ಲ, ಅಲ್ಲಾಹನದು ಎಂದು ಪದೇ ಪದೇ ನನಗೆ ಅನಿಸುತ್ತಿತ್ತು. ಅಮ್ಮನನ್ನು ಅಲ್ಲಾಹನು ತನ್ನ ಸೊತ್ತಿನ ಮಾಲಕನನ್ನಾಗಿ ಮಾಡಿದ್ದನು. ಅವರ ಮರಣಾನಂತರ ಅದರ ಮಾಲಿಕ ಅಲ್ಲಾಹನು ಎಂದು ನಾನು ಮರೆತು ಬಿಟ್ಟಿದ್ದೆ. ಅದನ್ನು ಅದರ ವಾರೀಸುದಾರರಲ್ಲಿ ಹಂಚಬೇಕಾದುದು ನನ್ನ ಕರ್ತವ್ಯ ವಾಗಿತ್ತು. ಅಮ್ಮ ಅವರ ಮರಣಾನಂತರ ತಮ್ಮ ಸಂಪತ್ತಿನ ಹಕ್ಕಿನಿಂದ ಮುಕ್ತಗೊಂಡಿದ್ದರು. ಆದರೆ ನಾನು ಅಲ್ಲಾಹನ ಸಂಪತ್ತಿನ ಮೇಲೆ ಸ್ವಾಧೀನ ಸಾಧಿಸಿದ್ದೆ. ಈ ಎಲ್ಲ ಯೋಜನೆಗಳು ನನ್ನನ್ನು ಬಹಳ ಗೊಂದಲದಲ್ಲಿ ಹಾಕಿತ್ತು" ಎಂದು ಹೇಳಿದರು.

"ನೀವು ಗಾಬರಿಪಡಬೇಕಾದ ಅಗತ್ಯವಿಲ್ಲ. ಪಶ್ಚಾತ್ತಾಪ ಪಡುವುದು ಬಹಳ ಉತ್ತಮ ವಿಷಯ. ಅಲ್ಲಾಹನ ಸೂಕ್ತದ ಅನುಸರಣೆಯು ನಿಮ್ಮಲ್ಲಿ ಪಶ್ಚಾತ್ತಾಪವನ್ನುಂಟು ಮಾಡಿತು."

"ಹೌದು ಸಹೋದರಿ! ನೀವು ಸತ್ಯವನ್ನೇ ನುಡಿದಿರಿ. ಅಪರಾಧ ಭಾವನೆ ನನ್ನನ್ನು ಒಳಗಿಂದೊಳಗೆ ಕಾಡುತ್ತಿತ್ತು. ಅಮ್ಮನ ಎಲ್ಲಾ ಆಭರಣಗಳನ್ನು ತಗೆದುಕೊಂಡು ಅಣ್ಣನ ಬಳಿಗೆ ಹೋಗಿ ಹೇಳಿದೆ, 'ಅಣ್ಣ, ನಮ್ಮ ಜೀವನ ಹಾಗೂ ಜೀವನದ ಪ್ರತಿಯೊಂದು ನಿರ್ಣಯ ಅಲ್ಲಾಹನ ಆಜ್ಞೆಯಂತೆ ಮಾಡಬೇಕಾದ ಸಮಯ ಬಂದಿದೆ. ನಮ್ಮ ನಡುವೆ ಇರುವ ತಪ್ಪು ಭಾವನೆ ಹಾಗೂ ಜಗಳದ ನ್ಯಾಯ ತೀರ್ಮಾನ ಪವಿತ್ರ ಕುರ್‌ಆನಿನ ಮಾರ್ಗದರ್ಶನದಂತೆ ನಡೆಯಲಿ. ಇದರಿಂದ

ಅಲ್ಲಾಹನ ಆಜ್ಞೆಯನ್ನು ಅನುಸರಿಸುವ ಪುಣ್ಯ ನಮಗೆ ಸಿಗುವುದು. ಅಮ್ಮನ ಆಭರಣ ತಂದಿರುವೆನು. ಅದನ್ನು ನಮ್ಮಿಚ್ಛೆ ಅಥವಾ ಸಮಾಜದ ನೀತಿಯಂತೆ ಹಂಚದೆ, ಅಲ್ಲಾಹನ ಆಜ್ಞೆಯಂತೆ ಹಂಚುವ.' ಅಣ್ಣ ನಾಚಿಕೆ ಹಾಗೂ ಮುಜುಗರದೊಂದಿಗೆ, 'ನಾನು ನನ್ನ ಹಕ್ಕನ್ನು ನಿನಗೆ ಕೊಡುತ್ತಿದ್ದೇನೆ, ನನಗೆ ಯಾವುದೂ ಬೇಡ' ಎಂದು ಹೇಳಿದ. 'ಅಣ್ಣಾ! ನೀವು ಈ ನಿರ್ಣಯವನ್ನು ಇಷ್ಟು ಬೇಗ ತೆಗೆಯಬೇಡಿ. ಮೊದಲು ನಿಮ್ಮ ಪಾಲನ್ನು ನಿಮ್ಮ ಕೈಯಲ್ಲಿ ತೆಗೆದುಕೊಳ್ಳಿ, ಎರಡು ದಿನ ನಿಮ್ಮಲ್ಲಿ ಇಟ್ಟು, ಅದರ ನಂತರ ನೀವು ಸ್ವ-ಇಚ್ಛೆಯಿಂದ ಯಾವ ನಿರ್ಣಯ ಬೇಕಾದರೂ ತೆಗೆಯಿರಿ. ನಾನು ಸಂತೋಷದಿಂದ ತೆಗೆಯುವೆನು' ಎಂದು ಹೇಳಿದೆ.

ಎರಡು ದಿನಗಳ ನಂತರ ಅಣ್ಣ ನನ್ನನ್ನು ಭೇಟಿಯಾಗಲು ನನ್ನ ಮನೆಗೆ ಬಂದರು. ಅವರ ಕೈಯಲ್ಲಿ ಆಭರಣ ಇತ್ತು. ಹೆಚ್ಚಿನ ಆಭರಣವನ್ನು ತನಗಾಗಿ ಇಟ್ಟು ಉಳಿದ ಆಭರಣವನ್ನು ತನ್ನೊಂದಿಗೆ ತಂದಿದ್ದರು. 'ಇದು ನನ್ನ ಕಡೆಯಿಂದ ನಿನಗೆ ಉಡುಗೊರೆ' ಎಂದು ಹೇಳುತ್ತ ಒಂದು ಪೊಟ್ಟಣವನ್ನು ನನಗೆ ಕೊಟ್ಟರು. ಅಲ್ಲಾಹನಾಣೆ! ಎಲ್ಲ ಆಭರಣ ನನ್ನಲ್ಲಿದ್ದಾಗ ಇದ್ದ ಸಂತೋಷಕ್ಕಿಂತ ಮಿಗಿಲಾದ ಸಂತೋಷ ನನಗೆ ಈ ಪುಟ್ಟ ಉಡುಗೊರೆಯಿಂದ ದೊರೆಯಿತು. ಅಲ್ಲಾಹನ ಸೂಕ್ತ ನನ್ನ ಮೇಲೆ ಬಹು ದೊಡ್ಡ ಅನುಗ್ರಹವಾಗಿ ಪರಿಣಮಿಸಿತು. ಪವಿತ್ರ ಕುರ್‌ಆನನ್ನು ಅವತೀರ್ಣಗೊಳಿಸಿದ ಆ ಕರುಣಾಮಯಿಗೆ ನಾನು ಕೃತಜ್ಞಳಾಗಿದ್ದೇನೆ ಹಾಗೂ ಈ ತರಗತಿ ನೆರವೇರಿಸುವವರೆಲ್ಲರಿಗೂ ಅಭಾರಿಯಾಗಿದ್ದೇನೆ."

ಈ ಸಹೋದರಿಯ ಮಾತು ಕೇಳಿ ನಾನು ಬಹಳ ಪ್ರಭಾವಿತಳಾದೆ. ಮಹಿಳೆಯರಿಗೆ ಬೆಳ್ಳಿ ಹಾಗೂ ಚಿನ್ನಾಭರಣವೆಂದರೆ ಪಂಚ ಪ್ರಾಣ! ಆದರೆ ಈ ಸಹೋದರಿ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ, ಸಮಾಜದ ರೂಢಿ-ಸಂಪ್ರದಾಯಗಳನ್ನು ಮೀರಿ ಅಲ್ಲಾಹನ ಕರುಣೆಯ ಭದ್ರ ಕೋಟೆಯಲ್ಲಿ ಆಶ್ರಯ ಪಡೆದಿದ್ದಾಳೆ. ಈ ಧೈರ್ಯಪೂರ್ಣ ಘಟನೆಯ ನಂತರ ಆಕೆಯ ವಿಶ್ವಾಸ ದುಪ್ಪಟ್ಟುಗೊಂಡಿತು.

## ಎರಡನೆಯ ಘಟನೆ

ಒಮ್ಮೆ ನಾನು ನನ್ನೋರ್ವ ಸ್ನೇಹಿತೆಯ ಮಗಳ ವಿವಾಹದ ಶುಭಾಶಯ ಕೋರಲು ಆಕೆಯ ಮನೆಗೆ ಹೋಗಿದ್ದೆ. ನನ್ನನ್ನು ನೋಡಿ ಆಕೆ "ನೀವು ಬಂದದ್ದು ಬಹಳ ಸಂತೋಷವಾಯಿತು ಅಲ್ಹಮ್ದುಲಿಲ್ಲಾಹ್. ನನ್ನ ಹಾಗೂ ನನ್ನಮ್ಮನ ಮಧ್ಯೆ ಒಂದುವಿಷಯಕ್ಕೆ ಮನಸ್ತಾಪ ಉಂಟಾಗಿದೆ. ಇವತ್ತು ನೀವು ನಮ್ಮ ತೀರ್ಪುಗಾರಳಾಗಬೇಕು. ನಿಮ್ಮ ತೀರ್ಮಾನವನ್ನು ನಾವು ತಾಯಿ ಮಗಳಿಬ್ಬರೂ ಹೃತ್ಪೂರ್ವಕವಾಗಿ ಸ್ವೀಕರಿಸುತ್ತೇವೆ" ಎಂದು ಹೇಳಿದರು. ಇಬ್ಬರೂ ವಿಷಯವನ್ನು ಚರ್ಚಿಸಲು ಬಂದು ಕುಳಿತುಕೊಂಡರು.

'ಕೆ ತನ್ನಮ್ಮನ ಏಕೈಕ ಪುತ್ರಿ, ಆಕೆಗೆ ಪುತ್ರಿಯ ಹೊರತು ಕುಟುಂಬದಲ್ಲಿ ಬೇರೆ ಯಾರೂ ಇರಲಿಲ್ಲ. ಮಗಳನ್ನು ಬಿಟ್ಟು ಬೇರೆ ಇರಲು ಆಕೆಗೆ ಸಾಧ್ಯವಿರಲಿಲ್ಲ ಹಾಗೂ 'ಕೆ ಬಯಸುತ್ತಲೂ ಇರಲಿಲ್ಲ. ನಾನು ಆಕೆಯ ಅಮ್ಮನ ಮುಖ ನೋಡಿದೆ. ಆಕೆಯ ಮುಖ ಚಿಂತೆ ಹಾಗೂ ಗಾಬರಿಯಿಂದ ಕೂಡಿತ್ತು.

ಸ್ನೇಹಿತೆ ತನ್ನ ಮನಸ್ತಾಪದ ವಿಷಯ ಹೇಳಲು ಪ್ರಾರಂಭಿಸಿದರು: ನನ್ನಮ್ಮನಿಗೆ ನಾನು ಏಕೈಕ ಸಂತಾನ. ನನ್ನ ಹೊರತು ಅಮ್ಮನ ಓರ್ವ ಸಹೋದರ ಇದ್ದಾರೆ. ಆದರೆ ಆತ ಇಂದಿನ ವರೆಗೆ ತನ್ನ ಸಹೋದರಿಯ ಬಗ್ಗೆ, ಆಕೆಯ ಆರೋಗ್ಯ ಇತ್ಯಾದಿಗಳ ಬಗ್ಗೆ ವಿಚಾರಿಸಲು ಬರಲಿಲ್ಲ. ಆತ ಅಮ್ಮನಿಗೆ, ಅವರ ಮಾತಾಪಿತರ ಆಸ್ತಿಯ ಪಾಲನ್ನು ಕೊಡಲಿಲ್ಲ. ಆದರೆ ನನ್ನಮ್ಮನ ಮರಣಾನಂತರ ಆತನಿಗೂ ಅಮ್ಮನ ಆಸ್ತಿಯಲ್ಲಿ ಪಾಲು ಇದೆ. ಹೀಗೆ ಆಗುವುದು ನನಗೆ ಇಷ್ಟ ಇಲ್ಲ. ಅಮ್ಮನ ಮರಣಾನಂತರ ಆಕೆಯ ಆಸ್ತಿ ಕೇವಲ ನನ್ನದಾಗಿರುವಂತೆ ಅಮ್ಮ ಬರೆದು ಕೊಡಬೇಕೆಂದು ನಾನು ಅಮ್ಮನಲ್ಲಿ ಹೇಳುತ್ತಿರುತ್ತೇನೆ. ಅಮ್ಮನಿಗೂ ನನ್ನ ಪ್ರಸ್ತಾವನೆ ಇಷ್ಟ ಇದೆ. ಆದರೆ ಅಲ್ಲಾಹನ ಆಜ್ಞೆ, ಅಲ್ಲಾಹನ ಭಯ ನಮಗೆ ಹೀಗೆ ಮಾಡಲು ಬಿಡುತ್ತಿಲ್ಲ. ಆದುದರಿಂದ ನಾವು ನಿಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದೇವೆ.

ನಾನು ಆಕೆಯ ಅಮ್ಮನ ಕಡೆಗೆ ತಿರುಗಿ, ಗೌರವದಿಂದ, "ನಾನು ನಿಮ್ಮ ಅಭಿಪ್ರಾಯವನ್ನು ನಿಮ್ಮ ಬಾಯಿಯಿಂದ ಕೇಳ ಬಯಸುತ್ತೇನೆ" ಎಂದು ಹೇಳಿದೆ. "ನನ್ನ ಜೀವನ ಹಾಗೂ ಮರಣ ಅಲ್ಲಾಹನ ಕೈಯಲ್ಲಿದೆ. ನಾನು ಅಲ್ಲಾಹನಿಗೆ ಭಯಪಡುತ್ತೇನೆ. ಒಂದು ವೇಳೆ ನಾನು ನನ್ನ ಆಸ್ತಿಯನ್ನು ಮಗಳ ಹೆಸರಿನಲ್ಲಿ ಮಾಡಿ, ನಾಳೆ ಆಕೆ ನನಗಿಂತ ಮುಂಚೆ ತೀರಿಕೊಂಡರೆ, ಅಳಿಯ ಹಾಗೂ ಮೊಮ್ಮಗಳು ನನ್ನನ್ನು ಸಾಕುವರು ಎಂಬ ಯಾವ ಭರವಸೆ? ನನ್ನ ಸಂಪತ್ತನ್ನು ಕಬಳಿಸಿ ನನ್ನನ್ನು ಹೊರ ದಬ್ಬಿದರೆ?" ಎಂದು ಹೇಳಿದರು.

ಇದನ್ನು ಕೇಳಿದ ಮಗಳು, "ನೀವು ಜೀವಂತವಾಗಿರುವಾಗಲೇ ನಾನು ಸಾಯಬೇಕೆಂದು ಬಯಸುತ್ತೀರಾ?" ಎಂದು ಪ್ರಶ್ನಿಸಿದಳು. "ಜೀವನ್ಮರಣದ ಬಗ್ಗೆ ಅಲ್ಲಾಹನ ಹೊರತು ಯಾರಿಗೂ ತಿಳಿದಿಲ್ಲ. ಯಾರು ಎಷ್ಟು ಸಮಯದ ತನಕ ಈ ಭೂಲೋಕದಲ್ಲಿ ಜೀವಂತವಾಗಿರಬೇಕು ಹಾಗೂ ಯಾರು, ಯಾವಾಗ, ಯಾರಿಗಿಂತ ಮೊದಲು ಮರಣ ಹೊಂದಬೇಕು, ಇದೆಲ್ಲ ಅಲ್ಲಾಹನಿಗೆ ಬಿಟ್ಟ ವಿಷಯ" ಎಂದು ತಾಯಿ ಉತ್ತರಿಸಿದರು.

ವಯಸ್ಕರಾದ ತಾಯಿಯ ಮುಖ ಸತ್ಯವಿಶ್ವಾಸದ ಜ್ಯೋತಿಯಿಂದ ಪ್ರಕಾಶಿಸುತ್ತಿತ್ತು. ನಾನು ತಾಯಿಯ ಬದಲು ಆರೋಗ್ಯವಂತ ಹಾಗೂ ದೃಢಕಾಯಳಾದ ಮಗಳ

ಕಡೆಗೆ ನೋಡಿ, "ಆತ್ಮೀಯ ಸಹೋದರಿ! ಜೀವನ ಹಾಗೂ ಮರಣದ ಲೆಕ್ಕಾಚಾ ಏಳು ಆಕಾಶಗಳ ಮೇಲೆ ಎಂದೋ ತೀರ್ಮಾನವಾಗಿದೆ. ಇದು ಸೃಷ್ಟಿಕರ್ತನಾದ ಅಲ್ಲಾಹನ ನಿರ್ಣಯ. ನಿನ್ನಮ್ಮನಲ್ಲಿರುವ ಅಲ್ಲಾಹನ ಭಯ ಹೀಗೆ ಹೇಳುವಂತೆ ಪ್ರೇರೇಪಿಸುತ್ತಿದೆ. ಅವರಿಗೆ ಹೀಗೆ ಮಾಡುವ ಸಂಪೂರ್ಣ ಹಕ್ಕಿದೆ. ವಾರೀಸು ಹಕ್ಕನ್ನು ಹಂಚುವುದು ಅಲ್ಲಾಹನ ಕಾನೂನನ್ನು ಒಳಗೊಂಡಿದೆ. ಇದರಲ್ಲಿ ಹಸ್ತಕ್ಷೇಪಿಸುವ ಹಕ್ಕು ಯಾವ ಸ್ತ್ರೀ–ಪುರುಷನಿಗೂ ಇಲ್ಲ. ಆತ ಎಷ್ಟು ಬುದ್ಧಿವಂತನಾದರೂ ಸರಿ ಅತನಿಗೆ ಅಲ್ಲಾಹನ ಕಾನೂನು ಉಲ್ಲಂಘಿಸುವ ಹಕ್ಕಿಲ್ಲ. ನಿಮ್ಮಮ್ಮ ನಾಳೆ ಪುನರುತ್ಥಾನ ದಿನದಂದು ಅಲ್ಲಾಹನ ಮುಂದೆ ನಿಲ್ಲುವ ತಯಾರಿ ನಡೆಸುತ್ತಿದ್ದಾರೆ ಎಂದಾದರೆ ನಿಮಗೇನು ನಷ್ಟ? ಯಾಕೆ ಆಕ್ಷೇಪ? ಅಮ್ಮನ ಮರಣಾನಂತರ ಆ ಸಂಪತ್ತು ಆಕೆಯ ಸೊತ್ತಾಗಿ ಉಳಿಯುವುದಿಲ್ಲ ಎಂಬ ಅವರ ಮಾತು ನಿಜ. ಅದು ಅಲ್ಲಾಹನ ಸಂಪತ್ತಾಗಿದೆ. ನಂತರವೂ ಅಲ್ಲಾಹನದ್ದಾಗಿ ಉಳಿಯುವುದು. ಅಲ್ಲಾಹನು ಅದರ ಮಾಲಿಕನಾಗಿದ್ದಾನೆ ಮತ್ತು ಮಾಲಿಕನಾಗಿಯೇ ಇರುವನು. ತನ್ನ ಸೊತ್ತನ್ನು ಆತ ಬಯಸಿದವರಿಗೆ ಹಂಚುವನು.

ನಿಮ್ಮಮ್ಮ ತಮ್ಮೆಲ್ಲ ಆಸ್ತಿಯನ್ನು ನಿಮ್ಮ ಹೆಸರಿನಲ್ಲಿ ಮಾಡಬೇಕೆಂಬ ನಿಮ ಬೇಡಿಕೆಯು, ಅಲ್ಲಾಹನ ಆಜ್ಞೋಲ್ಲಂಘನೆಯಾಗಿದೆ. ನಿಮ್ಮ ಸೋದರ ಮಾವನ ನಿರ್ಲಕ್ಷ್ಯ ಮತ್ತು ಅವರನ್ನು ವಾರೀಸು ಹಕ್ಕಿನಿಂದ ವಿಮುಖರನ್ನಾಗಿಸುವ ನಿಮ ನಿರ್ಧಾರ, ಆ ಸಂಪತ್ತನ್ನು ಕಬಳಿಸುವ ಒಂದು ಸಂಚು. ಇದು ನಿಮ್ಮ ಹುನ್ನಾರ ಅಂದು ಯಹೂದಿಯರು ಕೂಡ ಅಲ್ಲಾಹನ ಆದೇಶದಿಂದ ತಮ್ಮನ್ನು ತಡೆಯಲು ಇಂತಹ ಸಂಚನ್ನು ಹೂಡುತ್ತಿದ್ದರು. ಅಲ್ಲಾಹನು ಅವರನ್ನು ಕೋತಿಗಳು ಹಾಗೂ ಹಂದಿಗಳನ್ನಾಗಿ ಮಾಡಿದ. ನೀವು ಅಲ್ಲಾಹನ ಈ ಆದೇಶವನ್ನು ಕೇಳಲಿಲ್ಲವೇ?

فَإِن كُنَّ نِسَآءً فَوْقَ ٱثْنَتَيْنِ فَلَهُنَّ ثُلُثَا مَا تَرَكَ ۖ وَإِن كَانَتْ وَٰحِدَةً فَلَهَا ٱلنِّصْفُ

"(ಮೃತನ ಉತ್ತರಾಧಿಕಾರಿಗಳಾಗಿ) ಇಬ್ಬರಿಗಿಂತ ಹೆಚ್ಚು ಮಂದಿ ಪುತ್ರಿಯರಿದ್ದರೆ ಅವರಿಗೆ ಉತ್ತರಾಧಿಕಾರದ ಸೊತ್ತಿನಿಂದ ಮೂರನೆಯ ಎರಡಂಶ ಕೊಡಲಾಗುವುದು ಮತ್ತು ಮಗಳಾಗಿದ್ದರೆ ಆಕೆಗೆ ಅರ್ಧಾಂಶ." **(ಪವಿತ್ರ ಕುರ್‌ಆನ್: 4: 11)**

ನೀವು ಈ ಸೂಕ್ತವನ್ನು ಪುನರಾವರ್ತಿಸಿರಿ. ಈ ಸೂಕ್ತವನ್ನು ಅಲ್ಲಾಹನು ತನ ಪ್ರವಾದಿಯ ಮೇಲೆ ಅವತೀರ್ಣಗೊಳಿಸಿದುದರ ಅವಶ್ಯಕತೆ ಏನಿರಬಹುದು? ಎಂದು ಗ್ರಹಿಸಿ. ಈ ಸೂಕ್ತವನ್ನು ನಮಗೆ ಮುಟ್ಟಿಸಲು ಪ್ರವಾದಿ ಮುಹಮ್ಮದ್(ಸ)ರು ಎಷ್ಟ

ಷ್ಟ–ನಷ್ಟಗಳನ್ನು ಅನುಭವಿಸಿದ್ದರೆಂಬ ಬಗ್ಗೆ ಯೋಚಿಸಿ! ಈ ಸೂಕ್ತಗಳು ಗ್ರಂಥದೊಳಗಿರ ಕ್ಕಾಗಿ ಮತ್ತು ಗ್ರಂಥವನ್ನು ಒಂದು ಸುಂದರ ಬಟ್ಟೆಯಲ್ಲಿ ಸುತ್ತಿಡಲಿಕ್ಕಾಗಿ ಪ್ರವಾದಿ ುಹಮ್ಮದ್(ಸ)ರು ಎಲ್ಲ ರೀತಿಯ ಪರಿಶ್ರಮ ಪಟ್ಟಿದ್ದರೆಂದು ನೀವು ಭಾವಿಸುತ್ತೀರಾ? ಹೋದರಿಗೂ ಇಂತಹ ಕೃತ್ಯದಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲವೆಂದಾದರೆ ೀವು ಯೋಚಿಸಿ, ಪದೇ ಪದೇ ಯೋಚಿಸಿ, ಅಲ್ಲಾಹನು ಅವತೀರ್ಣಗೊಳಿಸಿದಂತಹ ಃ ಸೂಕ್ತಗಳನ್ನು ಪುಸ್ತಕದಲ್ಲಿ ಮುಚ್ಚಿಡಲಿಕ್ಕೆ ಆಗಿದೆಯೇ ಅಥವಾ ಇದರ ಪ್ರಕಾಶ, ೋಕದಲ್ಲಿ ಪಸರಿಸಿ ಸತ್ಯ ಹಾಗೂ ನ್ಯಾಯವನ್ನು ಜಾರಿಗೊಳಿಸಲಿಕ್ಕಾಗಿದೆಯೇ ಂದು ಯೋಚಿಸಿ. ಅಲ್ಲಾಹನ ಈ ಆದೇಶವನ್ನು ನೀವು ಪುನರಾವರ್ತಿಸಿರಿ.

وَإِن كَانَتْ وَاحِدَةً فَلَهَا النِّصْفُ "ಮತ್ತು ಒಬ್ಬಳೇ ಮಗಳಿದ್ದರೆ ಅವಳಿಗೆ ವಾರೀಸಿನ ರ್ಧಾಂಶ ಕೊಡಲಾಗುವುದು." (ಪವಿತ್ರ ಕುರ್‌ಆನ್: 4: 11)

ಆಸ್ತಿಯ ಅರ್ಧ ಭಾಗ ನಿಮ್ಮದು. ಆದರೆ ಉಳಿದ ಭಾಗದಲ್ಲಿ ಹಸ್ತಕ್ಷೇಪ ಾಡುವ ಹಕ್ಕು ನಿಮಗಿಲ್ಲ. ಯಾಕೆಂದರೆ ಆ ಉಳಿದ ಭಾಗ ಅಲ್ಲಾಹನದ್ದಾಗಿದೆ. ದುದರಿಂದ ಅದನ್ನು ಅಲ್ಲಾಹನ ಆಜ್ಞೆ ಹಾಗೂ ಇಚ್ಛೆಯಂತೆ ಹಂಚಲಾಗುವುದು. ೀವು ಅಲ್ಲಾಹನನ್ನು ನಂಬುತ್ತ, ಆತನ ಮೇಲೆ ಭರವಸೆಯನ್ನಿಟ್ಟುಕೊಳ್ಳಿ. ನಿಮಗೆ ತನ ಮೇಲಿರುವ ಪ್ರೀತಿಯನ್ನು ನೆನಪಿಸಿಕೊಳ್ಳಿ, ನಮಾಝಿನ ಸಮಯ ನಿಮ್ಮಲ್ಲಿರುವ ಯಭಕ್ತಿಯನ್ನು ನೆನಪಿಸಿ. ಅಲ್ಲಾಹನ ಆದೇಶದಂತೆ ನೆರವೇರಿಸುವ ಉಪವಾಸ ್ರತ ಹಾಗೂ ದಾನ–ಧರ್ಮಗಳನ್ನು ನೆನಪಿಸಿ. ಅಲ್ಲಾಹನ ಎಲ್ಲ ಆದೇಶಗಳನ್ನು ೀವು ಕೇವಲ ಅಲ್ಲಾಹನಿಗಾಗಿ ಪಾಲಿಸುತ್ತಿರುವಾಗ, ವಾರೀಸು ಹಕ್ಕನ್ನು ಹಂಚುವ ಗ್ಗೆ ನಿರ್ಲಕ್ಷ್ಯ ಯಾಕೆ? ಅದನ್ನು ಪಾಲಿಸಬೇಕಾದುದು ನಿಮ್ಮ ಕರ್ತವ್ಯವಲ್ಲವೇ? ಲ್ಲಾಹನ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ, ತನ್ನ ಸೇವೆ ಮಾಡುವ ಏಕೈಕ ್ರತ್ರಿಯ ಆಶೆಯನ್ನು ಬದಿಗೊತ್ತಿ ಅಲ್ಲಾಹನ ಆದೇಶವನ್ನು ಪಾಲಿಸಲು ನಿರ್ಧರಿಸುವ ುನ್ನತ ತಾಯಿಯ ಮಗಳಾಗಿ ಹುಟ್ಟಿದ್ದಕ್ಕೆ ನೀವು ಹೆಮ್ಮೆ ಪಡಬೇಕು.

ಚರ್ಚೆ ಮುಗಿಸಿ, ಅವರೀರ್ವರಿಗಾಗಿ ಅಲ್ಲಾಹನ ಆದೇಶವನ್ನು ಪಾಲಿಸುವ ಟ್ಟಿನಲ್ಲಿ ಪ್ರಾರ್ಥಿಸುತ್ತ ಬೀಳ್ಕೊಟ್ಟೆ.

ತಾಯಿ ಮಗಳಿಬ್ಬರೂ ಕುರ್‌ಆನ್ ತರಗತಿಯ ದಿನ ಬಂದಿದ್ದರು. "ಬಹಳ ಚಾರ ಮಾಡಿದ ನಂತರ, ನನ್ನ ಯೋಚನೆಗಳು ಪಿಶಾಚಿಯ ಪ್ರೇರಣೆಯಿಂದ ಗಿತ್ತು ಎಂದು ಅನಿಸಿತು. ಅಲ್ಲಾಹನ ನಿರ್ಣಯದಿಂದ ನಾನು ಸಂತುಷ್ಟಳಾಗಿದ್ದೇನೆ. ೋದರ ಮಾವನ ವಿರುದ್ಧ ನನ್ನ ಮನಸ್ಸಿನಲ್ಲಿದ್ದ ಮತ್ಸರವನ್ನು ತೆಗೆದುಬಿಟ್ಟೆ. ಲ್ಲಾಹನ ಕೃಪೆಯಿಂದ ನನ್ನ ಮನಸ್ಸು ಪರಿಶುದ್ಧವಾಗಿದೆ" ಎಂದು ಆಕೆ ಹೇಳಿದಳು.

ವಾರೀಸು ಹಕ್ಕಿನ ಆದೇಶವನ್ನು ಪಾಲಿಸಿದ ಒಂದು ವರ್ಷದೊಳಗೆ ಮಗಳ ಮರಣ ಹೊಂದಿದಳು. ತಾಯಿ ಅಲ್ಲಾಹನು ದಯಪಾಲಿಸಿದ ಆಹಾರವನ್ನು ಸೇವಿಸುತ್ತ ಜೀವಂತವಾಗಿದ್ದಾರೆ. ಅಲ್ಲಾಹನ ಆದೇಶದಂತೆ ಜೀವಿಸುವ ಸೌಭಾಗ್ಯ ಮಾಡಿ ಕೊಟ್ಟ ಅಲ್ಲಾಹನಿಗೆ ಕೃತಜ್ಞತೆಗಳು.

## ವಾರೀಸು ಹಕ್ಕನ್ನು ತಕ್ಷಣ ಹಂಚುವುದು

ಓರ್ವ ಮಹಿಳೆಯ ಪತಿ ತೀರಿಕೊಂಡಾಗ ಆಕೆಗೆ ವಿವಾಹ ಆಗಿರುವ ಮತ್ತು ಶಿಕ್ಷಣ ಪಡೆಯುತ್ತಿರುವ ಮಕ್ಕಳಿದ್ದರು. ಪತಿ ಜೀವಿಸಿದ್ದಾಗ ಹಿರಿಯ ಮಕ್ಕಳಿಗೆ ಕೊಟ್ಟ ಶಿಕ್ಷಣ ಕಿರಿಯ ಮಕ್ಕಳಿಗೂ ಸಿಗಬೇಕೆಂದು ಆಕೆಯ ಅಭಿಲಾಷೆಯಾಗಿತ್ತು. ಪತಿ ಇದ್ದ ಸಮಯ ಮನೆ ಸಾಗುತ್ತಿದ್ದಂತೆ ಸಾಗುತ್ತಿತ್ತು. ಮಕ್ಕಳ ಶಿಕ್ಷಣ ಹಾಗೂ ಪಾಲನೆ ಪೋಷಣೆಗಾಗಿ ಹಣದ ಆವಶ್ಯಕತೆ ಇರುವುದರಿಂದ ಆಕೆಗೆ ಆಸ್ತಿಯನ್ನು ಪಾಲು ಮಾಡಲು ಇಷ್ಟವಿರಲಿಲ್ಲ. ವಿವಾಹ ಆದ ಮಕ್ಕಳಿಗೆ ಹಣದ ಅಗತ್ಯವಿದ್ದರೂ ಬೇಸರ ವನ್ನು ತೋರ್ಪಡಿಸದೆ, ತಾಯಿಯ ಮೇಲಿನ ಗೌರವ ಹಾಗೂ ಸಂಕೋಚದಿಂದ ತಾಯಿಯ ಮಾತಿಗೆ ಒಪ್ಪಿಕೊಂಡರು. ಆಕೆಯ ಪತಿ ಬಹು ದೊಡ್ಡ ವ್ಯಾಪಾರಿಯಾಗಿದ್ದರು ವ್ಯಾಪಾರವು ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು. ವಿಧವೆಗೆ ವ್ಯಾಪಾರದ ಬಗ್ಗೆ ಗೊತ್ತಿರದಿದ್ದರೂ ವ್ಯಾಪಾರ ಮಾಡತೊಡಗಿದರು. ಆದರೆ ವ್ಯಾಪಾರ ಕುಂಟುತ್ತ ಹೋಯಿತು ಮತ್ತು ದಿವಾಳಿಯಾಗುವ ಹಂತಕ್ಕೆ ಬಂತು. ಇದರ ಪ್ರಭಾವ ಮನೆಯ ಮೇಲೆ ಬೀಳತೊಡಗಿತ್ತು. ಈ ನಷ್ಟದಿಂದ ಪಾರಾಗಲು ಆಕೆ ಮಸೀದಿಯ ಕಡೆಗೆ ತಿರುಗಿದರು. ಕುರ್‌ಆನ್ ತರಗತಿಗೆ ಬರ ತೊಡಗಿದರು. ಹೀಗೆ ಮಾಡಿದರೆ, ಆಕೆಯ ಜೀವನದಲ್ಲಿರುವ ಕತ್ತಲೆ ತೊಲಗಬಹುದೆಂದು ಆಕೆ ಭಾವಿಸಿದ್ದರು.

ಕುರ್‌ಆನ್ ತರಗತಿಯಲ್ಲಿ ಅಧ್ಯಯನಕ್ಕಾಗಿ ವಾರೀಸು ಹಕ್ಕಿನ ಪ್ರಸ್ತಾಪವು ಸೂಕ್ತಗಳನ್ನು ಆರಿಸಿದಾಗ, "ನನ್ನ ವ್ಯಾಪಾರ ಕುಸಿಯುತ್ತಿರುವ ಕಾರಣ ಇದುವೆ ಆಗಿರಬಹುದು ಎಂದು ನನಗನಿಸುತ್ತಿದೆ. ಅಲ್ಲಾಹನು ಸ್ಪಷ್ಟವಾದ ಆದೇಶವನ್ನು ಕಳುಹಿಸಿದ ನಂತರವೂ ನಾನು ಅದರ ವಿರುದ್ಧ ನನ್ನ ಇಷ್ಟದಂತೆ ನಡೆದೆ. ಈ ಬಗ್ಗೆ ಯಾರಲ್ಲೂ ಚರ್ಚಿಸಲೂ ಇಲ್ಲ. ಸಲಹೆ ಕೇಳಲೂ ಇಲ್ಲ" ಎಂದು ಆ ವಿಧವೆ ಬೇಸರ ಪಟ್ಟರು.

ಬಹಳ ಪಶ್ಚಾತ್ತಾಪದೊಂದಿಗೆ ಮನಗೆ ತೆರಳಿ, ತನ್ನೆಲ್ಲ ಮಕ್ಕಳನ್ನು ಹತ್ತಿರ ಕರೆದು, ಅಲ್ಲಾಹನ ಆದೇಶದಂತೆ ಆಸ್ತಿಯನ್ನು ಹಂಚಿದರು. ನಂತರ ತನ್ನ ಹಾಗು ತನ್ನ ಅಪ್ರಾಪ್ತ ಮಕ್ಕಳ ಪಾಲನ್ನು ಒಟ್ಟುಗೂಡಿಸಿ ಪುನಃ ವ್ಯಾಪಾರವನ್ನು ಆರಂಭಿಸಿದರು ಆಕೆಯ ವ್ಯಾಪಾರ ಬಹು ಬೇಗನೆ ಅಭಿವೃದ್ಧಿ ಹೊಂದುತ್ತಾ ಹೋಯಿತು. ಈ

ಸಮೃದ್ಧಿ ಕೇವಲ ಅಲ್ಲಾಹನ ಆದೇಶವನ್ನು ಪರಿಪಾಲಿಸಿದುದರಿಂದ ಉಂಟಾಯಿತು ಹಾಗೂ ವಿಚಾರಣೆಯ ದಿನದಂದು ಸಿಗುವ ಪ್ರತಿಫಲವನ್ನು ಊಹಿಸಲು ಸಾಧ್ಯವೇ?

ಸಂಪ್ರದಾಯ, ರೀತಿ–ರಿವಾಜುಗಳನ್ನು ಬಿಟ್ಟು ಅಲ್ಲಾಹನ ಆಜ್ಞೆಯನ್ನು ಅನುಸರಿಸಬೇಕಾದುದು ಕಡ್ಡಾಯ. ನಮ್ಮಲ್ಲಿರುವ ಆಶೆ–ಆಕಾಂಕ್ಷೆಗಳ ಕತ್ತಲಿನಿಂದ ಪ್ರಕಾಶದೆಡೆಗೆ ಏರಲು ಅಲ್ಲಾಹ್ ಹಾಗೂ ಆತನ ಪ್ರವಾದಿಯವರ ಅನುಸರಣೆ ಕಡ್ಡಾಯ. ನಮ್ಮೆಲ್ಲ ರೀತಿಯ ಸಂಪ್ರದಾಯ, ಆಚರಣೆ ಇತ್ಯಾದಿಗಳನ್ನು ತೊರೆದು ಪವಿತ್ರ ಕುರ್ಆನ್ ಹಾಗೂ ಪ್ರವಾದಿ ಚರ್ಯೆಯನ್ನು ಮುಂದಿಟ್ಟು ನಮ್ಮ ಜೀವನ ಬದಲಾಗಬೇಕು. ಈ ರೀತಿ ನಾವೊಂದು ಉತ್ತಮ ಸಮಾಜದ ನಿರ್ಮಾಣ ಮಾಡಲು ಸಾಧ್ಯ ಹಾಗೂ ಸಮಾಜದ ಜನರು ನಡೆದಾಡುವ ಕುರ್ಆನ್ ಅಗಲು ಸಾಧ್ಯ. ಹೀಗಾದಾಗ ನಾವು ಈ ಭೂಮಿಯ ವಾರೀಸುದಾರರಾಗುವೆವು ಎಂದು ಅಲ್ಲಾಹನು ವಾಗ್ದಾನ ಮಾಡುತ್ತಾನೆ. ಈ ರೀತಿ ಭೂಮಿ ಅಲ್ಲಾಹನ ಪ್ರಕಾಶದಿಂದ ಬೆಳಗುವುದು ಅನುಗ್ರಹ ಹಾಗೂ ಪ್ರೀತಿ ವಾತ್ಸಲ್ಯದಿಂದ ತುಂಬಿ ತುಳುಕುವುದು.

❖ ❖ ❖ ❖

# ಮನೋರೋಗಕ್ಕೆ ತುತ್ತಾಗಿರುವ ಯುವ ಪೀಳಿಗೆ

ಕುರ್‌ಆನ್ ತರಗತಿಯಲ್ಲಿ ಕೆಲವು ಬಿಡುವಿಲ್ಲದ ಮಹಿಳೆಯರು ಭಾಗವಹಿಸುತ್ತಿದ್ದರು. ಅದರಲ್ಲಿ ಓರ್ವ ಹಸನ್ಮುಖಿಯಾದ ಮಹಿಳೆಯೂ ಇದ್ದರು. ಎಲ್ಲರೊಂದಿಗೂ ನಗ ನಗುತ್ತ ಮಾತನಾಡುತ್ತಿದ್ದರು. ಬಾಯಿಯಿಂದ ಹೂವು ಉದುರುತ್ತಿರುವಂತಹ ಮಧುರ ಹಾಗೂ ಆಕರ್ಷಕ ಮಾತು. ಒಂದು ದಿನ ಆಕೆಯ ಮುಖದಿಂದ ನಗು ಮಾಯವಾಗಿ ಮುಖ ಬಾಡಿತ್ತು. ಮಾತಿನಲ್ಲಿದ್ದ ಆ ಮಾಧುರ್ಯ ಎಲ್ಲವೂ ಕಾಣೆಯಾಗಿತ್ತು. ಮರುದಿನ ತರಗತಿಗೆ ಬಂದವರು ಆಕೆಯ ಅನಾರೋಗ್ಯದ ಬಗ್ಗೆ ಹೇಳುತ್ತಿದ್ದರು. ಆಕೆಯೊಂದಿಗೆ ಏಕಾಂತದಲ್ಲಿ ಭೇಟಿಯಾಗಿ, ಆಕೆಯ ಸಮಸ್ಯೆಯ ಬಗ್ಗೆ ಕೇಳಿ ಸಹಕರಿಸಬೇಕೆಂದು ಅನಿಸಿಕೊಂಡೆ. ಏಕಾಂತತೆಯನ್ನು ಪಡೆಯಲು ನನಗೆ ಹೆಚ್ಚು ಶ್ರಮ ವಹಿಸಬೇಕಾಗಲಿಲ್ಲ. ಆಕೆ ಕೂಡ ನನ್ನನ್ನು ಭೇಟಿಯಾಗಲು ಕಾಯುತ್ತಿರುವಂತೆ ಭಾಸವಾಯಿತು.

"ನನ್ನ ಜೀವನದಲ್ಲಿ ಚಿಂತೆ ಹಾಗೂ ದುಃಖ ಆವರಿಸಿದೆ. ಬಿರುಗಾಳಿಯಲ್ಲಿ ಸಿಲುಕಿದಂತೆ ಭಾಸವಾಗುತ್ತಿದೆ. ನಾನೆಲ್ಲಿದ್ದೇನೆ? ಎಂದು ಗೊತ್ತಾಗುತ್ತಿಲ್ಲ. ನನ್ನ ಜೀವನ ಉತ್ತಮ ರೀತಿಯಲ್ಲಿ ಸಾಗುತ್ತಿತ್ತು. ಅಲ್ಲಾಹನ ದಯೆಯಿಂದ ನಾನು ನನ್ನ ಮಕ್ಕಳ ತರಬೇತಿಯನ್ನು ಕುರ್‌ಆನ್ ಹಾಗೂ ಪ್ರವಾದಿ ಚರ್ಯೆಯಂತೆ ನಡೆಸುವುದರಲ್ಲಿ ಮಗ್ನಳಾಗಿದ್ದೆ. ನನ್ನಿಷ್ಟದ ಪತಿಯನ್ನು ಆರಿಸಿದ್ದೆ. ಆತ ಓರ್ವ ವಿದ್ಯಾವಂತ, ಚಾರಿತ್ರ ವಂತ, ಬುದ್ಧಿವಂತ ಹಾಗೂ ಯುಕ್ತಿವಂತ ವ್ಯಕ್ತಿಯಾಗಿದ್ದಾರೆ. ಅಲ್ಲಾಹನ ಭಯದೊಂದಿಗೆ ಜೀವನ ನಡೆಸುವುದರಲ್ಲಿ ಅವರು ನನಗೆ ಸಹಕರಿಸುತ್ತಾರೆ. ನಾನು ಯಾವ ರೀತಿಯ ಪತಿಯನ್ನು ಬಯಸಿದ್ದೆನೋ ಅವರು ಅದಕ್ಕಿಂತ ಉತ್ತಮವಾಗಿದ್ದಾರೆ.

ನನ್ನ ಮಕ್ಕಳು ಧರ್ಮದ ಆದೇಶದಂತೆ ನಡೆಯುತ್ತಾರೆ. ಧಾರ್ಮಿಕ ವಿಷಯದಲ್ಲಿ ನನಗಿಂತಲೂ ಮುಂದಿದ್ದಾರೆ. ನನ್ನ ಹಿರಿಮಗ ಐದು ಹೊತ್ತಿನ ನಮಾಝನ್ನು ಮಸೀದಿಯಲ್ಲಿ ನೆರವೇರಿಸುತ್ತಿದ್ದ. ಉತ್ತಮ ಗುಣ ನಡತೆ, ಸೌಮ್ಯ ಸ್ವಭಾವ, ಸಭ್ಯತೆ

ಇತಿ ಮಿತಿಯೊಂದಿಗೆ ಮಾತನಾಡುತ್ತಿದ್ದ. ಹೀಗೆಯೇ ಒಮ್ಮೆ ಆಕಸ್ಮಾತ್ ಆತನ ಮೌನ ಮುರಿಯಿತು. ಈಗ ಆತ ಗುಡುಗಿನಂತೆ ಗರ್ಜಿಸುತ್ತಾನೆ. ತನ್ನ ಸಹೋದರ ಸಹೋದರಿಯರೊಂದಿಗೆ ಕಿರುಚಿ, ಕರ್ಕಶ ರೀತಿಯಲ್ಲಿ ಮಾತನಾಡುತ್ತಾನೆ. ತಂದೆಯನ್ನೂ ಬಿಡುವುದಿಲ್ಲ. ತಂದೆಯೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸುತ್ತಾನೆ. ಕಡ್ಡಾಯ ನಮಾಝ್ ನಿರ್ವಹಿಸಿ, ಸುನ್ನತ್ ಹಾಗೂ ಐಚ್ಛಿಕ ನಮಾಝುನ್ನು ಬಿಟ್ಟು ಬಿಟ್ಟಿದ್ದಾನೆ. ನಮ್ಮೆಲ್ಲರ ಕಣ್ಮಣಿಯಾಗಿದ್ದ ಹುಡುಗನನ್ನು ಎಲ್ಲರೂ ದೂರ ಮಾಡುತ್ತಿದ್ದಾರೆ ಹಾಗೂ ಮಾತನಾಡಲು ಹಿಂಜರಿಯುತ್ತಿದ್ದಾರೆ.

ಈಗ ಹಗಲಿರುಳು ತನ್ನ ಕೋಣೆಯಲ್ಲಿ ಕೂತಿರುತ್ತಾನೆ. ಹೊರಗೆ ಹೋಗಲು ಕೇಳುವುದಿಲ್ಲ. ಕೋಣೆಯಿಂದ ಹೊರಗೆ ಬಂದು ನಮ್ಮೊಂದಿಗೆ ಕೂತು ಮಾತನಾಡಲು ಬಲವಂತ ಪಡಿಸಿದರೆ ಗಾಬರಿಗೊಳ್ಳುತ್ತಾನೆ. ಅವನ ಈ ಅವಸ್ಥೆ ನೋಡಿದರೆ ಬಲವಂತದಿಂದ ಹೊರಗೆ ತಂದದ್ದಕ್ಕೆ ಪಶ್ಚಾತ್ತಾಪವಾಗುತ್ತದೆ. ಆತ ಮನೋರೋಗಕ್ಕೆ ತುತ್ತಾಗಿದ್ದಾನೆ. ತನ್ನ ಮೇಲೆ ಅನ್ಯಾಯವಾಗುತ್ತಿದೆ, ತನ್ನ ಸುತ್ತ ಮುತ್ತಲಿನಲ್ಲಿರುವವರೆಲ್ಲರೂ ಕ್ರೂರಿಗಳು. ಅಲ್ಲಾಹನ ಸಂಪ್ರೀತಿ ಗಳಿಸಲು ಒಳಿತಿನ ಕಾರ್ಯ ಮಾಡುವುದರಿಂದ ತಡೆಯುತ್ತಾರೆ. ಅತನ ಬಗ್ಗೆ ಚಿಂತಿಸಿ ನಾನು ದಣಿದು ಹೋಗಿದ್ದೇನೆ. ನನ್ನ ಕರುಳ ಕುಡಿಯ ಲಾಲನೆ ಪಾಲನೆ ಹಾಗೂ ತರಬೇತಿಯಲ್ಲಿ ನನ್ನೆಲ್ಲ ಶ್ರಮವನ್ನು ಬಳಸಿ ಉತ್ತಮ ವ್ಯಕ್ತಿಯನ್ನಾಗಿ ಮಾಡಿದ್ದೆ. ಹಲವು ರಾತ್ರಿ ನಿದ್ದೆಗೆಟ್ಟು ಶ್ರಮ ವಹಿಸಿದ್ದೇನೆ. ಆದರೆ ಇಂದು ನನ್ನೆಲ್ಲ ಪರಿಶ್ರಮ, ತ್ಯಾಗಗಳೆಲ್ಲವೂ ವ್ಯರ್ಥವಾಯಿತು. ಇಂದು ಆತನ ಸಹೋದರ ಸಹೋದರಿಯರು ಆತನಲ್ಲಿ ಮಾತನಾಡ ಬಯಸುವುದಿಲ್ಲ. ನಾನು ಜನರ ಮಧ್ಯೆ ಇರುವ ಮನಸ್ತಾಪವನ್ನು ಸರಿಪಡಿಸುತ್ತಿರುತ್ತೇನೆ. ಜನರ ಸೇವೆ ಮಾಡುತ್ತೇನೆ, ಇಂತಹದರಲ್ಲಿ ನನ್ನ ಮನೆಯ ಪರಿಸ್ಥಿತಿ ಹೀಗಾದರೆ ಏನು ಮಾಡಲಿ? ಹೇಗೆ ಸುಧಾರಿಸಲಿ? ನನ್ನ ಕರುಳ ಕುಡಿ ನನ್ನ ಮಾತು ನಿರ್ಲಕ್ಷಿಸುತ್ತಿದ್ದಾನೆ."

ಸಹೋದರಿಯ ದುಃಖಭರಿತ ವೃತ್ತಾಂತ ಕೇಳಿ ನಾನು ಹೀಗೆ ಹೇಳಿದೆ, "ಆತ್ಮೀಯ ಸಹೋದರಿ, ಇದು ಕೇವಲ ನಿಮ್ಮೊಬ್ಬರ ಮನೆಯ ಸಮಸ್ಯೆ ಅಲ್ಲ. ಹಲವು ಧಾರ್ಮಿಕ ಮನೆಗಳು ಇಂತಹ ಮನೋರೋಗದ ಸಮಸ್ಯೆಗೆ ತುತ್ತಾಗಿದೆ. ಅಲ್ಲಾಹನ ಆಜ್ಞಾನುಸಾರ ಜೀವಿಸುವ ಮನೆಗಳಲ್ಲಿ ಯುವ ಪೀಳಿಗೆ ಇಂತಹ ಸಮಸ್ಯೆಗೆ ತುತ್ತಾಗುವುದು ಮನೆಯವರಿಗೆ ವಿಪತ್ತಾಗಿ ಪರಿಣಮಿಸಿದೆ. ಯುವ ಪೀಳಿಗೆಯ ಯೋಚನೆ, ಮಾತು, ಕೃತಿಯೆಲ್ಲವೂ ಒಂದಕ್ಕೊಂದು ವಿರುದ್ಧವಾಗಿರುತ್ತವೆ. ಪ್ರಾಪ್ತ ವಯಸ್ಸಿಗೆ ತಲುಪಿದ ಮಕ್ಕಳಲ್ಲಿ ಇಂತಹ ಸಮಸ್ಯೆ ಉದ್ಭವಿಸುವುದು ಸಾಮಾನ್ಯ. ಈ ಸಂಕೀರ್ಣ ವಯಸ್ಸಿನಲ್ಲಿ ಯುವಕ/ಯುವತಿಯರಲ್ಲಿ ಶಕ್ತಿ ಸಾಮರ್ಥ್ಯ ತುಂಬಿ

ತುಳುಕುತ್ತಿರುತ್ತದೆ. ಅವರ ಶಕ್ತಿ ಸಾಮರ್ಥ್ಯಗಳು ಜ್ವಾಲಾಮುಖಿಯಂತೆ ಸ್ಫೋಟಗೊಳ್ಳಲ ತಯಾರಾಗಿರುತ್ತದೆ. ನಾವು ಸ್ವತಂತ್ರ ಜೀವನ ಸಾಗಿಸಬೇಕು, ಯಾರು ಕೂಡ ನಮ ಬಗ್ಗೆ ಪ್ರಶ್ನಿಸಬಾರದು ಎಂಬ ಯೋಚನೆ ಅವರಲ್ಲಿರುತ್ತದೆ. ಪ್ರೌಢಾವಸ್ಥೆಗೆ ಕಾಲಿಡುಃ ಸಮಯ ಮನೆಯವರ ಪ್ರತಿಯೊಂದು ಮಾತಿಗೂ ಅವರಲ್ಲಿರುವ ವಿಶೇಷ ಉತ್ತ 'ಇಲ್ಲ' ಎಂದಾಗಿದೆ.

ಪವಿತ್ರ ಕುರ್‌ಆನ್ ಅನೇಕ ಯುವಕರ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಈ ಘಟನೆಗಳು ಕಿಯಾಮತ್ ದಿನದ ತನಕ ಜನರಿಗೆ ಪಾಠದಾಯಕ ಘಟನೆಗಳಾಗಿವ ಅವರು ತಮ್ಮೆಲ್ಲ ಶಕ್ತಿ ಸಾಮರ್ಥ್ಯವನ್ನು ಅಸತ್ಯವನ್ನು ತೊಲಗಿಸುವ ಸಲುವಾ ಉಪಯೋಗಿಸಿದರು. ಪ್ರವಾದಿ ಇಬ್ರಾಹೀಮ್(ಅ), ಪ್ರವಾದಿ ಯೂಸುಫ್(ಅ) ಅಸ್ಹಾಬುಲ್ ಕಹ್ಫ್ (ಗುಹೆಯವರು), ಕಂದಕದವರು ಎಲ್ಲರೂ ಯುವಕರಾಗಿದ್ದರು ಅವರು ದುಷ್ಟ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದರು. ಅವರು 'ಇಲ್ಲ' ಎಂಬ ಪದವನ್ನು ದುಷ್ಟ ಪದ್ಧತಿಯ ವಿರುದ್ಧ ಉಪಯೋಗಿಸಿದರು. ತಮ್ಮ ಮಾತು-ಕೃತಿಗಳಿಂದ ದುಷ್ಟ ಪದ್ಧತಿಯ ವಿರುದ್ಧ ಹೋರಾಡಿದಂತೆ, ಒಳಿತನ್ನು ಸಂಸ್ಥಾಪಿಸಲ ಪ್ರಯತ್ನಿಸಿದರು. ಇದರ ವ್ಯತಿರಿಕ್ತವಾಗಿ ಪ್ರವಾದಿ ನೂಹ್(ಅ)ರ ಮಗ ಬಂಡಾಯವೆದ್ದು ಒಳಿತಿಗೆ 'ಇಲ್ಲ' ಹೇಳುತ್ತ ವಿಧೇಯನಾಗಿ ಜೀವಿಸಲಾರೆ ಎಂದು ಘೋಷಿಸಿದನು

ಹೆಚ್ಚಿನ ಮಾತಾಪಿತರಿಗೆ ಮಕ್ಕಳ ಈ ಪ್ರಾಯ ಹಾಗೂ ಈ ಪ್ರಾಯದಲ್ಲಾಗುಃ ಬದಲಾವಣೆಗಳ ಬಗ್ಗೆ ಅರಿವಿರುವುದಿಲ್ಲ. ಮಕ್ಕಳ ನಿರ್ಲಕ್ಷ್ಯ, ಅಸಡ್ಡೆ, ಅವಿಧೇಯತೆಯನು ನೋಡಿ ಗಾಬರಿಗೊಳ್ಳುತ್ತಾರೆ. ತಮ್ಮ ಮಕ್ಕಳ 'ಇಲ್ಲ' ಎಂಬ ಪದ ಅವರ ಬೇಸರವನ್ನುಂಟು ಮಾಡುತ್ತದೆ. ಆದರೂ ಮಾತಾಪಿತರು ಮಕ್ಕಳಿಗೆ ತಿಳಿಹೇಳುತ್ತಾ ಮತ್ತು ಗದರಿಸುತ್ತಾರೆ. ಆದರೂ ಮಕ್ಕಳು ನಿರ್ಲಕ್ಷ್ಯ ತೋರುತ್ತಾರೆ. ಹೆಚ್ಚಿನ ಸಮಯ ಮಾತಾಪಿತರ ಈ ವರ್ತನೆಯಿಂದ ಲಾಭಕ್ಕಿಂತ ಹೆಚ್ಚು ನಷ್ಟವನ್ನುಂಟು ಮಾಡುತ್ತಾರ

"ಅಲ್ಲಾಹನಾಣೆ! ನಿಮ್ಮ ಮಾತು ಅಕ್ಷರಶಃ ನಿಜ. ನಿಮ್ಮ ಮಾತು ಕೇಳಿದಾಗ ನೀವು ನಮ್ಮ ಮನೆಯಲ್ಲಿ ಇದ್ದಿರೇನೋ ಎಂದನಿಸುತ್ತದೆ" ಎಂದು ಆಕೆ ಹೇಳಿದರು

"ನಿಮ್ಮ ಮಗನ ಪ್ರಕರಣವು ಬಹಳ ಕೆಟ್ಟು ಹೋಗಿದೆ. ಇನ್ನು ಆತನ ಸುಧಾರಣ ನಮ್ಮಿಂದ ಆಗದು. ಆದುದರಿಂದ ಅಲ್ಲಾಹನಡೆಗೆ ತಿರುಗುವುದು ಉತ್ತಮ ಅಲ್ಲಾಹನು ತೋರಿಸುವ ಪರಿಹಾರ ಉಪಯೋಗಿಸಿರಿ. ಅಲ್ಲಾಹನು ನಮ್ಮ ಮಾರ್ಗದರ್ಶ ಮಾಡಿರುವಾಗ, ಆ ಮಾರ್ಗದರ್ಶನದಂತೆ ನಡೆಯುವುದರಿಂದ ನಮ್ಮ ಸಮಸ್ಯೆಯ ಪರಿಹಾರ ಕಂಡುಕೊಳ್ಳುವುದು ಕಡ್ಡಾಯ" ಎಂದು ನಾನು ಹೇಳಿದೆ.

“ಅಲ್ಲಾಹನ ಮಾರ್ಗದರ್ಶನದಂತೆ ನಡೆಯುತ್ತೇನೆ ಎಂಬ ವಾಗ್ದಾನ ನಾನು ನಿಮ್ಮಲ್ಲಿ ಮಾಡುತ್ತೇನೆ. ನಾನು ಅನುಸರಿಸಬೇಕಾದ ಸೂಕ್ತವನ್ನು ಹೇಳಿ ಸಹೋದರಿ.”

ನಾನು ಹೇಳಿದೆ: وَمَن يَتَّقِ اللَّهَ يَجْعَل لَّهُ مَخْرَجًا “ಅಲ್ಲಾಹನನ್ನು ಭಯ ಪಡುತ್ತ ಕಾರ್ಯವೆಸಗುವವನಿಗೆ ಅಲ್ಲಾಹನು ಸಂಕಷ್ಟಗಳಿಂದ ಪಾರಾಗುವ ಯಾವುದಾದರೂ ದಾರಿಯನ್ನು ತೆರೆಯುವನು.” (ಪವಿತ್ರ ಕುರ್‌ಆನ್: 65: 2) ಎಂಬ ಸೂಕ್ತವನ್ನು ಓದಿರಿ. ಅಲ್ಲಾಹನ ದಾರಿಯ ಹೊರತು, ಬೇರೆ ಯಾವ ದಾರಿಯೂ ಇಲ್ಲ, ಎಲ್ಲ ದಾರಿಗಳೂ ಮುಚ್ಚಿಹೋಗಿವೆ. ನಿಮ್ಮ ಆಯ್ಕೆ ಕೇವಲ ಅಲ್ಲಾಹನ ಭಯವಲ್ಲದೆ ಮತ್ತೇನಿಲ್ಲ. ಕ್ಷಮಿಸಿ, ಇದರರ್ಥ ನಿಮ್ಮಲ್ಲಿ ಅಲ್ಲಾಹನ ಭಯವಿಲ್ಲ ಎಂದಲ್ಲ, ಬದಲಾಗಿ...

ಆಕೆ ನನ್ನ ಮಾತನ್ನು ಮುರಿಯುತ್ತ “ನಿಮ್ಮ ಮಾತಿನ ಮರ್ಮ ನನಗೆ ಅರ್ಥವಾಯಿತು. ನಾನು ನನ್ನ ಜೀವನವನ್ನು ಅಲ್ಲಾಹನ ಭಯದೊಂದಿಗೆ ಜೀವಿಸುವೆ. ಯಾವ ಕಾರಣಕ್ಕೂ ಅಲ್ಲಾಹನ ಭಯವನ್ನು ಕೈ ಬಿಡಲಾರೆ. ನನ್ನ ಮಾತು, ನನ್ನ ಕೃತಿ, ನನ್ನ ಕೆಲಸ ಕಾರ್ಯಗಳು, ನನ್ನ ಗುಣ ನಡತೆ, ನನ್ನ ಚಿಂತನೆ, ಪ್ರತಿಯೊಂದರಲ್ಲಿಯೂ ಅಲ್ಲಾಹನ ಭಯವನ್ನು ಇರಿಸಿಕೊಳ್ಳುವೆನು” ಎಂದು ಹೇಳಿದರು.

ಮಗನಿಂದ ಮನನೊಂದ ಮಹಿಳೆ, ಅಲ್ಲಾಹನ ಭಯದೊಂದಿಗೆ ಜೀವನ ಸಾಗಿಸುವ ವಾಗ್ದಾನ ಮಾಡುತ್ತ ಹೋಗಲು ಅನುವಾದರು. ‘ಅಲ್ಲಾಹ್ ಹಾಫಿಝ್’ ಎಂದು ಹೇಳುತ್ತ ಕೈಕುಲುಕಿದಾಗ ಅವರು, وَمَن يَتَّقِ اللَّهَ يَجْعَل لَّهُ مَخْرَجًا ಎಂಬ ಸೂಕ್ತವನ್ನು ಪಠಿಸಲು ಪ್ರಾರಂಭಿಸಿದರು. ನನ್ನ ಪ್ರಭು ಅಲ್ಲಾಹನು ಸತ್ಯವನ್ನು ನುಡಿದಿರುವನು. ಅಲ್ಲಾಹನ ವಾಗ್ದಾನ ಸತ್ಯವಾಗುವುದರಲ್ಲಿ ಸಂದೇಹವಿಲ್ಲ.

ಮನನೊಂದ ಮಹಿಳೆಯನ್ನು ಬೀಳ್ಕೊಟ್ಟಾಗ, ನಿರ್ಮಲ ಮನಸ್ಸಿನೊಂದಿಗೆ ಆಕೆಯ ಸಫಲತೆ ಹಾಗೂ ಯಶಸ್ಸಿಗಾಗಿ ಪ್ರಾರ್ಥಿಸಿದೆ. ಪ್ರತಿ ಸಲ ಭೇಟಿಯಾದಾಗ ಆಕೆ ನನ್ನಲ್ಲಿ ಹಾಗೂ ಎಲ್ಲರಲ್ಲೂ ತನ್ನ ಮಗನಿಗಾಗಿ ಪ್ರಾರ್ಥಿಸಲು ಹೇಳುತ್ತಿದ್ದರು ಹಾಗೂ ತಾನು ಆ ಪ್ರಾರ್ಥನೆಯಲ್ಲಿ ಸ್ಥಿರವಾಗಿ ನಿಲ್ಲಲು ಪ್ರಾರ್ಥಿಸಿರಿ ಎಂದೂ ಹೇಳುತ್ತಿದ್ದರು. ಒಂದೆಡೆ ತನ್ನ ಮಗನ ಗುಣ ನಡತೆಯ ಬಗ್ಗೆ ಚಿಂತೆಯಾದರೆ, ಇನ್ನೊಂದೆಡೆ ಅಲ್ಲಾಹನ ಭಯವನ್ನು ಜೀವನದಲ್ಲಿ ಹೇಗೆ ಅಳವಡಿಸಲಿ ಎಂಬ ಚಿಂತೆ ಆಕೆಯನ್ನು ಕಾಡುತ್ತಿತ್ತು. ಆಕೆ ಅಲ್ಲಾಹನ ಮೇಲಿಟ್ಟ ವಿಶ್ವಾಸ, ಅಲ್ಲಾಹನ ಭಯ ಹಾಗೂ ಆಕೆಯ ಪ್ರಾರ್ಥನೆ ಅಲ್ಲಾಹನಲ್ಲಿ ಸ್ವೀಕೃತವಾಯಿತು. ಆ ಘಟನೆಯನ್ನು ಆಕೆಯಿಂದಲೇ ಕೇಳುವ. ಕುರ್‌ಆನ್ ತರಗತಿಯಲ್ಲಿ ಆಕೆ ತನ್ನ ವೃತ್ತಾಂತವನ್ನು ತಿಳಿಸಿದರು:

ಆತ್ಮೀಯ ಸಹೋದರಿಯರೇ! ನಾನು ನನ್ನ ಜೀವನದಲ್ಲಿ ಬದಲಾವಣೆಯನ್ನುಂಟು

ಮಾಡಲು ಹಲವು ರೀತಿಯ ಪ್ರಯತ್ನ ಮಾಡಿದೆ. ನನ್ನೆಲ್ಲ ವಿಷಯ ಹಾಗೂ ಕೆಲಸ ಕಾರ್ಯಗಳನ್ನು ಅಲ್ಲಾಹನ ಭಯದೊಂದಿಗೆ ನೆರವೇರಿಸ ಬಯಸಿದೆ. ನನ್ನ ಮಗನನ್ನು ಪಿಶಾಚಿಯ ಹಿಡಿತದಿಂದ ರಕ್ಷಿಸಬಯಸಿದೆ. ಅದಕ್ಕಾಗಿ ತಹಜ್ಜುದ್ ನಮಾಝ್ ನೆರವೇರಿಸುವುದೆಂದು ತೀರ್ಮಾನಿಸಿದೆ. 2 ರಕಅತ್‌ನಿಂದ ಪ್ರಾರಂಭಗೊಂಡ ತಹಜ್ಜುದ್ ನಮಾಝ್ ಕ್ರಮೇಣ 8 ರಕಅತ್‌ಗೆ ಮುಟ್ಟಿತು. ಈ ನಮಾಝ್‌ನಿಂದ ಬಹಳ ನೆಮ್ಮದಿ ದೊರೆಯಿತು. ಫಜ್ರ್ ನಮಾಝ್‌ಗೆ ದೊಡ್ಡ ಅಧ್ಯಾಯಗಳನ್ನು ಓದಲಿಕ್ಕಾಗಿ, ದೊಡ್ಡ ಸೂರಃಗಳನ್ನು ಕಂಠಪಾಠ ಮಾಡತೊಡಗಿದೆ. ಇದರಿಂದಲೂ ಬಹಳಷ್ಟು ನೆಮ್ಮದಿ ದೊರೆಯಿತು. ಪವಿತ್ರ ಕುರ್‌ಆನ್ ಕಂಠಪಾಠ ಮಾಡುವವರಿಗೆ ಇದರ ಅನುಭವ ಖಂಡಿತವಾಗಿಯೂ ಇರುವುದು. ಜನರೊಂದಿಗಿರುವ ನನ್ನ ವ್ಯವಹಾರ ಸರಿಪಡಿಸುವೆನೆಂದು ನಿರ್ಧರಿಸಿದೆ. ವಿಶೇಷತಃ ನನ್ನ ಮಕ್ಕಳೊಂದಿಗೆ ನನ್ನ ವರ್ತನೆ ಬದಲಾಯಿಸತೊಡಗಿದೆ.

ಅಲ್ಲಾಹನ ಸಂಪ್ರೀತಿ ಗಳಿಸಲು ನಾನು ನನ್ನ ಪತಿಯೊಂದಿಗಿನ ನನ್ನ ಸಂಬಂಧ ವನ್ನು ಉತ್ತಮ ಪಡಿಸಲು ಪ್ರಯತ್ನಿಸಿದೆ. ಪತಿಯ ಸೇವೆ ಹಾಗೂ ಅನುಸರಣೆಯ ಉದ್ದೇಶ ಅಲ್ಲಾಹನ ಸಂಪ್ರೀತಿಯ ಗುರಿಯಾಗಿತ್ತು. ಇದರಿಂದ ನನಗೆ ಬಹಳ ನೆಮ್ಮದಿ ದೊರೆಯಿತು. ಇದರ ಪ್ರತಿಫಲವನ್ನು ಅಲ್ಲಾಹನು ಖಂಡಿತವಾಗಿಯೂ ಕೊಡುತ್ತಾನೆ ಎಂಬ ವಿಶ್ವಾಸ ಇರುವುದರಿಂದ ಶುದ್ಧ ಮನಸ್ಸಿನೊಂದಿಗೆ ಮಾಡುತ್ತಿದ್ದೆ. ಜೊತೆಗೆ ಮಗನಿಗಾಗಿ ಪ್ರಾರ್ಥಿಸುತ್ತಲೂ ಇದ್ದೆ.

ಈ ರೀತಿ ಶುದ್ಧ ಮನಸ್ಸಿನೊಂದಿಗೆ ಮಾಡಿದ ಆರಾಧನೆ, ಪ್ರಾರ್ಥನೆಗಳ ಕಾರಣ ನನ್ನ ಮನಸ್ಸಿಗೆ ನೆಮ್ಮದಿ ದೊರೆಯಿತು, ನನ್ನ ಆತ್ಮ ಶುದ್ಧವಾಯಿತು. ನಾನು ನನ್ನ ಗೆಳತಿಯರು, ನೆರೆಕೆರೆಯವರು ಹಾಗೂ ಸಂಬಂಧಿಕರೊಂದಿಗೂ ನನ್ನ ಸಂಬಂಧ ಉತ್ತಮಗೊಳಿಸುವಂತೆ ಪ್ರಯತ್ನಿಸಿದೆ. ಇದರ ನಂತರ ಮನಸ್ಸು ಹಗುರವಾಗಿ, ನಾನು ಆಕಾಶದಲ್ಲಿ ಹಾರುತ್ತಿರುವಂತೆ ಭಾಸವಾಯಿತು. ಇದಕ್ಕೆ ಕಾರಣ ಈ ಹದೀಸ್ ಆಗಿದೆ.

**خلقت الرحم و اشتققت له اسماء من اسمی فمن وصله و صلته ومن قطعه قطعته**

"ನಾನು ದಯೆಯನ್ನು ಸೃಷ್ಟಿಸಿದೆ ಮತ್ತು ಅದನ್ನು ನನ್ನ ಹೆಸರಿನೊಂದಿಗೆ ಜೋಡಿಸಿದೆ. ತಮ್ಮ ಸಂಬಂಧವನ್ನು ಉತ್ತಮ ಪಡಿಸುವವದರೊಂದಿಗೆ ನಾನು ಸೇರುವೆನು ಮತ್ತು ಸಂಬಂಧಗಳನ್ನು ಮುರಿಯುವರೊಂದಿಗೆ ನಾನು ನನ್ನ ಸಂಬಂಧ ವನ್ನು ಮುರಿಯುವೆನು." (ಹದೀಸ್ ಕುದ್ಸಿ)

ಈ ಹದೀಸ್ ನೆನಪಾದ ತಕ್ಷಣ, ನಾನು ಬಟ್ಟೆ ಬದಲಿಸಿ ನನ್ನ ಚಿಕ್ಕಪ್ಪನ ಮನೆಗೆ

ಹೋದೆ. ಅವರಿರುವ ಫ್ಲಾಟ್‌ನ ಲಿಫ್ಟ್ ಉಪಯೋಗಿಸದೆ ಮೆಟ್ಟಿಲುಗಳನ್ನು ಹತ್ತ ತೊಡಗಿದೆ. ಪ್ರತಿಯೊಂದು ಮೆಟ್ಟಿಲು ಹತ್ತುವಾಗ ಹೀಗೆ ಪ್ರಾರ್ಥಿಸಿದೆ, "ಓ ಅಲ್ಲಾಹನೇ, ನಾನು ನಿನ್ನ ಆಜ್ಞೆಯಂತೆ ನನ್ನ ಹತ್ತಿರದ ಸಂಬಂಧಿಕರೊಂದಿಗೆ ಸಂಬಂಧವನ್ನು ಜೋಡಿಸಲು ಹೋಗುತ್ತಿದ್ದೇನೆ. ನೀನು ನಿನ್ನ ಸಂಬಂಧವನ್ನು ನನ್ನೊಂದಿಗೆ ಜೋಡಿಸು. ನಾನು ಹಿಂದಿರುಗಿ ಮೆಟ್ಟಿಲು ಇಳಿದು ಬರುವಷ್ಟರಲ್ಲಿ ನನ್ನ ಸಂಬಂಧ ಸರಿಯಾಗಲಿ" ಎಂದು ಪ್ರಾರ್ಥಿಸುತ್ತ ಚಿಕ್ಕಪ್ಪನ ಮನೆಯ ಬಾಗಿಲು ತಟ್ಟಿದೆ. ಮನೆಯ ಬಾಗಿಲು ತೆರೆದಾಗ, ಅಲ್ಲಾಹನು ನನಗಾಗಿ ದಯೆಯ ಬಾಗಿಲನ್ನು ತೆರೆದಂತೆ ಭಾಸವಾಯಿತು. ನಾನು ನಗುತ್ತ ಚಿಕ್ಕಪ್ಪನಿಗೆ ಸಲಾಮ್ ಹೇಳಿದೆ. ಮಾತನಾಡಿ, ಹಿಂದಿರುಗಿದಾಗ ಮನಸ್ಸಿಗೆ ಬಹಳ ನೆಮ್ಮದಿಯೆನಿಸಿತು ಹಾಗೂ ಮನಸ್ಸಿನ ದೊಡ್ಡ ಹೊರೆ ಇಳಿದು ಹೋದಂತೆ ಭಾಸವಾಯಿತು. ಅಲ್ಲಾಹನ ಸಂಪ್ರೀತಿಗಾಗಿ ಒಳಿತಿನ ಕಾರ್ಯಗಳನ್ನು ಮಾಡಿದಾಗ, ಅಲ್ಲಾಹನ ಸಾಮಿಪ್ಯ ದೊರಕಿದಂತೆ ಭಾಸವಾಗುತ್ತದೆ ಮತ್ತು ಸಾವಿರ ಐಚ್ಛಿಕ ನಮಾಝುನ್ನು ನೆರವೇರಿಸಿದಂತೆ ಮನಸ್ಸಿಗೆ ಬಹಳ ನೆಮ್ಮದಿ ದೊರೆಯುತ್ತದೆ.

ಈ ಘಟನೆಯ ನಂತರ, ಅನುಸರಣೆ ಮತ್ತು ಪಿತ್ರಾರ್ಜಿತವಾಗಿ ದೊರೆತ ಈಮಾನ್ ಹಾಗೂ ನಿಜವಾದ ಈಮಾನಿನ ನಡುವಿನ ಅಂತರ ತಿಳಿಯಿತು. ಇದರ ನಂತರ, وَمَنْ يَتَّقِ اللَّهَ يَجْعَلْ لَهُ مَخْرَجًا ﴿٢﴾ ಎಂಬ ಪವಿತ್ರ ಕುರ್‌ಆನಿನ ಸೂಕ್ತವನ್ನು ಅನುಸರಿಸುವ ಹಲವು ಸಂದರ್ಭಗಳು ದೊರೆತವು. ಬಹು ಬೇಗನೆ ನನ್ನ ಸ್ಥಿತಿ ಬದಲಾಯಿತು. ನನ್ನ ದುಃಖದ ದಿನಗಳು ಸಂತೋಷದಲ್ಲಿ ಬದಲಾಯಿತು.

ಮಗನ ವಿಷಯದಲ್ಲಿ ನಾನು ಬಹಳ ತಾಳ್ಮೆ ಹಾಗೂ ಸಹನೆಯನ್ನು ಮೈಗೂಡಿಸಿಕೊಂಡಿದ್ದೆ. ಪ್ರತಿಯೊಂದು ಸುಜೂದ್‌ನಲ್ಲಿ (ಸಾಷ್ಟಾಂಗದಲ್ಲಿ) ಆತನಿಗಾಗಿ ಪ್ರಾರ್ಥಿಸಿದೆ. ನಮಾಝ್‌ನ ನಂತರ, ಕುರ್‌ಆನ್ ಪಾರಾಯಣದ ನಂತರ, ಅಲ್ಲಾಹನ ದಿಕ್ರ್‌ನ (ಸ್ತುತಿ) ನಂತರ ಆತನಿಗಾಗಿ ನಿರಂತರ ಪ್ರಾರ್ಥಿಸುತ್ತ ಹಲವು ವರ್ಷಗಳು ಕಳೆದವು. ಅದೊಂದು ದಿನ ಅಲ್ಲಾಹನು ನನ್ನ ಮಗನನ್ನು ನನಗೆ ಹಿಂದಿರುಗಿಸಿದನು. ಆತ ತನ್ನ ವೈರಾಗ್ಯ ಹಾಗೂ ಏಕಾಂಗಿತನದಿಂದ ಹೊರಬಂದು, ತನ್ನ ಮಾತಾಪಿತರು ಹಾಗೂ ಸಹೋದರ-ಸಹೋದರಿಯರೊಂದಿಗೆ ಮಾಡುತ್ತಿದ್ದ ಅಸಭ್ಯ ವರ್ತನೆಯನ್ನು ನಿಲ್ಲಿಸಿದನು. ಆತ ಬದಲಾಗಿದ್ದ, ಆತನ ಈ ಬದಲಾದ ವರ್ತನೆಯಿಂದ ಆತನನ್ನು ಮನೆಯವರು ಸಂತೋಷದಿಂದ ಮನ ತುಂಬಿ ಸ್ವೀಕರಿಸಿದರು.

ತನ್ನ ಮಗ ಅಸಭ್ಯತನವನ್ನು ಬಿಟ್ಟು ಪುನಃ ಸನ್ಮಾರ್ಗದಲ್ಲಿ ನಡೆಯಲಾರಂಭಿಸಿದ. ಈ ಘಟನೆಯನ್ನು ವಿವರಿಸುತ್ತಾ ಆಕೆಯ ಕಣ್ಣುಗಳು ತೇವಗೊಂಡವು. ಈ ದುಃಖಕರ

ಘಟನೆ ಕೇಳಿ ಎಲ್ಲರೂ ಅತ್ತುಬಿಟ್ಟರು. ಎಲ್ಲ ಸಭಿಕರೂ ಆಕೆಗೆ ಶುಭ ಹಾರೈಸಿದರು.

ಅಲ್ಲಾಹನ ಒಂದು ಸೂಕ್ತವನ್ನು ತಾಳ್ಮೆ ಹಾಗೂ ದೃಢತೆಯಿಂದ ಅನುಸರಿಸಿದ ಕಾರಣ ದುಃಖವು ಸುಖದಲ್ಲಿ ಬದಲಾಯಿತು. ನಾವು ಕೂಡ ನಮ್ಮ ಎಲ್ಲ ಸಮಸ್ಯೆಗಳ ಪರಿಹಾರವನ್ನು ಪವಿತ್ರ ಕುರ್‌ಆನಿನ ಮೂಲಕ ಮಾಡಿದರೆ, ನಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಪವಿತ್ರ ಕುರ್‌ಆನ್ ಸಮೃದ್ಧಿದಾಯಕ ಗ್ರಂಥ ಎಂದು ಹೇಳುವುದರ ಅರ್ಥ ಇದುವೇ ಆಗಿದೆ. ಈ ಸೂಕ್ತಗಳ ಆಜ್ಞೆ, ಅದರ ಉದ್ದೇಶ ಮತ್ತು ಯುಕ್ತಿಯನ್ನು ನಮ್ಮ ಜೀವನದಲ್ಲಿ ಅಳವಡಿಸಿದರೆ ಹಾಗೂ ಅದರಲ್ಲಿರುವ ಘಟನೆಗಳಿಂದ ಪಾಠ ಕಲಿತರೆ, ನಮ್ಮ ವೈಯಕ್ತಿಕ ಹಾಗೂ ಸಾಮೂಹಿಕ ಜೀವನದಲ್ಲಿ ಸಮೃದ್ಧಿ ದೊರಕುವುದು. ಈ ರೀತಿ ಮುಸ್ಲಿಮ್ ಸಮುದಾಯ ಸ್ವರ್ಗವನ್ನು ಗುರಿಯಾಗಿಟ್ಟು ಮುಂದೆ ಸಾಗಬಲ್ಲುದು.

❖ ❖ ❖ ❖

# ಗೋರಿಗಳಲ್ಲಿ ಪ್ರಾರ್ಥಿಸುವುದು

ಇಸ್ಲಾಮ್ ಹಾಗೂ ಮಹಿಳೆಯರ ಹಕ್ಕುಗಳ ಬಗ್ಗೆ ಮಹಿಳೆಯರಿಗೆ ತಿಳಿಸಲು, ಒಮ್ಮೆ ಒಂದು ಊರಿನವರು ನನ್ನನ್ನು ಆಹ್ವಾನಿಸಿದ್ದರು. ಈ ಊರು ನಗರದ ಹತ್ತಿರ ಇರುವುದರಿಂದ ನಗರಕ್ಕೆ ಸೇರಿದೆ ಎಂದು ಹೇಳಬಹುದಾದರೂ, ಹಳ್ಳಿಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆ ಊರಿನಲ್ಲಿ ವಾಸಿಸುವುದರಿಂದ ಅವರ ಆಚಾರ-ವಿಚಾರ, ನಂಬಿಕೆ, ಧಾರ್ಮಿಕತೆ ಎಲ್ಲವೂ ಹಳ್ಳಿಗರಂತೆ ಇತ್ತು. ಈ ಊರಿನ ಮಹಿಳೆಯರೊಂದಿಗೆ ಮಾತನಾಡಬೇಕೆಂಬ ನನ್ನ ಬಹುದಿನಗಳ ಹಂಬಲ ನನಸಾಯಿತು. ಅಲ್ಲಾಹನು ದಯಪಾಲಿಸಿದ ಈ ಅವಕಾಶಕ್ಕೆ ಸಂತೋಷ ಪಟ್ಟೆ. ಓರ್ವ ಮಹಿಳೆ ತನ್ನ ಮನೆಯ ಕನ್ನಡಿಯಾಗಿದ್ದಾಳೆ ಎಂಬುದು ನನ್ನ ಭಾವನೆ. ಆಕೆಯ ಮುಖಾಂತರ ಆಕೆಯ ಮನೆಯ ವಾತಾವರಣ ಬಹಳ ನಿಖರವಾಗಿ ಅರಿಯುವಂತೆ, ಒಂದು ಊರಿನ ಮಹಿಳೆಯರನ್ನು ನೋಡಿ ಅಲ್ಲಿಯ ವಾತಾವರಣ ಹಾಗೂ ಪ್ರಜೆಗಳ ಬಗ್ಗೆ ತಿಳಿಯಬಹುದು ಎಂಬುದು ನನ್ನ ಅನಿಸಿಕೆ.

ಸಭಾಂಗಣ ಹುಡುಕಲು ಕಷ್ಟವಾಗಲಿಲ್ಲ. ಅದು ಮಸೀದಿಯ ಹತ್ತಿರದ ಒಂದು ಪ್ರಸಿದ್ಧ ಮನೆಯಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಅಲ್ಲಿ ಸೇರಿದ್ದರು. ಅವರ ಮುಖದಲ್ಲಿ ಸಂತೋಷ ಗೋಚರಿಸುತ್ತಿತ್ತು. ಅವರು ಕೂತ ಪಕ್ಕದಲ್ಲಿ ವಿವಿಧ ರೀತಿಯ ಪಾತ್ರೆಗಳ ರಾಶಿ ಹಾಕಲಾಗಿತ್ತು. ಪಾತ್ರೆಯ ರಾಶಿ ನೋಡಿ ನನಗೆ ಆಶ್ಚರ್ಯವಾಯಿತು. ಕಾರಣ ಕೇಳಿದಾಗ ಇವತ್ತು ವಿದ್ವಾಂಸರೊಬ್ಬರು ಹುಟ್ಟಿದ ದಿನ. ನಿಮ್ಮ ಬಲಬದಿ ನೋಡಿ, ಅಲ್ಲಿ ಅವರ ಗೋರಿ ಇದೆ. ನಾನು ಬಲಬದಿ ತಿರುಗಿದೆ, ಅಲ್ಲಿ ಒಂದು ದೊಡ್ಡ ಗೋರಿ ಇತ್ತು. ಇದನ್ನು ನೋಡಿ ಅಲ್ಲಿ ನೆರೆದಿದ್ದ ಮಹಿಳೆಯರೊಂದಿಗೆ ಬಹಳ ಪ್ರೀತಿಯಿಂದ "ಇಂದು ನೀವು ಯಾವ ವಿಶೇಷವನ್ನು ಮಾಡುತ್ತೀರಿ?"-ಆಗ ಮಹಿಳೆಯೊಬ್ಬರು "ನಾವು ವರ್ಷವಿಡೀ ಈ ದಿನಕ್ಕಾಗಿ ಕಾಯುತ್ತಿರುತ್ತೇವೆ. ಇಂದು ಪ್ರಾಣಿ ಬಲಿ ಕೊಡುತ್ತೇವೆ. ವಿಶೇಷ ಅಡುಗೆ ತಯಾರಿಸಿ ಗೋರಿಯಲ್ಲಿರುವ ವಿದ್ವಾಂಸರ ಬಳಿ ನಮಗಾಗಿ ಪ್ರಾರ್ಥಿಸಬೇಕೆಂದು ಅವರಲ್ಲಿ ಬೇಡುತ್ತೇವೆ" ಎಂದರು.

ಮಹಿಳೆಯರ ಮಾತು ಕೇಳಿ ಬಹಳ ದುಃಖವಾಯಿತು. ಇದು ಒಂದು ಬಹಿರಂಗ ಶಿರ್ಕ್. ಇವರನ್ನು ಇದರಿಂದ ಹೊರಗೆ ತರಬೇಕೆಂದು ತೀರ್ಮಾನಿಸಿದೆ. ಮಹಿಳೆಯರಿಗೆ ಇದರ ಸತ್ಯತೆಯ ಬಗ್ಗೆ ವಿವರಿಸಿದಾಗ ಓರ್ವ ಮಹಿಳೆ, "ನಾವು ಈ ವಿದ್ವಾಂಸರನ್ನು ಆರಾಧಿಸುವುದಿಲ್ಲ ಇವರು ಅತ್ಯುತ್ತಮ ಗೌರವಾನ್ವಿತ ಹಿರಿಯರಾಗಿರುವ ಕಾರಣ, ಈ ಗೋರಿಯ ಮುಂದೆ ನಿಂತು ಪ್ರಾರ್ಥಿಸಿದರೆ ಎಲ್ಲ ಪ್ರಾರ್ಥನೆ ಹಾಗೂ ಬೇಡಿದ ಎಲ್ಲ ಬೇಡಿಕೆಗಳು ಸ್ವೀಕೃತವಾಗುತ್ತಿರುವುದರಿಂದ, ನಮಗೆ ಈ ಹಿರಿಯರ ಸಾನ್ನಿಧ್ಯ ದೊರಕಿಸುವಂತೆ ಅಲ್ಲಾಹನಲ್ಲಿ ಬೇಡುತ್ತೇವೆ."

ಆಕೆ ನನ್ನನ್ನು ಅಜ್ಞಾನದಿಂದ ಹೊರತರಲು ಪ್ರಯತ್ನಿಸುವಂತೆ ವಿವರಿಸಿದರು. ವ್ಯರ್ಥ ಚರ್ಚೆ, ತಕರಾರುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಸೂಕ್ತ ಎಂದು ಯೋಚಿಸುತ್ತ, ನಾನು ದರ್ಸೆ ಕುರ್‌ಆನ್ ಆರಂಭಿಸಿದೆ. ಇಲ್ಲಿ ನನ್ನನ್ನು ದರ್ಸೆ ಕುರ್‌ಆನ್ ಮಾಡಲು ಅಹ್ವಾನಿಸಲಾಗಿತ್ತು. ಇಲ್ಲಿಯ ವಾತಾವರಣ ನೋಡಿ ನಾನು فَاعْبُدِ اللّٰهَ مُخْلِصًا لَّهُ الدِّيْنَ ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತ ಅವನ ದಾಸ್ಯವನ್ನು ಮಾಡಿರಿ" (ಪವಿತ್ರ ಕುರ್‌ಆನ್: 39: 2) ಎಂಬ ಸೂಕ್ತವನ್ನು ಆರಿಸಿದೆ.

ಈ ಸೂಕ್ತವನ್ನು ಉತ್ತಮ ರೀತಿಯಲ್ಲಿ ವ್ಯಾಖ್ಯಾನಿಸಿದೆ. ಹಾಗೆಯೇ ಈ ಸೂಕ್ತವನ್ನು ಕೇಳುವುದು ಮಾತ್ರವಲ್ಲ, ತಮ್ಮ ಜೀವನದಲ್ಲಿ ಅಳವಡಿಸಬೇಕೆಂದು ತಿಳಿಸಿದೆ. ನಾನು ಹೇಳಲಿರುವ ವಿಷಯ ಹಳ್ಳಿಗರಿಗೆ ಸ್ಪಷ್ಟವಾಗಬೇಕೆಂದು ಯೋಚಿಸಿ, ಅವರ ಜೀವನದಿಂದಲೇ ಒಂದು ಉದಾಹರಣೆಯನ್ನು ಅವರ ಮುಂದಿಡಲು ನಿರ್ಧರಿಸಿದೆ. ಹಳ್ಳಿಯ ಒಂದು ಕುಟುಂಬಕ್ಕೆ ತಮ್ಮ ಗದ್ದೆ ಉಳಲು ಕೋಣದ ಅವಶ್ಯಕತೆ ಇತ್ತು. ಆ ಮನೆಯೊಡತಿ, ಸ್ವಲ್ಪ ಸ್ವಲ್ಪ ಹಣವನ್ನು ಜಮಾ ಮಾಡಲು ಪ್ರಾರಂಭಿಸಿದಳು. ಕೋಣ ಖರೀದಿಸುವಷ್ಟು ಹಣ ಸಂಗ್ರಹವಾದಾಗ ಆಕೆ ಹಣವನ್ನು ತನ್ನ ಪತಿಗೆ ಕೊಟ್ಟು ಕೋಣ ಖರೀದಿಸುವಂತೆ ಹೇಳಿದಳು. ಪತಿಯು ಹಳ್ಳಿಯ ದೊಡ್ಡ ಜಮೀನುದಾರನಲ್ಲಿ ಹೋಗಿ ತನಗೆ ಇಷ್ಟವಾದ ಕೋಣವನ್ನು ಖರೀದಿಸಿ ತಂದ. ಕೋಣವನ್ನು ನೋಡಿ ಪತ್ನಿ, ಮಕ್ಕಳೆಲ್ಲರಿಗೆ ಬಹಳ ಸಂತೋಷವಾಯಿತು. ಮನೆಯ ಎಲ್ಲ ಸದಸ್ಯರು ಕೋಣದ ಆರೈಕೆಯಲ್ಲಿ ತೊಡಗಿದರು. ಹುಲ್ಲು, ಸೊಪ್ಪು, ನೀರು ಕೊಟ್ಟು ಆರೈಸಿದರು. ಗದ್ದೆಗೆ ನೀರು ಹಾಕಲು ಕೋಣವನ್ನು ಸಂತೋಷದಿಂದ ಏತದ ಬಳಿಗೆ ಕೊಂಡು ಹೋದರು. ಕೋಣ ಏತದ ಮೂಲಕ ನೀರು ಸೇದುವ ದೃಶ್ಯವನ್ನು ನೋಡಲು ನೆರೆಕೆರೆಯವರೆಲ್ಲರೂ ಸಂತೋಷದಿಂದ ಬಂದು ಸೇರಿದ್ದರು. ರೈತ ಕೋಣವನ್ನು ಏತಕ್ಕೆ ಕಟ್ಟಿ ನೀರು ಎಳೆಯಲೆಂದು ಹೋದಾಗ ಕೋಣ ರೈತನನ್ನು ತನ್ನ ಕೊಂಬಿನಿಂದ ಹೊಡೆಯಲಾರಂಭಿಸಿತು. ಜಾಣ ರೈತ ತನ್ನನ್ನು

ಅದರ ಹೊಡೆತದಿಂದ ತಪ್ಪಿಸಿದ. ಕೋಣ, ತನ್ನ ಹತ್ತಿರ ಬಂದವರನ್ನೆಲ್ಲ ತನ್ನ ಕೊಂಬಿನಿಂದ ತಿವಿಯಲು ತಯಾರಾಗಿ ನಿಂತಿತ್ತು. ಕೋಣ ಬಹಳ ಕೋಪದಲ್ಲಿತ್ತು. ನೆರೆಯ ರೈತನೊಬ್ಬ ಧೈರ್ಯದಿಂದ ಕೋಣವನ್ನು ಹಿಡಿದು ತನ್ನ ಡೇರೆಗೆ ಕೊಂಡು ಹೋದ. ಕೋಣ ಏನನ್ನೂ ಪ್ರತಿಕ್ರಿಯಿಸದೆ ಆ ರೈತನ ಹಿಂದೆ ಆತನ ಡೇರೆಗೆ ಹೋಯಿತು. ನಂತರ ಆ ರೈತ ಕೋಣವನ್ನು ಏತಕ್ಕೆ ಕೊಂಡು ಹೋಗಿ ಕಟ್ಟಿ ಹಾಕಿದ. ಕೋಣ ಏನೂ ಪ್ರತಿಕ್ರಿಯಿಸದೆ ನೀರು ಸೇದಲಾರಂಭಿಸಿತು. ಮೊದಲನೆಯ ದಿನ ಹೀಗಾಯಿತು. ಮರುದಿನವೂ ಹೀಗೆಯೇ ಆಯಿತು. ತನ್ನನ್ನು ಖರೀದಿಸಿ ತಂದ ಮಾಲಿಕನ ಮನೆಯಲ್ಲಿ ತಿಂದುಂಡು, ಕೋಣ ನೆರೆಕೆರೆಯವನ ಹೊಲದಲ್ಲಿ ಕೆಲಸ ಮಾಡುತ್ತಿತ್ತು. ಇಲ್ಲಿ ನಾನು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳಬಯಸುತ್ತೇನೆ. ತನ್ನ ಮಾಲಕನಲ್ಲಿ ತಿಂದುಂಡು, ನೆರೆಕೆರೆಯವರ ಕೆಲಸ ಮಾಡುವ ಈ ಕೋಣದ ಬಗ್ಗೆ ನೀವೇನೆನ್ನುತ್ತೀರಿ? ಇದರಿಂದ ಮಾಲಿಕನಿಗೆ ಏನಾಗಬಹುದು? ಇಂತಹ ಕೃತಘ್ನ ಕೋಣನಿಗೆ ಆ ಮಾಲಿಕ ಏನು ಮಾಡಬಹುದು? ಹೇಳಿ ಸಹೋದರಿಯರೇ!

ಇದನ್ನು ಕೇಳಿದ ಓರ್ವ ಮಹಿಳೆ, "ಛೇ! ಎಂತಹ ವಿಚಿತ್ರ ಕೋಣ! ಇಂತಹ ಕೋಣವನ್ನು ಮಾರಬೇಕು ಅಥವಾ ಕೊಯ್ದು ಬಿಡಬೇಕು" ಎಂದು ಹೇಳಿದರು.

ನಾನು ನಗುತ್ತ ಹಳ್ಳಿಯ ಮಹಿಳೆಯರೊಂದಿಗೆ ಹೀಗೆಂದೆ, "ಅಲ್ಲಾಹನು ಮಹಾ ಕರುಣಾಮಯಿ ಹಾಗೂ ಮಹಾ ದಯಾಳು ಆಗಿರುವನು. ಆತನು ನಮ್ಮನ್ನು ಕೊಯ್ಯು ವುದೂ ಇಲ್ಲ. ಮಾರುವುದೂ ಇಲ್ಲ. ಕೇವಲ ತನ್ನ ಅನುಸರಣೆ ಮಾಡುವಂತೆ ಅಹ್ವಾನಿಸುತ್ತಾನೆ. ನಾವು ಅಲ್ಲಾಹನು ಸೃಷ್ಟಿಸಿದ ಆಹಾರವನ್ನು ತಿನ್ನುತ್ತೇವೆ ಹಾಗೂ ಕುಡಿಯುತ್ತೇವೆ. ಆದರೆ ನಮ್ಮ ಪ್ರಾಣಿಗಳ ಬಲಿಯರ್ಪಿಸುವ ಸಮಯ ಬಂದಾಗ ಇತರರ ಹೆಸರಿನಲ್ಲಿ ಬಲಿಯರ್ಪಿಸುತ್ತೇವೆ. ಇಂತಹ ಅನಾಚಾರಗಳನ್ನು ಮಾಡುವಂತೆ ಅಲ್ಲಾಹನು ಆಜ್ಞಾಪಿಸದೆ ಇದ್ದರೂ ನಾವು ಆಚರಿಸುತ್ತೇವೆ. ನಮ್ಮ ಜೀವನದಲ್ಲಿ ಲಾಭ-ನಷ್ಟವನ್ನುಂಟು ಮಾಡುವ ಶಕ್ತಿ ಸಾಮರ್ಥ್ಯ ಇತರರಿಗೂ ಇದೆ ಎಂದು ನಮ್ಮಲ್ಲಿ ಹಲವರ ನಂಬಿಕೆ ಇದೆ. ಈ ನಂಬಿಕೆಯ ಕಾರಣ ಅವರನ್ನು ನಮ್ಮ ಸಹಾಯಕ್ಕಾಗಿ ಕರೆಯುತ್ತೇವೆ."

ಅಷ್ಟರಲ್ಲಿ ಓರ್ವ ಮಹಿಳೆ ಎದ್ದು ನಿಂತು, "ನಾವು ಆ ಹಿರಿಯರನ್ನು ಆರಾಧಿಸು ವುದಿಲ್ಲ" ಎಂದು ಹೇಳಿದರು. ನಾನು ಆ ಗೋರಿಯ ಕಡೆ ಬೊಟ್ಟು ಮಾಡುತ್ತ, "ಆ ಗೋರಿಯೊಳಗೆ ವಿಶ್ರಾಂತಿ ಪಡೆಯುತ್ತಿರುವ ಹಿರಿಯರಿಗೆ ನಿಮ್ಮ ಪ್ರಾರ್ಥನೆಯ ಅಗತ್ಯವಿದೆ. ಸದಾ ಜೀವಂತವಾಗಿರುವ ಅಲ್ಲಾಹನನ್ನು ಕೂಗಿ, ಆತನ ಮೊರೆಹೊಕ್ಕು ಆ ಹಿರಿಯರ ಮೇಲೆ ಹಾಗೂ ನಿಮ್ಮ ಮೇಲೆ ಕರುಣೆ ತೋರಿಸುವಂತೆ ಅಲ್ಲಾಹನಲ್ಲಿ

ಬೇಡಿರಿ. ಮೃತದೇಹವು ನಿಸ್ಸಹಾಯಕವಾಗಿರುತ್ತದೆ. ಒಂದು ವೇಳೆ ಜೀವಂತ ಮನುಷ್ಯನ ಕೈಯಲ್ಲಿ ಅಧಿಕಾರ ಇರುತ್ತಿದ್ದರೆ, ಆತ ಸಾಯುತ್ತಿರಲಿಲ್ಲ ಹಾಗೂ ತನ್ನನ್ನು ಮಣ್ಣಿನ ರಾಶಿಯ ಅಡಿಯಲ್ಲಿ ಹೂಳಲು ಬಿಡುತ್ತಿರಲಿಲ್ಲ."

ಇದನ್ನು ಕೇಳುತ್ತಿದ್ದ ಓರ್ವ ಮಹಿಳೆ ಕೋಪದಲ್ಲಿ, "ಆತ್ಮೀಯ ಸಹೋದರಿ! ನಾವು ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತೇವೆ ಹಾಗೂ ಗೌರವಿಸುತ್ತೇವೆ. ನಾವು ನಿಮ್ಮನ್ನು ಬಹಳ ಇಷ್ಟಪಡುತ್ತೇವೆ ಕೂಡ. ಆದರೆ ಈ ಹಿರಿಯರು ನಿಮ್ಮ ಪ್ರಾಣ ತೆಗೆಯಬಹುದು ಎಂಬ ಭಯವಾಗುತ್ತಿದೆ" ಎಂದು ಹೇಳಿದರು.

ನಾನು ಎಲ್ಲರ ಕಡೆ ಒಮ್ಮೆ ನೋಡುತ್ತ, "ಓರ್ವ ಮರಣ ಹೊಂದಿದ ವ್ಯಕ್ತಿಗೆ ಜೀವಂತ ಇರುವ ವ್ಯಕ್ತಿಯನ್ನು ಕೊಲ್ಲುವಷ್ಟು ಶಕ್ತಿ ಸಾಮರ್ಥ್ಯವಿದೆ ಎಂದು ಈ ಸಹೋದರಿ ಭಾವಿಸುತ್ತಿದ್ದಾರೆ."

ಈ ಚರ್ಚೆಯ ನಂತರ ನಾನು ಆ ಸೂಕ್ತವನ್ನು ಪುನರಾವರ್ತಿಸಿದೆ, "ಪ್ರವಾದಿ ಮುಹಮ್ಮದ್(ಸ)ರ ಜೀವನ ನಮಗೊಂದು ಮಾದರಿ ಜೀವನವಾಗಿದೆ. ನಮ್ಮ ಪೂರ್ವಜರ ಜೀವನವಲ್ಲ. ಅಲ್ಲಾಹನು ಅವತೀರ್ಣಗೊಳಿಸಿದ ಈ ಸೂಕ್ತವನ್ನು ಪ್ರವಾದಿವರ್ಯರ(ಸ) ಮಾದರಿ ಜೀವನದ ಮುಖಾಂತರ ಅನುಸರಿಸಬಹುದು."

ಇದರ ನಂತರ ನಾನು ಸಹೋದರಿಯರೊಂದಿಗೆ ಹೀಗಂದೆ, "ನೀವು ನಿಮ್ಮ ಜೀವನದಲ್ಲಿ ಘಟಿಸಿದ ಕೆಟ್ಟ ಘಟನೆ ಅಥವಾ ಭೀಕರ ರೋಗವನ್ನು ಜ್ಞಾಪಿಸಿ ಆ ಸಮಯ ನೀವು ಮೊಟ್ಟ ಮೊದಲು ಯಾರನ್ನು ಕೂಗಿ ಕರೆದಿದ್ದೀರಿ ಎಂದು ಜ್ಞಾಪಿಸಿ." ಅಲ್ಲಾಹನು ಹೇಳುತ್ತಾನೆ:

وَظَنُّوٓا۟ أَنَّهُمْ أُحِيطَ بِهِمْ ۙ دَعَوُا۟ ٱللَّهَ مُخْلِصِينَ لَهُ ٱلدِّينَ

"ಚಂಡಮಾರುತದಿಂದ ಸುತ್ತುವರಿಯಲ್ಪಟ್ಟಿವೆ ಎಂದು ಪ್ರಯಾಣಿಕರು ಮನಗಾಣುತ್ತಿರುವಾಗ ಎಲ್ಲರೂ ತಮ್ಮ ದೀನನ್ನು (ಧರ್ಮವನ್ನು) ಅಲ್ಲಾಹನಿಗೆ ಮಾತ್ರ ಮೀಸಲಾಗಿರಿಸಿಕೊಂಡು ಅವನೊಡನೆ ಪ್ರಾರ್ಥಿಸುತ್ತಾರೆ." **(ಪವಿತ್ರ ಕುರ್‌ಆನ್: 10: 22)**

ಕೆಲವು ಮಹಿಳೆಯರು ಒಕ್ಕೊರಳಿನಿಂದ "ನಾವು ಮೊದಲು ಅಲ್ಲಾಹನನ್ನು ಕರೆಯುತ್ತೇವೆ. ನಂತರ ತಿನ್ನುವ ವಸ್ತುಗಳನ್ನು ಈ ವಿದ್ವಾಂಸರ ಗೋರಿಯಲ್ಲಿ ತಂದು ಹಂಚಿ ತಿನ್ನುತ್ತೇವೆ ಹಾಗೂ ಗೋರಿಯ ಹತ್ತಿರ ನಿಂತು ಪ್ರಾರ್ಥಿಸುತ್ತೇವೆ" ಎಂದರು.

"ಸಹೋದರಿಯರೇ! ನೀವು ಸದಾ ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ಇದು ಅಲ್ಲಾಹನಿಗೆ ತೋರಿಸುವ ನಿಷ್ಠೆಯ ಪ್ರತೀಕ. ಅಲ್ಲಾಹನ ಹೊರತು ಯಾರ ಮುಂದೆಯೂ ಕೈಚಾಚಬೇಡಿರಿ. ನೀವು ಪ್ರಾರ್ಥಿಸುವಾಗ ಅಲ್ಲಾಹನ ಹೊರತು ಬೇರೆ

ಯಾರೂ ಕೂಡ ನಿಮ್ಮ ಮನಸ್ಸಿನಲ್ಲಿರ ಬಾರದು. ಏಕೈಕನಾದ ಆ ಅಲ್ಲಾಹನಲ್ಲಿ
ಬೇಡಿ. ಆತ ಮಹಿಮಾವಂತನು, ಚಿರಂತನನು. ಆತ ಯಾರನ್ನೂ ಅವಲಂಬಿಸಿಲ್ಲ.
ದಲಾಗಿ ಎಲ್ಲರಿಗೂ ಕೊಡುವವನಾಗಿದ್ದಾನೆ. ಯಾರು فَاعْبُدِ اللّٰهَ مُخْلِصًا لَّهُ الدِّيْنَ
ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತ ಅವನ ದಾಸ್ಯವನ್ನು ಮಾಡಿರಿ'
ಪವಿತ್ರ ಕುರ್‌ಆನ್: 39: 2) ಎಂಬ ಸೂಕ್ತವನ್ನು ಅನುಸರಿಸಬಯಸುತ್ತಾರೋ ಅವರು,
ಅಲ್ಲಾಹನ ಹೊರತು ಯಾರೂ ಸಹಾಯಕರಿಲ್ಲ ಎಂದು ತಿಳಿಯಲಿ."

ಈ ಕಾರ್ಯಕ್ರಮವನ್ನು ಮುಗಿಸಿ ನಾನು ಮನಗೆ ಹೋದೆ. ಮನೆಯ ಕೆಲಸ ಗಳನ್ನೆಲ್ಲ ಮುಗಿಸಿ, ದೈನಂದಿನ ಕುರ್‌ಆನ್ ತರಗತಿಗೆ ಹೋದಾಗ, ಹಳ್ಳಿಯ ಮಹಿಳೆಯರ ಬಹು ದೊಡ್ಡ ಸಂಖ್ಯೆ ಅಲ್ಲಿ ಸೇರಿರುವುದು ನೋಡಿ ಆಶ್ಚರ್ಯ ಹಾಗೂ ಸಂತೋಷವಾಯಿತು. ನಾನು ಅವರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದೆ. ಅವರು ಈ ತರಗತಿಯ ವಿದ್ಯಾರ್ಥಿನಿಯರಾಗಿ ದಿನನಿತ್ಯ ಹಾಜರಾಗ ತೊಡಗಿದರು ಹಾಗೂ ಇತರರಿಗೆ ಕೊಟ್ಟ ಸೂಕ್ತವನ್ನು ಅವರು ಕೂಡ ಕಲಿತು ತಮ್ಮ ಜೀವನದಲ್ಲಿ ಅಳವಡಿಸಲು ಪ್ರಯತ್ನಿಸತೊಡಗಿದರು. ಸೂಕ್ತಗಳ ಅನುಸರಣೆಯ ನಂತರ ತಮ್ಮ ಅನುಭವಗಳನ್ನು ವಿವರಿಸುತ್ತಿದ್ದರು. ಈ ಮಹಿಳೆಯರು ತಮ್ಮ ಊರಿನ ಮಹಿಳೆಯರೊಂದಿಗೆ ಸಂಪರ್ಕ ಬೆಳೆಸಿ, ತಾವು ಕಲಿತದ್ದನ್ನು ಅವರಿಗೆ ಕಲಿಸುತ್ತಿದ್ದರು. ತಮ್ಮ ಕಠಿಣ ಪರಿಶ್ರಮದಿಂದ, ಅಜ್ಞಾನದಲ್ಲಿ ಮುಳುಗಿದ್ದ ಮಹಿಳೆಯರನ್ನು ಅಜ್ಞಾನದಿಂದ ಹೊರ ತಂದರು. ನಾನು ಆ ಊರಿನಲ್ಲಿ ಅನುಸರಿಸಲಿಕ್ಕಾಗಿ ಕಲಿಸಿ ಬಂದ ಸೂಕ್ತವನ್ನು ತಮ್ಮ ಜೀವನದಲ್ಲಿ ಅಳವಡಿಸುವಂತೆ ಪ್ರೇರೇಪಿಸಿದರು. ಕ್ರಮೇಣ ಆ ಊರಿನ ಎಲ್ಲ ಮಹಿಳೆಯರ ಮೇಲೆ ಇದರ ಪರಿಣಾಮ ಬೀರತೊಡಗಿತು.

ಆದರೂ ಕೆಲವು ಮಹಿಳೆಯರು ಈ ಅಜ್ಞಾನದಿಂದ ಹೊರ ಬರಲಿಲ್ಲ. ವಿದ್ವಾಂಸರನ್ನು ಸಂತುಷ್ಟಿಗಾಗಿ ಅವರ ಗೋರಿಯ ಮೇಲೆ ನಡೆಸಲಾಗುತ್ತಿದ್ದ ಬಲಿಯರ್ಪಣೆ ನಿಂತಿತು. ಇಂತಹ ಅಜ್ಞಾನದಲ್ಲಿ ಬಿದ್ದಿರುವ ಸೋದರಿಯರಿಗೆ ಮುಶ್ರಿಕರೆನ್ನುವುದು ಸರಿಯಲ್ಲ. ಅವರು ಸತ್ಯವನ್ನು ಅರಿಯದವರು. ಗೋರಿದರ್ಶನ ಮಾಡಿ, ಗೋರಿಯೊಳಗೆ ಇದ್ದವರಿಗಾಗಿ ಪ್ರಾರ್ಥಿಸುವುದರಲ್ಲಿ ಅಭ್ಯಂತರವಿಲ್ಲ. ನಮ್ಮಲ್ಲಿ ದೇವ ಭಯ ಉಂಟಾಗಲೂ ಗೋರಿ ಸಂದರ್ಶನ ಒಳ್ಳೆಯದೇ. ಆದರೆ ಮಹಿಳೆಯರು ಶೃಂಗಾರದೊಂದಿಗೆ ಗೋರಿ ಸಂದರ್ಶನ ಮಾಡುವುದು ಸರಿಯಲ್ಲ. ಗೋರಿಯೊಳಗೆ ಇರುವ ವಿದ್ವಾಂಸರು ಅಥವಾ ನಮ್ಮ ಹಿರಿಯರು, ನಮ್ಮ ಅಗತ್ಯಗಳನ್ನು ಪೂರೈಸುತ್ತಾರೆಂದೂ ನಮ್ಮ ಬೇಡಿಕೆಗಳನ್ನು ಆಲಿಸುತ್ತಾರೆಂದೂ ಪರಿಗಣಿಸುವುದು, ಎಲ್ಲ ಅಧಿಕಾರಗಳು ಅವರ ಕೈಯಲ್ಲಿದೆ ಎಂದು ಯೋಚಿಸುವುದು ಇಸ್ಲಾಮೀ ಶಿಕ್ಷಣದ ಕೊರತೆಯಾಗಿದೆ.

ಕುರ್‌ಆನ್ ತರಗತಿಯಲ್ಲಿ ಹಾಜರಿದ್ದ ಆ ಸಹೋದರಿ, ತನ್ನ ಇತ ಸಹಪಾಠಿಗಳೊಂದಿಗೆ, "ನೀವು ಕೇವಲ ಅಲ್ಲಾಹನನ್ನು ಆರಾಧಿಸಿ ಹಾಗೂ ಧರ್ಮವನ ಆತನಿಗಾಗಿ ಪರಿಶುದ್ಧವಾಗಿಡಿ ಎಂಬ ಸೂಕ್ತ ಸಹೋದರಿ ಸುಮಯ್ಯ ರಮಝಾ ರವರಿಂದ ಕೇಳಿದಂದಿನಿಂದ, ದಿನನಿತ್ಯ ಅದನ್ನು ಓದುವ ಪರಿಪಾಠ ಮಾಡಿದ್ದೇ ನನ್ನ ಎಲ್ಲ ರೀತಿಯ ಕೆಲಸ ಪ್ರಾರಂಭಿಸುವ ಮುಂಚೆ ಈ ಸೂಕ್ತವನ್ನು ಓದುತ್ತೇನೆ ಎಂದು ಹೇಳಿದಳು.

## ದಾನ ಧರ್ಮವು ವಿಪತ್ತುಗಳನ್ನು ನಿವಾರಿಸುತ್ತದೆ

ಒಮ್ಮೆ ರೋಗಿಯೊಬ್ಬಳನ್ನು ಭೇಟಿಯಾಗಲು ಹೋಗಿದ್ದೆ. ಆಕೆಗೆ ಮೈ ನೋವಿನಿಂದ ಅಲುಗಾಡಲು ಆಗುತ್ತಿರಲಿಲ್ಲ. ಆಕೆಯನ್ನು ಸಂತೈಸುತ್ತ ಅಲ್ಲಾಹನೆಡೆ ಮರಳುವಂತೆ ಹೇಳಿದೆ. ರೋಗ ನಿವಾರಣೆಗಾಗಿ ದಾನ ಮಾಡುವಂತೆಯು ಹೇಳಿ "ನಾನು ಬಹಳ ದಾನ ಧರ್ಮಗಳನ್ನು ಮಾಡುತ್ತಿರುತ್ತೇನೆ. ಅಲ್ಲಾಹನಿಗಾಗಿ ದಾ ಮಾಡಿದ್ದೇನೆ. ನಮ್ಮೂರಿನ ವಿದ್ವಾಂಸರಿಗೆ ದಾನ ಕೊಟ್ಟಿದ್ದೇನೆ. ನಮ್ಮ ದೇಶದ ಎ ಪ್ರಸಿದ್ಧ ಔಲಿಯಾಗಳಿಗೆ ದಾನ ಕಳುಹಿಸಿ ಕೊಟ್ಟಿದ್ದೇನೆ. ಆದರೂ ನನ್ನ ಆರೋಗ್ಯ ಮೇಲೆ ಪ್ರಭಾವ ಬೀಳಲಿಲ್ಲ" ಎಂದು ಆಕೆ ಹೇಳಿದಳು.

ಆಕೆಯ ಸಂಕಷ್ಟದ ಬೇರು ಆಕೆಯ ಮಾತಿನಿಂದಲೇ ಸಿಕ್ಕಿತು. ನೈಜ ಕೆಡ ಎಲ್ಲಿದೆ ಎಂದು ಅರ್ಥವಾಯಿತು. ಈಕೆ ಅಜ್ಞಾನದಲ್ಲಿ ಸಿಲುಕಿದ್ದಾಳೆ. ಆಕೆಯನ ಈ ಅಜ್ಞಾನದಿಂದ ಹೊರ ತಂದೇ ತೀರುವೆನು ಎಂಬ ಗಟ್ಟಿ ನಿರ್ಧಾರ ಮಾಡಿ

"ದಾನ ಕೇವಲ ಅಲ್ಲಾಹನಿಗಾಗಿ ಮಾಡಬೇಕು. ಅಲ್ಲಾಹನ ಹೊರತು, ಅನ್ಯ ಹೆಸರಿನಲ್ಲಿ ಮಾಡಿದ ದಾನವನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ. ನೀವು ಕೇವ ಅಲ್ಲಾಹನನ್ನು ಕರೆಯಿರಿ. ಅಲ್ಲಾಹನ ಹೊರತು ಇನ್ನು ಯಾರನ್ನೂ ಕರೆಯಬೇಡಿ ನಿಮ್ಮ ರೋಗ ಶಮನ ಮಾಡುವ ಸಾಮರ್ಥ್ಯ ಅವನೊಬ್ಬನಿಗೆ ಮಾತ್ರ ಇ ಅಲ್ಲಾಹನಿಗಾಗಿ ನಾನು ನಿಮ್ಮಲ್ಲಿ ಒಂದು ನಿವೇದನೆ ಮಾಡುತ್ತಿದ್ದೇನೆ. ನೀ ಅಲ್ಲಾಹನ ಈ ಆದೇಶದಂತೆ ನಿಮ್ಮ ಜೀವನವನ್ನು ಸಾಗಿಸಿರಿ. ಕೇವಲ ಅಲ್ಲಾಹನೊಂದಿ ಬೇಡಿರಿ. ಆತನ ಹೊರತು ಬೇರೆ ಯಾರೊಂದಿಗೂ ಬೇಡದಿರಿ. ಇದರೊಂದಿ ಮದ್ದನ್ನು ಸರಿಯಾದ ಸಮಯಕ್ಕೆ ತೆಗೆಯಿರಿ. ಅಲ್ಲಾಹನು ದಯಪಾಲಿಸಿರುವ ಎ ರೀತಿಯ ಸೌಕರ್ಯವನ್ನು ಉಪಯೋಗಿಸಿರಿ. ಅಲ್ಲಾಹನಲ್ಲಿ ಕ್ಷಮೆ ಯಾಚಿಸಿರಿ. ತ ಆಲಕ್ಷ್ಯ ಅವಿವೇಕತನವನ್ನು ಎದುರಿಟ್ಟು ಕ್ಷಮೆ ಯಾಚಿಸಿ. ಪ್ರತಿಕ್ಷಣ ಅಲ್ಲಾಹನೊಂದಿ ಬೇಡುತ್ತಲಿರಿ. ವಿನಮ್ರತೆಯೊಂದಿಗೆ ಬೇಡಿರಿ. ಯಾರೂ ಯಾವ ಶಕ್ತಿಯೂ ನಿಮ್ಮ ಅಲ್ಲಾಹನಿಂದ ಬೇರ್ಪಡಿಸದಂತೆ ನೋಡಿಕೊಳ್ಳಿ."

ನೀವು ಹೇಳಿದಂತೆ ನಡೆಯುವೆನೆಂದು ಆಕೆ ವಾಗ್ದಾನ ಮಾಡಿದಳು. ಕೆಯನ್ನು ಭೇಟಿಯಾಗಲು ಹೋದಾಗಲೆಲ್ಲ ನಾನು ಆಕೆಗೆ ವಾಗ್ದಾನದ ನೆನಪು ಾಡಿಸುತಿದ್ದೆ. ಆಕೆ ಕೂಡ ತಾನು ಮಾಡಿದ ವಾಗ್ದಾನವನ್ನು ಪಾಲಿಸುವೆನೆಂದು ಪ್ಪಿಕೊಳ್ಳುತ್ತಿದ್ದಳು. ಆಕೆ ತನ್ನ ಆ ಕೆಡುಕಿನಿಂದ ಹೊರ ಬರಲಿ ಮತ್ತು ಆರೋಗ್ಯ ಂತಳಾಗಲಿ ಎಂದು ನಾನು ಪ್ರತಿ ರಾತ್ರಿ ಏಕಾಂತದಲ್ಲಿ ಆಕೆಗಾಗಿ ಪ್ರಾರ್ಥಿಸುತ್ತಿದ್ದೆ. ಮೇಣ ಆಕೆಯ ಆರೋಗ್ಯವು ಸುಧಾರಿಸತೊಡಗಿತು. ಅಲ್ಲಾಹನೊಂದಿಗೆ ಆಕೆಯ ಂಬಂಧ ದೃಢಗೊಳ್ಳತೊಡಗಿತು. ಅಲ್ಲಾಹನು ಬಹಳ ನಿಕಟನಾಗಿದ್ದಾನೆ ಎಂದು ಘಟನೆಯಿಂದ ಗೊತ್ತಾಯಿತು. ಆಕೆಯ ನಂಬಿಕೆ ದೃಢವಾದಂತೆ ಆಕೆಯ ರೋಗ್ಯವು ಸುಧಾರಿಸುತ್ತ ಹೋಯಿತು. ಆಕೆ ತನ್ನ ಗತ ಜೀವನದ ಬಗ್ಗೆ ಪಶ್ಚಾತ್ತಾಪ ಡುತ್ತಾ ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತಿರುತ್ತಾಳೆ.

❖ ❖ ❖ ❖

# ಅಲ್ಲಾಹನು ನಮ್ಮ ಅಗತ್ಯಗಳನ್ನು ಪೂರೈಸುತ್ತಾನ

ಕುರ್‌ಆನ್ ತರಗತಿಗೆ ಬರುತ್ತಿದ್ದ ಓರ್ವ ಮಹಿಳೆ ಒಂದು ಪ್ರಶಂಸಾರ್ಹ ಕೆಲಸವನ್ನು ಮಾಡಿದರು. ಆಕೆಯಿಂದಾಗಿ ಹಲವು ಮಹಿಳೆಯರು ಇಸ್ಲಾಮೀ ಶಿಕ್ಷಣ ಪಡೆಯುವಂತೆ ಆಯಿತು. ಈ ಮಹಿಳೆಯರು ಇಸ್ಲಾಮೀ ಶಿಕ್ಷಣವನ್ನು ಪಡೆಯುತ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿದರು. ಇದು ನಮ್ಮ ಸೌಭಾಗ್ಯ.

ಒಮ್ಮೆ ಈ ಮಹಿಳೆ ದಾರಿಯಲ್ಲಿ ಅಕಸ್ಮಾತ್ ಮಹಿಳೆಯರ ಒಂದು ಗುಂಪುನ ಭೇಟಿಯಾದರು. ಈ ಗುಂಪು ನಗರದ ಕಡೆಗೆ ಹೊರಟಿತ್ತು. ನಗರದಲ್ಲಿ ಓರ್ವ ಮಹಿಳೆ ತಾನು ಎಲ್ಲ ರೀತಿಯ ಕೆಲಸ ಮಾಡಬಲ್ಲೆ, ಕೆಟ್ಟ ಅದೃಷ್ಟವನ್ನು ಸರಿಪಡಿಸ ಬಲ್ಲೆ, ರೋಗಿಗಳನ್ನು ಆರೋಗ್ಯ ವಂತರಾಗಿಸಬಲ್ಲೆ, ಮಕ್ಕಳಿಲ್ಲದವರಿಗೆ ಮಕ್ಕಳಾಗ ವಂತೆ, ಬಂಜೆಗೆ ಗರ್ಭಧಾರಣೆಯಾಗುವಂತೆ ಎಂಬಿತ್ಯಾದಿಯಾಗಿ ಮಾಡಬಲ್ಲೆ ಎಂದ ಆಕೆ ವಾದಿಸುತ್ತಿದ್ದಳು. ದೂರ ದೂರದ ಪ್ರದೇಶಗಳಿಂದ, ಅರಬ್ ರಾಷ್ಟ್ರಗಳಿಂದಲು ಮಹಿಳೆಯರು ಆಕೆಯನ್ನು ಭೇಟಿಯಾಗಲು ಬರುತ್ತಿದ್ದರು. ಸಾವಿರಾರು ಮಹಿಳೆಯರ ಆಕೆಯ ಮನೆಯಂಗಳದಲ್ಲಿ ಕಾಯುತ್ತ ಕುಳಿತುಕೊಳ್ಳುತ್ತಿದ್ದರು. ಬೆಳಗಾಗುತ್ತಲೇ ಭೇಟಿ ಯಾಗಬೇಕೆಂಬ ನಿರೀಕ್ಷೆಯಿಂದ ರಾತ್ರಿ ಬಂದು ಕಾಯುತ್ತಿದ್ದರು. ಈ ಮಹಿಳೆಯರ ನಾನು ದರ್ಸೆ ಕುರ್‌ಆನ್ ಮಾಡಲು ಹೋಗಿದ್ದ ಊರಿನವರಾಗಿದ್ದರು. ಪ್ರಸ್ತು ಮಹಿಳೆಯರೊಂದಿಗೆ ಈಕೆ ಕೇಳಿದರು, "ಅಂದು ನಮ್ಮೊಂದಿಗೆ ಬಂದ ಮಾ ಸುಮಯ್ಯ ರಮಝಾನ್‌ರಲ್ಲಿ ನಾವೆಲ್ಲರೂ ಒಟ್ಟು ಸೇರಿ ಮಾಡಿದ ಆ ಕರಾರ ಮರೆತು ಬಿಟ್ಟಿರಾ ಅಥವಾ ಮರೆಯುವ ನಾಟಕ ಮಾಡುತ್ತಿದ್ದೀರಾ? ನಾವೆಲ್ಲರು ಅಂದು فَاعْبُدِ اللَّهَ مُخْلِصًا لَّهُ الدِّينَ ಕುರ್‌ಆನ್ ಸೂಕ್ತದಂತೆ ಜೀವನ ಸಾಗಿಸು ವಾಗ್ದಾನ ಮಾಡಿದ್ದೆವಲ್ಲ?"

"ನಾವು ಮಾಡಲು ಹೊರಟ ಕಾರ್ಯ ಈ ಸೂಕ್ತದ ವಿರುದ್ಧವಲ್ಲ. ನಾ ಭೇಟಿಯಾಗುವ ಮಹಿಳೆ ಒಂದು 'ಕಾರಣ'ವಾಗಿದ್ದಾರೆ. ಎಲ್ಲ ಮಾಡುವವನ ಅಲ್ಲಾಹನಾಗಿದ್ದಾನೆ. ನೈಜ ಕರ್ತೃ ಆತನೇ ಆಗಿದ್ದಾನೆ" ಎಂದು ಒಬ್ಬಾಕೆ ಹೇಳಿದರು

"ಆಕೆ ಅಗೋಚರ ವಸ್ತುಗಳ ದಾವೆ ಮಾಡುವುದಿಲ್ಲವೇ? ರೋಗಿಗಳನ್ನು ಆರೋಗ್ಯವಂತರನ್ನಾಗಿ ಮಾಡುವ ಶಕ್ತಿ ಇದೆ, ಅವಿವಾಹಿತರ ವಿವಾಹ, ಬಂಜೆಗೆ ಗರ್ಭಧಾರಣೆ ಮಾಡಿಸುವುದಾಗಿ ವಾದಿಸುವುದಿಲ್ಲವೇ? ಒಂದು ಕಡೆ ಅಲ್ಲಾಹನು ಏಕೈಕನು, ಆತನಿಗೆ ಯಾರೂ ಸಹಭಾಗಿಗಳಿಲ್ಲ ಎಂದು ದೃಢವಾಗಿ ನಂಬುತ್ತೇವೆ. ಇನ್ನೊಂದು ಕಡೆ ನಮ್ಮಂತಿರುವ ಮನುಷ್ಯರಲ್ಲಿ ನಮ್ಮ ಬೇಡಿಕೆಗಳನ್ನು ಪೂರೈಸಲು ಹೋಗುತ್ತೇವೆ. ಇದು ಎಷ್ಟು ಸರಿ? ಆಕೆ ಅನೇಕ ವಿಷಯಗಳ ಬಗ್ಗೆ ವಾದಿಸುತ್ತಿದ್ದಾಳೆ. ಆದರೆ ಅದಕ್ಕೆ ಬೇಕಾಗಿರುವ ಜ್ಞಾನ ಆಕೆಯಲ್ಲಿಲ್ಲ. ರೋಗಿಗಳನ್ನು ಆರೋಗ್ಯವಂತರನ್ನಾಗಿ ಮಾಡಲು ಆಕೆ ವೈದ್ಯೆ ಅಲ್ಲ, ಅವಿವಾಹಿತರ ವಿವಾಹ ಮಾಡುವ ಶಕ್ತಿ ಅಲ್ಲಾಹನ ಹೊರತು ಬೇರೆ ಯಾರಿಗೂ ಇಲ್ಲ. ನಿಮ್ಮ ಸಮಸ್ಯೆಗಳ ಪರಿಹಾರ ಹಾಗೂ ಆವಶ್ಯಕತೆಗಳ ಪೂರೈಕೆ ಅಲ್ಲಿ ಆಗುವುದು ಎಂಬ ದೃಢ ನಂಬಿಕೆಯೊಂದಿಗೆ ನೀವು ದೂರದ ಪ್ರಯಾಣ ಮಾಡಿ ಹೋಗುತ್ತಿದ್ದೀರಿ. ನೀವು ಅದರ ಸಂಭಾವನೆಯನ್ನು ಕೊಡಲಿರುವಿರಿ. ಇದರರ್ಥ ನೀವು ಆ ಮಹಿಳೆಯಲ್ಲಿ ಅಸಾಧಾರಣ ಶಕ್ತಿ ಸಾಮರ್ಥ್ಯವಿದೆ ಎಂದು ದೃಢವಾಗಿ ನಂಬುತ್ತೀರಿ. ಆದರೆ ಅಲ್ಲಾಹನ ಹೊರತು ಇತರರ ಮೇಲೆ ಇಂತಹ ನಂಬಿಕೆ ತೌಹೀದ್‌ಗೆ (ಏಕದೇವತ್ವಕ್ಕೆ) ವಿರುದ್ಧವಾಗಿದೆ. ಇಲ್ಲಿರುವ ಎಲ್ಲ ರೀತಿಯ ಸವಲತ್ತುಗಳನ್ನು ಉಪಯೋಗಿಸಿಕೊಂಡೇ ನಮ್ಮೆಲ್ಲ ಆವಶ್ಯಕತೆಗಾಗಿ ಅಲ್ಲಾಹನ ಕದ ತಟ್ಟಬೇಕು. ಹೀಗೆ ಮಾಡುವುದರಿಂದ ನಾವು ಲಾಭದಲ್ಲಿರುತ್ತೇವೆ. ಇದಕ್ಕಾಗಿ ಹಣ ಖರ್ಚು ಮಾಡದೆ ಅಥವಾ ಪ್ರಯಾಣ ಮಾಡದೆ ಲಾಭ ಗಳಿಸಬಹುದು. ಅಲ್ಲಾಹನ ಮೇಲೆ ಸಂಪೂರ್ಣ ಭರವಸೆ ಇಟ್ಟು ಆತನ ಮುಂದೆ ಶಿರಬಾಗುವುದೇ ನಮ್ಮ ಕರ್ತವ್ಯ" ಎಂದು ನಾನು ಹೇಳಿದೆ.

ಹಲವು ವರ್ಷಗಳಿಂದ ಸಂತಾನದ ಸೌಭಾಗ್ಯ ಇಲ್ಲದಿದ್ದ ಓರ್ವ ಮಹಿಳೆಯ ಕಡೆ ತಿರುಗುತ್ತ ನಾನು ಹೀಗಂದೆ. ನನಗೋರ್ವ ವೈದ್ಯರ ಪರಿಚಯವಿದೆ. ಆಕೆ ಬಹಳ ಅನುಭವಸ್ಥ ವೈದ್ಯೆ. ವಿಶೇಷತಃ ನಿಮ್ಮಂತಹ ರೋಗಿಗಳ ತಪಾಸಣೆಯಲ್ಲಿ ಪ್ರವೀಣಳು. ನಾನು ನಿಮ್ಮನ್ನು ಆಕೆಯ ಬಳಿ ಕರೆದುಕೊಂಡು ಹೋಗುತ್ತೇನೆ. ಆದರೆ, ಮೊದಲು ನೀವು ನಿಮ್ಮ ಕಡ್ಡಾಯ ಆರಾಧನೆಗಳನ್ನು ನೆರವೇರಿಸುವಲ್ಲಿ ವಿಶೇಷ ಕಾಳಜಿ ವಹಿಸಬೇಕು. ಐಚ್ಛಿಕ ನಮಾಝುನ್ನು ಹೆಚ್ಚಿಸಬೇಕು. ಕೇವಲ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕಾಗಿ ಹೆಚ್ಚು ಒಳಿತುಗಳನ್ನು ಮಾಡಬೇಕು. ಫಜ್ರ್ ನಮಾಝ್‌ನ ಮೊದಲು ಕತ್ತಲಲ್ಲಿ ಏಕಾಂತದಲ್ಲಿ ಕೆಲವು ರಕಅತ್ (ತಹಜ್ಜುದ್) ನಮಾಝ್ ನಿರ್ವಹಿಸಬೇಕು. ಇದರೊಂದಿಗೆ ನಿಮಗೆ ಆ ಮಹಿಮಾವಂತನ ಮೇಲೆ ಸಂಪೂರ್ಣ ನಂಬಿಕೆ ಇರಬೇಕು. ನಾನು ವೈದ್ಯರೊಂದಿಗೆ ಮಾತನಾಡಿ ಸಮಯ ನಿಗದಿಪಡಿಸುತ್ತೇನೆ. ಇನ್ನು ನಾವು ತಡಮಾಡದೆ ಅಲ್ಲಾಹನ ಹೆಸರಿನೊಂದಿಗೆ ಕೆಲಸ ಆರಂಭಿಸಬೇಕಾಗಿದೆ.

"ಸುಬ್ಹಾನಲ್ಲಾಹ್, ಅಲ್ಲಾಹನ ಸೂಕ್ತವನ್ನು ಹಾಗೂ ನಮ್ಮೂರಿನ ಕುರ್‌ಆನ ತರಗತಿಯ ಸಮಯ ಮಾಡಿದ ವಾಗ್ದಾನವನ್ನು ಮರೆತದ್ದಕ್ಕೆ ನಾನು ವಿಷಾದಿಸುತ್ತೇನ ಇನ್ ಶಾ ಅಲ್ಲಾಹ್, ಇನ್ನು ವಿಶೇಷವಾಗಿ ಈ ಸೂಕ್ತವನ್ನು ಅನುಸರಿಸುತ್ತೇನೆ. ನನ ಅಲ್ಲಾಹನ ಮೇಲೆ ಸಂಪೂರ್ಣ ಭರವಸೆ ಇದೆ" ಎಂದು ಸಂತಾನದ ಸೌಭಾ ಇಲ್ಲದ ಮಹಿಳೆ ಹೇಳಿದರು.

ತದನಂತರ ನಾನು ಅವಿವಾಹಿತಳಾದ ಯುವತಿಯ ತಾಯಿಯ ಕಡೆ ತಿರುಗಿ ಅವರು ಮಗಳ ವಿವಾಹದ ಕುರಿತು ಬಹಳ ಚಿಂತಾಕ್ರಾಂತರಾಗಿದ್ದರು. ಅಲ್ಲಾಹನ ನಿಮ್ಮ ವಿವಾಹವನ್ನು ಮಾಡಲಿಲ್ಲವೆ? ಮಗಳ ವಿವಾಹ ಆಗದೆ ಇರಲು ಸಾಧ್ಯವಿದೆಯೇ ಅಲ್ಲಾಹನ ಹೊರತು ಅನ್ಯರಲ್ಲಿ ಹೋಗಿ ಬೇಡುವಂತಹ ಕಷ್ಟದಾಯಕವಾಗಿದೆಯೆ ವಿವಾಹ? ಎಂದು ಹೇಳಿದೆ. "ಶಪಿತ ಶೈತಾನನು ನನ್ನನ್ನು ದಾರಿ ತಪ್ಪಿಸಿದ. ಅಲ್ಲಾಹನೇ! ನೀನು ನನ್ನನ್ನು ಶೈತಾನನ ಉಪಟಳದಿಂದ ರಕ್ಷಿಸು. ನಿಮ್ಮೊಂದಿ ನನ್ನ ಭೇಟಿಯಾದದ್ದು ನನ್ನ ಸೌಭಾಗ್ಯ. ಇನ್ನು ಅಲ್ಲಾಹನ ಸಮ್ಮುಖದಲ್ಲಿ ಅಂಗಲಾಚು ಯಾವ ಕಾರಣಕ್ಕೂ ಪುನಃ ಆ ಮಹಿಳೆಯನ್ನು ಭೇಟಿಯಾಗಲಾರೆ ಕೇವಲ ಅಲ್ಲಾಹನ ಪ್ರಾರ್ಥಿಸುವೆನು" ಎಂದು ಆಕೆ ಹೇಳಿದರು. "ನಿಮ್ಮ ಮಗಳ ವಿವಾಹ ಬೇಗ ಆ ಬೇಕೆಂದಾದರೆ ನೀವು ಪತಿ–ಪತ್ನಿ ಹೆಚ್ಚು ಒಳಿತುಗಳನ್ನು ಮಾಡಿ ಅಲ್ಲಾಹನ ಭಯ ಇಟ್ಟುಕೊಳ್ಳಿ, ಅಲ್ಲಾಹನ ಭಯ ಇರಿಸಿಕೊಂಡವರಿಗೆ, ಆಪತ್ತುಗಳಿಂದ ಹೊರ ಬರು ದಾರಿಯನ್ನು ಅಲ್ಲಾಹನು ಸುಲಭಗೊಳಿಸುತ್ತಾನೆ. ನೀವೆಲ್ಲರೂ ಒಟ್ಟು ಸೇ ಅಲ್ಲಾಹನೊಂದಿಗೆ ಬೇಡಿ" ಎಂದು ಹೇಳಿದೆ.

ಪವಿತ್ರ ಕುರ್‌ಆನಿನ ಆ ಸೂಕ್ತವನ್ನು ನೀವು ಗಮನಿಸಲಿಲ್ಲವೇ? ಆ ಸೂಕ್ತದ ಅಲ್ಲಾಹನು ಪ್ರವಾದಿ ಇಬ್ರಾಹೀಮ್(ಅ)ರ ಮಾತನ್ನೇ ಹೇಳಿದ್ದಾನೆ:

وَإِذَا مَرِضْتُ فَهُوَ يَشْفِينِ "ನಾನು ಕಾಯಿಲೆ ಬಿದ್ದಾಗ ಅವನೇ ನನ್ನನ್ನು ಗು ಪಡಿಸುತ್ತಾನೆ" (ಪವಿತ್ರ ಕುರ್‌ಆನ್: 26: 80) ಎಂದು ನಾನು ಆಕೆಯೊಡನೆ ಹೇಳಿ

ನೋವನ್ನು ಅನುಭವಿಸುತ್ತಿರುವ ಆ ಮಹಿಳೆ "ಅಲ್ಲಾಹನಾಣೆ! ನನಗೆ ನೋವು ತಡೆಯಲು ಸಾಧ್ಯವಿಲ್ಲ. ಇದರಿಂದ ಹೊರ ಬರಲು ಚಿಕ್ಕ ಸಹಾಯ ಸಾಕು" ಎಂದು ಹೇಳಿದರು.

"ನೀವು ಬಯಸುತ್ತಿರುವ ಆ ಚಿಕ್ಕ ಸಹಾಯ ನಿಮ್ಮನ್ನು ನಾಶಮಾಡಿದರ ನೀವು ಕೇವಲ ಅಲ್ಲಾಹನೊಂದಿಗೆ ಸಂಬಂಧ ಇಟ್ಟುಕೊಳ್ಳಿ, ರೋಗ ಶಮ ಮಾಡುವ ಸಾಮರ್ಥ್ಯ ಕೇವಲ ಆತನೊಬ್ಬನಿಗಲ್ಲದೆ ಇನ್ನಾರಲ್ಲೂ ಇಲ್ಲ. ಶು

ನಸ್ಸು ಹಾಗೂ ಆತ್ಮೀಯತೆಯೊಂದಿಗೆ ನೀವು ಕೇವಲ ಆತನೊಂದಿಗೆ ಕೇಳುತ್ತಾ, ﴿فَاعْبُدِ اللَّهَ مُخْلِصًا لَّهُ الدِّينَ﴾ 'ನೀವು ಧರ್ಮ ಅಲ್ಲಾಹನಿಗಾಗಿ ಮೀಸಲಿರಿಸುತ್ತಾ ವನ ದಾಸ್ಯವನ್ನೇ ಮಾಡಿರಿ' (ಪವಿತ್ರ ಕುರ್‌ಆನ್: 39: 2) ಎಂದು ಸಾಂತ್ವನ ನೀಡಿದೆ.

ಇದಾದ ನಂತರ ನಾವೆಲ್ಲರೂ ಪ್ರತಿ ರಾತ್ರಿ ನಿಗದಿಪಡಿಸಿದ ಆ ಸಮಯಕ್ಕೆ ದ್ಧೆಯಿಂದ ಏಳೋಣ. ಆ ಏಕೈಕ ಅಲ್ಲಾಹನ ಸಮ್ಮುಖದಲ್ಲಿ ನಿಂತು ನಮ್ಮ ಬೇಡಿಕೆ ಳನ್ನು ಇಟ್ಟು ಅಲ್ಲಾಹನೊಂದಿಗೆ ವಿನಂತಿಸೋಣ ಎಂಬ ವಾಗ್ದಾನದೊಂದಿಗೆ ೇರ್ಪಟ್ಟೆವು.

ಪ್ರತಿ ರಾತ್ರಿ ನಾನು ಅಲ್ಲಾಹನೆದರು ನಿಂತು, ಅಳುತ್ತಾ ವಿನಮ್ರತೆಯೊಂದಿಗೆ ಪ್ರಾರ್ಥಿಸತೊಡಗಿದೆ.

ಅಝುಮರ್ ಅಧ್ಯಾಯದ, ﴿فَاعْبُدِ اللَّهَ مُخْلِصًا لَّهُ الدِّينَ﴾ ಎಂಬ ಸೂಕ್ತವನ್ನು ಾನು ಹಾಗೂ ನನ್ನ ಸಹೋದರಿಯರು ನಮ್ಮ ಜೀವನದಲ್ಲಿ ಅಳವಡಿಸುವ ಸೌಭಾಗ್ಯವನ್ನು ಕೊಡುವಂತೆ ಕೇಳತೊಡಗಿದೆ. ಸಹೋದರಿಯರು ಅಲ್ಲಾಹನೆದುರು ಮಾಡುವ ಬೇಡಿಕೆಗಳನ್ನು ಈಡೇರಿಸುವಂತೆ ಪ್ರಾರ್ಥಿಸಿದೆ. ಅಲ್ಲಾಹನ ಕಾರುಣ್ಯ ನಮ್ಮ ಪ್ರಾರ್ಥನೆಗಾಗಿ ಕಾಯುತ್ತಿತ್ತು. ಮಕ್ಕಳಿಲ್ಲದ ಆ ಮಹಿಳೆ ಈವತ್ತು ಕುರ್‌ಆನಿನ ತರಗತಿ ಯಲ್ಲಿ ನಮ್ಮೊಂದಿಗೆ ತನ್ನ ಮಗುವಿನೊಂದಿಗೆ ಬಂದಿದ್ದಾಳೆ ಎಂದು ಸಹೋದರಿಯರಿಗೆ ಳಿಸಿದೆ. ನನ್ನ ಹತ್ತಿರ ಕೂತಿರುವ ಈ ಯುವತಿಯ ವಿವಾಹ ಕೆಲವು ತಿಂಗಳ ಂದೆ ನೆರವೇರಿತು. ಕೈಯಲ್ಲಿ ಜಪಮಾಲೆ ಹಿಡಿದು ಕುಳಿತಿರುವ ಈ ಸಹೋದರಿಯನ್ನು ನೋಡಿ. ಈಕೆ ಬಹಳ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ನೋವನ್ನು ಡೆಯಲಾರದೆ ದಣಿದು ಹೋಗಿದ್ದರು. ಅಲ್ಲಾಹನು ಅವರ ಮೇಲೆ ತನ್ನ ಕರುಣೆ ಯನ್ನು ಸುರಿಸಿದ ಈಗ ಅಲ್ ಹಮ್ದುಲಿಲ್ಲಾಹ್ ಆಕೆ ಆರೋಗ್ಯವಂತರಾಗಿದ್ದಾರೆ.

ಇಲ್ಲಿ ನೆರೆದಿದ್ದ ಪ್ರತಿಯೋರ್ವ ಮಹಿಳೆ ಸಂಪೂರ್ಣ ನಂಬಿಕೆ ಹಾಗೂ ಶ್ರದ್ಧೆಯಿಂದ ಅಲ್ಲಾಹನಲ್ಲಿ ತಮ್ಮ ಬೇಡಿಕೆಗಳನ್ನು ಹೇಳತೊಡಗಿದರು.

❖ ❖ ❖ ❖

# ಜಿನ್ನ್ ಬಿಡಿಸುವುದ

ನನ್ನ ಮನೆಗೆ ಬಂದ ಅತಿಥಿಯನ್ನು ಬಹಳ ಆದರದಿಂದ ಬರಮಾಡಿಕೊಂ ಆಕೆ ಬಹಳ ವ್ಯಾಕುಲತೆಗೆ ಒಳಪಟ್ಟಂತೆ ಹಾಗೂ ದುಃಖಿತಳಾಗಿರುವಂತೆ ಕಂಡಳ ಹಿಂದೆಂದೂ ನಾನು ಆಕೆಯನ್ನು ಭೇಟಿಯಾದ ನೆನಪಿಲ್ಲ. ಆಕೆ ನನ್ನೊಡನೆ ಮಾ ನಾಡಬೇಕೆಂದು ಕರೆ ಮಾಡಿದಾಗ, ನಾನು ಆಕೆಯನ್ನು ಮನೆಗೆ ಆಹ್ವಾನಿಸಿದೆ. ಆಕೆ ದುಃಖ ಹಾಗೂ ಚಿಂತೆಯ ಕಾರಣ ಕೇಳಬೇಕು ಎನ್ನುವಷ್ಟರಲ್ಲೇ ಆಕೆ, "ಅಲ್ಲಾಹನ ನಿಮ್ಮನ್ನು ಕ್ಷಮಿಸಲಿ. ಕೆಲವು ತಿಂಗಳುಗಳ ಹಿಂದೆ ನೀವು ನಿಮ್ಮ ಉಪನ್ಯಾಸ ಮುಗಿ ತಕ್ಷಣ ಹೋಗಲು ಅನುವಾದಿರಿ. ಅಂದು ನೀವು ಕೆಲವು ಕ್ಷಣಗಳು ನಿಲ್ಲುತ್ತಿದ್ದ ನಾನು ನಿಮ್ಮಲ್ಲಿ ಹೇಳಬಯಸಿದ್ದನ್ನು ಹೇಳುತ್ತಿದ್ದೆ. ಅಂದು ನಾನು ನಿಮ್ಮೊಂದಿ ಸಮಾಲೋಚನೆ ಮಾಡುತ್ತಿದ್ದರೆ, ಈವತ್ತು ನನ್ನೊಡನೆ ಹೀಗಾಗುತ್ತಿರಲಿಲ್ಲ."

ನಾನು ಆಕೆಯನ್ನು ಸಂತೈಸುತ್ತಾ "ಆತ್ಮೀಯ ಸಹೋದರಿ 'ಆದರೆ' ಎಂ ಪದ ಪಿಶಾಚಿಯ ಒಂದು ಕೆಟ್ಟ ಆಲೋಚನೆಯಾಗಿದೆ. ಆಗಿ ಹೋದದ್ದನ್ನು ಬಿ ನಾವು ಇಂದಿನ ಮಾತನ್ನಾಡುವ ಹೊಸ ದಿನದೊಂದಿಗೆ ಹೊಸ ಮಾತನ್ನಾಡುವ ಸಂಕಷ್ಟದ ನಂತರ ಸುಖ ಇದೆ ಕಾಠಿಣ್ಯದ ನಂತರ ನೆಮ್ಮದಿಯೂ ಇದೆ." ಇದನ ಕೇಳುತ್ತಿದ್ದಂತೆ ಆಕೆ ಅಳಲಾರಂಭಿಸಿದರು. ನಾನು ಆಕೆಯನ್ನು ಸಂತೈಸಿದೆ. ಆ ಕಣ್ಣೊರೆಸಿದಳು. ಒಂದು ಲೋಟ ತಂಪು ಪಾನೀಯ ಕುಡಿಸಿ, ಆಕೆ ಸಮಾಧಾನಗೊಳ್ಳು ತನಕ ಓಲೈಸಿದೆ. ನಂತರ ಆಕೆ ತನ್ನ ದುಃಖಭರಿತ ವೃತ್ತಾಂತ ಹೇಳಲಾರಂಭಿಸಿದಳ

ಅಂದು ನಾನು ನಿಮ್ಮನ್ನು ಭೇಟಿಯಾಗಿ, ನಿಮ್ಮೊಂದಿಗೆ ಸಮಾಲೋಚನೆ ಮಾ ಬಯಸಿದ್ದೆ. ನನ್ನ ಮಗಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಾಳೆ. ಆಕೆಯನ ಒಂದು ಪ್ರಸಿದ್ಧ 'ಸಂತ'ನ ಬಳಿಗೆ ಕೊಂಡು ಹೋಗಬೇಕೆಂದು ನನ್ನ ಮನೆಯವ ಹೇಳಿದರು. ಆತ ನಕಲಿ ಸಂತ. ನಾನು ನನ್ನ ತಿಳಿಗೇಡಿತನ, ಅಜ್ಞಾನ, ನಿರಕ್ಷರ ಹಾಗೂ ಅನುಭವದ ಕೊರತೆಯ ಕಾರಣ ಅವರ ಮಾತನ್ನು ಒಪ್ಪಿಕೊಂಡೆ. ನ

ಮಗಳನ್ನು ಆ ನಕಲಿ ಬಾಬಾನ ಬಳಿಗೆ ಕೊಂಡು ಹೋದೆ. ಆತ ಒಂದು ವಿಚಿತ್ರ ಮಾತನ್ನು ಹೇಳಿದ "ನಿನ್ನ ಮಗಳ ಅನಾರೋಗ್ಯದ ಮುಖ್ಯ ಕಾರಣ ನೀನು. ನೀನು ಆಕೆಯ ತಾಯಿ. ಒಂದು ಜಿನ್ನ್ ನಿನ್ನ ದೇಹವನ್ನು ತನ್ನ ಸ್ವಾಧೀನ ಮಾಡಿಕೊಂಡಿದೆ. ಇದು ನಿನ್ನ ಮಗಳ ಅನಾರೋಗ್ಯಕ್ಕಿರುವ ಕಾರಣ. ನೀನು ನಿನ್ನ ಮಗಳನ್ನು ಆರೋಗ್ಯವಂತಳನ್ನಾಗಿ ಮಾಡ ಬಯಸುವುದಾದರೆ, ಮೊದಲು ನಿನ್ನ ದೇಹದಲ್ಲಿರುವ ಜಿನ್ನನ್ನು ತೆಗೆಸಬೇಕು" ಎಂದು ಹೇಳಿದ.

ನಾನು ತಕ್ಷಣ "ಆತ ವಂಚಕ, ಮೋಸಗಾರ, ಫ್ರಾಡ್" ಎಂದು ಹೇಳಿದೆ.

ಆಕೆ ಮುಗುಳ್ನಕ್ಕು ಹೇಳಿದಳು: ಒಂದು ವೇಳೆ ನಾನು ಅಂದು ನಿಮ್ಮೊಂದಿಗೆ ಸಮಾಲೋಚನೆ ಮಾಡುತ್ತಿದ್ದರೆ ಹೀಗೆ ಆಗುತ್ತಿರಲಿಲ್ಲ. ಆದರೆ ನಾನು ನಿಮ್ಮಿಂದ ಅಥವಾ ಬೇರೆ ಯಾರಿಂದಲೂ ಈ ಮಾತು ಕೇಳಲಿಲ್ಲ. ನಾವೆಲ್ಲರೂ ಆ ನಕಲಿ ಬಾಬಾನ ಮಾತು ನಂಬಿದೆವು. ನನ್ನ ದೇಹದಲ್ಲಿರುವ ಜಿನ್ನನ್ನು ತೆಗೆಯಲು ಆತ ನಮ್ಮ ಮನೆಗೆ ಬರುವ ದಿನ ಮತ್ತು ಸಮಯವನ್ನು ನಿಗದಿ ಪಡಿಸಿದೆವು. ಕೆಲವು ವಿಷಯಗಳನ್ನು ಹೇಳುತ್ತ ಜಿನ್ನ್ ದೇಹದಿಂದ ಹೊರ ಬರುವಾಗ ಸುತ್ತಮುತ್ತ ಜನರಿದ್ದರೆ ಜಿನ್ನ್ ಈಕೆಯನ್ನು ಬಿಟ್ಟು ಇನ್ನೊಬ್ಬರಿಗೆ ಹಿಡಿಯುವ ಆಶಂಕೆ ಇರುವುದರಿಂದ ಮಗುವಿನ ತಾಯಿ ಆತನೊಂದಿಗೆ ಕೊಠಡಿಗೆ ಬರಬೇಕೆಂದು ಹೇಳಿದ. ಮಂತ್ರವಾದಿ ಮತ್ತು ಜಿನ್ನ್‌ನ ಮಧ್ಯೆ ಕಠಿಣ ಯುದ್ಧ ಆಗಲಿದೆ. ಒಂದು ವೇಳೆ ಆಕೆ ಕಿರುಚುವ ಶಬ್ದವನ್ನು ಕೇಳಿದರೆ ಗಾಬರಿಯಾಗಬೇಡಿ. ಅದು ಜಿನ್ನಿನ ಕಿರುಚುವಿಕೆ. ಆ ಸಮಯ ಯಾರು ಕೂಡ ಕೋಣೆಯೊಳಗೆ ಪ್ರವೇಶಿಸುವ ಪ್ರಯತ್ನ ಮಾಡಬೇಡಿ. ಒಂದು ವೇಳೆ ಯಾರಾದರೂ ಪ್ರವೇಶಿಸಿದರೆ, ಜಿನ್ನ್ ಆಕೆಯ ಜೀವಕ್ಕೆ ನಷ್ಟವನ್ನುಂಟು ಮಾಡಿ, ಒಳಗೆ ಪ್ರವೇಶಿಸಿದ ವ್ಯಕ್ತಿಯನ್ನು ಹಿಡಿಯಬಹುದು ಎಂದ.

ಮುಗ್ಧ ಮನೆಯವರು, ಮಂತ್ರವಾದಿ ಹೇಳಿದನ್ನೆಲ್ಲ ಒಪ್ಪಿ, ಯಾವುದೇ ಅಡಚಣೆ ಮಾಡಲಾರೆವು ಎಂದು ನನ್ನನ್ನು ಆತನೊಂದಿಗೆ ಕೋಣೆಗೆ ಹೋಗಲು ಬಿಟ್ಟು, ಒಳಗಿನಿಂದ ಚಿಲಕ ಹಾಕುವಂತೆ ಹೇಳಿದರು. ನನ್ನ ಅವಸ್ಥೆ ಏನಾಗಬಹುದು ಎಂದು ಗಾಬರಿಗೊಂಡೆ. ಕೋಣೆ ಪ್ರವೇಶಿಸಿದ ನಂತರ ಮಂತ್ರವಾದಿಯ ನೈಜ ಉದ್ದೇಶ ಅರ್ಥವಾಗಿ ಬಹಳ ಗಾಬರಿಗೊಂಡೆ, ನನ್ನನ್ನು ಒಬ್ಬಂಟಿಗಳಾಗಿ ಕರೆದು ಆತ ಅದರ ಪ್ರಯೋಜನ ಪಡೆಯಬಯಸಿದ್ದ. ನಾನು ನನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಒಟ್ಟುಗೂಡಿಸಿ, ಆತನನ್ನು ತಳ್ಳಿ ಬಾಗಿಲು ತೆರೆದು ಕೂಗಾಡುತ್ತ ಹೊರಗೆ ಓಡಿದೆ. ಈ ಸೆಣಸಾಟದಲ್ಲಿ ನನ್ನ ತಲೆಯ ಹಿಜಾಬ್ ಬಿದ್ದು ಹೋಗಿತ್ತು. ಒಂದು ವೇಳೆ ನಾನು ಕೋಣೆಯಿಂದ ಹೊರ ಬರಲು ತಡ ಮಾಡುತ್ತಿದ್ದರೆ ನನ್ನ ವಸ್ತ್ರವು ಹರಿದು

ಹೋಗುತ್ತಿತ್ತು. ನನ್ನ ಅವಸ್ಥೆ ನೋಡಿ ಮನೆಯವರು ಮಂತ್ರವಾದಿ ಹಾಗೂ ಜಿನ್ನಿನ ಮಧ್ಯೆ ಆದ ಸೆಣಸಾಟವೆಂದು ಭಾವಿಸಿದರು. ನನ್ನ ಪತಿಗೆ ನನ್ನ ಮೇಲಿನ ಭರವಸೆ ಹೋಗಬಹುದೆಂದು ಭಾವಿಸಿ ವಾಸ್ತವವನ್ನು ಹೇಳದೆ ಅವರ ಮಾತಿಗೆ ತಲೆದೂಗಿದೆ.

ಧೈರ್ಯಶಾಲಿ ಮಹಿಳೆಯ ಮಾತು ಕೇಳಿ ವಿಷಾದಪಡುತ್ತ, "ಇಂತಹ ವಿಷಯ ಗಳು ಅನೇಕ ವರ್ಷಗಳಿಂದ ನಡೆಯುತ್ತಿದೆ. ಘಟನೆಗಳು ಪುನರಾವರ್ತಿಸುತ್ತಿದ್ದು ಜನರು ಬಹಿರಂಗ ಪಡಿಸುವುದಿಲ್ಲ. ಆ ಮೋಸಗಾರನ ಕೈಯಿಂದ ನೀವು ಕ್ಷೇಮವಾಗಿ ಬಂದುದರಿಂದ ಅಲ್ಲಾಹನಿಗೆ ಕೃತಜ್ಞತೆ ಹೇಳಿ. ನೀವು ಬಹಳ ಧೈರ್ಯದೊಂದಿಗೆ ಕೆಲಸ ಮಾಡಿದ್ದೀರಿ. ಮುಂದಿನ ಕುರ್‌ಆನ್ ತರಗತಿಗಳಿಗೆ ತಪ್ಪದೆ ಬನ್ನಿ. ನಾನು ನಿಮ್ಮನ್ನು ಕಾಯುತ್ತಿರುತ್ತೇನೆ" ಎಂದು ಹೇಳಿದೆ.

ಇಂತಹ ನಕಲಿ ಸಂತರೊಂದಿಗೆ ಬಹಿರಂಗ ಯುದ್ಧ ನಡೆಸಬೇಕೆಂದು ನಾನು ನಿರ್ಧರಿಸಿದೆ. ಇದು ಸುಲಭದ ಕಾರ್ಯವಲ್ಲ ಎಂದು ನನಗೆ ಗೊತ್ತಿತ್ತು. ಆದರೂ ಅಪಾಯಕಾರಿ, ಮೋಸಗಾರ ಬಾಬಾನೊಂದಿಗೆ ಪ್ರಬಲ ಯುದ್ಧ ಮಾಡುವ ಸಂಕಲ್ಪ ಮಾಡುತ್ತಾ, ಕುರ್‌ಆನ್ ತರಗತಿಯಲ್ಲಿ 'ಜಿನ್ನ್'ಗಳ ಅಧ್ಯಯನವನ್ನು ಪ್ರಾರಂಭಿಸಿದೆ. ಹೆಚ್ಚಿನ ಜನರಿಗೆ ಜಿನ್ನ್‌ಗಳ ಬಗ್ಗೆ ಸರಿಯಾದ ಜ್ಞಾನವಿಲ್ಲ. ಕುರ್‌ಆನ್ ಮತ್ತು ಹದೀಸ್ ಗಳಲ್ಲಿ ಜಿನ್ನ್‌ಗಳ ಬಗ್ಗೆ ಏನು ಹೇಳಲಾಗಿದೆ ಎಂಬ ಜ್ಞಾನವು ಇಲ್ಲ. ಜಿನ್ನ್‌ಗಳ ಬಗ್ಗೆ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿ ಸಿಗುವ ವಿಷಯಗಳು ಮಾತ್ರ ಸತ್ಯವಾಗಿದೆ. ಉಳಿದೆಲ್ಲ ವಿಷಯ ಊಹಾಪೋಹವಲ್ಲದೆ ಮತ್ತೇನೂ ಅಲ್ಲ.

ಕುರ್‌ಆನ್ ತರಗತಿಯಲ್ಲಿ ಜಿನ್ನಗಳ ಬಗ್ಗೆ ಪಾಠ ಮಾಡಿದಾಗ ಮಹಿಳೆಯರೆಲ್ಲರೂ ಆಶ್ಚರ್ಯಚಕಿತರಾಗಿ ಮಿಸುಕಾಡದೆ ಗಮನವಿಟ್ಟು ಕೇಳಿದರು. ಎಲ್ಲರೂ ಅನುಸರಿಸ ಬೇಕಾದ ಸೂಕ್ತವನ್ನು ಆರಿಸಲಾಯಿತು.

ಅಲ್ ಅಲ್‌ರಾಫ್ ಅಧ್ಯಾಯದ27 ಮತ್ತು ಸಬಾ ಅಧ್ಯಾಯದ 14ನೇ ಸೂಕ್ತ ಎಂದು ನಿರ್ಧರಿಸಿದೆವು. ಈ ಎರಡು ಸೂಕ್ತಗಳು ಎರಡು ಬಗೆಯ ಸತ್ಯವನ್ನು ಪ್ರತಿಪಾದಿಸುತ್ತದೆ.

1) ಜಿನ್ನ್‌ಗಳು ನಮ್ಮನ್ನು ನೋಡುತ್ತಾರೆ. ಆದರೆ, ನಮಗೆ ಅವರು ಅಗೋಚರವಾಗಿದ್ದಾರೆ.

يَٰبَنِيٓ ءَادَمَ لَا يَفۡتِنَنَّكُمُ ٱلشَّيۡطَٰنُ كَمَآ أَخۡرَجَ أَبَوَيۡكُم مِّنَ ٱلۡجَنَّةِ يَنزِعُ عَنۡهُمَا لِبَاسَهُمَا
لِيُرِيَهُمَا سَوۡءَٰتِهِمَآۚ إِنَّهُۥ يَرَىٰكُمۡ هُوَ وَقَبِيلُهُۥ مِنۡ حَيۡثُ لَا تَرَوۡنَهُمۡۗ إِنَّا
جَعَلۡنَا ٱلشَّيَٰطِينَ أَوۡلِيَآءَ لِلَّذِينَ لَا يُؤۡمِنُونَ ﴿٢٧﴾

"ಓ ಆದಮರ ಸಂತತಿಯೇ, ಶೈತಾನನು ನಿಮ್ಮ ಮಾತಾಪಿತರನ್ನು ಸ್ವರ್ಗದಿಂದ ತೊಲಗಿಸಿದ್ದ ಹಾಗೂ ಒಬ್ಬರ ಮುಂದೆ ಇನ್ನೊಬ್ಬರ ಲಜ್ಜಾಂಗಗಳು ಗೋಚರಿಸುವಂತೆ ಅವರ ಉಡುಪನ್ನು ಅವರ ಮೇಲಿಂದ ಕಳಚಿದ್ದ ಹಾಗೆಯೇ 'ಪರೀಕ್ಷೆ'ಗೆ ಒಳಪಡಿಸದಿರಲಿ. ಅವನು ಮತ್ತು ಅವನ ಸಂಗಾತಿಗಳು ನೀವು ಅವರನ್ನು ನೋಡಲಾಗದ ಸ್ಥಾನದಿಂದ ನಿಮ್ಮನ್ನು ನೋಡುತ್ತಿದ್ದಾರೆ. ನಾವು ಈ ಶೈತಾನರನ್ನು ಅವಿಶ್ವಾಸಿಗಳ ಸಂರಕ್ಷಕರಾಗಿ ಮಾಡಿದ್ದೇವೆ." (ಪವಿತ್ರ ಕುರ್‌ಆನ್: 7: 27)

2) ಜಿನ್ನ್‌ಗಳಿಗೆ ಅಗೋಚರ ವಿಷಯಗಳ ಕುರಿತು ಜ್ಞಾನವಿಲ್ಲ.

فَلَمَّا قَضَيْنَا عَلَيْهِ الْمَوْتَ مَا دَلَّهُمْ عَلَىٰ مَوْتِهِ إِلَّا دَابَّةُ الْأَرْضِ تَأْكُلُ مِنسَأَتَهُ ۖ فَلَمَّا خَرَّ تَبَيَّنَتِ الْجِنُّ أَن لَّوْ كَانُوا يَعْلَمُونَ الْغَيْبَ مَا لَبِثُوا فِي الْعَذَابِ الْمُهِينِ ﴿١٤﴾

"ಅನಂತರ ನಾವು ಸುಲೈಮಾನರಿಗೆ ಮರಣವನ್ನು ವಿಧಿಸಿದಾಗ, ಜಿನ್ನ್(ಯಕ್ಷ)ಗಳಿಗೆ ಅವರ ಮರಣದ ಸುಳಿವು ಕೊಡಲು ಅವರ ಲಾಠಿಯನ್ನು ತಿನ್ನುತ್ತಿದ್ದ ಕೀಟದ ಹೊರತು ಬೇರಾವ ವಸ್ತುವೂ ಇರಲಿಲ್ಲ. ಹೀಗೆ ಸುಲೈಮಾನರು ಬಿದ್ದಾಗ ತಮಗೆ ಪರೋಕ್ಷ ಜ್ಞಾನವಿರುತ್ತಿದ್ದರೆ ತಾವು ಇಂತಹ ಅಪಮಾನಕರ ಯಾತನೆಯಲ್ಲಿ ಬೀಳುತ್ತಿರಲಿಲ್ಲವೆಂಬ ಮಾತು ಜಿನ್ನ್‌ಗಳಿಗೆ ಬಯಲಾಯಿತು." (ಪವಿತ್ರ ಕುರ್‌ಆನ್: 34: 14)

ಈ ಸಲ ಕೇವಲ ಈ ಎರಡು ಸೂಕ್ತಗಳನ್ನು ಸರಿಯಾಗಿ ಅರಿತು, ಸಮಾಜದ ಎಲ್ಲ ಜನರಲ್ಲಿ ಇದರ ಅರಿವು ಮತ್ತು ಜಾಗೃತಿ ಮೂಡಿಸುವೆವು ಎಂದು ನಿರ್ಧರಿಸಿದೆವು. ಸಮಾಜದಲ್ಲಿ ಈ ಬಗ್ಗೆ ಜ್ಞಾನ ಹಾಗೂ ತಿಳುವಳಿಕೆ ಹರಡಿದಾಗ, ಜಿನ್ನ್‌ಗಳ ಬಗ್ಗೆ ಇರುವ ಊಹೆಗಳು ಕ್ರಮೇಣ ಮಾಯವಾಗುವವು ಮತ್ತು ಕಾಮಾಸಕ್ತ ಮೋಸಗಾರ ಮಂತ್ರವಾದಿಗಳಿಗೆ ತಮ್ಮ ವಂಚನೆಯ ಕೆಲಸ ಅಸಾಧ್ಯವಾಗುವ ವಾತಾವರಣ ಸೃಷ್ಟಿಸಿದೆವು. ಇದನ್ನು ಮಾಡಿದ ನಂತರ ನಡೆಯುವ ಘಟನೆಗಳನ್ನು ತರಗತಿಯಲ್ಲಿ ತಿಳಿಸಲಾಗುವುದು ಎಂದು ನಿರ್ಧರಿಸಿದೆವು.

ತಮ್ಮ ತರಗತಿಯ ಮುಂದಿನ ದಿನ ನನ್ನ ಫೋನ್ ರಿಂಗಾಯಿಸಿತು. ಫೋನೆತ್ತಿದಾಗ ಓರ್ವ ಸಹೋದರಿ ತನ್ನ ಅನುಭವ ಹೇಳಬಯಸುತ್ತೇನೆ ಎಂದು ಹೇಳಿದರು. ತರಗತಿಗೆ ಬಂದು ತನ್ನ ಅನುಭವ ಹೇಳಲು ಕಾಯುವಷ್ಟು ಸಹನೆ ಆಕೆಯಲ್ಲಿರಲಿಲ್ಲ.

ಆಕೆ ಹೇಳತೊಡಗಿದಳು: ನಾನು ಕುರ್‌ಆನ್ ತರಗತಿಯಿಂದ ಬೀಳ್ಕೊಟ್ಟು ನೇರವಾಗಿ ನನ್ನ ಗೆಳತಿಯ ಮನೆಗೆ ಹೋದೆ. ಆಕೆ ಪ್ರತಿ ಸಲ ನಮ್ಮೊಂದಿಗೆ ಜಿನ್ನ್ ಹಾಗೂ ದೇವಿ ದೇವತೆಗಳ ಬಗ್ಗೆ ಕಟ್ಟುಕಥೆಗಳನ್ನು ಹೇಳುತ್ತಿದ್ದಳು. ನಾವು ನಮ್ಮ

ಮೂರ್ಖತನ ಹಾಗೂ ಅಜ್ಞಾನದ ಕಾರಣ ಆಕೆಯ ಎಲ್ಲ ಮಾತುಗಳನ್ನು ನಂಬುತ್ತಿದ್ದೆವು. "ನಾನು ಜಿನ್ನ್‌ಗಳನ್ನು ನೋಡುತ್ತೇನೆ. ಅವರೊಂದಿಗೆ ಸಂಭಾಷಣೆ ಮಾಡುತ್ತೇನೆ ಮತ್ತು ಅವರೊಂದಿಗೆ ಅನೇಕ ವ್ಯವಹಾರಗಳನ್ನು ನಡೆಸುತ್ತೇನೆ' ಎಂದು ಹೇಳುತ್ತಿದ್ದಳು. ಆಕೆಯ ಓರ್ವ ಸಹೋದರ ಜಿನ್ನ್‌ನೊಂದಿಗೆ ವಿವಾಹ ಮಾಡಿಕೊಂಡಿದ್ದಾನೆ. ಜಿನ್ನ್ ಬಿಳಿ ಬಟ್ಟೆಯನ್ನು ಧರಿಸಿ ಆಕೆಯ ಬಳಿ ಕುಳಿತುಕೊಳ್ಳುತ್ತಿತ್ತು. ಒಂದು ಜಿನ್ನ್‌ನ ಕಾಲು ಆಡಿನಂತಿದೆ ಎಂಬ ಹಲವು ಕಥೆಗಳನ್ನು ಹೇಳುತ್ತಿದ್ದಳು. ಆಕೆಯ ಈ ಕಥೆಗಳಿಂದ ಬಹಳ ಭಯ ಪಡುತ್ತಿದ್ದೆವು. ನಮ್ಮ ಅಕ್ಕಪಕ್ಕದಲ್ಲಿ ಜಿನ್ನ್ ಇರುವುದೇ ಎಂಬ ಭಯ. ನೆರಳನ್ನು ಕಂಡರೂ ಭಯವಾಗುತ್ತಿತ್ತು. ಅಲ್ಲಾಹನ ಗ್ರಂಥ ಹಾಗೂ ಹದೀಸ್‌ನಿಂದ ದೂರ ಇರುವ ಕಾರಣ ನಾವೂ ಆಕೆಯ ಮಾತನ್ನು ನಂಬಿದೆವು. ಆದರೆ ಅಂದು ನಾನು ಕುರ್‌ಆನ್ ತರಗತಿಯಲ್ಲಿ ಜಿನ್ನ್‌ಗಳು ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ ಹಾಗೂ ಜಿನ್ನ್‌ಗಳಿಗೆ ಅಗೋಚರ ವಿಷಯಗಳ ಜ್ಞಾನ ಇಲ್ಲ ಎಂದು ಕೇಳಿದ ನಂತರ ನನ್ನೊಳಗೆ ಪ್ರಕಾಶದ ಕಿರಣ ಉಂಟಾಯಿತು. ಅಜ್ಞಾನ ತೊಲಗಿತು ಹಾಗೂ ನನ್ನ ತಂದೆ 'ಜ್ಞಾನವು ಪ್ರಕಾಶವಾಗಿದೆ' ಎಂದು ಸದಾ ಹೇಳುತ್ತಿದ್ದ ಮಾತು ನೆನಪಾಯಿತು.

ಕುರ್‌ಆನ್ ತರಗತಿ ಮುಗಿದ ತಕ್ಷಣ, ನಾನು ನೇರವಾಗಿ ಗೆಳತಿಯ ಮನೆಗೆ ಹೋದೆ. ಈ ಸಲ ಭಯದ ಬದಲು ಜ್ಞಾನ, ನಂಬಿಕೆ ಹಾಗೂ ಭರವಸೆಯೊಂದಿಗೆ ಹೋದೆ. ಒಳಗೆ ಪ್ರವೇಶಿಸುತ್ತಲೇ "ನಮಗೆ ಜಿನ್ನ್‌ಗಳನ್ನು ನೋಡಲು ಸಾಧ್ಯವಿಲ್ಲ, ನೀವು ಜಿನ್ನ್‌ಗಳನ್ನು ನೋಡುತ್ತೀರಿ ಎನ್ನುವುದು ನಿಮ್ಮ ಭ್ರಮೆ. ಈ ಭ್ರಮೆ ಹಾಗೂ ನೈಜ ಜೀವನಕ್ಕೆ ಯಾವುದೇ ಸಂಬಂಧವಿಲ್ಲ" ಎನ್ನುತ್ತಾ ನಾನು ಆಕೆಗೆ ಪವಿತ್ರ ಕುರ್‌ಆನಿನ ಸೂಕ್ತ ಓದಿ ತಿಳಿಸಿ, ಮುಂದೆಂದೂ ಇಂತಹ ಮುರ್ಖತನದ ಮಾತುಗಳನ್ನಾಡಬೇಡಿ ಎಂದು ಹೇಳಿದೆ. "ನಿಮ್ಮ ಹಾಗೂ ಅಲ್ಲಾಹನ ಮಾತಿನಲ್ಲಿ ಯಾರ ಮಾತು ಸತ್ಯ ಎಂಬ ಬಗ್ಗೆ ನೀವು ನಿಮ್ಮಲ್ಲಿ ಪ್ರಶ್ನಿಸಿ" ಎಂದು ಹೇಳಿದಾಗ, ಆಕೆ ತಕ್ಷಣ "ಅಲ್ಲಾಹನ ಗ್ರಂಥದ ಹೊರತು ಇನ್ನು ಯಾರ ಮಾತು ಸತ್ಯವಾಗಿರಲು ಸಾಧ್ಯ? ಆದರೆ ನಾನು ಹಲವು ವಸ್ತುಗಳನ್ನು ನೋಡುತ್ತೇನೆ" ಎಂದು ಹೇಳಿದಳು.

ಆಕೆಗೆ ಅಪಸ್ಮಾರದ ರೋಗವಿದೆ, ಪದೇ ಪದೇ ಮೂರ್ಛೆ ಹೋಗುತ್ತಿದ್ದ ವಿಷಯ ನೆನಪಾಯಿತು. ತಕ್ಷಣ ಬಹಳ ಪ್ರೀತ್ಯಾದರದೊಂದಿಗೆ, "ಆತ್ಮೀಯ ಸಹೋದರಿ, ನೀನು ಆದಷ್ಟು ಬೇಗ ಮಾನಸಿಕ ತಜ್ಞರನ್ನು ಭೇಟಿಯಾಗು. ವಿಳಂಬ ಮಾಡಬೇಡ. ವಿಳಂಬಿಸಿದರೆ ನಿನ್ನ ಆರೋಗ್ಯ ಹೆಚ್ಚು ಹದೆಗೆಡಬಹುದು. ವೈದ್ಯರಲ್ಲಿ ಹೋದ ನಂತರ ನೀನು ಆರೋಗ್ಯವಂತಳಾಗುವಿ. ಇನ್ ಶಾ ಅಲ್ಲಾಹ್" ಎಂದು ಹೇಳಿದೆ. ನನ್ನ ಒತ್ತಾಯಕ್ಕೆ ಆಕೆ ಒಪ್ಪಿಕೊಂಡಳು.

"ಈ ವಿಷಯವನ್ನು ನೀನು ಯಾರಲ್ಲೂ ಹೇಳಬಾರದು. ಹೇಳಿದರೆ ಜನರು ನನ್ನನ್ನು ಮಾನಸಿಕ ರೋಗಿ ಎಂದು ಕರೆಯಬಹುದು" ಎಂದಳು. "ಇನ್ನು ಮುಂದೆ ಯಾವತ್ತೂ ಇಂತಹ ಮೂರ್ಖತನ ಮಾತುಗಳನ್ನಾಡುವುದಿಲ್ಲ ಎಂದಾದರೆ ನಾನು ಹೇಳಲಾರೆ" ಎಂದು ಹೇಳಿದೆ.

ಮರುದಿನ ಬೆಳಿಗ್ಗೆ 20 ವರ್ಷದ ಯುವತಿಯೊಬ್ಬಳು ನನ್ನನ್ನು ಭೇಟಿಯಾಗಲು ಬಂದಿದ್ದಳು. ಆಕೆ ನಾಚುತ್ತ, "ನನ್ನ ಜೀವನದಲ್ಲಿ ಒಂದು ರಹಸ್ಯ ಇದೆ. ಅದು ನನಗೆ ನೆಮ್ಮದಿಯಿಂದ ಬದುಕಲು ಬಿಡುತ್ತಿಲ್ಲ. ನನಗೆ ಮಾರ್ಗದರ್ಶನಕ್ಕಾಗಿ ನಾನು ಈ ರಹಸ್ಯವನ್ನು ನಿಮ್ಮ ಮುಂದೆ ಹೇಳ ಬಯಸುತ್ತೇನೆ. ನನ್ನ ಈ ಪಾಪವನ್ನು ಅಲ್ಲಾಹನು ಮನ್ನಿಸುವನೋ ಎಂಬ ಭಯವು ಆಗುತ್ತಿದೆ. ನಾನು ನನ್ನ ಮಾತಾಪಿತರ ಏಕೈಕ ಸಂತಾನ. ನಾನು ಅವರೊಂದಿಗೆ ಅಸಭ್ಯ ರೀತಿಯಿಂದ ವರ್ತಿಸಿದ್ದೇನೆ. ಈ ಬಹು ದೊಡ್ಡ ಪಾಪ ಕೃತ್ಯಕ್ಕೆ ಗುರಿಯಾಗಿದ್ದೇನೆ. ನನ್ನ ಮಾತಾಪಿತರ ಅತಿಯಾದ ಮುದ್ದು ನನ್ನನ್ನು ಕೆಡಿಸಿತು. ಅವರ ಆಜ್ಞೆಯನ್ನು ಉಲ್ಲಂಘಿಸುತ್ತ, ಅವರ ಮೇಲೆ ರೇಗುತ್ತ ಬಯ್ಯುತ್ತಿದ್ದೆ. ಅವರು ಹೇಳಿದುದರ ವಿರುದ್ಧ ವರ್ತಿಸುತ್ತಿದ್ದೆ. ಮನೆ ವಾರ್ತೆಯಲ್ಲಿ ತಾಯಿಗೆ ಸಹಕರಿಸುವ ಬದಲು ಸದಾ ಒರಟಾಗಿ ವರ್ತಿಸುತ್ತಿದ್ದೆ. ತಂದೆಯವರ ವಯಸ್ಸು ಹಾಗೂ ಸಜ್ಜನಿಕೆಯನ್ನು ಕಡೆಗಣಿಸುತ್ತ ಅತಿಥಿಗಳ ಮುಂದೆಯೇ ಅವರನ್ನು ಗೇಲಿ ಮಾಡುತ್ತಿದ್ದೆ. ಆದರೆ ಅವರಿಬ್ಬರೂ ನನ್ನ ಅಸಭ್ಯತನವನ್ನು ಬದಿಗೊತ್ತಿ ನನ್ನನ್ನು ಪ್ರೀತಿಸುತ್ತಿದ್ದರು. ಅವರ ಮಮತೆಯಲ್ಲಿ ಯಾವುದೇ ವ್ಯತ್ಯಾಸ ಉಂಟಾಗಲಿಲ್ಲ. ಒಮ್ಮೆ ತಂದೆಯವರು ಮನೆಗೆ ಬಂದಾಗ ಓರ್ವ ಅಪರಿಚಿತ ವ್ಯಕ್ತಿಯನ್ನು ಜೊತೆಗೆ ಕರೆದುಕೊಂಡು ಬಂದರು. ಎಷ್ಟು ಖರ್ಚಾದರೂ ಸರಿ, ನನ್ನೊಳಗೆ ಇರುವ ಜಿನ್ನನ್ನು ತೆಗೆಯಬೇಕೆಂದು ಅವರ ಚಿಂತೆಯಾಗಿತ್ತು. ಈ ವ್ಯಕ್ತಿ ನನ್ನೊಳಗಿರುವ ಜಿನ್ನ್ ತೆಗೆಯಲು ಬಂದಿದ್ದರು.

ನಾನು ಮನಸಲ್ಲೇ ನಗುತ್ತ ಜಿನ್ನ್ ಹಿಡಿಸಿದವರಂತೆ ನಾಟಕವಾಡಲು ಯೋಚಿಸಿದೆ. ಆ ವ್ಯಕ್ತಿಯ ಮುಂದೆ ಕುಳಿತುಕೊಳ್ಳಲಾರೆ ಎಂದು ಹೇಳಿದೆ. ಆತ ನನ್ನ ಬಳಿ ಕೂತು ಅರ್ಥವಿಲ್ಲದ ವಿಚಿತ್ರ ಮಾತುಗಳನ್ನು ಹೇಳತೊಡಗಿದ. ಮಧ್ಯೆ ಮಧ್ಯೆ ಪವಿತ್ರ ಕುರ್‌ಆನಿನ ಕೆಲವು ಸೂಕ್ತಗಳನ್ನು ತಪ್ಪುತಪ್ಪಾಗಿ ಓದುತ್ತಿದ್ದ. ಎಲ್ಲರನ್ನೂ ಸತಾಯಿಸಬೇಕೆಂದು ಮನಸಲ್ಲೇ ನಿರ್ಧರಿಸಿದೆ. ಕೆಲವು ನಿಮಿಷಗಳ ನಂತರ ನಾನು ಧ್ವನಿ ಬದಲಿಸಿದೆ. ಆತ ಗಾಬರಿಗೊಂಡ. ಆತ ಗಾಬರಿಗೊಂಡದ್ದು ನೋಡಿ ನಾನು ನಕ್ಕು ಬಿಡುತ್ತೇನೋ ಎಂದು ಅನಿಸಿತು. ಆದರೂ ನನ್ನನ್ನು ಹತೋಟಿಯಲ್ಲಿಡುತ್ತ ಜೋರಾಗಿ ಗಹಗಹಸಿ ನಗತೊಡಗಿದೆ. ನಾಟಕ ಹಾಳಾಗಬಹುದು ಎಂದು ಅನಿಸುತ್ತ ನಗುವುದನ್ನು ನಿಲ್ಲಿಸಿದೆ.

ನನ್ನನ್ನು ಹತೋಟಿಯಲ್ಲಿಟ್ಟು ಕೊಳ್ಳುತ್ತ ಧ್ವನಿಯನ್ನು ಹೆಚ್ಚು ಕರ್ಕಶವಾಗಿ ಮಾಡುತ್ತ, ಕೆಟ್ಟ ಮಾತುಗಳನ್ನಾಡತೊಡಗಿದೆ. ನನ್ನ ಈ ಅವಸ್ಥೆ ನೋಡಿ ಅಮ್ಮ ಅಳತೊಡಗಿದರು. ನನ್ನನ್ನು ಅಸಭ್ಯ ಎಂದು ಭಾವಿಸುತ್ತಿದ್ದ ಅಮ್ಮ ಈಗ ಜಿನ್ನ್ ಹಿಡಿದವಳು ಎಂದು ಭಾವಿಸತೊಡಗಿದರು. ಅಪ್ಪ ನನ್ನನ್ನು ಪ್ರೀತಿಯಿಂದ ಆಲಂಗಿಸ ಬಯಸಿದರು. ಆದರೆ ನನ್ನ ಕಣ್ಣು ಜಿನ್ನ್ ಓಡಿಸುವವನ ಕೋಲಿನ ಮೇಲಿತ್ತು. ಆತ ಆ ಕೋಲಿನಿಂದ ರೋಗಿಯನ್ನು ಹೊಡೆಯುತ್ತ ಜಿನ್ನ್‌ಗೆ ಹೊಡೆಯುತ್ತಿರುವುದಾಗಿ ಹೇಳುತ್ತಿದ್ದ. ಈ ಕೋಲಿನ ಕಾರಣ ಹಲವು ಪುರುಷರು, ಮಹಿಳೆಯರು, ಯುವಕ-ಯುವತಿಯರು ಮಾನಸಿಕ ರೋಗಕ್ಕೆ ತುತ್ತಾಗಿದ್ದಾರೆ.

ಅದೇ ಕ್ಷಣ ನಾನು ಆ ಕೋಲನ್ನು ಕಸಿದು ಎಲ್ಲರನ್ನೂ ಹೊಡೆಯತೊಡಗಿದೆ. ಅಮ್ಮ, ಅಪ್ಪ ಹಾಗೂ ಆ ವ್ಯಕ್ತಿಯನ್ನು ಹೊಡೆಯ ತೊಡಗಿದೆ. ಎಲ್ಲರೂ ಚೀರಾಡುತ್ತ ಓಡತೊಡಗಿದರು. ಆದರೆ ನನ್ನ ಮನಸ್ಸು ಗಟ್ಟಿ ಕಲ್ಲಿನಂತೆ ಆಗಿದ್ದ ಕಾರಣ ಇವರ ಕೂಗಾಟ, ಚೀರಾಟಗಳು ನನ್ನ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ. ಈ ಘಟನೆಯ ನಂತರ ಅಪ್ಪ, ಅಮ್ಮ ಇನ್ನಷ್ಟು ಗಾಬರಿಗೊಂಡರು ಮತ್ತು ನನ್ನ ಎಲ್ಲ ಬೇಡಿಕೆಗಳನ್ನು ಪೂರೈಸತೊಡಗಿದರು.

ನನ್ನ ಮಾತಾಪಿತರ ಅವಸ್ಥೆ ನೋಡಿ, ಅಲ್ಲಾಹನಿಗೆ ಕರುಣೆ ಬಂತು. ಆದ್ದರಿಂದ ನಾನು ನಿಮ್ಮ ಈ ಕುರ್‌ಆನ್ ತರಗತಿಗೆ ಸೇರುವಂತೆ ದಾರಿ ತೋರಿಸಿದ. ಈ ತರಗತಿ ಗಳು ನನ್ನ ಮೇಲೆ ಒಳ್ಳೆಯ ಪ್ರಭಾವ ಬೀರಿತು. ನನ್ನಲ್ಲಿ ಬಹು ಬೇಗನೆ ಬದಲಾವಣೆ ಉಂಟಾಯಿತು. ಮಾತಾಪಿತರೊಂದಿಗೆ ಮಾಡುತ್ತಿದ್ದ ಹಠ, ಆಜ್ಞೋಲ್ಲಂಘನೆ ಎಲ್ಲವನ್ನೂ ಬಿಟ್ಟು ಬಿಟ್ಟೆ. ಕಲಿಯಲು ಹೇಳುವ ಸೂಕ್ತದಂತೆ ನಾನು ನನ್ನನ್ನು ಬದಲಾಯಿಸತೊಡಗಿದೆ. ಹಿಂದಿನ ತರಗತಿಯಲ್ಲಿ ಜಿನ್ನ್‌ಗಳ ಬಗ್ಗೆ ಕೇಳಿ ಕಣ್ಣು ತೆರೆಯಿತು. ನನ್ನ ಮಾತಾಪಿತ ರೊಂದಿಗೆ ಮಾಡಿದ ಅನ್ಯಾಯವನ್ನು ಅಲ್ಲಾಹನು ಕ್ಷಮಿಸಬಹುದು. ಆದರೆ ನಾನು ಅವರನ್ನು ಕೋಲಿನಿಂದ ಹೊಡೆದ ಆ ಪಾಪವನ್ನು ಅಲ್ಲಾಹನು ಕ್ಷಮಿಸುವನೇ? ನನ್ನಿಂದ ದೊಡ್ಡ ಪಾಪ ಸಂಭವಿಸಿದೆ. ಈ ಚಿಂತೆ ನನ್ನನ್ನು ಜೀವಿಸಲು ಬಿಡುತ್ತಿಲ್ಲ. ನೀವು ನನಗೆ ಸಹಕರಿಸಬೇಕು. ಅಲ್ಲಾಹನು ನನ್ನ ಈ ಅಪರಾಧವನ್ನು ಕ್ಷಮಿಸುವನೇ?"

"ನೀನು ಪ್ರಾಮಾಣಿಕ ಮನಸ್ಸಿನೊಂದಿಗೆ ಅಲ್ಲಾಹನಲ್ಲಿ ಕ್ಷಮೆಯಾಚಿಸು. ಮಾತಾಪಿತರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುತ್ತ ಅವರ ಸೇವೆ ಮಾಡು" ಎಂಬ ಬುದ್ಧಿವಾದ ಹೇಳಿದೆ.

"ನನ್ನ ಬದಲಾವಣೆಯು ಆ ಮಂತ್ರವಾದಿಯ ಪವಾಡವೆಂದು ಭಾವಿಸಿ ಅಪ್ಪ, ಅಮ್ಮ ಆ ಮಂತ್ರವಾದಿಗೆ ಕೃತಜ್ಞತೆ ಸಲ್ಲಿಸಲು ಹಣ ಹಾಗೂ ಬಹುಮಾನ ಕೊಡಲು

ಅನುವಾದರು. 'ನಾನು ಬದಲಾದ್ದು ಮಂತ್ರವಾದಿಯ ಪವಾಡದಿಂದ ಅಲ್ಲ, ಬದಲಾಗಿ ಅಲ್ಲಾಹನ ಗ್ರಂಥದಿಂದ. ಆ ಮಂತ್ರವಾದಿ ನಕಲಿ ಹಾಗೂ ವಂಚಕನಾಗಿದ್ದಾನೆ. ನೀವು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿ ಮತ್ತು ಹಣವನ್ನು ಅಗತ್ಯವುಳ್ಳವರಿಗೆ ಕೊಡಿ' ಎಂದು ಅಪ್ಪ ಅಮ್ಮನಿಗೆ ಹೇಳಿದೆ."

ಜೀವನದಲ್ಲಿ ಪವಿತ್ರ ಕುರ್‌ಆನಿನ ಶಿಕ್ಷಣವನ್ನು ಮೈಗೂಡಿಸಿಕೊಂಡರೆ, ಇನ್ ಶಾ ಅಲ್ಲಾಹ್, ಅಹಂಕಾರ, ಅಜ್ಞಾನ, ಮೋಸ, ಮಾಟ–ಮಂತ್ರಗಳಂತಹ ಅಂಧಕಾರಗಳು ಜೀವನದಿಂದ ತೊಲಗುವುದು ಮತ್ತು ಭೂಮಿ, ಪ್ರಭುವಿನ ಪ್ರಕಾಶದಿಂದ ಬೆಳಗುವುದು. وَأَشْرَقَتِ أَرْضُ بِنُورِ رَبِّهَا "ಭೂಮಿಯು ತನ್ನ ಪ್ರಭುವಿನ ಜ್ಯೋತಿಯಿಂದ ಬೆಳಗುವುದು" **(ಪವಿತ್ರ ಕುರ್‌ಆನ್: 39: 69)**

❖ ❖ ❖ ❖

# ಅಗೋಚರ ವಸ್ತುಗಳ ಜ್ಞಾನ ಅಲ್ಲಾಹನಿಗಲ್ಲದೆ ಅನ್ಯ ಯಾರಿಗೂ ಇಲ್ಲ

ನಾನು ನಡೆಸುತ್ತಿರುವ ಕುರ್‌ಆನ್ ತರಗತಿಯು ಸಾಮಾನ್ಯವಾಗಿ ನಡೆಯುವ ಕುರ್‌ಆನ್ ತರಗತಿಗಿಂತ ಭಿನ್ನವಾಗಿದೆ. ನಾನು ಮೊದಲು ಒಂದು ಸೂಕ್ತದ ಪರಿಚಯದೊಂದಿಗೆ ತರಗತಿಯನ್ನು ಆರಂಭಿಸುತ್ತೇನೆ. ನಂತರ ಅದರಲ್ಲಿರುವ ಆಜ್ಞೆಗಳನ್ನು ವಿವರಿಸಲಾಗುತ್ತದೆ. ಅವತೀರ್ಣ ಕಾಲ ಹಾಗೂ ಅವತೀರ್ಣದ ಆವಶ್ಯಕತೆಯ ಬಗ್ಗೆ ವಿಷಯ ಮಂಡನೆ ಮಾಡಲಾಗುತ್ತದೆ. ಈ ಸೂಕ್ತ 'ಮುಹ್ಕಮಾತ್' ಅಥವಾ 'ಮುತಷಾಬಿಹಾತ್' ಎಂದು ತಿಳಿಸಲಾಗುತ್ತದೆ. ಇದು ರದ್ದು ಪಡಿಸಲಾಗಿದೆಯೇ ಅಥವಾ ಮುಂದುವರೆಸಲಾಗಿದೆಯೇ ಎಂಬ ಬಗ್ಗೆ ಚರ್ಚಿಸುತ್ತೇವೆ. ಸುಲಭ ರೀತಿಯಲ್ಲಿ ಬಾಯಿಪಾಠ ಮಾಡುವ ವಿಧಾನ ಕಲಿಸಿ ಸಾಧ್ಯವಿದ್ದಷ್ಟು ಬಾಯಿ ಪಾಠ ಮಾಡಿಸಲಾಗುತ್ತದೆ. ಪಠಿಸುವ ರೀತಿ ಮತ್ತು ಶಿಷ್ಟಾಚಾರವನ್ನು ತಿಳಿಸಲಾಗುತ್ತದೆ. ಕೊನೆಯದಾಗಿ ಆ ಸೂಕ್ತವನ್ನು ಅನುಸರಿಸುವ ರೀತಿಯನ್ನು ತೋರಿಸಿ ಕೊಡಲಾಗುತ್ತದೆ. ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿದಾಗ ಆದ ಬದಲಾವಣೆ ಅಥವಾ ಘಟನೆಗಳನ್ನು ಕೇಳಿ ತಿಳಿಯಲಾಗುತ್ತದೆ. ಕೆಲವೊಮ್ಮೆ ಪವಿತ್ರ ಕುರ್‌ಆನಿನ ಶಿಕ್ಷಣ ಹೊಂದಿದ ವಿದ್ವಾಂಸರಿಂದ ಸಹಕಾರ ಪಡೆಯಲಾಗುತ್ತದೆ. ಜ್ಞಾನ ದಾಹ ಇರುವ ಮಹಿಳೆಯರು ಹಾಗೂ ಯುವತಿಯರು ಪ್ರೇಮ ಬಾಂಧವ್ಯದ ಈ ವಾತಾವರಣದೊಂದಿಗೆ ಕುರ್‌ಆನಿನ ಬಹಳಷ್ಟು ಜ್ಞಾನವನ್ನು ಪಡೆಯುತ್ತಾರೆ.

ತಜ್ವೀದ್ ಮತ್ತು ಕುರ್‌ಆನ್ ಪಾರಾಯಣ ಪರಿಣತರಿಂದ, ಕುರ್‌ಆನ್ ಪಠಿಸುವ ನಿಯಮಗಳನ್ನು ತಿಳಿದು ಸರಿಪಡಿಸುವ ತರಗತಿ ನಿಗದಿಪಡಿಸಿದೆವು. ವಿದ್ವಾಂಸರು ಬರತೊಡಗಿದರು. ಶಿಬಿರಾರ್ಥಿಗಳು ಉತ್ಸಾಹದಿಂದ ಕುರ್‌ಆನನ್ನು ಪಠಣದ ನಿಯಮಗಳೊಂದಿಗೆ ಅತ್ಯುತ್ತಮ ರೀತಿಯಲ್ಲಿ ಓದಲು ಅರ್ಹರಾದರು. ಅವರ ನಾಲಗೆ ತಜ್ವೀದ್‌ನ ನಿಯಮಾನುಸಾರ ಹೊರಳತೊಡಗಿತು ಮತ್ತು ಜ್ಞಾನ ವೃದ್ಧಿಯಾಯಿತು.

ಆ ವಿದ್ವಾಂಸರಲ್ಲಿ ಒಂದು ದುರ್ಗುಣವಿತ್ತು. ತರಗತಿಯ ಮಧ್ಯೆ ವ್ಯರ್ಥ ಷಯಗಳನ್ನು ಪ್ರಸ್ತಾಪಿಸುವುದು. ಗೋರಿಗಳ ಶ್ರೇಷ್ಠತೆ, ಅದರೊಳಗಿರುವವರ ಾವಿತ್ರ್ಯದ ಬಗ್ಗೆ ಬಹಳ ಹೊಗಳಿ ಮಾತನಾಡುತ್ತಿದ್ದರು. ಶಿಬಿರಾರ್ಥಿಗಳಿಗೆ ಗೋರಿ ಂದರ್ಶನ ಹಾಗೂ ಅದರ ಶಿಷ್ಟಾಚಾರದ ಆಜ್ಞೆಯ ಬಗ್ಗೆ ತಿಳಿದಿತ್ತು. ಅವರಿಗೆ ದ್ವಾಂಸರ ಮಾತು ಅತಿಶಯೋಕ್ತಿ ಎಂದು ಅನಿಸಿದರೂ ಬೇಸರ ಹಾಗೂ ಕೋಪ ೊಳ್ಳುತ್ತಿರಲಿಲ್ಲ. ಕಾರಣ, ಅವರು ಕಲಿಸುವ ರೀತಿಯನ್ನು ಶಿಬಿರಾರ್ಥಿಗಳು ಬಹಳ ಷ್ಟ ಪಡುತ್ತಿದ್ದರು. ಆದುದರಿಂದ ಅವರ ನಿರರ್ಥಕ ಮಾತುಗಳನ್ನು ಬಹಳ ತಾಳ್ಮೆ ುಂದ ಆಲಿಸುತ್ತಿದ್ದರು. ಆದರೆ ಒಮ್ಮೆ ವಿದ್ವಾಂಸರ ಒಂದು ಮಾತಿನಿಂದ ಶಿಬಿರಾರ್ಥಿ ಳ ಸಹನೆಯ ಕಟ್ಟೆ ಒಡೆಯಿತು. ಚರ್ಚೆಯು ವಾದ ವಿವಾದಕ್ಕೆ ಮುಟ್ಟಿತು.

ವಿದ್ವಾಂಸರಿಗೆ ಓರ್ವ ಸಂತನ ಮೇಲೆ ಬಹಳ ಶ್ರದ್ಧೆ ಇತ್ತು. ಬಹಳ ಸಲ ಸಂತನ ಬಗ್ಗೆ ಪ್ರಸ್ತಾಪಿಸಿದರು. ಆದರೆ, ಅಂದು ಹೊಗಳುತ್ತ ಭೂಮಿ ಆಕಾಶವನ್ನು ಂದು ಮಾಡಿದರು. ಅಂದರೆ ಸಂತನಿಗೆ ಅಗೋಚರ ವಿಷಯಗಳ ಬಗ್ಗೆ ಜ್ಞಾನ ದೆ ಎಂದು ಹೇಳಿಬಿಟ್ಟರು. ಒಂದು ಘಟನೆಯ ಬಗ್ಗೆ ಹೇಳುತ್ತಾ, ಒಮ್ಮೆ ಒಂದು ಕಾಹ್‌ನ ನಂತರ ವಧು-ವರರ ಹುಟ್ಟಿದ ತಾರೀಕು ಕೇಳಿ ಒಂದು ಕಾಗದದಲ್ಲಿ ರೆಯುತ್ತ ಏನೋ ಲೆಕ್ಕಾಚಾರಗಳನ್ನು ಹಾಕುತ್ತ ಮದುಮಗನನ್ನು ಬದಿಗೆ ಕರೆದು, ಮ್ಮ ಈ ವಿವಾಹ ವಿಫಲವಾಗುವುದು, ಆದುದರಿಂದ ನೀವು ತಕ್ಷಣ ಆಕೆಯನ್ನು ಚ್ಛೇದಿಸಿ ಎಂದು ಹೇಳಿದರು. ಆದರೆ ಮದುಮಗ ಕೋಪದಿಂದ ಸಂತನನ್ನು ುರುಗುಟ್ಟಿ ನೋಡುತ್ತ ಆತನ ಮಾತನ್ನು ನಿರಾಕರಿಸಿದ. ಕೆಲವು ತಿಂಗಳುಗಳ ನಂತರ ತ ತನ್ನ ಪತ್ನಿಗೆ ತಲಾಕ್ ಕೊಟ್ಟ, ಆತ ಮರು ವಿವಾಹ ಆಗ ಬಯಸಿದಾಗ; ಂತನಲ್ಲಿ ಬಂದು ನಾನು ಮರುವಿವಾಹ ಆಗ ಬಯಸುತ್ತಿದ್ದೇನೆ. ಅದರ ಪರಿಣಾಮ ನಾಗುವುದು ಎಂದು ಲೆಕ್ಕಾಚಾರ ಹಾಕಿ ಹೇಳಬೇಕೆಂದು ಹೇಳಿದ.

ವಿದ್ವಾಂಸರು ತಮ್ಮ ಮಾತು ಮುಗಿಸಿದಾಗ ನಾನು ಇದರ ಪರಿಣಾಮ ಳಿಯಲು ಶಿಬಿರಾರ್ಥಿಗಳ ಕಡೆ ನೋಡಿದೆ. ಅವರು ಬಹಳ ಬೇಸರ ಹಾಗೂ ಾಬರಿಯಾಗಿರುವಂತೆ ಕಂಡು ಬಂದರು. ಶಿಬಿರಾರ್ಥಿಗಳ ಮೇಲೆ ತನ್ನ ಮಾತಿನ ರಿಣಾಮ ಒಳ್ಳೆಯ ರೀತಿಯಲ್ಲಿ ಬೀರಿದೆ ಎಂದು ಅನಿಸಿ ವಿದ್ವಾಂಸರ ಮುಖ ಂತೋಷದಿಂದ ಅರಳಿತ್ತು. ಸಂತರಿಗೆ ಅಗೋಚರ ವಿಷಯಗಳ ಜ್ಞಾನ ಇದೆ ಎಂಬ ಿಷಯವನ್ನು ವಿದ್ವಾಂಸರು ಸಾಬೀತು ಪಡಿಸಿದರು. ಇವರ ಮಾತು ಕೇಳಿ ನನಗೆ, ುಸೀದಿಯ ಗೋಡೆಗಳು ಕಂಪಿಸುತ್ತಿರುವಂತೆ ಭಾಸವಾಯಿತು. ಅಲ್ಲಾಹನ ಗ್ರಂಥದ ೂಕ್ತವು ವಿದ್ವಾಂಸರ ಸುಳ್ಳು ವಾದವನ್ನು ನಿರಾಕರಿಸಲು ಚಡಪಡಿಸುತ್ತಿರುವಂತೆ

ಅನಿಸುತ್ತಿತ್ತು. ನಾನು ಉಚ್ಚ ಸ್ವರದಲ್ಲಿ ಈ ಸೂಕ್ತವನ್ನು ಓದ ತೊಡಗಿದೆ.

عَٰلِمُ ٱلْغَيْبِ فَلَا يُظْهِرُ عَلَىٰ غَيْبِهِۦٓ أَحَدًا ﴿٢٦﴾

"ಅವನು ಅದೃಶ್ಯ ಜ್ಞಾನಿಯಾಗಿದ್ದಾನೆ. ತನ್ನ ಅದೃಶ್ಯ ಜ್ಞಾನವನ್ನು ಅವನು ಯಾರಿಗೂ ತಿಳಿಯ ಪಡಿಸುವುದಿಲ್ಲ." **(ಪವಿತ್ರ ಕುರ್‌ಆನ್: 72: 26)**

ವಿದ್ವಾಂಸರು ಕೋಪದಿಂದ ನನ್ನ ಕಡೆಗೆ ನೋಡುತ್ತ, ಇಷ್ಟವಾಗದ ನನ್ನ ಮಾತನ್ನು ನಿರಾಕರಿಸುವಂತಹ ಶೈಲಿಯಲ್ಲಿ ಉಚ್ಚ ಸ್ವರದಲ್ಲಿ, "ಸಂಪೂರ್ಣ ಸೂಕ್ತವನ್ನು ಓದು" ಎಂದು ಹೇಳಿದರು ನಾನು...

عَٰلِمُ ٱلْغَيْبِ فَلَا يُظْهِرُ عَلَىٰ غَيْبِهِۦٓ أَحَدًا ﴿٢٦﴾ إِلَّا مَنِ ٱرْتَضَىٰ مِن رَّسُولٍ فَإِنَّهُۥ يَسْلُكُ مِنۢ بَيْنِ يَدَيْهِ وَمِنْ خَلْفِهِۦ رَصَدًا ﴿٢٧﴾ لِّيَعْلَمَ أَن قَدْ أَبْلَغُوا۟ رِسَٰلَٰتِ رَبِّهِمْ وَأَحَاطَ بِمَا لَدَيْهِمْ وَأَحْصَىٰ كُلَّ شَىْءٍ عَدَدًۢا ﴿٢٨﴾

"ಅವನು ಅದೃಶ್ಯ ಜ್ಞಾನಿಯಾಗಿದ್ದಾನೆ. (ಅದೃಶ್ಯ ಜ್ಞಾನವನ್ನು ನೀಡಲಿಕ್ಕಾಗಿ) ತಾನು ಮೆಚ್ಚಿಕೊಂಡ ತನ್ನ ಸಂದೇಶವಾಹಕನ ಹೊರತು ಬೇರಾರಿಗೂ ಅವನು ತನ್ನ ಅದೃಶ್ಯ ಜ್ಞಾನವನ್ನು ತಿಳಿಯಪಡಿಸುವುದಿಲ್ಲ. ಆಗ ಅವನ (ಸಂದೇಶವಾಹಕನ) ಮುಂದೆಯೂ ಹಿಂದೆಯೂ ಕಾವಲುಗಾರರನ್ನು ನೇಮಿಸಿಬಿಡುತ್ತಾನೆ. ಅವರು ತಮ್ಮ ಪ್ರಭುವಿನ ಸಂದೇಶಗಳನ್ನು ತಲುಪಿಸಿರುವರೆಂಬುದನ್ನು ಅವನು ತಿಳಿಯಲಿಕ್ಕಾಗಿ ಅವನು ಅವರ ಪರಿಸರವನ್ನು ಸಂಪೂರ್ಣವಾಗಿ ಸುತ್ತುಗಟ್ಟಿರುತ್ತಾನೆ. ಮತ್ತು ಪ್ರತಿಯೊಂದು ವಸ್ತುವನ್ನು ಅವನು ಲೆಕ್ಕ ಮಾಡಿಟ್ಟಿರುತ್ತಾನೆ." **(ಪವಿತ್ರ ಕುರ್‌ಆನ್: 72: 26–28)**

ಇದನ್ನು ಕೇಳಿದ ವಿದ್ವಾಂಸರು ನನ್ನ ಕಡೆಗೆ ದ್ವೇಷದಿಂದ ನೋಡುತ್ತ 'ನೋಡಿದಿರಾ' ಎಂದು ಹೇಳಿದರು. ನಾನು ನೆಮ್ಮದಿ ಹಾಗೂ ದೃಢವಾದ ಸ್ವರದೊಂದಿಗೆ 'ನಿಮ್ಮ ಸಂತರು, ಮಂತ್ರವಾದಿಗಳು, ಜಾದುಗಾರರು, ಜ್ಯೋತಿಷಿಗಳು, ಭವಿಷ್ಯ ನುಡಿಯುವರು ಅಥವಾ ಪುಸ್ತಕದಲ್ಲಿ ಲೆಕ್ಕಾಚಾರ ಮಾಡುವವರು ಯಾರೇ ಇರಲಿ, ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ಆಯ್ದುಕೊಂಡಿದ್ದಾನೆ ಹಾಗೂ ಅವರಿಗೆ ತನ್ನ ಅದೃಶ್ಯ ಜ್ಞಾನದಿಂದ, ಸ್ವಲ್ಪ ಜ್ಞಾನವನ್ನು ಅವರಿಗೂ ಕೊಟ್ಟಿದ್ದಾನೆ ಎಂಬ ವಾರಿಸು ಯಾರೂ ಇಲ್ಲ. ಒಂದು ವೇಳೆ ನೀವು ಹೇಳಿದ ಘಟನೆ ಸತ್ಯವಾಗಿದ್ದರೂ ಅದಕ್ಕೆ ಸಂತರ ಅದೃಶ್ಯದ ಜ್ಞಾನ ಕಾರಣವಲ್ಲ, ಬದಲಾಗಿ ಅದು ಆತನ ಭ್ರಮೆ ಮಾತ್ರ. ಭ್ರಮೆಗಳು ಕೆಲವೊಮ್ಮೆ ಸತ್ಯವಾಗಿದ್ದರೆ, ಕೆಲವೊಮ್ಮೆ ತಪ್ಪಾಗಿ

ುತ್ತದೆ. ಭವಿಷ್ಯ ನುಡಿಯುವುದು ಊಹೆ ಹಾಗೂ ಮಿಥ್ಯಾರೋಪವಲ್ಲದೆ ಮತ್ತೇನಿಲ್ಲ."

ಇದನ್ನು ಕೇಳಿ ಆತನ ಕೋಪ ನೆತ್ತಿಗೇರಿತು. ಕೋಪದಿಂದ ಆತನ ದೇಹ ಂಪಿಸಲಾರಂಭಿಸಿತು. ಆತ ದೊಡ್ಡ ಸ್ವರದಲ್ಲಿ "ನನ್ನ ಸಂತರ ಹಾಗೂ ಗುರುಗಳನ್ನು ಪಮಾನಿಸುವ ಹಕ್ಕು ನಾನು ಯಾರಿಗೂ ಕೊಡುವುದಿಲ್ಲ" ಎಂದು ಕಿರುಚಾಡ ಾಡಗಿದರು. ಕೋಪದಲ್ಲಿ ಅವರ ಬಾಯಿಯಿಂದ ನೊರೆ ಬರುತ್ತಿತ್ತು.

ಮಸೀದಿಯ ಗೌರವವನ್ನು ದೃಷ್ಟಿಯಲ್ಲಿಡುತ್ತ ನಾನು ಮೌನವಾದೆ "ನನಗೆ ಬ್ಬರನ್ನು ಭೇಟಿಯಾಗಲಿಕ್ಕಿದೆ, ನನಗೆ ಹೋಗಲು ಅನುಮತಿ ಕೊಡಿ, ಇಲ್ಲವಾದರೆ ಮಯ ಮೀರಬಹುದು" ಎಂದು ಹೇಳುತ್ತ ವಿದ್ವಾಂಸರು ಹೋದರು.

ವಿದ್ವಾಂಸರು ಹೋದ ನಂತರ ಬಹಳ ವಿಷಯಗಳು ನನಗೆ ನೆನಪಾಗ ತೊಡಗಿ ವು ಓರ್ವ ಕವಿಯ ಕವಿತೆ ನೆನಪಾಯಿತು. ಇದರೊಂದಿಗೆ, ಸಹೀಹ್ ಮುಸ್ಲಿಮ್‌ನಲ್ಲಿ ುವ 'ನಹರ್‌ವಾನ್'ರವರ ಒಂದು ಘಟನೆ ನೆನಪಾಯಿತು. ಯುದ್ಧದ ಸಮಯ ಮೀರುಲ್ ಮೂಮಿನೀನ್ ಅಲೀ ಬಿನ್ ತಾಲಿಬ್‌ರವರು(ರ) ಅವರೊಡನೆ ಯುದ್ಧಕ್ಕೆ ಹೊರಡುವಂತೆ ಆಜ್ಞಾಪಿಸಿದರು. ಆಗ ಮುಸಾಫಿರ್ ಬಿನ್ ಔಫ್ ಹೀಗೆ ೕಳಿದರು, "ಅಮಿರುಲ್ ಮೂಮಿನಿನ್! ತಾವು ಈಗ ಹೊರಡಬೇಡಿ, ಮಧ್ಯಾಹ್ನದ ಂತರ ಹೊರಡಿ." ಯಾಕೆಂದು ಅಲಿಯವರು(ರ) ಕೇಳಿದರು. "ಈಗ ಹೊರಟರೆ ೀವು ಹಾಗೂ ನಿಮ್ಮ ಸಂಗಾತಿಗಳು ನಷ್ಟದಲ್ಲಿ ಸಿಲುಕುವಿರಿ. ನಾನು ಹೇಳಿದ ಮಯಕ್ಕೆ ಹೊರಟರೆ ನೀವು ಗೆಲ್ಲುವಿರಿ ಮತ್ತು ನಿಮ್ಮ ಮನದ ಇಂಗಿತ ೂರ್ತಿಗೊಳ್ಳುವುದು" ಎಂದು ಹೇಳಿದರು. ಇದನ್ನು ಕೇಳಿ ಅಲೀ(ರ) ಹೇಳಿದರು, ್ರವಾದಿ ಮುಹಮ್ಮದ್(ಸ)ರು ಜ್ಯೋತಿಷಿ ಅಗಿರಲಿಲ್ಲ. ಅದೇ ರೀತಿ ಅವರ ನಂತರ ಾವು ಯಾರೂ ಜ್ಯೋತಿಷಿಗಳಲ್ಲ. ನಿಮ್ಮ ಮಾತನ್ನು ಸತ್ಯ ಎಂದು ನಂಬಿದವರನ್ನು ಲ್ಲಾಹನನ್ನು ಬಿಟ್ಟು ಇತರರನ್ನು ರಕ್ಷಿತ ಮಿತ್ರರಾಗಿ ಮಾಡಿದವರೆಂದು ಪರಿಗಣಿಸುವೆನು."

ತರುವಾಯ "ಓ! ಅಲ್ಲಾಹನೇ! ನಿನ್ನ ಶಕುನದ ಹೊರತು ಬೇರೆ ಶಕುನವಿಲ್ಲ, ಾಗೂ ನಿನ್ನ ಒಳಿತಿನ ಹೊರತು ಬೇರೆ ಒಳಿತಿಲ್ಲ" ಎಂದು ಹೇಳಿದರು. ನಂತರ ುಸಾಫಿರ್ ಬಿನ್ ಔಫ್‌ರನ್ನು ಅಭಿಸಂಬೋಧಿಸಿ, "ನಾವು ನಿಮ್ಮನ್ನು ಸುಳ್ಳುಗಾರನೆಂದು ರಿಗಣಿಸುತ್ತೇವೆ. ನಿಮ್ಮ ಸಲಹೆಯ ವಿರುದ್ಧವಾಗಿ ಈಗಲೇ ಹೊರಡುತ್ತಿದ್ದೇವೆ" ಂದು ಹೇಳಿ ತಮ್ಮ ಸೈನಿಕರಿಗೆ ಈ ರೀತಿ ಆದೇಶಿಸಿದರು, "ಓ ಜನರೇ! ಜ್ಯೋತಿಷ್ಯ ನ್ನು ಕಲಿಯಬೇಡಿ. ಆದರೆ ಭೂಮಿ ಹಾಗೂ ಸಮುದ್ರದ ಕತ್ತಲಲ್ಲಿ ದಾರಿ ಡುಕಲು ಅಗತ್ಯವಿರುವಷ್ಟನ್ನು ಕಲಿಯಿರಿ. ನೆನಪಿಟ್ಟುಕೊಳ್ಳಿ! ಜ್ಯೋತಿಷ್ಯ-ಜಾದೂವಿನ ಮಾನವಾಗಿದೆ. ಜಾದೂಗಾರನು ಸತ್ಯನಿಷೇಧಿಯಾಗಿದ್ದು, ನರಕದ ಅಗ್ನಿಯಲ್ಲಿ

ಸುಡುವವನ ಸಮಾನ ಆಗಿದ್ದಾನೆ. ಓ ಮುಸಾಫಿರ್! ಅಲ್ಲಾಹನಾಣೆ! ನೀನು ನಕ್ಷತ್ರಗ ವಿದ್ಯೆ ಕಲಿತು ಜ್ಯೋತಿಷ್ಯ ಮಾಡುತ್ತಿ ಎಂಬ ವಿಷಯ ನಾನು ತಿಳಿದರೆ, ನಿನ್ನನು ನಿನ್ನ ಮರಣದ ತನಕ ಅಥವಾ ನನ್ನ ಮರಣದ ತನಕ ಬಂದಿಯಾಗಿ ಇಡುವೆನು ನನ್ನಲ್ಲಿರುವ ಅಧಿಕಾರದಿಂದ ನಿನಗೆ ಕೊಡಲಾಗಿರುವ ಸವಲತ್ತುಗಳನ್ನು ಹಿಂದ ಪಡೆಯುವೆನು" ಎಂದು ಹೇಳಿದರು.

ಇಷ್ಟು ಹೇಳಿ ತಕ್ಷಣ ಪ್ರಯಾಣ ಹೊರಟರು. ವೈರಿಗಳೊಂದಿಗೆ ಕಾದಾ ಅವರನ್ನು ಸರ್ವನಾಶ ಮಾಡಿದರು. ನಂತರ ಸೈನಿಕರನ್ನುದ್ದೇಶಿಸಿ, "ಓ ಜನರೇ ಅಲ್ಲಾಹನ ಮೇಲೆ ಭರವಸೆ ಇಡಿ. ಅವನೊಬ್ಬನೆ ಸಾಕು" ಎಂದು ಹೇಳಿದರು

**(ಅಲ್ ಕುರ್ತುಬಿ ಭಾಗ 29. ಪುಟ-28**

ಇದನ್ನು ಹೇಳುತ್ತಿದ್ದಂತೆ ನನಗೆ ಖಲೀಫ ಮುಅ್‌ತಸಿಮ್ ಬಿಲ್ಲಾಹ್‌ರ ಘಟ ನೆನಪಾಯಿತು. ಒಮ್ಮೆ ಸತ್ಯವಿಶ್ವಾಸಿ ಮಹಿಳೆಯೊಬ್ಬರು 'ವಾ ಮುಅ್‌ತಸಿಮಾ ಎಂದು ಅಸಭ್ಯತೆಯಿಂದ ಕರೆದಿದ್ದರು. ಅದರ ಸೇಡು ತೀರಿಸಲು ಹಾಗೂ ಮುಸ್ಲಿಮ ಮೇಲೆ ಹೆಚ್ಚುತ್ತಿರುವ ರೋಮನರ ಹಿಂಸೆಯ ಸೇಡನ್ನು ತೀರಿಸಲು ಅಮೂರಿಯ ರೊಂದಿಗೆ ಯುದ್ಧ ಮಾಡುವ ನಿರ್ಧಾರ ಕೈಗೊಂಡು, ಸೈನಿಕರನ್ನು ಸಿದ್ಧಗೊಳಿಸಿ ಯುದ್ಧಕ್ಕೆ ಹೊರಡುವಂತೆ ಆಜ್ಞಾಪಿಸಿದ. ಜ್ಯೋತಿಷಿಗಳು ತಮ್ಮ ಅಭ್ಯಾಸದಂತೆ ಲೆಕ್ಕಾಚಾರ ಹಾಕುತ್ತ ಇದು ಶುಭ ಘಳಿಗೆ ಅಲ್ಲ, ಕೆಟ್ಟ ಘಳಿಗೆ ಎಂದು ಹೇಳಿದರು ಆದರೆ ಖಲೀಫರು ಜ್ಯೋತಿಷಿಗಳ ಮಾತನ್ನು ನಿರಾಕರಿಸುತ್ತ, ತಕ್ಷಣ ರವಾ ಯಾಗುವಂತೆ ಆದೇಶಿಸಿದರು. ತಾನು ಸ್ವತಃ ನಾಯಕತ್ವವನ್ನು ವಹಿಸುತ್ತಾ ಅಮೂರಿಯ ಮೇಲೆ ಗೆಲವು ಸಾಧಿಸಿದರು. ರೋಮನ್ನರು ಅವಮಾನಕರವಾದ ರೀತಿಯ ಸೋಲುಂಡರು.

ನಮಗೆ ಕಲಿಸಲು ಬರುತ್ತಿದ್ದ ವಿದ್ವಾಂಸರಿಗೆ ಮಕ್ಕಳಿಲ್ಲ ಎಂಬ ವಿಷಯ ನನ ಮೊದಲೇ ಗೊತ್ತಿತ್ತು. ಅವರ ಪತ್ನಿ ಔಷಧಿ ಸೇವಿಸುತ್ತಿದ್ದರು. ಒಂದು ವೇ ವಿದ್ವಾಂಸರ ಆ ಸಂತ ಅಗೋಚರ ವಿಷಯಗಳನ್ನು ತಿಳಿಯುತ್ತಾನೆ ಎಂದಾದರ ಆತ ಈ ಕೊರತೆಯನ್ನು ಅರಿತು ಈ ವಿವಾಹವನ್ನು ಯಾಕೆ ತಡೆಯಲಿಲ್ಲ?

ನಾನು ನನ್ನ ಯೋಚನಾ ಲಹರಿಯಿಂದ ಹೊರ ಬಂದು ಶಿಬಿರಾರ್ಥಿಗಳನ ನೋಡಿದಾಗ ಅವರು ಅಚ್ಚರಿ ಹಾಗೂ ಸಂದೇಹದಲ್ಲಿ ಸಿಲುಕಿರುವಂತೆ ಕಂಡ ಬಂದರು. ಒಂದು ಕಡೆ ಕುರ್‌ಆನ್ ಹಾಗೂ ಹದೀಸ್‌ನಿಂದ ಅಗೋಚರ ವಿಷಯಗ ಬಗ್ಗೆ ತಡೆದ ಶಿಕ್ಷಣ, ಇನ್ನೊಂದು ಕಡೆ ವಿದ್ವಾಂಸರ ಅನುಭವ. ಇವ ಗೊಂದಲವನ್ನು ನಿವಾರಿಸಬೇಕು ಎಂದು ಯೋಚಿಸುತ್ತ ತಕ್ಷಣ, ನಾನು ಯಾ

ಷಯದ ಬಗ್ಗೆ ಯೋಚಿಸುತ್ತಿದ್ದೆ ಎಂದು ಹೇಳಿದೆ ಹಾಗೂ ಅಲ್ಲಾಹನ ಈ ಸೂಕ್ತದ ಗ್ಗೆ ಅವರ ಅಭಿಪ್ರಾಯವೇನು ಎಂದು ಪ್ರಶ್ನಿಸಿದೆ.

قُلْ لَّآ اَمْلِكُ لِنَفْسِىْ نَفْعًا وَّلَا ضَرًّا اِلَّا مَا شَآءَ اللّٰهُ ۗ وَلَوْ كُنْتُ اَعْلَمُ الْغَيْبَ لَاسْتَكْثَرْتُ مِنَ الْخَيْرِ ۛ وَمَا مَسَّنِىَ السُّوْٓءُ ۛ

"ಓ ಪೈಗಂಬರರೇ, ಇವರೊಡನೆ ಹೇಳಿರಿ: ನನ್ನ ಸ್ವಂತ ಹಿತಾಹಿತಗಳ ಅಧಿಕಾರ ನನಗಿಲ್ಲ. ಅಲ್ಲಾಹನು ಯಾವುದನ್ನು ಇಚ್ಛಿಸುತ್ತಾನೋ ಅದು ಆಗುತ್ತದೆ. ಮತ್ತು ನನಗೆ ಗೈಬ್‌ನ (ಪರೋಕ್ಷ) ಜ್ಞಾನವಿರುತ್ತಿದ್ದರೆ ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ. ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ." (ಪವಿತ್ರ ಕುರ್‌ಆನ್: 7: 188)

"ಅಲ್ಲಾಹು ರಬ್ಬುಲ್ ಆಲಮಿನ್ ಸತ್ಯವನ್ನೇ ನುಡಿದಿದ್ದಾನೆ" ಎಂದು ಎಲ್ಲ ಮಹಿಳೆಯರು ಒಕ್ಕೊರಳಿನಿಂದ ಹೇಳಿದರು.

ಓರ್ವ ಮಹಿಳೆ ಎದ್ದು ನಿಂತು, "ಕೆಲವರು ಜಿನ್ನ್‌ಗಳ ಮುಖಾಂತರ ಅದೃಶ್ಯ ವಿಷಯಗಳ ಬಗ್ಗೆ ತಿಳಿಯುತ್ತದೆ ಎಂದು ವಾದಿಸುವವರಿದ್ದಾರಲ್ಲ" ಎಂದು ಕೇಳಿದರು. ನಾನು ಅವರ ಮಾತಿಗೆ ವಿರುದ್ಧವಾಗಿ ಈ ಸೂಕ್ತವನ್ನು ಓದಿದೆ,

فَلَمَّا قَضَيْنَا عَلَيْهِ الْمَوْتَ مَا دَلَّهُمْ عَلٰى مَوْتِهٖٓ اِلَّا دَآبَّةُ الْاَرْضِ تَاْكُلُ مِنْسَاَتَهٗ ۚ فَلَمَّا خَرَّ تَبَيَّنَتِ الْجِنُّ اَنْ لَّوْ كَانُوْا يَعْلَمُوْنَ الْغَيْبَ مَا لَبِثُوْا فِى الْعَذَابِ الْمُهِيْنِ ۗ

"ಅನಂತರ ನಾವು ಸುಲೈಮಾನರಿಗೆ ಮರಣವನ್ನು ವಿಧಿಸಿದಾಗ ಜಿನ್ನ್(ಯಕ್ಷ)ಗಳಿಗೆ ಅವರ ಮರಣದ ಸುಳಿವು ಕೊಡಲು ಅವರ ಲಾಠಿಯನ್ನು ತಿನ್ನುತ್ತಿದ್ದ ಕೀಟದ ಹೊರತು ಬೇರಾವ ವಸ್ತುವೂ ಇರಲಿಲ್ಲ. ಹೀಗೆ ಸುಲೈಮಾನರು ಬಿದ್ದಾಗ ತಮಗೆ ಪರೋಕ್ಷ ಜ್ಞಾನವಿರುತ್ತಿದ್ದರೆ ತಾವು ಇಂತಹ ಅಪಮಾನಕರ ಯಾತನೆಯಲ್ಲಿ ಬೀಳುತ್ತಿರಲಿಲ್ಲ ವೆಂಬ ಮಾತು ಜಿನ್ನ್‌ಗಳಿಗೆ ಬಯಲಾಯಿತು." (ಪವಿತ್ರ ಕುರ್‌ಆನ್: 34: 14)

ಜಿನ್ನ್‌ಗಳು ತಮಗೆ ಅಗೋಚರ ವಿಷಯಗಳ ಜ್ಞಾನವಿದೆ ಎಂದು ವಾದಿಸುತ್ತಿದ್ದರು. ಅಲ್ಲಾಹನು ಅವರ ವಾದವನ್ನು ಸುಳ್ಳಾಗಿಸಿದ. ಆದರೆ ಮುಸ್ಲಿಮರು ಇಂದಿನ ತನಕ ಜಿನ್ನ್ ಹಾಗೂ ವಂಚಕರ ಸುಳ್ಳು ವಾದಗಳನ್ನು ಸರಿಯೆಂದು ನಂಬಿ, ಅಲ್ಲಾಹನ ವಾಣಿಯನ್ನು ಮುಚ್ಚಿಡುತ್ತಿರುವುದು ಬೇಸರದ ವಿಷಯ. ಅಲ್ಲಾಹನ ಪ್ರವಾದಿ ನೂಹ್(ಅ)ರವರು ತನಗೆ ಅಲ್ಲಾಹನು ಅವತೀರ್ಣಗೊಳಿಸಿದ ಜ್ಞಾನವಲ್ಲದೆ, ಅಗೋಚರ ವಿಷಯಗಳ ಬಗ್ಗೆ ತಿಳಿದಿಲ್ಲ ಎಂದು ಹೇಳುತ್ತಾರೆ.

وَلَآ اَقُوۡلُ لَـكُمۡ عِنۡدِىۡ خَزَآٮِٕنُ اللّٰهِ وَلَاۤ اَعۡلَمُ الۡغَيۡبَ وَلَاۤ اَقُوۡلُ اِنِّىۡ مَلَكٌ

"ನನ್ನ ಬಳಿ ಅಲ್ಲಾಹನ ಭಂಡಾರವಿದೆಯೆಂದು ನಾನು ನಿಮ್ಮೊಡನೆ ಹೇಳುವ ದಿಲ್ಲ. ನಾನು ಪರೋಕ್ಷದ ಜ್ಞಾನಿಯೆಂದೂ ಹೇಳುವುದಿಲ್ಲ, ನಾನೊಬ್ಬ ದೇವಚ ನಾಗಿದ್ದೇನೆಂದು ವಾದಿಸುತ್ತಿಲ್ಲ." **(ಪವಿತ್ರ ಕುರ್‌ಆನ್: 11: 31)**

ಅಲ್ಲಾಹನ ವಾಣಿಯಲ್ಲಿ ಯಾವುದೇ ರೀತಿಯ ಸಂಶಯ ಹಾಗೂ ಸಂದೇಹಗಳಿಲ್ಲ ಕಾರಣ, ಶಿಬಿರಾರ್ಥಿಗಳ ಮುಖದಲ್ಲಿ ನೆಮ್ಮದಿಯ ಕುರುಹು ಕಂಡು ಬಂತು. ಮರ ದಿನ ವಿದ್ವಾಂಸರು ಎಂದಿನಂತೆ ತರಗತಿಯ ಮಧ್ಯೆ ಕಥೆ ಹಾಗೂ ಘಟನೆಗಳನ ಹೇಳಿದಾಗ ಯಾರು ಕೂಡ ಗಮನ ಕೊಟ್ಟು ಕೇಳಲಿಲ್ಲ. ಶಿಕ್ಷಕರಿಗೆ ಗೌರವಿಸಬೇಕ ಎಂಬ ವಿವೇಚನೆ ಇರದೆ ಇರುತ್ತಿದ್ದರೆ ಎಲ್ಲರೂ ಸೇರಿ ಅವರನ್ನು ಅವಮಾನಿಸುತ್ತಿದ್ದರು ವಿದ್ವಾಂಸರು ಹೋದ ನಂತರ ಬಹಳ ಬೇಸರ ವ್ಯಕ್ತಪಡಿಸುತ್ತ ಇನ್ನು ಮುಂದ ಅವರು ಕುರ್‌ಆನಿನ ಶಿಕ್ಷಣಕ್ಕೆ ವಿರುದ್ಧವಾದಂತಹ ಮಾತು ಹಾಗೂ ಉದ್ರೇಕಕಾ ಘಟನೆಗಳನ್ನು ವಿವರಿಸದಂತೆ ತಡೆಯಬೇಕೆಂಬ ಮನವಿಯನ್ನಿಟ್ಟರು. ನಾನು ಈ ಸಂದರ್ಭವನ್ನು ಬಳಸುತ್ತ ನಾಳೆಯಿಂದ ಈ ಸೂಕ್ತವನ್ನು ಕಲಿಯಲಾಗುವುದು ಎಂದ

عٰلِمُ الۡغَيۡبِ فَلَا يُظۡهِرُ عَلٰى غَيۡبِهٖۤ اَحَدًا ۙ‏ ﴿۲۶﴾

"ಅವನು ಅದೃಶ್ಯ ಜ್ಞಾನಿಯಾಗಿದ್ದಾನೆ. ತನ್ನ ಅದೃಶ್ಯ ಜ್ಞಾನವನ್ನು ಅವನ ಯಾರಿಗೂ ತಿಳಿಯ ಪಡಿಸುವುದಿಲ್ಲ." **(ಪವಿತ್ರ ಕುರ್‌ಆನ್: 72: 26)**

ಎಲ್ಲ ಶಿಬಿರಾರ್ಥಿಗಳು ನನ್ನ ಮಾತನ್ನು ಸಂತೋಷದಿಂದ ಒಪ್ಪಿ ಕೊಂಡರು ಓರ್ವ ಮಹಿಳೆ ಎದ್ದು ನಿಂತು "ಈ ವಿದ್ವಾಂಸರು ಹಾಗೂ ಇವರಂತೆ ಇತ ಜನರು ತಮ್ಮ ವಾದವನ್ನು ನಿಜಯೆಂದು ಭಾವಿಸುತ್ತಾರೆ" ಇನ್ನೋರ್ವ ಮಹಿ "ಕೆಲವರು ಮಲಕ್‌ಗಳನ್ನು ನೋಡುವ ಹಾಗೂ ಅವರೊಂದಿಗೆ ಮಾತನಾಡುವುದಾ ವಾದಿಸುತ್ತಾರೆ. ಅದರಿಂದಲೂ ಮೇಲೆ ಹೋಗಿ ಅಲ್ಲಾಹನ ಸಿಂಹಾಸನವನ ನೋಡುತ್ತೇವೆ ಎಂಬ ವಾದವನ್ನು ಹೂಡುವವರೂ ಇದ್ದಾರೆ" ಎಂದು ಹೇಳಿದರು

ಮುಂದಕ್ಕೆ ನಾವು ಈ ವಿದ್ವಾಂಸರಿಂದ ಪಾಠ ಕಲಿಯಲಾರೆವು ಎಂಬ ಬೇಸ ವ್ಯಕ್ತ ಪಡಿಸಿದರು. ನಿಶ್ಚಯವಾಗಿಯೂ ಅವರು ತಮ್ಮ ಕಲೆಯಲ್ಲಿ ಪ್ರವೀಣರಾಗಿದ್ದಾರೆ ಆದರೆ ಜ್ಞಾನ ಒಂದು ವರ್ಗ ಅಥವಾ ವ್ಯಕ್ತಿಯಲ್ಲಿ ಪರಿಮಿತವಾಗಿ ಇರುವುದಿಲ್ಲ ಆದುದರಿಂದ ನಮಗೆ ತಜ್ವೀದ್ ಕಲಿಸಿ ಕೊಡಲು ಅದರಲ್ಲಿ ಪ್ರವೀಣರಾಗಿರುವ ಓರ್ವ ಮಹಿಳೆಯನ್ನು ನೇಮಿಸಬೇಕೆಂಬ ಅಭಿಪ್ರಾಯ ಬಂತು.

❖ ❖ ❖ ❖

# ಮಕ್ಕಳಿಗಾಗಿ ಪ್ರಾರ್ಥಿಸುವುದು

ಅಲ್ಲಾಹನ ದಯೆಯಿಂದ ನನಗೆ ಅನೇಕ ಶಾಲಾ ಕಾಲೇಜುಗಳಲ್ಲಿ ಹಾಗೂ ವಿವಿಧ ಭಾಷೆಗಳನ್ನು ಕಲಿಸುವ ಶಾಲೆಗಳಲ್ಲಿ ಕುರ್‌ಆನಿನ ಸೂಕ್ತಗಳನ್ನು ಕಾರ್ಯರೂಪಕ್ಕೆ ತರುವ ವಿಷಯಗಳ ಬಗ್ಗೆ ಕುರ್‌ಆನ್ ತರಗತಿಯನ್ನು ನಡೆಸುವ ಅವಕಾಶ ಸಿಕ್ಕಿತು. ಹೆಚ್ಚಿನ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸಕಾರಾತ್ಮಕ ಪ್ರತಿಕ್ರಿಯೆ ತೋರ್ಪಡಿಸಿದರು. ಇದರಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಮಧ್ಯೆ ಉತ್ತಮ ಬಾಂಧವ್ಯ ಬೆಳೆಯಿತು. ಶೈಕ್ಷಣಿಕ ನಿಬಿಡತೆ ಇದ್ದರೂ ಅವರಲ್ಲಿ ಉತ್ತಮ ಬಾಂಧವ್ಯ ಇತ್ತು. ಶಿಕ್ಷಣ ಮುಗಿಸಿ ಶಾಲಾ ಕಾಲೇಜು ಬಿಟ್ಟರೂ ಅವರ ಬಾಂಧವ್ಯ ಬಿಡಲಿಲ್ಲ. ಆದುದರಿಂದ ಕೆಲವರಲ್ಲಿ ವಿವಾಹದ ನಂತರವೂ ಈ ಬಾಂಧವ್ಯ ಮುರಿಯಲಿಲ್ಲ.

ಇನ್ನೋರ್ವ ವಿದ್ಯಾರ್ಥಿನಿ ವಿವಾಹದ ನಂತರ ಮಾನಸಿಕ ರೋಗಕ್ಕೆ ತುತ್ತಾಗಿದ್ದಳು. ಆಕೆಗೆ 5 ವರ್ಷದ ತನಕ ಸಂತಾನ ಭಾಗ್ಯ ಉಂಟಾಗಿರಲಿಲ್ಲ. ಆಕೆಯ ಪತಿ ತನ್ನ ಮಾತಾಪಿತರ ಏಕೈಕ ಸಂತಾನವಾಗಿದ್ದ. ಆದುದರಿಂದ ಅತ್ತೆ ಮಾವಂದಿರು ಹಾಗೂ ಇತರ ಸಂಬಂಧಿಕರು ಸಂತಾನದ ಅಭಿಲಾಷೆಯನ್ನು ತೋರ್ಪಡಿಸುತ್ತಿದ್ದರು. ಹೊಸ ಒಂದು ಮಗುವನ್ನು ಹೆರಬೇಕೆಂಬ ಬಯಕೆ ಆಕೆಯ ಮುಖದಲ್ಲಿ ಎದ್ದು ಕಾಣುತ್ತಿತ್ತು. ಈ ವಿಷಯ ಈಕೆಗೆ ಬಹಳ ದುಃಖ ಕೊಡುತ್ತಿತ್ತು. ಆಕೆ ಸದಾ ಚಿಂತೆಯಲ್ಲಿ ಮುಳುಗಿರುತ್ತಿದ್ದಳು. ಒಮ್ಮೆ ಅತ್ತೆ ಮಾವಂದಿರಿಬ್ಬರೂ ಬಹಳ ಕೆಟ್ಟದಾಗಿ ವರ್ತಿಸುತ್ತಾ ಈಕೆಯ ಬಂಜೆತನದಿಂದ ಕುಟುಂಬ ಬೆಳೆಯಲಾರದೆ, ತಮ್ಮ ವಂಶ ಮೂಲೆಗುಂಪಾಗುತ್ತಿರುವುದರಿಂದ ಮಂತ್ರವಾದಿಯ ಬಳಿಗೆ ಹೋಗುವಂತೆ ಹೇಳಿದರು.

ಆಕೆಗೆ ಅವರ ಮಾತಿನ ಅರ್ಥ ತಿಳಿಯಲಿಲ್ಲ. ತನಗೆ ಧರ್ಮಸಮ್ಮತ ಅಥವಾ ಧರ್ಮ ನಿಷಿದ್ಧ ಕಾರ್ಯವೆಸಗಲು ಹೇಳುತ್ತಿರುವರೇ ಎಂಬ ಬಗ್ಗೆಯೂ ತಿಳಿದಿರಲಿಲ್ಲ. ಈ ಗೊಂದಲದೊಂದಿಗೆ ಆಕೆ ಒಮ್ಮೆ ನನ್ನನ್ನು ಭೇಟಿಯಾಗಲು ಬಂದಳು. ಇದು ಮಾಟ ಮಂತ್ರದ ಒಂದು ವಿಧ ಎಂದು ಆಕೆಗೆ ತಿಳಿಸಿದೆ. ಇದರ ಹಲವು ವಿಧಗಳಿವೆ. ವಿಶೇಷ ಸಂದರ್ಭಗಳಲ್ಲಿ ಬಂಜೆ ಭೇಟಿಯಾಗುವುದು ಅಪಶಕುನ. ಆಕೆಯ ಅಪಶಕುನ

ಈಕೆಗೂ ತಾಗಿರುವುದರಿಂದ ಈಕೆ ಬಂಜೆಯಾದಳು ಎಂದು ಹೇಳುತ್ತಾರೆ. ಬಂಜೆತ ವನ್ನು ನಿವಾರಿಸಲು ಪತಿ-ಪತ್ನಿಗೆ ಹಲವು ಬಗೆಯ ತರಕಾರಿಗಳನ್ನು ತಿನ್ನಿಸಲಾಗುತ್ತ ಎಂದು ಮಂತ್ರವಾದಿ ತಿಳಿಸಿದ. ಒಂದು ವಿಶೇಷ ಸ್ಥಿತಿಯಲ್ಲಿ ಪತಿ ತನ್ನ ಬಂ ಪತ್ನಿಯನ್ನು ಭೇಟಿಯಾಗುವುದು ಇನ್ನೊಂದು ವಿಧ. ಇಂತಹ ಅನೇಕ ಆಚಾರಗಳ ಅರಬರಲ್ಲೂ ಆಚರಣೆಯಲ್ಲಿತ್ತು. ಆದರೆ ಇಂತಹ ಕೆಟ್ಟ ಪದ್ಧತಿಗಳನ್ನು ಸಮರ್ಥಿಸುವಂತಹ ಯಾವುದೇ ಸಾಕ್ಷ್ಯಾಧಾರವನ್ನು ಅಲ್ಲಾಹನು ಕಳುಹಿಸಲಿಲ್ಲ. ನಿಮ್ಮಿಂದ ಮಾಡಲ ಹೇಳಲಾಗುತ್ತಿರುವ ವಿಷಯಗಳು ಮೂರ್ಖತನವಲ್ಲದೆ ಮತ್ತೇನಲ್ಲ. ಇದು ಅ ದೊಡ್ಡ ಸುಳ್ಳು. ಶೈತಾನನು ಇಂತಹ ವಿಷಯಗಳನ್ನು ಆಕರ್ಷಕ ರೀತಿಯಲ್ಲಿ ಜನ ಮುಂದಿಡುತ್ತಾನೆ. ಮೂರ್ಖ ಜನರು ಇದು ಶ್ರದ್ಧೆ ಹಾಗೂ ವಿಶ್ವಾಸದ ಒಂದ ಅಂಗ ಎಂದು ಭಾವಿಸಿ ಇದರಲ್ಲಿ ಸಿಲುಕಿ ಬಿಡುತ್ತಾರೆ ಎಂದು ಹೇಳಿದೆ.

ಸಂತಾನ ಪ್ರಾಪ್ತಿಯ ಬಯಕೆ ಹೊತ್ತುಕೊಂಡು ಬಂದಿದ್ದ ಯುವತಿ ನನ ಮಾತು ಕೇಳಿ ಅಳಲಾರಂಭಿಸಿದಳು. ಸ್ವಲ್ಪ ಹೊತ್ತಿನ ನಂತರ, "ನನಗೆ ತಾಯಿ ಆಗು ಹಂಬಲ ಬಹಳ ಇದೆ. ನಿಮಗೆ ಕೇಳದಂತೆ ಒಂದು ವೇಳೆ ನಾನು ಅವರು ಹೇ ದಂತೆ ಮಾಡಿದರೆ ನನಗೆ ನಷ್ಟವಾಗದು. ಈಗ ನನ್ನ ಅವಸ್ಥೆ ರಾತ್ರಿ ಸ್ಮಶಾನದ ನಡೆಯುತ್ತಿರುವಂತೆ..."

ಆದರೆ ನಾನು ಆಕೆಯ ಮಾತನ್ನು ಅರ್ಧದಲ್ಲೇ ನಿಲ್ಲಿಸಿ ಆಕೆಯನ ಸಂತೈಸುತ್ತ, "ನೀನು ನಷ್ಟ ಹೊಂದಲಾರೆ ಎಂಬ ನಿನ್ನ ಯೋಚನೆ ಸರಿಯಲ್ಲ ನೀನು ಅತಿದೊಡ್ಡ ನಷ್ಟದಲ್ಲಿ ಸಿಲುಕುವೆ. ಸತ್ಯವನ್ನು ತೊರೆದು ಮಿಥ್ಯದ ಮುಂ ತಲೆ ಬಾಗಿಸುವುದು ಅತಿ ದೊಡ್ಡ ನಷ್ಟ. ಮುಕ್ತಿಯನ್ನು ಹುಡುಕುತ್ತ ವಿನಾಶದ ದಾ ಹಿಡಿಯುವುದು ಬುದ್ಧಿವಂತಿಕೆಯೇ? ಆತ್ಮೀಯ ಸಹೋದರಿ, ನೀನು ಕೇವ ಅಲ್ಲಾಹನ ಮೇಲೆ ಭರವಸೆ ಇಡು. ನಿನ್ನ ಆಸೆಯನ್ನು, ನಿನ್ನ ಬಯಕೆಯನ ಈಡೇರಿಸುವ ಶಕ್ತಿ ಸಾಮರ್ಥ್ಯ ಕೇವಲ ಅಲ್ಲಾಹನಲ್ಲಿದೆ. ಅಲ್ಲಾಹನ ಹೊರತ ಅನ್ಯರಿಂದ ಇಂತಹ ಅಪೇಕ್ಷೆ ಮುರ್ಖತನ ಹಾಗೂ ವಿಶ್ವಾಸದ ಕೊರತೆಯಾಗಿದೆ.

ಮನೆಯವರು ಹೇಳಿದ್ದನ್ನು ಮಾಡಲು ಹೊರಟ ಕಾರ್ಯ ಚಿಕಿತ್ಸೆಯಲ್ಲ ಬದಲಾಗಿ ಅದು ಪರೀಕ್ಷೆಯಾಗಿದೆ. ಈ ಪರೀಕ್ಷೆಯ ಮುಖಾಂತರ ಅಲ್ಲಾಹನು ನಿ ಸತ್ಯವಿಶ್ವಾಸವನ್ನು ಪರೀಕ್ಷಿಸಲಿಚ್ಛಿಸುತ್ತಾನೆ. ನಿನ್ನ ನಿಷ್ಠೆಯನ್ನು ನೋಡ ಬಯಸುತ್ತಾನೆ ನೀನು ಅಲ್ಲಾಹನ ಹೊರತು ಅನ್ಯರನ್ನು ಪ್ರಾರ್ಥಿಸುತ್ತಿಯಾ ಎಂದು ನೋ ಬಯಸುತ್ತಿದ್ದಾನೆ. ಅಲ್ಲಾಹನು ಪರೋಕ್ಷ ಮತ್ತು ಪ್ರತ್ಯಕ್ಷ ಜ್ಞಾನಿ ಎಂಬುದನ ಮರೆಯಬೇಡ. ಹೃದಯದಲ್ಲಿರುವುದೆಲ್ಲವೂ ಅಲ್ಲಾಹನಿಗೆ ತಿಳಿದಿದೆ. ನಿನ್ನನ್ನು ಈ

ಪರೀಕ್ಷೆ ಹಾಗೂ ಸಂಕಷ್ಟಕ್ಕೆ ಒಳಪಡಿಸಿ ಅಲ್ಲಾಹನು ನಿನ್ನಲ್ಲಿರುವ ಒಳಿತು ಹಾಗೂ ಕೆಡಕನ್ನು ನಿನ್ನ ಮುಂದೆ ವ್ಯಕ್ತಪಡಿಸಬಯಸುತ್ತಾನೆ.

هُوَ الْحَيُّ لَآ إِلَٰهَ إِلَّا هُوَ فَادْعُوهُ مُخْلِصِينَ لَهُ الدِّينَ ۗ الْحَمْدُ لِلَّهِ رَبِّ الْعَالَمِينَ ﴿٦٥﴾

"ಅವನೇ ಚಿರಂತನನು ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ನಿಮ್ಮ ಧರ್ಮವನ್ನು ಅವನಿಗಾಗಿಯೇ ಮೀಸಲಾಗಿಟ್ಟು ಅವನನ್ನೇ ಪ್ರಾರ್ಥಿಸಿರಿ. ಸಕಲ ಪ್ರಶಂಸೆಗಳು ಸರ್ವಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ ಮೀಸಲು."

**(ಪವಿತ್ರ ಕುರ್‌ಆನ್: 40: 65)**

ನೀನು ನಿನ್ನ ವಿಶ್ವಾಸವನ್ನು ಕುರ್‌ಆನ್ ಹಾಗೂ ಪ್ರವಾದಿಚರ್ಯೆಯಂತೆ ರೂಪಿಸಿಕೋ. ಕೇವಲ ಏಕೈಕ ಅಲ್ಲಾಹನನ್ನು ಕರೆ. ಅಲ್ಲಾಹನು ಹೇಳುತ್ತಾನೆ:

وَقَالَ رَبُّكُمُ ادْعُونِي أَسْتَجِبْ لَكُمْ "ನೀವು ಕೇವಲ ನನ್ನನ್ನು ಕರೆಯಿರಿ, ನಾನು ನಿಮ್ಮ ಪ್ರಾರ್ಥನೆಗಳನ್ನು ಆಲಿಸುತ್ತೇನೆ ಎಂದು ನಿಮ್ಮ ಪ್ರಭು ಹೇಳುತ್ತಾನೆ." (ಪವಿತ್ರ **ಕುರ್‌ಆನ್: 40: 60)** ನಮ್ಮ ಪ್ರಾರ್ಥನೆಗಳನ್ನು ಆಲಿಸುವವನು ಹಾಗೂ ಸ್ವೀಕರಿಸುವವನು ಅಲ್ಲಾಹನಲ್ಲದೆ ಅನ್ಯರಿಲ್ಲ. ಮಗಳೇ! ನಿನ್ನ ಜೀವನವನ್ನು ಈ ಸೂಕ್ತದಂತೆ ರೂಪಿಸಿ ಕೊಳ್ಳು. ಈ ಸೂಕ್ತವನ್ನು ನೆನಪಿನಲ್ಲಿಟ್ಟುಕೋ, ಇದರ ಅರ್ಥ ಹಾಗೂ ಇಂಗಿತವನ್ನು ತಕ್ಷಣ ನಿನ್ನ ಮುಂದೆ ಇಡು. ಅದರ ಉದ್ದೇಶ ಹಾಗೂ ತಾತ್ಪರ್ಯ ನಿನ್ನ ಹೃದಯಾಂತರದಲ್ಲಿ ಬೇರೂರಲಿ, ನಿನ್ನ ನಾಲಗೆ ಈ ಸೂಕ್ತದಿಂದ ತೇವಗೊಳ್ಳಲಿ, ನಿನ್ನ ಆಸೆ, ನಿನ್ನ ಬಯಕೆಯನ್ನು, ಈಡೇರಿಸುವ ಶಕ್ತಿ ಸಾಮರ್ಥ್ಯ ಕೇವಲ ಅಲ್ಲಾಹ ನಿಗಿದೆ ಎಂಬ ದೃಢ ವಿಶ್ವಾಸ ನಿನ್ನಲ್ಲಿ ಬೇರೂರುವಷ್ಟು ಎತ್ತರಕ್ಕೆ ನಿನ್ನ ವಿಶ್ವಾಸ ಬೆಳೆಯಲಿ. ಆತನ ಶಕ್ತಿ ಸಾಮರ್ಥ್ಯ ನಿನ್ನ ಕಲ್ಪನೆಯಿಂದಲೂ ಉನ್ನತವಾಗಿದೆ.

ಆಕೆಯನ್ನು ಅರ್ಥಮಾಡಿಕೊಳ್ಳುತ್ತಾ ನಮ್ಮ ತರಗತಿಯಲ್ಲಿ ನಿರ್ಧರಿಸಲಾಗಿರುವ ನಿಯಮ ವನ್ನು ಬಹುಶಃ ನೀನು ಮರೆತಿರುವಿ. ನಾವು ನಮ್ಮ ಜೀವನವನ್ನು ಅಲ್ಲಾಹನ ಹಾಗೂ ಆತನ ರಸೂಲರ (ಸ) ಚರ್ಯೆಯಂತೆ ರೂಪಿಸುವೆವು ಎಂದು ತೀರ್ಮಾನಿಸಿದ್ದೆವು. ಈ ನಿಯಮವನ್ನು ಅನುಸರಿಸಿದಾಗ ಕುರ್‌ಆನ್ ಹಾಗೂ ಸುನ್ನತ್ ನೈಜ ರೀತಿಯಲ್ಲಿ ಜೀವಂತವಾಗಿರುವುದು. ಪವಿತ್ರ ಕುರ್‌ಆನನ್ನು ಅರಿಯುವುದು ಮತ್ತು ಅದರಂತೆ ನಮ್ಮ ಜೀವನವನ್ನು ರೂಪಿಸುವುದು ಈ ತರಗತಿಯ ನೈಜ ಉದ್ದೇಶ ಹಾಗೂ ವಿಶೇಷತೆ. ಆದುದರಿಂದ ನಮ್ಮ ಪ್ರಾರ್ಥನೆಗಳು ನೆರವೇರಬೇಕು ಎಂದಾದರೆ ಕುರ್‌ಆನ್ ತರಗತಿಯ ಎಲ್ಲಾ ವಿದ್ಯಾರ್ಥಿನಿಯರು ಕುರ್‌ಆನ್ ಸೂಕ್ತ ಗಳನ್ನು ಅನುಸರಿಸಬೇಕಾದುದು ಕಡ್ಡಾಯ. ನೀನು ಕೂಡ ಈ ವಿಧಾನವನ್ನು

ಅನುಸರಿಸು. ಮಾಟಮಂತ್ರ ಇತ್ಯಾದಿ ನಷ್ಟದಾಯಕವಾಗಿದೆ. ಉಭಯ ಲೋಕಗಳ ವಿಜಯ ಮತ್ತು ಲಾಭ ಕುರ್‌ಆನನ್ನು ಅನುಸರಿಸುವುದರಲ್ಲಿ ಅಡಕವಾಗಿದೆ. ಅಲ್ಲಾಹನ ಈ ಆದೇಶದಂತೆ ನೀನು ನಿನ್ನ ಜೀವನವನ್ನು ಸಾಗಿಸು.

وَاسْتَعِينُوا بِالصَّبْرِ وَالصَّلٰوةِ ۚ وَإِنَّهَا لَكَبِيرَةٌ إِلَّا عَلَى الْخٰشِعِينَ ﴿٤٥﴾

"ಸಬ್ರ್ (ಸಹನೆ) ಮತ್ತು ಸ್ವಲಾತ್ (ನಮಾಝ್)ಗಳಿಂದ ಸಹಾಯ ಪಡೆಯಿರಿ ಖಂಡಿತವಾಗಿಯೂ ನಮಾಝ್ ಅತ್ಯಂತ ಕಷ್ಟಕರ ಕಾರ್ಯ."

(ಪವಿತ್ರ ಕುರ್‌ಆನ್: 2: 45)

يٰۤاَيُّهَا الَّذِينَ اٰمَنُوا اسْتَعِينُوا بِالصَّبْرِ وَالصَّلٰوةِ ۚ اِنَّ اللّٰهَ مَعَ الصّٰبِرِينَ ﴿١٥٣﴾

"ಓ ಸತ್ಯ ವಿಶ್ವಾಸಿಗಳೇ, ಸಬ್ರ್ (ಸಹನೆ) ಮತ್ತು ನಮಾಝ್‌ನಿಂದ ಸಹಾಯ ಪಡೆಯಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ."

(ಪವಿತ್ರ ಕುರ್‌ಆನ್: 2: 153)

ನೀವು ಪ್ರವಾದಿ ಮುಹಮ್ಮದ್(ಸ)ರ ಆಜ್ಞೆಯನ್ನು ಅನುಸರಿಸಬೇಕು.

**اقرب ما يكون العَبدَ من هو ساجدٌ فاكثروا الدّعاء** "ದಾಸ ಸಾಷ್ಟಾಂಗವೆರಗುವ ಸಮಯ ತನ್ನ ಸೃಷ್ಟಿಕರ್ತನಿಗೆ ಸಮೀಪದಲ್ಲಿರುತ್ತಾನೆ. ಆ ಸಮಯ ಹೆಚ್ಚೆಚ್ಚು ಪ್ರಾರ್ಥಿಸಿ." (ಮುಸ್ಲಿಮ್) ಎದ್ದು ಅಲ್ಲಾಹನೊಡನೆ ವಿನಮ್ರತೆಯೊಂದಿಗೆ ಪ್ರಾರ್ಥಿಸು. ರಾತ್ರಿಯ ಕೊನೆಯ ಭಾಗದಲ್ಲಿ ಸಾಷ್ಟಾಂಗದ ಸಮಯ ದೀನ ಭಾವ, ವಿನಮ್ರತೆ ಹಾಗೂ ಅಂಗಲಾಚುತ್ತ ಪ್ರಾರ್ಥಿಸು. ನಾನು ಸ್ವೀಕರಿಸುತ್ತೇನೆ ಎಂಬ ವಾಗ್ದಾನವನ್ನು ಅಲ್ಲಾಹನು ಮಾಡಿರುವನು. ಅನ್ಯರಲ್ಲಿ ಬೇಡುವ ಬದಲು ಮನೆಯಲ್ಲಿದ್ದುಕೊಂಡು ನಿನ್ನ ಒಡೆಯನಾದ ಪಾಲಕ ಪ್ರಭುವನ್ನು ಭೇಟಿಯಾಗಿ ರಾತ್ರಿಯ ಕೊನೆಯ ಭಾಗದಲ್ಲಿ ಅಲ್ಲಾಹನು ಲೋಕದ ಆಕಾಶಕ್ಕೆ ಬಂದು 'ನನ್ನನ್ನು ಕರೆದು ಕೇಳುವವರಿದ್ದಾರೆಯೇ ನಾನು ಅವರ ಕರೆಯನ್ನು ಸ್ವೀಕರಿಸುತ್ತೇನೆ. ನನ್ನಲ್ಲಿ ಬೇಡುವವರಿದ್ದಾರೆಯೇ? ನಾನು ಅವರ ಬೇಡಿಕೆಯನ್ನು ಪೂರೈಸುತ್ತೇನೆ. ನನ್ನಲ್ಲಿ ಕ್ಷಮೆ ಯಾಚಿಸುವವರಿದ್ದಾರೆಯೇ? ನಾನು ಅವರನ್ನು ಕ್ಷಮಿಸುತ್ತೇನೆ' ಎಂದು ಹೇಳುತ್ತಾನೆ.

ಆತ್ಮೀಯ ಮಗಳೇ! ಇಂತಹ ಉತ್ತಮ ಸಮಯದಲ್ಲಿ ನೀನು ಏನು ಮಾಡುತ್ತಿ. ಅಲ್ಲಾಹನು ನಿನಗೆ ಸಹಕರಿಸಬೇಕೆಂಬ ನೈಜ ಹಂಬಲ ನಿನ್ನಲ್ಲಿ ಇದೆಯೆಂದಾದರೆ ನಿನ್ನ ಮನಸ್ಸಿನಲ್ಲಿರುವ ಸಂದೇಹದ ಮುಳ್ಳನ್ನು ಕಿತ್ತೊಗೆ. ಅಲ್ಲಾಹನ ಶಕ್ತಿ ಸಾಮರ್ಥ್ಯದ ಬಗ್ಗೆ ಎಳ್ಳಷ್ಟೂ ಸಂದೇಹ ಇಟ್ಟುಕೊಳ್ಳಬಾರದು. ನೀನು ಅಪೇಕ್ಷಿಸುತ್ತಿರುವ ಮಗು

ನಿನಗೆ ದಯಪಾಲಿಸುವುದು ಅಲ್ಲಾಹನಿಗೆ ದೊಡ್ಡ ವಿಷಯವಲ್ಲ. ಅಲ್ಲಾಹನ ಪ್ರವಾದಿಯವರ(ಸ) ಆದೇಶ ಪ್ರಕಾರ ನಿನ್ನ ಆಪ್ತ ಸಂಬಂಧಿಕರು, ಇತರ ಸಂಬಂಧಿಕರು, ನೆರೆಹೊರೆಯವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸು. ಅಲ್ಲಾಹನು ನಿನ್ನ ನಿಕಟವಾಗಿದ್ದಾನೆ ಎಂಬುದನ್ನು ಮರೆಯಬೇಡ. ಅಲ್ಲಾಹನ ಹೊರತು ಅನ್ಯರ ಕಡೆ ವಾಲಬೇಡ ಹಾಗೂ ಅಲ್ಲಾಹನ ಈ ಸೂಕ್ತವನ್ನು ಸದಾ ನೆನಪಿಟ್ಟುಕೋ.

وَإِذَا سَأَلَكَ عِبَادِي عَنِّي فَإِنِّي قَرِيبٌ أُجِيبُ دَعْوَةَ الدَّاعِ إِذَا دَعَانِ فَلْيَسْتَجِيبُوا لِي وَلْيُؤْمِنُوا بِي لَعَلَّهُمْ يَرْشُدُونَ ﴿١٨٦﴾

"ಓ ಪೈಗಂಬರರೇ, ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ, ನಾನು ಅವರಿಗೆ ನಿಕಟನಾಗಿದ್ದೇನೆ, ಪ್ರಾರ್ಥಿಸುವವನು ನನ್ನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ. ಆದುದರಿಂದ ಅವರು ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ವಿಶ್ವಾಸವಿರಿಸಲಿ (ಇದನ್ನು ಅವರಿಗೆ ತಿಳಿಸಿ ಬಿಡಿರಿ) ಅವರು ಸನ್ಮಾರ್ಗ ಪಡೆಯಲೂ ಬಹುದು."

(ಪವಿತ್ರ ಕುರ್‌ಆನ್: 2: 186)

ಇದು ಅಲ್ಲಾಹನ ಆದೇಶ ಹಾಗೂ ಪ್ರವಾದಿಯವರ(ಸ) ಉಪದೇಶ. ಉಭಯ ಲೋಕಗಳಲ್ಲೂ ವಿಜಯ ಸಾಧಿಸುವ ಏಕೈಕ ಮಾರ್ಗ. ಅಲ್ಲಾಹನ ಈ ಕೊಡುಗೆಯನ್ನು ಪಡೆಯಲು ನೀನು ಇಂದಿನಿಂದಲೇ ಅನುಸರಣೆಯನ್ನು ಪ್ರಾರಂಭಿಸುತ್ತೀ ತಾನೇ?

ಆಕೆ ವಾಗ್ದಾನ ಮಾಡಿ ಹೊರಟು ಹೋದಳು. ದಿನ ಉರುಳುತ್ತಿತ್ತು. ಎರಡು ತಿಂಗಳ ನಂತರ ಆಕೆ ಕರೆ ಮಾಡಿದಳು. ಆದರೆ ಈ ಬಾರಿ ಆಕೆಯ ಸ್ವರದಲ್ಲಿ ಸಂತೋಷ ಹಾಗೂ ಆವೇಶ ಇತ್ತು. "ಯಾವುದನ್ನು ಪಡೆಯಲು ಅಲ್ಲಾಹನ ತುಚ್ಛ ದಾಸನು ಸಮಯ ಹಾಗೂ ಸಂಪತ್ತನ್ನು ವಿನಿಯೋಗಿಸಿದ್ದನೋ ಅದನ್ನು ಅಲ್ಲಾಹನು ಬಹಳ ಸುಲಭದಲ್ಲಿ ಪೂರೈಸುತ್ತಾನೆ. ಅಲ್ಲಾಹನು ತನ್ನ ತುಚ್ಛ ದಾಸನ ಮೇಲೆ ದಯೆ ತೋರಿದಾಗ ಆತನ ಎಲ್ಲ ಕೆಲಸವನ್ನು ಸುಲಭಗೊಳಿಸುತ್ತಾನೆ ಹಾಗೂ ಸೌಲಭ್ಯಗಳನ್ನು ಒದಗಿಸುತ್ತಾನೆ. ಇದನ್ನು ಪಡೆದು ದಾಸನು ವಿನಮ್ರ ಹಾಗೂ ದುರ್ಬಲನಾಗುತ್ತಾನೆ. ದಾಸನ ಬೇಡಿಕೆಗಳನ್ನು ಅಲ್ಲಾಹನು ಕ್ಷಣಾರ್ಧದಲ್ಲಿ ಪೂರೈಸುತ್ತಾನೆ. ಅಲ್ಲಾಹನ ಶಕ್ತಿ ಸಾಮರ್ಥ್ಯದ ಮುಂದೆ ಮನುಷ್ಯನೆಷ್ಟು ದುರ್ಬಲ ಹಾಗೂ ವಿವಶನಾಗುತ್ತಾನೆ" ಎಂದು ಆಕೆ ಹೇಳಿದಳು.

"ನೀವು ಯಾರ ಬಗ್ಗೆ ಹೇಳುತ್ತಿರುವೆ?" ಎಂದು ನಾನು ಕೇಳಿದೆ.

"ಹೌದು, ಅಲ್ಲಾಹನು ನನ್ನ ಮೇಲೆ ದಯೆ ತೋರಿರುವನು. ನಾನು

ಗರ್ಭಿಣಿಯಾಗಿದ್ದೇನೆ ದುಃಖದ ನಂತರ ಸುಖವನ್ನು ಕೊಟ್ಟಿದ್ದಾನೆ. ಶೋಕದ ನಂತರ ಸಂತೋಷವನ್ನು ದಯಪಾಲಿಸಿದ್ದಾನೆ. ಲ್ಯಾಬ್‌ನ ಟೆಸ್ಟ್ ರಿಪೋರ್ಟ್ ನನ್ನ ಕೈಯಲ್ಲಿದೆ. ನಾನು ಗರ್ಭಿಣಿ ಎಂದು ಅದು ತೋರಿಸುತ್ತದೆ" ಎಂದು ಆಕೆ ಹೇಳಿದಳು.

ನಾನು: ಹೌದು ಇದು ಅಲ್ಲಾಹನ ದಯೆ ಹಾಗೂ ಕೊಡುಗೆ ನೀನು ಅಲ್ಲಾಹನೊಡನೆ ಮಾಡಿದ ಕರಾರನ್ನು ಪೂರೈಸುತ್ತ ಮನದಾಳದಿಂದ ವಿನಮ್ರತೆಯೊಂದಿಗೆ ಪ್ರಾರ್ಥಿಸಿರಬಹುದು.

ಆಕೆ: ನಾನು ಕಳೆದ ಐದು ವರ್ಷದಿಂದ ಪ್ರಸಿದ್ಧ ಮಹಿಳಾ ಹಾಗೂ ಪುರುಷ ವೈದ್ಯರಲ್ಲಿ ಹೋಗಿದ್ದೇನೆ. ಐದು ವರ್ಷದಿಂದ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಿದ್ದೆ. ಆದರೆ ನನ್ನ ಪ್ರಾರ್ಥನೆ ವ್ಯರ್ಥವಾದವು. ಇದಕ್ಕೆ ಕಾರಣವೂ ಇದೆ. ನಮ್ಮೆಲ್ಲ ಪ್ರಾರ್ಥನೆಗಳು ನಾಲಗೆಯಲ್ಲಿ ಗಿಳಿ ಪಾಠದಂತೆ ಇದೆ. ನಮ್ಮ ಬೇಡಿಕೆಗಳಲ್ಲಿ ಪದಗಳಿವೆ. ಆದರೆ ಮನ–ಮಸ್ತಿಷ್ಕಕ್ಕೆ ಸಂಬಂಧವಿಲ್ಲ. ಉದಾಹರಣೆಗೆ – ನಮ್ಮ ಪ್ರಭು ದಯಪಾಲಿಸುತ್ತಾನೆ, ನಮ್ಮ ಪ್ರಭು ಸೌಲಭ್ಯಗಳನ್ನು ಒದಗಿಸುತ್ತಾನೆ, ನಮ್ಮ ಪ್ರಭು ಕರುಣಾಮಯಿಯಾಗಿದ್ದಾನೆ ಇತ್ಯಾದಿ ಪದಗಳನ್ನು ಉಪಯೋಗಿಸುತ್ತೇವೆ. ಆದರೆ ಅದರ ಪ್ರಭಾವ ನಮ್ಮ ಹೃದಯ ಹಾಗೂ ಮನಸ್ಸಿಗೆ ಆಗುತ್ತಿರಲಿಲ್ಲ. ನನ್ನ ದೇಹ, ನನ್ನ ಆತ್ಮ ಹಾಗೂ ನನ್ನ ಮನಸ್ಸಿಗೂ ಇದಕ್ಕೂ ಯಾವುದೇ ಸಂಬಂಧವಿರಲಿಲ್ಲ. ನಾಲಗೆಯಿಂದ ಪ್ರಾರ್ಥನೆ ಹೊರಡುತ್ತಿದ್ದರೂ ನನ್ನ ಮನಸ್ಸು ಲೌಕಿಕ ಕಾರ್ಯಗಳಲ್ಲಿ ಇರುತ್ತಿತ್ತು. ನಾಲಗೆ ಹಾಗೂ ಆತ್ಮಕ್ಕೆ ಯಾವುದೇ ಸಂಬಂಧ ಇರುತ್ತಿರಲಿಲ್ಲ.

ಆದರೆ ಆ ಪರಮ ದಯಾಮಯನಾದ ಅಲ್ಲಾಹನ ಕಾರುಣ್ಯ ನನ್ನನ್ನು ಆಚ್ಛಾದಿಸಿದಾಗ, ನನ್ನ ನಾಲಗೆಗಿಂತ ಮೊದಲು ನನ್ನ ಆತ್ಮ ಆ ಸೂಕ್ತದ ಪ್ರಭಾವವನ್ನು ಅನುಭವಿಸಿತು. ಈ ಸೂಕ್ತವನ್ನು ಮೊದಲ ಸಲ ಕೇಳುತ್ತಿರುವಂತೆ ಭಾಸವಾಯಿತು. وَقَالَ رَبُّكُمُ ادْعُونِي أَسْتَجِبْ لَكُمْ "ನೀವು ಕೇವಲ ನನ್ನನ್ನು ಕರೆಯಿರಿ, ನಾನು ನಿಮ್ಮ ಪ್ರಾರ್ಥನೆಗಳನ್ನು ಆಲಿಸುತ್ತೇನೆ ಎಂದು ನಿಮ್ಮ ಪ್ರಭು ಹೇಳುತ್ತಾನೆ." (ಪವಿತ್ರ ಕುರ್‌ಆನ್: **40: 60**) ನನ್ನ ದೇಹದ ಪ್ರತಿಯೊಂದು ರೋಮ, ಪ್ರತಿಕ್ಷಣ ಅಲ್ಲಾಹನನ್ನು ಕರೆಯುವಂತೆ ಭಾಸವಾಯಿತು. ಕಿವಿಗಳಿಂದ ಕುರ್‌ಆನನ್ನು ಆಲಿಸುವುದು, ಅದನ್ನು ಅರಿಯುವುದು ಹಾಗೂ ಅನುಸರಿಸುವುದರಲ್ಲಿರುವ ವ್ಯತ್ಯಾಸ ಆಗ ಸ್ಪಷ್ಟವಾಯಿತು! ಅಲ್ಲಾಹನು ತನ್ನ ಮಹೋನ್ನತ ಸೂಕ್ತಗಳನ್ನು ಅವತೀರ್ಣಗೊಳಿಸಿ ನನ್ನ ಮೇಲೆ ಬಹು ದೊಡ್ಡ ಉಪಕಾರ ಮಾಡಿರುವನು.

ತಪ್ಪದೆ ತಹಜ್ಜುದ್ ನಮಾಝ್ ನಿರ್ವಹಿಸತೊಡಗಿದೆ. ತಹಜ್ಜುದ್ ನಮಾಝ್ ಒಂದು ದಟ್ಟ ನೆರಳುಳ್ಳ ಮರವಿದ್ದಂತೆ. ತಹಜ್ಜುದ್‌ನ ಆ ಸಮೃದ್ಧ ಭರಿತ ಗಳಿಗೆಯಲ್ಲಿ

ನನಗೆ ಅಲ್ಲಾಹನ ಸಾಮಿಪ್ಯ, ಅಲ್ಲಾಹನ ಮಹಿಮೆ, ಅಲ್ಲಾಹನ ಶಕ್ತಿ ಸಾಮರ್ಥ್ಯ ಹಾಗೂ ಪ್ರತಿಯೊಂದು ವಸ್ತು ಆತನ ಹಿಡಿತದಲ್ಲಿದೆ ಎಂಬ ಸತ್ಯದ ಅರಿವಾಯಿತು. ತಹಜ್ಜುದ್‌ನ ಗಳಿಗೆಯಲ್ಲಿ ಸಿಗುವ ಈ ಅನುಭವ ಬೇರೆ ಯಾವ ಸಮಯದಲ್ಲೂ ಸಿಗುತ್ತಿರಲಿಲ್ಲ.

ನಾನು ಭೂಮಿ ಆಕಾಶಗಳ, ಪೂರ್ವ ಪಶ್ಚಿಮಗಳ ಹಾಗೂ ಶಕ್ತಿ ಸಾಮರ್ಥ್ಯವುಳ್ಳ ಏಕೈಕ ಅಜೇಯ ಪ್ರಭುವಿನ ಸಮ್ಮುಖದಲ್ಲಿ ನಿಲ್ಲತೊಡಗಿದೆ. ಇದರಿಂದ ನನಗೆ ಬಹಳ ನೆಮ್ಮದಿ ಹಾಗೂ ಶಾಂತಿ ದೊರೆಯಿತು.

ಅಲ್ಲಾಹನು ನನಗೆ ಒಂದು ಕುರುಹು ಕೊಡಲು ನಿರ್ಧರಿಸಿದ್ದಾನೆ ಎಂಬಂತೆ ನನಗೆ ಭಾಸವಾಗುತ್ತಿತ್ತು. ನಾನು ನನ್ನ ಅತ್ತೆಯನ್ನು ಭೇಟಿಯಾಗಲೆಂದು ಹೋದಾಗ, ಅವರೊಂದು ವಿಚಿತ್ರ ಕನಸು ಕಂಡ ಬಗ್ಗೆ ಹೇಳಿದರು. "ನನ್ನ ಮುಂದೆ ಒಂದು ಶಾಲು ಬಿದ್ದಿತ್ತು. 'ಈ ಶಾಲನ್ನು ಮುನ್ನಿಗೆ ಕೊಡಬೇಕು, ಆಕೆ ಮಾಟ ಮಂತ್ರವನ್ನು ಬಿಟ್ಟಿದ್ದಾಳೆ' ಎಂಬ ಅಶರೀರವಾಣಿ ಕೇಳಿ ಬಂತು."

ಅತ್ತೆಯ ಬಾಯಿಯಿಂದ ಈ ಮಾತು ಕೇಳಿ ನನಗೆ ಬಹಳ ಸಂತೋಷವಾಯಿತು. ಅತ್ತೆಯ ಮುಖಾಂತರ ನನಗೆ ಸುವಾರ್ತೆ ಸಿಗುತ್ತಿದೆ ಎಂದು ತಿಳಿಯಿತು. ಒಂದು ಕಾಲದಲ್ಲಿ ಆಕೆ, ನಾನು ಮಾಟ ಮಂತ್ರಗಳ ಮೊರೆ ಹೊಗುವಂತೆ ಒತ್ತಡ ಹಾಕುತ್ತಿದ್ದರು, ಅವರ ಬೇಡಿಕೆಯನ್ನು ನಿರಾಕರಿಸುತ್ತಿದ್ದರೂ ಅವರು ಪದೇ ಪದೇ ಒತ್ತಡ ಹಾಕುತ್ತಿದ್ದರು. ಸುಬ್ಹಾನಲ್ಲಾಹ್! ಇವತ್ತು ಅಲ್ಲಾಹನು ನನಗೆ ಅದರ ಪ್ರತಿಫಲವನ್ನು ದಯಪಾಲಿಸಿದನು. ಅಲ್ಲಾಹನು ನನ್ನ ಆ ಕೃತ್ಯಕ್ಕೆ ಉಡುಗೊರೆಯನ್ನು ದಯಪಾಲಿಸಿದನು. ಅಲ್ಲಾಹನು ನನ್ನ ಪ್ರಾರ್ಥನೆ, ನನ್ನ ಆಶೆ, ನನ್ನ ಬಿನ್ನಹವನ್ನು ಸ್ವೀಕರಿಸಲಿಲ್ಲವೇ? ಅಲ್ಲಾಹನು ಸಕಲ ವಸ್ತುಗಳ ಮೇಲೆ ಶಕ್ತಿ ಸಾಮರ್ಥ್ಯವುಳ್ಳವನು. ಆತನು ಅಪಾರ ಕರುಣೆಯನ್ನು ನನ್ನ ಮೇಲೆ ವರ್ಷಿಸಿದನು. ನನಗೆ ಗೌರವದೊಂದಿಗೆ ಉಡುಗೊರೆಯನ್ನು ದಯಪಾಲಿಸಲಿಲ್ಲವೆ ಎಂಬ ಪ್ರಶ್ನೆಯನ್ನು ನನ್ನಲ್ಲಿಯೇ ಕೇಳಿದೆ.

ಅತ್ತೆಯನ್ನು ಭೇಟಿಯಾಗಿ ಮರಳುವಾಗ ನಾನು ಪತಿಯೊಂದಿಗೆ "ನಿಮ್ಮ ಅಮ್ಮ ಒಂದು ಕನಸು ಕಂಡರಂತೆ, ನಾವು ದಾರಿಯಲ್ಲಿ ಆಸ್ಪತ್ರೆಗೆ ಹೋಗಿ ವೈದ್ಯಕೀಯ ಪರೀಕ್ಷೆ ಮಾಡುವ" ಎಂದು ಹೇಳಿದೆ. ಅವರು ಪ್ರೀತಿ ವಾತ್ಸಲ್ಯ ಹಾಗೂ ಆಶ್ಚರ್ಯದಿಂದ ನನ್ನ ಕಡೆಗೆ ನೋಡಿ ದರು. ಇಂತಹ ಪರೀಕ್ಷೆಯನ್ನು ನಾನು ಹಲವು ಸಲ ಮಾಡಿಸಿದ್ದೆ. ಅದರೆ ಪ್ರತಿ ಸಲ ಬೇಸರಗೊಂಡು ಹಿಂದಿರುಗಿದ್ದುಂಟು. ಆದರೆ ಈ ಸಲ ಅತ್ತೆಯ ಆ ಕನಸು, ನಾನು ಗರ್ಭವತಿಯಾಗಿರಬಹುದು ಎಂಬ ಭರವಸೆ ನೀಡುತ್ತಿತ್ತು. ಹಾಗಾಗಿ ಆಸ್ಪತ್ರೆಗೆ ಹೋಗುವಂತೆ ಪತಿಯವರಿಗೆ ಒತ್ತಾಯಿಸಿದೆ.

ಆಸ್ಪತ್ರೆಗೆ ಹೋಗಿ ರಿಪೋರ್ಟಿಗಾಗಿ ಬಹಳ ಹೊತ್ತು ಕಾಯುತ್ತಾ ನಿಂತೆವು. ಸಮಯದ ಪ್ರತಿ ಕ್ಷಣ ನನ್ನ ವ್ಯಾಕುಲತೆಯನ್ನು ಹೆಚ್ಚಿಸುತ್ತಿತ್ತು. ಆ ಕ್ಷಣಗಳು ಶತಮಾನಗಳಂತೆ ಕಂಡು ಬಂದವು. ರಿಪೋರ್ಟ್ ಹೇಳಲು ನರ್ಸ್ ನನ್ನನ್ನು ಕರೆದಾಗ, ನನ್ನ ಹೃದಯ ಬಡಿತ, ತನ್ನ ಸಮೀಪದವರಿಗೆ ಕೇಳುತ್ತಿರುವಂತೆ ಭಾಸವಾಯಿತು. ಅಷ್ಟರಲ್ಲಿ ನನ್ನ ಮನಸ್ಸಿಗೆ ನೆಮ್ಮದಿ, ಶಾಂತಿ ದೊರೆತಂತೆ ನಾನು ನೆಮ್ಮದಿಯ ಶಿಖರದಲ್ಲಿ ಇರುವಂತೆ ಕಂಡಿತು. ನನ್ನ ಪತಿ, "ಇದು ಸತ್ಯವೇ? ಇದು ನನ್ನ ಪತ್ನಿಯ ರಿಪೋರ್ಟ್ ಎಂಬ ನಂಬಿಕೆ ಇದೆಯೇ? ರಿಪೋರ್ಟ್ ಪಾಸಿಟಿವ್ ಆಗಿರುವುದು ಸತ್ಯವಾಗಿದೆಯೇ?" ಎಂದು ಕೇಳಿದರು.

ನನ್ನ ಮನಸ್ಸು ಅಲ್ಲಾಹನ ಮುಂದೆ ಬಾಗುತ್ತಿತ್ತು. ನನ್ನ ದೇಹ ಮನಸ್ಸಿನೊಂದಿಗೆ ಸೇರಿ ನಾನು ಸಾಷ್ಟಾಂಗವೆರಗಿದೆ. ಸೃಷ್ಟಿಕರ್ತನಾದ ಅಲ್ಲಾಹನಿಗೆ ಧನ್ಯವಾದವನ್ನು ಹೇಳಲು ನಾನು ವಿನಮ್ರಳಾಗಿ ನಿಷ್ಠೆಯೊಂದಿಗೆ, ದೀನತೆಯೊಂದಿಗೆ ಬಾಗಿದೆ.

ಸಾಷ್ಟಾಂಗದಿಂದ ಎದ್ದು ನಾನು ಜನರೊಂದಿಗೆ ಮಾತನಾಡ ಬಯಸಿದೆ. ಎಲ್ಲ ಊರಿನ, ಎಲ್ಲ ವರ್ಗದ ಜನರೊಂದಿಗೆ ಮಾತನಾಡ ಬಯಸಿದ್ದೆ. "ಅಲ್ಲಾಹನ ಮಹಿಮೆಯನ್ನು ನೋಡಬೇಕಾದರೆ ನನ್ನ ಕಡೆ ನೋಡಿ. ಈವತ್ತು ನನಗೆ ಸಿಕ್ಕಿರುವ ಅನುಗ್ರಹ ಅಲ್ಲಾಹನ ಹೊರತು ಯಾರು ಕೂಡ ಕೊಡಲು ಸಮರ್ಥರಲ್ಲ. ನನ್ನ ದೇಹ ಹಾಗೂ ಮನಸ್ಸಿನ ಒಡೆಯ ನನ್ನ ಮೇಲೆ ಎಂತಹ ಅನುಗ್ರಹವನ್ನು ದಯಪಾಲಿಸಿದನು. ಸುಬ್ಹಾನಲ್ಲಾಹಿಲ್ ಅಝೀಮ್ ಎಂದು ಕಿರುಚಿ ಕಿರುಚಿ ಹೇಳ ಬಯಸಿದ್ದೆ.-

ಪವಿತ್ರ ಕುರ್ಆನಿನ ಪವಿತ್ರ ವಚನಗಳು ಹಾಗೂ ಪ್ರವಾದಿ ಮುಹಮ್ಮದ್‌ರ(ಸ) ವಚನಗಳು, ನಾನು ಸತ್ಪದಲ್ಲಿ ಇರುವಂತೆ ಸಹಕರಿಸಿತು.

❖ ❖ ❖ ❖

---

ವಿ.ಸೂ.: ಕೆಲವು ದಿನಗಳ ಹಿಂದೆ 'ಮುನ್ನಿ' ಎಂಬ ಈ ಮಹಿಳೆಗೆ ಅಲ್ಲಾಹನು ಸುಂದರವಾದ ಗಂಡು ಮಗುವನ್ನು ದಯಪಾಲಿಸಿದನು. ಆ ಮಗುವಿಗೆ 'ಮುಹಮ್ಮದ್' ಎಂದು ಹೆಸರಿಸಲಾಯಿತು.